# ಅಪರಂಜಿ

**ತಿಳಿನಗೆಯ ಕಾರಂಜಿ** **ಏಪ್ರಿಲ್ - 2016**

## ಯುಗಾದಿ ವಿಶೇಷಾಂಕ




ಬಿಡಿ ಪ್ರತಿ: ರೂ.30.00

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ



# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 33

ಸಂಚಿಕೆ - 7

ಏಪ್ರಿಲ್ - 2016

## ಈ ಸಂಚಿಕೆಯಲ್ಲಿ .....


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 3 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 4 |
| ತಿಜೋರಿ ಚಿಕ್ಕಣ್ಣ | **ಶಿವು** | 6 |
| ನಾನು ಮಾತಾಜಿ.... | **ನಂದಿನಿ ಕಾಪಡಿ** | 11 |
| ಕಸುಬುಗಾರಿಕೆ | **ಓಂಪ್ರಕಾಶ್** | 16 |
| ಪಾತಸ್ಮರಣೀಯರು | **ಡಾ. ಶರಣಬಸವೇಶ್ವರ ಅಂಗಡಿ** | 19 |
| ಫೋಟೋ - ಅಂದು.... | **ಡಾ. ಶ್ಯಾಮಲಾ ರವಿಶಂಕರ್** | 24 |
| ಗೋಡೆಯಿಂದಾಚೆಗೆ... | **ಸಿ.ಆರ್. ಸತ್ಯ** | 29 |
| ಕುಟುಂಬದಲ್ಲಿ ಹಾಸ್ಯ | **ಜಯಣ್ಣ** | 33 |
| ನೆಲಚರ ಒಕ್ಕಣ್ಣರು | **ನ. ರತ್ನ** | 39 |
| ಸುಖ ಸಂಸಾರಕ್ಕೆ..... | **ಸಹನಾ ಪ್ರಸಾದ್** | 42 |
| ಸ್ಕೂಟರೆಂಬೊ... | **ವೈ.ಎನ್. ಗುಂಡೂರಾವ್** | 46 |
| ಸರಿ - ಬೆಸ ಎಷ್ಟು ಸರಿ? | **ಕೃಷ್ಣ ಸುಬ್ಬರಾವ್** | 50 |
| ಪರ್ವತ ಪತ್ನಿಯ.... | **ಅನಿತಾ ನರೇಶ್ ಮಂಚಿ** | 53 |


**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ:ರೂ. 750/-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳಿಸಿ.

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

| | | |
|---|---|---|
| ತುಂತುರು | **ದಂನಾ** | 56 |
| ಭವಿಷ್ಯದ ವಿಷ್ಯ | **ಗೌತಮ** | 57 |
| ಘೋಸ್ಟ್ ರೈಟರ್ಸ್! | **ಗಣೇಶ ಹೆಗ್ಗಡೆ** | 62 |
| ಸರಸ ದಾಂಪತ್ಯ | **ಬೇಲೂರು ರಾಮಮೂರ್ತಿ** | 67 |
| ಬರೀ ಗೆರೆಯಲ್ಲೋ ಅಣ್ಣಾ | **ಪ್ರೊ. ಬಾಲಕೃಷ್ಣ ಹೊಸಂಗಡಿ** | 74 |
| ಹೀಗೂ ಒಂದು ಆಯಾಮ! | **ಚಿತ್ರಾ ರಾಮಚಂದ್ರನ್** | 116 |
| ಮೃಗಾಲಯದಲ್ಲಿ ಪ್ರಯೋಗ | **ಇ.ಆರ್. ರಾಮಚಂದ್ರನ್** | 125 |
| ದೇವರು ಮತ್ತು..... | **ಎಚ್. ಗೋಪಾಲಕೃಷ್ಣ** | 131 |
| ಹರಕೆಯ ಕುರಿ | **ನಂನಾಗ್ರಾಜ್** | 137 |
| ನೆಕ್ಲೆಸ್ ರಾಣಿ ಎಂಬ ನಟೀಮಣಿ | **ಎಂ.ಕೆ. ಭಾಸ್ಕರ ರಾವ್** | 141 |


**ಮುಖಪುಟ ವ್ಯಂಗ್ಯಚಿತ್ರ - ಗುಜ್ಜಾರ್**

**ಒಳಪುಟಗಳ ವ್ಯಂಗ್ಯಚಿತ್ರ**

**ಶೃಂಗೇರಿ ರಘುಪತಿ ಮತ್ತು ಜೇಮ್ಸ್ ವಾಸ್**

# ಅಪರಂಜಿ ಕಿಡಿ

● ಪ್ರಕಾಶ್



ಒಂದು ಗಡಿಯಾರ ಮಂತ್ರಿಗಳಿಗೇ 'ಕೈ' ಕೊಡುತ್ತೆ ಅಂತ ಯಾರು ಊಹಿಸಿದ್ದರು?

★★★

ವಿಮಾನ ಏರಲು ಸಿಖ್ ಯಾತ್ರಿಗೆ ನಿರ್ಬಂಧ – ನ್ಯೂಯಾರ್ಕ್ ಸುದ್ದಿ

***● ಸಮಸ್ಯೆ ಸಿಕ್ಕು ಬಿಡಿಸಲೇಬೇಕು !!***

★★★

'ನ್ಯಾ ಅಡಿ ಕರ್ತವ್ಯಕ್ಕೆ ಅವಕಾಶ ಇಲ್ಲ' – ಶೀರ್ಷಿಕೆ

***● ಅಡ್ಡಿ !!***

★★★

'ಲಂಡನ್‌ನಲ್ಲಿ ಮಲ್ಯ' – ಸುದ್ದಿ

***● ಕೊನೆಗೂ ಅವರಿಗೇ ವಿಜಯ ?!***

★★★

ಹಲಸೂರು ಕೆರೆಯಲ್ಲಿ ಮೀನುಗಳ ಮರಣ – ಸುದ್ದಿ

***● ಸಂಥಿಂಗ್ ಫಿಷಿ !!***

★★★

ಪಿ.ಯು. ಪರೀಕ್ಷೆ; ಮೊದಲ ದಿನ ಸರಾಗ – ಸುದ್ದಿ

***● ಇದೂ 'ಸುದ್ದಿ'ಯಾಗುವ ಕಾಲ ಬಂತೇ ?!***

★★★

'ಭಾರತದಲ್ಲಿ ಸಿಕ್ಕ ಪ್ರೀತಿಯೇ ಹೆಚ್ಚು' – ಅಫ್ರಿದಿ

***● 'ಪಾಕ್ ತಂಡಕ್ಕೆ ಬಿಗಿ ಭದ್ರತೆ' ದಿನಪತ್ರಿಕೆಯಲ್ಲಿ ಕ್ರೀಡಾಪುಟ !!***

★★★

ಭಾರತಕ್ಕೆ ಬರಲು ಇದು ಸೂಕ್ತ ಸಮಯ ಅಲ್ಲ – ಶ್ರೀ ಮಲ್ಯ

***● 'ಹಾಗೇ ಕಾಣುತ್ತೆ !!***

★★★

# ನಮ್ಮ ನಿಮ್ಮಲ್ಲಿ

ಅಪರಂಜಿ ಇದೀಗ ಮೂವತ್ತೆರಡು ತುಂಬಿ ಮೂವತ್ತಮೂರಕ್ಕೆ ಕಾಲಿಡುತ್ತಿದ್ದಾಳೆ. ಆಕೆಯ ಆರೋಗ್ಯಪೂರ್ಣ ಬೆಳವಣಿಗೆಗೆ ನಿಮ್ಮೆಲ್ಲರ ಅಭಿಮಾನ ಪ್ರೋತ್ಸಾಹಗಳೇ ಕಾರಣ. ಈ ಯುಗಾದಿಯ ವಿಶೇಷ ಸಂಚಿಕೆಯ ಮೂಲಕ ಈ ಸಂಭ್ರಮವನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇವೆ. ಏಪ್ರಿಲ್ ಐದರಂದು ಭಾರತೀಯ ವಿದ್ಯಾಭವನದಲ್ಲಿ ಅಪರಂಜಿಯ ಹಬ್ಬನಡೆಯುತ್ತಿರುವ ಬಗ್ಗೆ ಈಗಾಗಲೇ ಮಾರ್ಚ್ ಸಂಚಿಕೆಯಲ್ಲಿ ಮಾಹಿತಿ ನೀಡಿದ್ದೇವೆ.

ಹೆಚ್ಚಿನ ಸಂಖ್ಯೆಗಳಲ್ಲಿ ಬಂದು ಈ ಸಮಾರಂಭದಲ್ಲಿ ಪಾಲ್ಗೊಳ್ಳಿ.

ಅಂತರರಾಷ್ಟ್ರೀಯ ಮಟ್ಟದ ವ್ಯಂಗ್ಯಚಿತ್ರಗಳನ್ನು ಅಪರಂಜಿಯ ಓದುಗರಿಗೆ ಪರಿಚಯಿಸುವ ಉದ್ದೇಶದಿಂದ ಈ ಸಂಚಿಕೆಯಲ್ಲಿ ಒಂದು ವ್ಯಂಗ್ಯಚಿತ್ರಗಳ ವಿಭಾಗವನ್ನೇ ಅಳವಡಿಸಿದ್ದೇವೆ. ಇದರಲ್ಲಿ ಖ್ಯಾತ ಆಂಗ್ಲ ನಿಯತಕಾಲಿಕಗಳಾದ, ಅಮೆರಿಕೆಯ ನ್ಯೂಯಾರ್ಕರ್, ಇಂಗ್ಲೆಂಡಿನ ಸ್ಪೆಕ್ಟೇಟರ್, ಹಿಂದೆ ಇದ್ದ, ಈಗ ಗತಿಸಿರುವ ಪಂಚ್ ಮತ್ತು ಇತರ ಪತ್ರಿಕೆಗಳಿಂದ ಉತ್ತಮವಾದ ವ್ಯಂಗ್ಯಚಿತ್ರಗಳನ್ನು ಆಯ್ದು ಈ ವಿಭಾಗದಲ್ಲಿ ಜೋಡಿಸಿದ್ದೇವೆ. ಮಾನ್ಯ ಲೇಖಕ ಶ್ರೀ ಬಾಲಕೃಷ್ಣ ಹೊಸಂಗಡಿಯವರು ಇದಕ್ಕೆ ಒಂದು ಪರಿಚಯಾತ್ಮಕ ಬರಹವನ್ನು ಒದಗಿಸಿದ್ದಾರೆ.

ಎಂದಿನಂತೆ ನಮ್ಮ ಬರಹಗಾರ ಬರಹಗಾರ್ತಿಯರು ಬಹು ಉತ್ಸಾಹದಿಂದ ತಮ್ಮ ನಗೆಚಿಂತನೆಗಳನ್ನು ತಮ್ಮ ಲೇಖನಗಳ ಮೂಲಕ ನಿಮ್ಮೊಂದಿಗೆ ಹಂಚಿಕೊಂಡಿದ್ದಾರೆ. ಇವರೆಲ್ಲರಿಗೂ ಅಪರಂಜಿಯ ತುಂಬುಹೃದಯದ ನಮನಗಳು.

ಅಪರಂಜಿ ವಿಶೇಷಾಂಕಕ್ಕಾಗಿ ಜಾಹೀರಾತು ಒದಗಿಸಿರುವ ಎಲ್ಲ ಬಂಧುಗಳಿಗೂ ನಮ್ಮ ಒಲವಿನ ನಮನಗಳು. ವಿಶೇಷಾಂಕ ತಯಾರಾಗುವಲ್ಲಿ ವಿಶೇಷ ಮುತುವರ್ಜಿ ವಹಿಸಿದ ಒಮೇಗಾ ಲೇಸರ್ ಟೆಕ್‌ನ ರವಿ, ಆಚಾರ್, ಶ್ವೇತ ಅವರುಗಳಿಗೂ ಹಾಗೂ ಮುದ್ರಣ ಮತ್ತು ಅಂಚೆ ಬಡವಾಡೆ ಕೆಲಸಗಳನ್ನು ವಿಶೇಷ ಕಾಳಜಿಯಿಂದ ನಡೆಸಿಕೊಂಡು ಬರುತ್ತಿರುವ ರವಿ ಗ್ರಾಫಿಕ್ಸ್‌ನ ಶ್ರೀ ವಿ.ಆರ್. ನಾಥ್, ಸಂತೋಷ್, ನಾಗರಾಜ್, ಮತ್ತಿತರ ಸಹೋದ್ಯೋಗಿಗಳಿಗೂ ಅಪರಂಜಿ ತಂಡದ ಪರವಾಗಿ ವಿಶೇಷ ವಂದನೆಗಳು.

ಎಲ್ಲಾ ಲೇಖನಗಳ ಪ್ರಾರಂಭದ ಪುಟಗಳಲ್ಲಿರುವ ರಾ.ಶಿ. ಯವರ ನುಡಿ ಮುತ್ತುಗಳನ್ನು ಆಯ್ದು ನಮಗೆ ಕಳಿಸಿದವರು ಶ್ರೀ ಸಂಪಟೂರು ವಿಶ್ವನಾಥ್ ಅವರು. ಅವರಿಗೆ ಅಪರಂಜಿ ಆಭಾರಿಯಾಗಿದೆ.

ದುರ್ಮುಖಿ ನಾಮ ಸಂವತ್ಸರವು ನಿಮ್ಮೆಲ್ಲರಿಗೂ ಸಕಲ ಸನ್ಮಂಗಳವನ್ನು ತರುವಂತಾಗಲಿ ಎಂಬುದೇ ಅಪರಂಜಿಯ ಹಾರೈಕೆ.

**ಶಿವಕುಮಾರ್**

**ಕೊರವಂಜಿ ಅಪರಂಜಿ ಟ್ರಸ್ಟ್** ಮತ್ತು **ಭಾರತೀಯ ವಿದ್ಯಾ ಭವನ**
**ಬೆಂಗಳೂರು**

ಕನ್ನಡ ಹಾಸ್ಯ ಮಾಸ ಪತ್ರಿಕೆ

# ಅಪರಂಜಿ 33ರ ಹಬ್ಬ

**ಮಂಗಳವಾರ, 5.4.2016 – ಸಂಜೆ 5 ಗಂಟೆಗೆ**

**ಭಾರತೀಯ ವಿದ್ಯಾ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು - 560 001**

**ಉದ್ಘಾಟನೆ ಮತ್ತು ಅಪರಂಜಿ ವಿಶೇಷ ಸಂಚಿಕೆ ಬಿಡುಗಡೆ**
**ಡಾ. ನರಹಳ್ಳಿ ಬಾಲಸುಬ್ರಮಣ್ಯ**
ಮುಖ್ಯ ಅತಿಥಿ : **ಶ್ರೀ ಶ್ರೀನಿವಾಸ ವೈದ್ಯ**
ಅಧ್ಯಕ್ಷತೆ : **ಶ್ರೀ ಎನ್. ರಾಮಾನುಜ**
ಉಪಸ್ಥಿತಿ: **ಶ್ರೀ ಬೇಲೂರು ರಾಮಮೂರ್ತಿ**, ಉಪಸಂಪಾದಕರು.ಅಪರಂಜಿ

***

**ಅಪರಂಜಿ ಓದುಗರ ಅನಿಸಿಕೆ**
**ಶ್ರೀಮತಿ ಚಿತ್ರಾ ರಾಮಚಂದ್ರನ್ * ಶ್ರೀಮತಿ ಸಹನಾ ಪ್ರಸಾದ್ * ಶ್ರೀಮತಿ ಶ್ಯಾಮಲಾ ರವಿಶಂಕರ್**

**ಅಭಿನಂದನೆ**
ಕನ್ನಡ ಪುಸ್ತಕ ಪ್ರಾಧಿಕಾರದಿಂದ 'ಅತ್ಯುತ್ತಮ ಪ್ರಕಾಶನ ಸಂಸ್ಥೆ ಪ್ರಶಸ್ತಿ' ಪುರಸ್ಕೃತರಾದ ಅಂಕಿತ ಪುಸ್ತಕ ಪ್ರಕಾಶನದ
**ಶ್ರೀ ಪ್ರಕಾಶ್ ಕಂಬತ್ತಳ್ಳಿ** ಅವರಿಗೆ

**ವಿಶೇಷ ಕಾರ್ಯಕ್ರಮ**
ಅಪರಂಜಿ ಓದುಗರ ಬಳಗದೊಂದಿಗೆ ಲಘು ಸಂವಾದ – **ಶ್ರೀ ವೈ.ವಿ. ಗುಂಡೂರಾವ್**

***

**ಹಾಸ್ಯ ನಾಟಕ :**
ಕಲಾಗಂಗೋತ್ರಿ ತಂಡ ಅಭಿನಯದ **'ಅವರನ್ ಬಿಟ್ಟು ಇವರನ್ ಬಿಟ್ಟು ಅವರ್ಯಾರು'**
ರಚನೆ : **ವಿ.ಸೀ.**, ರಂಗರೂಪಾಂತರ : **ಬಿ. ಚಂದ್ರಶೇಖರ್** ನಿರ್ದೇಶನ : **ರಶ್ಮಿ ನಾಯ್ಡು**

**ತಮಗೆಲ್ಲಾ ಆದರದ ಸ್ವಾಗತ**

**ಶ್ರೀ ಎಂ. ಶಿವಕುಮಾರ್**
ಮ್ಯಾನೇಜಿಂಗ್ ಟ್ರಸ್ಟಿ
ಕೊರವಂಜಿ ಅಪರಂಜಿ ಟ್ರಸ್ಟ್

**ಶ್ರೀ ಎನ್. ರಾಮಾನುಜ**
ಅಧ್ಯಕ್ಷರು
ಭಾರತೀಯ ವಿದ್ಯಾ ಭವನ

# ತಿಜೋರಿ ಚಿಕ್ಕಣ್ಣ

• ಶಿವು

**ಚಿ**ಕ್ಕಣ್ಣ ತಾನು ಆಗತಾನೆ ಹೊಲೆದಿದ್ದ ಚಪ್ಪಲಿಯ ಜೊತೆಯನ್ನು ಮುಂದಿಟ್ಟುಕೊಂಡು ಅವನ್ನೇ ತದೇಕ ದೃಷ್ಟಿಯಿಂದ ನಿಟ್ಟಿಸಿದ. ಬಹು ಸುಂದರವಾಗಿ, ದೃಢವಾಗಿ ಕಾಣುತ್ತಿದ್ದ ಆ ಜೊತೆ ಅವನ ಸೃಜನಶೀಲತೆಗೆ ಒಂದು ಸಾಕ್ಷಿ ಎನ್ನುವಂತಿತ್ತು. ಕೇವಲ ಆರು ತಿಂಗಳುಗಳ ಅವಧಿಯಲ್ಲಿ ತಾನು ಇಷ್ಟು ಪರಿಣತಿ ಪಡೆದಿದ್ದನ್ನು ನೋಡಿ ಅವನಿಗೆ ಹೆಮ್ಮೆಯೆನಿಸಿತು. ಅಷ್ಟರಲ್ಲಿ ಒಬ್ಬ ಪೇದೆ ಬಂದು, ''ಏಯ್ ಚಿಕ್ಕಣ್ಣ, ಲಿಫ್ಟನ್ ಸಾಹೇಬ್ರು ಕರೀತಾ ಅವ್ರೆ. ಈಗ್ಲೇ ಬಾ. ಅವರ ತಾಕೆ ಓಗ್ಬೇಕು'' ಅಂತ ಅವನನ್ನು ಕರೆದ. ಬೆಳ್ಳಂಬೆಳಗ್ಗೆ ಬಂದೀಖಾನೆಯ ವಾರ್ಡನ್‌ಗೆ ನನ್ನ ಬಳಿ ಯಾವ ಕೆಲಸ ಅಂತ ಆತಂಕಪಟ್ಟುಕೊಂಡೇ ಚಿಕ್ಕಣ್ಣ ಆ ಪೇದೆಯನ್ನು ಹಿಂಬಾಲಿಸಿದ.

ವಾರ್ಡನ್ ಕಛೇರಿಯ ಸ್ಪ್ರಿಂಗ್ ಜೋಡಿಸಿದ ಅರೆಬಾಗಿಲುಗಳು ತಾವಾಗಿಯೇ ಮುಚ್ಚಿಕೊಂಡಿದ್ದವು. ಒಂದು ಬಾರಿ ಮನೆದೇವರ ಪ್ರಾರ್ಥನೆ ಮಾಡಿ, ಬಾಗಿಲನ್ನು ನೂಕಿಕೊಂಡು ಚಿಕ್ಕಣ್ಣ ಒಳಗೆ ನಡೆದ. ಆಫೀಸಿನಲ್ಲಿ ಲಿಫ್ಟನ್ ಸಾಹೇಬರ ಜೊತೆ ಇನ್ಸ್‌ಪೆಕ್ಟರ್ ಸದಾಶಿವಯ್ಯ ಕುಳಿತಿದ್ದರು. ಚಿಕ್ಕಣ್ಣನನ್ನು ನೋಡಿ ಲಿಫ್ಟನ್ ಸಾಹೇಬರು, ''ಏನೋ ಚಿಕ್ಕಾ, ಚಪ್ಪಲಿ, ಷೂ ಎಲ್ಲಾನೂ ಬಲು ಚೆನ್ನಾಗಿ ಹೊಲೀತೀಯಂತೆ? ಬರೀ ತಿಜೋರಿ ಒಡೆಯೋದ್ರಲ್ಲೇ ನಿನ್ನ ಜಾಣತನಾ ಅಂದ್ಕೊಂಡಿದ್ದೆ. ಪರವಾಗಿಲ್ಲ ಕಣಯ್ಯ'' ಅಂದರು.

''ನಾನು ಯಾವ ತಿಜೋರೀನೂ ಒಡೆದಿಲ್ಲ ಬುದ್ಧೀ, ಸುಮ್ಮನೆ ಸುಳ್ಳು ಅಪವಾದಮಾಡಿ ನನ್ನನ್ನ ಜೈಲ್ಗೆ ನೂಕವ್ರೆ'' ಅಂದ ಚಿಕ್ಕಣ್ಣ.

ಸದಾಶಿವಯ್ಯ ಮಧ್ಯೆ ಬಾಯಿಹಾಕಿದರು. ''ಆಹ, ಸುಳ್ಳು ಅಪವಾದ ಅಂತೆ, ಜೈಲಿಗೆ ನೂಕಿಬಿಟ್ಟಿದ್ದಾರಂತೆ, ಯಾರಿಗೆ ಹೇಳ್ತೀಯೋ ನಿನ್ನ ಕಂತೆ ಪುರಾಣಾನ. ಬೋಗಾದಿ ವೆಂಕಟರಮಣ ಶೆಟ್ಟರ ತಿಜೋರಿ ಒಡೆದದ್ದು ಯಾರು ಅಂತ ಹೇಳ್ತೀಯಾ? ಹಾಗೇ, ನಂಜನಗೂಡು ಬಿಸ್ಮಿಲ್ಲಾ ಖಾನರ ಅಂಗಡೀಲಿರೋ ಭಾರಿ ಕಬ್ಬಿಣದ ತಿಜೋರಿನ ಹಾಡಹಗಲಲ್ಲೇ ಒಡೆದು ಏಳು ಸಾವಿರ ರೂಪಾಯಿ ಲಪಟಾಯಿಸಿದ್ದೂ ಯಾರು ಅಂತ ಹೇಳಿಬಿಟ್ರೆ, ತುಂಬಾ ಉಪಕಾರ'' ಅಂದರು.

ಪಾಪಿ ಬಸ್ಸಿಗೆ ಹೋದರೆ, ಮೊಣಕಾಲು ಮಡಿಸಲೂ ಜಾಗ ಇಲ್ಲ.

''ದೇವ್ರಾಣೇಗೂ ನಾನು ಬೋಗಾದಿ ಕಡೆಗೇ ಓಗಿಲ್ಲ. ಇನ್ನು ತಿಜೋರಿ ಒಡೆಯೋದೇನು ಬಂತು. ಇನ್ನು ನಂಜುಂಡೇಶ್ವರ ನಮ್ಮ ಮನೆದೇವ್ರು. ಅಲ್ಲಿ ನಾನು ಇಂತ ಪಾಪಕಾರ್ಯ ಮಾಡಿ ಯಾವ ನರಕಕ್ಕೆ ಓಗ್ಲಿ ಬುದ್ಧೀ'' ಅಂತ ಚಿಕ್ಕಣ್ಣ ಅವಲತ್ತುಕೊಂಡ.

ಲಿಫ್ಟನ್ ಸಾಹೇಬರು, ''ಲೋ ಚಿಕ್ಕಣ್ಣಾ ನೀನು ಪೂಟ್ಲಾಯರಾಗಕ್ಕೆ ಲಾಯಕ್ಕು. ಅದಿರ್ಲಿ, ಇವತ್ತು ನಿನ್ನ ಅದೃಷ್ಟ ಖುಲಾಯಿಸಿದೆ. ನಾಳೆ ಮಹಾರಾಜರ ವರ್ಧಂತಿ. ಒಳ್ಳೆಯ ನಡವಳಿಕೆ ಇರೋ ಹತ್ತು ಖೈದಿಗಳನ್ನು ನಾಳೆ ಬಿಡುಗಡೆ ಮಾಡಬೇಕು ಅಂತ ದಿವಾನರು ಆಜ್ಞೆ ಹೊರಡಿಸಿದ್ದಾರೆ. ನಿನ್ನ ಹೆಸರೂ ಆ ಪಟ್ಟಿಯಲ್ಲಿದೆ. ನಾಳೆ ಬೆಳಗ್ಗೆ ನಿನಗೆ ಬಿಡುಗಡೆ. ನಿನಗೆ ಹೊಸ ಬಟ್ಟೆ ಕೊಡಿಸಕ್ಕೆ ರಾಮಣ್ಣನಿಗೆ ಹೇಳಿದ್ದೇನೆ. ಸರಿ, ಈಗ ಹೊರಡು'' ಅಂತ ಹೇಳಿದರು. ಚಿಕ್ಕಣ್ಣ ಬಾಗಿಲಕಡೆ ಹೊರಡುಕ್ಕಿಲ್ಲ. ಇನ್ಸ್‌ಪೆಕ್ಟರ್ ಸದಾಶಿವಯ್ಯ, ''ಲೋ, ಚಿಕ್ಕಣ್ಣ, ಈಗೇನೋ ಖುಲಾಸೆ ಆಗಿದೆ ನಿನ್ಗೆ. ಆದರೆ ನಿನ್ನ ತಿಜೋರಿ ಒಡೆಯೋ ಬುದ್ಧಿ ನೀನು ಬಿಟ್ಟಿದೀಯಾ ಅಂತ ನನಗನ್ನಿಸುಲ್ಲಾ. ಒಂದಲ್ಲಾ ಒಂದು ಬಾರಿ ನೀನು ನನ್ನ ಮುಂದೆ ತಿಜೋರಿ ಒಡೆದು ನನ್ನ ಕೈಗೆ ಪುರಾವೆ ಒದಗಿಸ್ಬಿಡ್ತೀಯ. ಆಗ ನೋಡು, ಈ ಎಲ್ಲಾ ಕೇಸುಗಳನ್ನು ಪುನಃ ಕೋರ್ಟಿಗೆ ತಂದು ನಿನ್ನನ್ನ ಮುಗಿಸಿಬಿಡ್ತೇನೆ. ಇನ್ಮೇಲಾದ್ರೂ ನೆಟ್ಟಗಿರೋ ದಾರಿ ಹಿಡಿ'' ಅಂತ ಬುದ್ಧಿವಾದ ಹೇಳಿದರು.

ಮಾರನೆಯ ಬೆಳಗ್ಗೆ ಚಿಕ್ಕಣ್ಣ ಕಳೆದ ಆರು ತಿಂಗಳಲ್ಲಿ ಮೊಟ್ಟಮೊದಲಿಗೆ ಸ್ವಾತಂತ್ರದ ಉಸಿರನ್ನು ದೀರ್ಘವಾಗಿ ಎಳೆದುಕೊಂಡ. ಆಮೇಲೆ ಸರಸರನೆ ಇಟ್ಟಿಗೆ ಗೂಡಿನಲ್ಲಿದ್ದ ತನ್ನ ಮನೆಯ ಕಡೆ ನಡೆದ. ಮನೆಯ ಹತ್ತಿರ ಬರುತ್ತಿರುವಾಗಲೇ ತನ್ನ ಬಾಲ್ಯದ ಗೆಳೆಯ ನಂಜ ಅವನಿಗೆ ಸಿಕ್ಕಿದ.

''ಅರೆ ಚಿಕ್ಕಣ್ಣ, ಇಲ್ಲಿ, ನೀನು? ಒಂದು ವರ್ಸ ಜೈಲು ಅಂತ ನಿಮ್ಮಮ್ಮ ಹೇಳಿದ್ಲಲ್ಲೋ'' ನಂಜನ ದನಿಯಲ್ಲಿ ಸಂತಸ ತುಂಬಿತ್ತು.

''ಔದಣ್ಣಾ ಒಂದು ವರ್ಸ ಅಂತ್ಲೇ ಇದ್ದದ್ದು. ಒಳ್ಳೇ ನಡವಳಿಕೆ ಅಂತಾವ ಮಾರಾಜ್ರ ವರ್ಧಂತಿ ದಿನ ಕೆಲವರ್ನ ಖುಲಾಸೆ ಮಾಡಿದ್ರು. ನನ್ನೂ ಬಿಡುಗಡೆ ಆಯ್ತು. ನಮ್ಮವ್ವ ಎಂಗವ್ಳೆ?'' ಅಂತ ಕೇಳಿದ ಚಿಕ್ಕಣ್ಣ.

''ಅವಳ್ಗೇನು ಚೆಂದಾಕೇ ಅವ್ಳೆ. ನೀನು ಬಂದಿರೋದನ್ನ ನೋಡಿದ್ರೆ ಆಕಾಸಕ್ಕೆ ಏರಿಬಿಡ್ತಾಳೆ.''

ಚಿಕ್ಕಣ್ಣ ಮನೆ ಹತ್ತಿರ ಬಂದಾಗ ಅವನ ಅಮ್ಮ ಮನೆಯ ಗೋಡೆಗೆ ಅಂಟಿಸಿದ್ದ ಬೆರಣಿಗಳನ್ನು ಬಿಡಿಸುತ್ತಾ ನಿಂತಿದ್ದಳು. ಯಾರೋ ಹತ್ತಿರ ಬಂದದ್ದು ನೋಡಿ ಅವಳು ಕತ್ತು ತಿರುಗಿಸಿದಾಗ ಮಗ ನಿಂತದ್ದು ಅವಳ ಕಣ್ಣಿಗೆ ಬಿತ್ತು. ''ಓ ಚಿಕ್ಕಾನ. ಬಾ ಮಗ ಬಾ'' ಅನ್ನುತ್ತಾ ಆಕೆ ಬಿಕ್ಕಿ ಬಿಕ್ಕಿ ಅಳುತ್ತಾ ಅವನನ್ನು ತಬ್ಬಿದಳು. ಚಿಕ್ಕನಿಗೂ ಗಂಟಲು ಬಿಗಿದು ಬಂದದ್ದರಿಂದ ಮಾತನಾಡಲು ಆಗಲಿಲ್ಲ.

ಆ ಸಂಜೆ ತಾಯಿ ಮಗ, ಬಹಳ ಹೊತ್ತು ಮಾತನಾಡುತ್ತಿದ್ದರು.

ಚಿಕ್ಕ ಹೇಳುತ್ತಿದ್ದ. ''ನೋಡವ್ವಾ ನಾನು ಕಳ್ಳತನಕ್ಕಿಳಿದು ಬೋ ತಪ್ಪು ಮಾಡಿಬಿಟ್ಟಿವ್ನಿ. ಆದ್ರೆ ಒಂದು ರೀತಿಲಿ ಒಳ್ಳೇದೇ ಆಯ್ತು. ಈಗ ನಾನು ಚಮ್ಮಾರಿಕೆ ಕಲಿತಿವ್ನಿ. ಪಸಂದಾಗಿರೋ ಚಪ್ಪಲಿ, ದೊರೆಗಳು ಆಕೋ ಷೂಗಳು ಅವನ್ನೆಲ್ಲಾ ಮಾಡೋದು ಬರತೈತೆ ನನಗೆ. ಮಾರ್ಕೆಟ್ ಅತ್ರ ಕೂತ್ರೆ ಸುಖವಾಗಿ ಜೀವ್ನ ಮಾಡ್ಬೋದು.''

''ಕೆಲ್ಸ ಅಷ್ಟು ಚೆಂದಾಗಿ ಬಂದ್ರೆ ಬೀದೀಲಿ ಯಾಕೆ ಕೂರ್ಬೇಕು ಮಗಾ. ಒಂದು ಪೆಟ್ಟಿಗೆ ಅಂಗ್ಡೀ ಇಟ್ರೆ ಸ್ವಲ್ಪ ಮರ್ವಾದಿ. ನಾನು ಕೆಲ್ಸ ಮಾಡೋ ಮನೆ ಅಯ್ನೋರಿಗೆ ಏಳಿದ್ರೆ ಏನಾದ್ರೂ ಸಾಯ ಮಾಡ್ತ್ಯಾರು'' ಅಂದಳು ಮಮತೆಯ ಮಾತೆ.

ಕಾಲಚಕ್ರ ಉರುಳಿತು. ಪೆಟ್ಟಿಗೆ ಅಂಗಡೀಲಿ ಚಪ್ಪಲಿ, ಷೂ ಮಾರೋದು ಆಗಿನ ಕಾಲಕ್ಕೆ ಹೊಸದು, ಹಾಗಾಗಿ ಚಿಕ್ಕಣ್ಣನ ವ್ಯಾಪಾರ ಚೆನ್ನಾಗಿಯೇ ಇತ್ತು. ನಗದು ಹಣ ಹೊಳೆಯಂತೆ ಹರಿದು ಬರುತ್ತಿತ್ತು. ಅದನ್ನ ಜೋಪಾನ ಮಾಡಲು ತಿಜೋರಿ ಒಂದು ಬೇಕಾಯಿತು. ಆದರೆ ಚಿಕ್ಕಣ್ಣನಿಗೆ ತಿಜೋರಿಗಳ ಭದ್ರತೆಯಲ್ಲಿ ಎಳ್ಳಷ್ಟೂ ನಂಬಿಕೆ ಇರಲಿಲ್ಲ. ಪರಿಸ್ಥಿತಿ ಹೀಗಿದ್ದಾಗ ಶ್ರೀಮಂತರೊಬ್ಬರು ಷೂ ಖರೀದಿಸಲು ಅವನ ಪೆಟ್ಟಿಗೆ ಅಂಗಡಿಗೆ ಬಂದರು. ಇವನ ಸೌಜನ್ಯಶೀಲ ನಡವಳಿಕೆ, ಷೂಗಳ ತಯಾರಿಕೆಯಲ್ಲಿ ಕಾಣುತ್ತಿದ್ದ ಕಸುಬುಗಾರಿಕೆ ಇವೆಲ್ಲಾ ಅವರ ಮೇಲೆ ಬಹುವಾಗಿ ಪ್ರಭಾವ ಬೀರಿದವು. ''ಚಿಕ್ಕಣ್ಣಾ, ಯಾಕೆ ನೀನು ಇನ್ನೂ ಪೆಟ್ಟಿಗೆ ಅಂಗಡೀಲಿ ಇದ್ದೀಯಾ? ಸಯ್ಯಾಜಿರಾವ್ ರಸ್ತೆಯಲ್ಲಿ ಒಂದು ಠಿಕಾವಾಗಿರೋ ಅಂಗಡಿ ಇಡು. ನೀನೂ ಒಬ್ಬ ಸಂಭಾವಿತನಾಗಿ ಬಾಳಬಹುದು'' ಅಂದರು.

''ಅಯ್ಯೋ ಅದ್ಕೆಲ್ಲಾ ಬಾರಿ ಹಣಾ ಬೇಕಾಗ್ತದೆ ಬುದ್ಧಿ. ಅಲ್ದೆ ಈಗ ಬರ್ತಿರೋ ಹಣಾನ ಜೋಪಾನ ಮಾಡೋದೇ ಕಸ್ಟವಾಗೈತೆ'' ಅಂದ ಚಿಕ್ಕಣ್ಣ.

''ಅಯ್ಯೋ ಹುಚ್ಚಾ, ಅದಕ್ಕೇ ಅಲ್ವೇನೋ ಬ್ಯಾಂಕುಗಳಿರೋದು. ನಮ್ಮ ಮಾರಾಜ್ರೂ ದಿವಾನ್ರೂ ಸೇರಿ ಒಂದು ಹೊಸಾ ಬ್ಯಾಂಕು ತೆರೆದಿದ್ದಾರೆ. ರೇಲ್ವೇ ಸ್ಟೇಷನ್ ದಾರೀಲೇ ಇದೆ ಅದು. ನಾಳೆ ಬೆಳಗ್ಗೆ ಅಲ್ಲಿಗೆ ಬಾ. ಏನು ಮಾಡ್ಬೇಕು ಅಂತ ಹೇಳ್ತಿನಿ'' ಅಂತ ಹೇಳಿ ಆ ಶ್ರೀಮಂತರು ಹೊರಟು ಹೋದರು.

ಮಾರನೆಯ ದಿನ ಚಿಕ್ಕಣ್ಣ ಆ ಬ್ಯಾಂಕಿಗೆ ಹೋದ. ತಾನು ಭೇಟಿ ಮಾಡಿದ್ದ ಐನೋರು ಗಾಜಿನ ರೂಮಿನಲ್ಲಿ ಕೂತಿದ್ದರು. ಇವನನ್ನು ನೋಡಿ ಮೆಲುನಗೆ ನಕ್ಕು ಒಳಗೆ ಕರೆದರು. ಚಿಕ್ಕಣ್ಣ ಅಳುಕುತ್ತಲೇ ಒಳಗೆ ಹೋದ.

''ಭೇಷ್ ನನ್ನ ಮಾತನ್ನು ಕೇಳಿ ಬಂದೆಯಲ್ಲ. ಈಗ ನಮ್ಮ ಆಫೀಸರ್ ಸಂಜೀವನಿಗೆ ಹೇಳಿದ್ದೇನೆ ಅವನು ನಿನಗೆ ಎಲ್ಲಾ ಸಹಾಯಾನೂ ಮಾಡ್ತಾನೆ'' ಎಂದು ಹೇಳಿ ಸಂಜೀವನನ್ನು ಕರೆದು ಚಿಕ್ಕಣ್ಣನನ್ನು ಅವನ ಜೊತೆ ಕಳಿಸಿದರು.

ಉರುಳುವುದು ಕಾಲಚಕ್ರದ ನಿಯಮ. ಅದು ತನ್ನ ನಿಯಮವನ್ನು ಪಾಲಿಸುತ್ತಲೇ ಇತ್ತು. ಚಿಕ್ಕ ರಂಗಪ್ನೋರ ಷೂ ಸ್ಟೋರ್, ಸಯ್ಯಾಜಿರಾವ್ ರಸ್ತೆಯಲ್ಲಿ ಖ್ಯಾತಿಯನ್ನು ಗಳಿಸಿತು. ತೊಂಡೆಭಾವಿಯ ಹೆಣ್ಣು ಕೆಂಚಮ್ಮ ರಂಗಪ್ಪನವರ ಮೆಚ್ಚಿನ ಮಡದಿಯಾದಳು.

ಒಂದು ರಾತ್ರಿ ರಂಗಪ್ಪ ಕೆಂಚಮ್ಮನ ಹತ್ತಿರ ಮನದಾಳದಿಂದ ಮಾತನಾಡಲು ಪ್ರಾರಂಭಿಸಿದ.

''ಅಮ್ಮೀ, ಇಲ್ನೋಡವ್ವಾ, ಗಂಡ ಎಂಡ್ರ ಮಧ್ಯ ಯಾವ ಗುಟ್ಟೂ ಇರಬಾರ್ದವ್ವ. ಅಂಗಾಗಿ ಈ ಮಾತುಗಳನ್ನು ಏಳ್ತಿವ್ನಿ. ಚಿಕ್ಕಂದ್ನಲ್ಲಿ ಯಾವ್ದೋ ದುರ್ಬುದ್ಧಿ ಬಂದು ತಿಜೋರಿ ಒಡೆಯೋದನ್ನ ಕಲ್ತು ಬುಟ್ಟಿದ್ದೆ. ಒಂದು ದಿನ ಪೋಲಿಸರಿಗೆ ಸಿಕ್ಕು ಜೈಲಿಗೂ ಓಗಬೇಕಾಯ್ತು. ಅಲ್ಲಿ ಈ ಚಮ್ಮಾರಿಕೆ ಕಲಿತೆ ನೋಡು. ನನ್ನ ಅದೃಷ್ಟಾನೇ ಬದಲಾಯ್ತು. ಈ ಬ್ಯಾಂಕ್ ಮ್ಯಾನೇಜರ್ ನನ್ನನ್ನ ತಮ್ಮ ಮಗನಂತೆ ಕಂಡು ಇಸ್ವಾಸ ತೋರಿಸಿ ಒಬ್ಬ ಮನುಷ್ಯ ಅಂತ ಮಾಡಿದ್ರು. ನಾಳೆ ಬ್ಯಾಂಕಿನಾಗ ಒಂದು ಸಮಾರಂಭ ಐತಂತೆ. ನನ್ನೂ ಕರೆದವ್ರೆ. ಎಂಡ್ರನ್ನೂ ಕರ್ಕೊಂಡು ಬಾ ಅಂತ ಮ್ಯಾನೇಜರ್ರೇ ಏಳವ್ರೆ. ಆ ಸಮಾರಂಭ ಮುಗಿಸ್ಕೊಂಡು ಕನ್ನಂಬಾಡಿ ಕಟ್ಟೆತಾಕೆ ಓಗಿ ಬರಾವ. ಅಲ್ಲಿ ಕಾವೇರಿ ತಾಯಿಯ ಮಡಿಲಲ್ಲಿ ನನಗೆ ಪ್ರಾಯಶ್ಚಿತ್ತ ಮಾಡ್ಕೊಳ್ಳೋ ಮನಸ್ಸಾಗದೆ'' ಅಂತ ರಂಗಪ್ಪ ತನ್ನ ಅಳಲನ್ನು ತೋಡಿಕೊಂಡ.

''ಏನದು ಪ್ರಾಯಶ್ಚಿತ್ತ?'' ಕೆಂಚಮ್ಮ ಮುಗ್ಧತೆಯಿಂದ ಕೇಳಿದಳು.

''ತಿಜೋರಿ ಒಡೆಯೋದಕ್ಕೆ ಉಪಯೋಗ್ಸೋ ಈ ಕಬ್ಬಿಣದ ಉಳಿ, ಬಳೆ ಎಲ್ಲಾನೂ ಈ ಚೀಲದಲ್ಲಿ ಇರಿಸಿವ್ನಿ. ಈ ಚೀಲ ನಿನ್ನ ಬಳಿ ಇರ್ಲಿ. ಅದರ ಜೊತೆ ಈ ತಾಯತಾನೂ ಇದೆ. ಒಡೆಯೋವಾಗ ಯಾವಾಗ್ಲೂ ನಾನು ಈ ತಾಯತ ಕತ್ತಿಗೆ ಆಕ್ಕೊಂಡೇ ಕೆಲಸ ಮಾಡ್ತಾ ಇದ್ದೆ. ನಾಳೆ ಕಾವೇರಿ ತಾಯಿ ಕ್ಷಮಾಪ್ಣೆ ಕೇಳಿ ಇವನ್ನೆಲ್ಲಾ ಅವಳಿಗೆ ಅರ್ಪಿಸಿಬಿಟ್ರೆ ಮನಸ್ಸು ನಿರಾಳ ಆಗ್ತದೆ'' ಎಂದ ರಂಗಪ್ಪ ಉರುಫ್ ಚಿಕ್ಕಣ್ಣ.

ಮಾರನೆಯ ದಿನ ಬ್ಯಾಂಕಿನ ಆವರಣದಲ್ಲಿ ಹಬ್ಬದ ವಾತಾವರಣ ಇತ್ತು. ಚಿಕ್ಕಣ್ಣ ಮತ್ತು ಕೆಂಚವ್ವ ಹೊಸಬಟ್ಟೆ ಧರಿಸಿ ಅಲ್ಲಿಗೆ ಬಂದಿದ್ದರು. ಬ್ಯಾಂಕ್ ಆಫೀಸರ್ ಸಂಜೀವ, ಚಿಕ್ಕಣ್ಣನನ್ನು ನೋಡಿ, ''ಬನ್ನಿ ರಂಗಪ್ಪ, ಬನ್ನಿ ಕೆಂಚಮ್ಮ. ಇಲ್ಲಿ ನೋಡಿ ಇವರು ನನ್ನ ಅವಳಿ ಮಕ್ಕಳು ಸುಜಾತ ಮತ್ತು ಸುಕನ್ಯಾ. ಇವಳು ನನ್ನ ಮಡದಿ ಲಲಿತಾ'' ಅಂತ ಹೇಳುತ್ತಾ ತನ್ನ ಮನೆಯವರನ್ನೆಲ್ಲಾ ಪರಿಚಯಿಸಿದ.

''ಏನಿವತ್ತು ಸಮಾರಂಭದ ವಿಶೇಷ?'' ಚಿಕ್ಕಣ್ಣ ಕೇಳಿದ.

''ಇವತ್ತು ನಮ್ಮ ಬ್ಯಾಂಕ್ನಲ್ಲಿ ಒಂದು ಬಹು ದೊಡ್ಡ ತಿಜೋರಿಯ ಉದ್ಘಾಟನೆ. ಸ್ವತಃ ದಿವಾನ್ರೇ ಅದನ್ನ ಉದ್ಘಾಟನೆ ಮಾಡುಕ್ಕೆ ಬರ್ತಾ ಇದಾರೆ. ಈ ತಿಜೋರಿ ಇಂಗ್ಲೆಂಡಿನಿಂದ ತರಿಸಿರೋದು. ಬಾಗಿಲು ತೆಗೆದು ಒಬ್ಬ ಮನುಷ್ಯ ಒಳಗೆ ಹೋಗುವಷ್ಟು ದೊಡ್ಡದಾಗಿದೆ ಇದು. ಇಂಡಿಯಾದಲ್ಲಿ ಮೊಟ್ಟ ಮೊದಲ ಬಾರಿಗೆ ಮೈಸೂರು ಸಂಸ್ಥಾನದಲ್ಲಿ ಇಂತಹ ತಿಜೋರಿ ಸ್ಥಾಪನೆ ಆಗ್ತಿರೋದು ನಮಗೆಲ್ಲಾ ಹೆಮ್ಮೆಯ ವಿಷಯ'' ಅಂತ ಹೇಳುತ್ತಿದ್ದಾಗಲೇ ದಿವಾನರು ಆಗಮಿಸಿದರು. ಅವರನ್ನು ಕರೆತರುತ್ತಿದ್ದ ರಕ್ಷಣಾಧಿಕಾರಿ ಇನ್ಸ್‌ಪೆಕ್ಟರ್ ಸದಾಶಿವಯ್ಯ, ಹತ್ತಿರದಲ್ಲೇ ಬಂದು ನಿಂತರು.

ಸದಾಶಿವಯ್ಯನವರನ್ನು ನೋಡಿದ ತಕ್ಷಣ ಚಿಕ್ಕಣ್ಣನಿಗೆ ಹೃದಯವೇ ಬಾಯಿಗೆ ಬಂದಂತಾಯಿತು. ಆದರೂ ಸಾವರಿಸಿಕೊಂಡು ಸುಮ್ಮನಾದ. ಅವರೂ ಸಹಾ ಇವನನ್ನು ನೋಡಿದರೂ ಏನೂ ಪ್ರತಿಕ್ರಿಯಿಸಲಿಲ್ಲ. ಅವರು ಬಹುಶಃ ನನ್ನನ್ನು ಮರೆತಿರಬಹುದು, ಬದುಕಿದೆ ಅಂತ ಚಿಕ್ಕಣ್ಣ ಸಮಾಧಾನದಿಂದ ಮುಂದಿನ ವಿದ್ಯಮಾನಗಳ ಕಡೆ ಗಮನ ಹರಿಸಿದ. ಅವು ಮಿಂಚಿನ ವೇಗದಲ್ಲಿ ಜರುಗುವುವೆಂದು ಅವನು ಕನಸು ಮನಸಿನಲ್ಲೂ ಊಹಿಸಿರಲಿಲ್ಲ.

ನೋಡುತ್ತಿದ್ದಂತೆ ಸಂಜೀವನ ಹೆಂಡತಿ ಲಲಿತಾ ''ಹೋ'' ಎಂದು ಆಕ್ರಂದನ ಮಾಡಲು ಪ್ರಾರಂಭಿಸಿದಳು. ಸಂಜೀವ ಗಾಬರಿಯಿಂದ ಅವಳ ಬಳಿ ಓಡಿದ. ಚಿಕ್ಕಣ್ಣ ಮತ್ತು ಕೆಂಚಮ್ಮ ಸಂಜೀವನ ಬಳಿ ಧಾವಿಸಿದರು. ದೊಡ್ಡ ತಿಜೋರಿಯ ಬಳಿ ಆಟ ಆಡುತ್ತಿದ್ದ ಸುಕನ್ಯಾ ಅಕಸ್ಮಾತ್ ತಿಜೋರಿಯ ಒಳಕ್ಕೆ ನಡೆದಾಗ ಸುಜಾತ ತಿಜೋರಿಯ ಬಾಗಿಲನ್ನು ಮುಟ್ಟಿದಳಂತೆ. ಬಾಗಿಲು ತಾನಾಗಿಯೇ ಹಾಕಿಕೊಂಡು ಬಿಟ್ಟಿತಂತೆ. ಲಲಿತಾ ಜೋರಾಗಿ ''ಸುಕನ್ಯಾ, ಕೇಳಿಸ್ತಾ ಇದೆಯೇನೇ?'' ಅಂತ ಕೂಗಿದಾಗ ಕ್ಷೀಣವಾಗಿ ಮಗು ಅಳುವ ಸದ್ದು ಎಲ್ಲರ ಕಿವಿಗೂ ಬಿತ್ತು. ದಿವಾನರು ಬ್ಯಾಂಕ್ ಮ್ಯಾನೇಜರನ್ನು ಕರೆದು ತಿಜೋರಿಯ ಬಾಗಿಲನ್ನು ತಕ್ಷಣವೇ ತೆರೆಯುವಂತೆ ಆಜ್ಞಾಪಿಸಿದರು. ಮ್ಯಾನೇಜರ್ ಮುಖ ವಿವರ್ಣವಾಗಿತ್ತು. ''ತಿಜೋರಿಯ ಕೋಡ್ ಇನ್ನೂ ಸೆಟ್ ಮಾಡಿಲ್ಲ ಸ್ವಾಮಿ. ಇದನ್ನು ತೆಗೆಯಲು ಫ್ಯಾಕ್ಟರಿಯವರೇ ಬರಬೇಕಾಗುತ್ತೆ'' ಅಂತ ಬಡಬಡಿಸಿದರು. ಲಲಿತೆಯ ಗೋಳಾಟವನ್ನು ಹೊರತುಪಡಿಸಿ ಎಲ್ಲೆಡೆಯೂ ನೀರವತೆ ಹರಡಿತ್ತು. ಕೆಂಚಮ್ಮ, ಚಿಕ್ಕಣ್ಣನತ್ತ ಮೂಕ ದೃಷ್ಟಿಯಿಂದ ನೋಡಿ, ಏನೂ ಮಾತನಾಡದೆ ತನ್ನ ಕೈಲಿದ್ದ ಚೀಲವನ್ನು ಅವನತ್ತ ಚಾಚಿದಳು. ಅವನೂ ಮೌನದಿಂದ ಅದನ್ನು ಸ್ವೀಕರಿಸಿ, ನಿಧಾನವಾಗಿ ಅದರ ಗಂಟನ್ನು ಬಿಚ್ಚಿ, ಒಳಗಿದ್ದ ತಾಯತವನ್ನು ತೆಗೆದು ಯಾವ ಅವಸರವೂ ಇಲ್ಲದೆ ಕತ್ತಿಗೆ ಧರಿಸಿ, ತಿಜೋರಿಯತ್ತ ನಡೆದ. ಎಲ್ಲರೂ ನೋಡುತ್ತಿದ್ದಂತೆ ಚಿಕ್ಕಣ್ಣನ ಕೈಗಳು ವೀಣೆ ನುಡಿಸುವಂತೆ ತಿಜೋರಿಯ ಬೀಗವನ್ನು ನುಡಿಸಹತ್ತಿದವು. ಹತ್ತು ಘಂಟೆಗಳಂತೆ ಭಾಸವಾದ ಹತ್ತು ನಿಮಿಷಗಳ ನಂತರ ಒಮ್ಮೆಲೇ ತಿಜೋರಿಯ ಬಾಗಿಲುಗಳು ತೆರೆದುಕೊಂಡವು. ಅಳುತ್ತಿದ್ದ ಸುಕನ್ಯಾ ತಾಯಿಯ ಬಳಿ ಓಡಿಬಂದಳು. ಸುತ್ತಲಿನ ಜನಗಳ ಹರ್ಷೋದ್ಗಾರಗಳಿಗೆ ಚಿಕ್ಕಣ್ಣ ಕಿವುಡಾಗಿದ್ದ. ತನ್ನ ಚೀಲವನ್ನು ಪುನಃ ಕಟ್ಟಿ, ನೇರವಾಗಿ ಇನ್ಸ್‌ಪೆಕ್ಟರ್ ಸದಾಶಿವಯ್ಯನವರ ಬಳಿ ನಡೆದು, ''ನಾನು ಸಿದ್ಧ ಸ್ವಾಮಿ'' ಅಂತ ಹೇಳಿದ.

ಸದಾಶಿವಯ್ಯ ''ಯಾರು ನೀವು, ನಿಮ್ಮ ಪರಿಚಯ ನನಗಿಲ್ಲ'' ಎಂದು ಹೇಳುತ್ತಾ ಅವನ ಉತ್ತರಕ್ಕೂ ಕಾಯದೇ ದಿವಾನರತ್ತ ತೆರಳಿದರು.

(ಓ. ಹೆನ್ರಿಗೆ ಕೃತಜ್ಞತೆಗಳೊಂದಿಗೆ)

# ''ನಾನು ''ಮಾತಾಜಿ'' ಆದ ದಿನ...''

● ನಂದಿನಿ ಕಾಪಡಿ

**ಭಾ**ರತ ಸರ್ಕಾರದ ಲೇಖಾ ಪರೀಕ್ಷೆಯ ಸೇವೆಯ ಮೂಲಕ ನಾವು ಮೂವರು ಸ್ವೀಡನ್ ದೇಶದಲ್ಲಿದ್ದ ಒಂದು ಅಂತರರಾಷ್ಟ್ರೀಯ ಸಂಸ್ಥೆಗೆ ಒಂದು ತಿಂಗಳಿನ ಅವಧಿಗೆ ಬಂದಿದ್ದೆವು. ತಡೆಯಲಾಗದ ಚಳಿ, ಫೆಬ್ರವರಿ ತಿಂಗಳು, ಇನ್ನೂ ಎಲ್ಲಾ ಕಡೆಯೂ ಬರ್ಫ್ ಹೊದೆದ ಬೋಳು ಮರಗಳು. ಶ್ವೇತ ಬಣ್ಣವೇ ಎಲ್ಲೆಲ್ಲೂ. ಅಂದು ರವಿವಾರ. ನಮಗೂ ಕೆಲಸ ಮಾಡಿ ಮಾಡಿ ಸಾಕಾಗಿ ಎಲ್ಲಾದರೂ ತಿರುಗಿಕೊಂಡು ಬರೋಣವೆಂದು ಟ್ರಾಮ್ ಹತ್ತಿದ್ದೆವು. ನಾನು ಎಲ್ಲರಿಗಿಂತ ವರಿಷ್ಠಳು ಮತ್ತು ನಮ್ಮ ಗುಂಪಿನ ಮುಖ್ಯಸ್ಥೆ. ನನ್ನ ಜತೆ ಬಂದಿದ್ದ ಅರವಿಂದ್ ಗುಪ್ತ ಐಐಟಿಯಿಂದ ನಮ್ಮ ಲೇಖಾ ಪರೀಕ್ಷಾ ಸೇವೆಗೆ ಬಂದಿದ್ದ ಭೂಪ. ತುಂಬಾ ಚೂಟಿ ಮತ್ತು ಹುಡುಗು. ಓಡಿಷ ರಾಜ್ಯದಿಂದ ಬಂದಿದ್ದ ಪಾಂಡಾ ನಮ್ಮ ಸಹಾಯಕ, ಲೇಖಾ ಪರೀಕ್ಷೆಯ ಕೆಲಸ ಮಾಡಿ ಮಾಡಿ ಸಾಕಾಗಿದ್ದ ನಮಗೆ ಈ ಊರಿನ ಛಳಿಯ ವಾತಾವರಣ, ಇಲ್ಲಿಯ ಜನರ ತಾತ್ಸಾರ ಮನೋಭಾವ ನೋಡಿ ಬೇಜಾರಾಗಿತ್ತು. ನಾವು ಸಿಟಿ ಸೆಂಟರ್‌ನಲ್ಲಿ ಇಳಿದುಕೊಂಡು ಅಲ್ಲೇ ಸುತ್ತಾಡುತ್ತ ಮುಚ್ಚಿದ್ದ ಹಾಗೂ ತೆರೆದಿದ್ದ ಅಂಗಡಿಗಳ ವೈಭವ ನೋಡುತ್ತಿದ್ದೆವು.

ಒಂದು ಅಂಗಡಿ ನಮ್ಮನ್ನು ತುಂಬಾ ಆಕರ್ಷಿಸಿತು. ಒಳಗೆ ಹೋದೆವು. ''ಸ್ಪಿರಿಚುವಲ್ ಎನ್‌ಲೈಟನ್‌ಮೆಂಟ್'' ಎಂಬ ಹೆಸರಿನ ಈ ಅಂಗಡಿಯಲ್ಲಿ ನೋಡಿದಲ್ಲೆಲ್ಲ ಭಾರತೀಯ ವಸ್ತುಗಳೇ! ಗಂಟೆಗಳು, ರುದ್ರಾಕ್ಷಿ ಹಾರಗಳು, ಸ್ಫಟಿಕ ಮಣಿ ಸರಗಳು, ಗಣಪತಿ, ಶಿವ, ದುರ್ಗಾ ಪ್ರತಿಮೆಗಳು, ಶಂಖ ಓಂಕಾರದ ಸಿಡಿಗಳು – ಹೀಗೆ ಬರೀ ನಮ್ಮ ದೇಶದ ಸಾಮಾನುಗಳೇ! ಗಂಧದ ಪುಡಿ, ಕುಂಕುಮ, ಅರಿಶಿನ ಮುಂತಾದ ಪೂಜೆ ಸಾಮಾನುಗಳು. ಹಿಮಾಲಯ ದರ್ಶನದ ಪುಸ್ತಕಗಳು, ಗಂಗಾ ಸ್ಥಾಲಿ, ಅಗರಬತ್ತಿಗಳು ಹೀಗೆ ಪೇರಿಸಿದ್ದ ಅಂಗಡಿಯಲ್ಲಿ ಒಬ್ಬಳೇ ಮಾರುವ ಹುಡುಗಿ. ನನ್ನ ಹಣೆಯಲ್ಲಿದ್ದ ಚಿಕ್ಕ ಕುಂಕುಮ ನೋಡಿ ಬೇಗ ಬೇಗೆ ಎರಡೂ ಕೈ ಜೋಡಿಸಿ ನಮಸ್ತೆ ಎಂದಳು. ಇಂಗ್ಲಿಷ್ ಸರಿಯಾಗಿ ಬರದು. ಫ್ಲೆಮಿಶ್ ಭಾಷೆಯಲ್ಲಿ ನಮಗೆ ಏನೇನೋ ಹೇಳಿದಳು. ಒಂದು ಪುಸ್ತಕದ ಮೇಲೆ ಪುರಿ

*ದೊಡ್ಡಾಸ್ಪತ್ರೆ ಬಾಗಿಲ ಹತ್ತಿರಾನೇ ''ಒಂದೇ ದಾರಿ'' ಅಂತ ಬೋರ್ಡು ಹಾಕಿರೋದು ಸತ್ಯವಾಗಿರಬಹುದು, ಆದರೆ ಹಾಗೆ ಹೇಳಿಕೊಳ್ಳಬೇಕೆ?*

ಜಗನ್ನಾಥನ ಚಿತ್ರ ನೋಡಿ ನಮ್ಮ ಪಾಂಡಾ ಭಾವಪರವಶನಾಗಿ ಅಲ್ಲೇ ನಮಸ್ಕಾರ ಮಾಡಿಬಿಟ್ಟ.

ಸ್ವಲ್ಪ ಸಮಯ ಕಳೆದು ಹೊರಗೆ ಬಂದೆವು. ತುಂಬಾ ಚಳಿ. ಅಲ್ಲೇ ಇದ್ದ ಕೆಫೆಗೆ ಹೋದೆವು. ಅರವಿಂದ್ ಧೂಮ್ರಪಾನ ಮಾಡಲೆಂದು ಹೊರಗೆ ಹೋಗಿಬಂದ. ನಾನು ಬಿಸಿ ಚಾಕಲೇಟ್ ಡ್ರಿಂಕ್ ಆಸ್ವಾದಿಸುತ್ತಾ ಹೊರಗೆ ನೋಡುತ್ತಿದ್ದೆ. ನಮ್ಮ ಅಂಗಡಿಯೊಳಗೆ ಸಾಕಷ್ಟು ಜನ ಹೋಗಿ ಬರುತ್ತಿದ್ದರು. ಇದ್ದಕ್ಕಿದ್ದಂತೆ ನಮ್ಮ ಅರವಿಂದ್ ''ಯುರೇಕಾ'' ಎಂದ. ಯಾಕಪ್ಪ ಏನೋ ಎನ್ನುತ್ತಾ ನಾನು ಮತ್ತು ಪಾಂಡಾ ಅವನತ್ತ ನೋಡಿದೆವು. ''ಮೇಡಂ, ಒಂದು ಐಡಿಯಾ! ಹೇಗೂ ಇವತ್ತು ಕೆಲಸವಿಲ್ಲ. ಸ್ವಲ್ಪ ಹಣ ಸಂಪಾದಿಸೋಣ... ಕೇಳಿ...?

''ಸ್ಪಿರಿಚುವಲ್ ಎನ್‌ಲೈಟನ್‌ಮೆಂಟ್'' ಅಂಗಡಿಯ ಹೊರಗೆ ಒಂದು ಸ್ಟೇಜ್ ನಿರ್ಮಾಣವಾಗಿದೆ. ನಾನು ''ಮಾತಾಜಿ'' ಪದ್ಮಾಸನದಲ್ಲಿ ಕುಳಿತು ಧ್ಯಾನಸ್ತಳಾಗಿದ್ದೇನೆ. ಕೆಂಪು ಬಣ್ಣದ ಸೀರೆಯ ಮೇಲೆ ಹಳದಿ ಬಣ್ಣದ ಶಾಲು ಹೊದ್ದಿದ್ದೇನೆ. ಕೂದಲನ್ನು ಬಿಚ್ಚಿಕೊಂಡು ಮುಖದ ಸುತ್ತ ಬಿಟ್ಟಿದ್ದೇನೆ. ಹಣೆಯ ಮೇಲೆ ಕೆಂಪು ಬಣ್ಣದ ಓಂಕಾರ. ಕಣ್ಣಿ ತುಂಬಾ ಕಾಡಿಗೆ. ನನ್ನ ಪಕ್ಕ ಪಾಂಡಾ ಕುಳಿತು ಗಾಯತ್ರಿ ಮಂತ್ರ ಜಪಿಸುತ್ತಿದ್ದಾನೆ. ಓಂ ಶ್ರಿ ಬರೆದ ಶಾಲನ್ನು ಹೊದ್ದುಕೊಂಡಿದ್ದಾನೆ. ನಮ್ಮ ಅರವಿಂದ್ ಕಾವಿ ಬಣ್ಣದ ಖಾದಿ ಕುರ್ತಾ ತೊಟ್ಟು ರುದ್ರಾಕ್ಷಿಯ ಮಾಲೆ ಹಾಕಿಕೊಂಡಿದ್ದಾನೆ. ''ಮಾತಾಜಿ ಹಿಮಾಲಯದಿಂದ ತಪಸ್ಸು ಮಾಡಿ ಬಂದಿದ್ದಾರೆ. ಪ್ರವಚನ ಚೆನ್ನಾಗಿ ಹೇಳುತ್ತಾರೆ. ಬರೀ ಮುಖ ಮತ್ತು ಕೈ ನೋಡಿ ಭವಿಷ್ಯ ಹೇಳುತ್ತಾರೆ''' ಎಂದು ಬಂದವರಿಗೆಲ್ಲಾ ಹೇಳುತ್ತಿದ್ದ.

ಸುತ್ತಮುತ್ತ ಜನ ತುಂಬಿಕೊಂಡಿದ್ದಾರೆ. ಸ್ಪಿರಿಚುವಲ್ ಎನ್‌ಲೈಟನ್‌ಮೆಂಟ್ ಅಂಗಡಿಯ ಮಾಲಕಿ ಟೀನಾ ನಮ್ಮ ಹತ್ತಿರದಲ್ಲೇ ಇದ್ದುಕೊಂಡು ಫ್ಲೆಮಿಶ್ ಭಾಷೆಯಲ್ಲಿ ಜನರನ್ನು ಕರೆಯುತ್ತಿದ್ದಾಳೆ. ಮೊದಲು ಬಂದ ಹುಡುಗಿ ನನಗೆ ಕೈಮುಗಿದು ತನ್ನ ಸಂಕಟ ಯಾವಾಗ ಪರಿಹಾರ ಎಂದು ಕಳಕಳಿ ವ್ಯಕ್ತಪಡಿಸುತ್ತಾಳೆ. ವಿನಾಯಕನ ವಿಗ್ರಹದ ಮುಂದೆ ದೀಪ ಹಚ್ಚಿಡು ಎಂದು ಹೇಳುತ್ತೇನೆ. ಟೀನಾ ಅವಳಿಗೆ ವಿನಾಯಕನ ವಿಗ್ರಹ ಮತ್ತು ದೀಪ ಮಾರಿಬಿಡುತ್ತಾಳೆ. ಅರವಿಂದ್ ಬೇಗಬೇಗ ಹಿತ್ತಾಳೆ ತಟ್ಟೆ ಮುಂದಿಡುತ್ತಾನೆ. ಪಾಪ ಆ ಹುಡುಗಿ ಎರಡು ಯೂರೋ ಹಾಕುತ್ತಾಳೆ.

ಈಗ ಬಂದವಳು ತುಂಬು ಗರ್ಭಿಣಿ. ಎರಡು ವರ್ಷದ ಮಗುವೊಂದು ಪ್ರಾಮ್‌ನಲ್ಲಿ ಕುಳಿತಿದೆ. ಪಕ್ಕದಲ್ಲೇ ದೃಢಕಾಯನಾದ ಯುವಕ ನಿಂತಿದ್ದಾನೆ. ನಾನು ಅವಳ ಕೈ ನೋಡುತ್ತೇನೆ, ನಂತರ ಆ ಯುವಕನ ಕೈ ನೋಡಿ ''ಶೀಘ್ರವೇ ಮದುವೆ ಮಾಡಿಕೊಳ್ಳಿ'' ಎನ್ನುತ್ತೇನೆ. ಆಕೆ ನಕ್ಕು ಆ ಯುವಕನಿಗೆ ಏನೋ ಹೇಳುತ್ತಾಳೆ. ನಂತರ ಯುವಕನಿಗೆ ನೌಕರಿ ಸಿಗುವುದೇ ಎಂದು ಕೇಳುತ್ತಾಲೆ. ಪ್ರಯತ್ನ ಮಾಡಿದರೆ ಖಂಡಿತವಾಗಿ ಸಿಗುವುದು ಎಂದು ಆಶ್ವಾಸನೆ ಕೊಡುತ್ತೇನೆ. ಐದು ಯೂರೋ ಹಾಕಿ ಯುವತಿ ಮುಂದೆ ಹೋಗುತ್ತಾಳೆ. ಅರವಿಂದ್ ಪಿಸುದನಿಯಲ್ಲಿ ಹಿಂದಿ ಭಾಷೆಯಲ್ಲಿ ''ಅವರಿಗೆ ಮದುವೆಯಾಗಿಲ್ಲ ಎಂದು

ಹೇಗೆ ಗೊತ್ತಾಯಿತು'' ಎನ್ನುತ್ತಾನೆ. ''ತುಂಬಾ ಸುಲಭ. ಇಬ್ಬರ ಕೈಯಲ್ಲೂ ಉಂಗುರವಿರಲಿಲ್ಲ'' ಎಂದು ನಾನು ಹೇಳಿ ಓಂ ಓಂ ಎನ್ನುತ್ತಾ ಕಣ್ಣು ಮುಚ್ಚಿಕೊಳ್ಳುತ್ತೇನೆ.

ಟೀನಾ ಯಾರ ಹತ್ತಿರವೋ ಉತ್ಸಾಹದಿಂದ ಮಾತಾಡುತ್ತಿದ್ದಾಳೆ. ತರುವಾಯ ಒಬ್ಬ ವೃದ್ಧ ಮಹಿಳೆಯನ್ನು ನನ್ನ ಹತ್ತಿರ ಕಳಿಸುತ್ತಾಳೆ. ''ಮಾತಾಜಿ, ನನಗೆ ಜೀವನ ಬೇಸರವಾಗಿದೆ. ಬಾಯ್‌ಫ್ರೆಂಡ್ ಬಿಟ್ಟುಹೋದ. ನಿಮ್ಮ ದೇಶದಲ್ಲಿ ನನಗೆ ಶಾಂತಿ ಸಿಗುವುದೇ? ಯೋಗಾಭ್ಯಾಸ ಮಾಡಬೇಕೇ'' ಎಂದು ಕೇಳುತ್ತಾಳೆ. ''ಹೆದರಬೇಡ ತಾಯಿ. ದಿನಾ ಓಂಕಾರದ ಸಿಡಿ ಹಾಕಿಕೊಂಡು ಧ್ಯಾನ ಮಾಡು. ಅತಿ ಶೀಘ್ರದಲ್ಲಿ ನಿನಗೆ ಶಾಂತಿ ಸಿಗುತ್ತದೆ ಎನ್ನುತ್ತೇನೆ. ಅಷ್ಟರಲ್ಲಿ ಅರವಿಂದ್ ಪಿಸುಗುಟ್ಟುತ್ತ ರುದ್ರಾಕ್ಷಿ ಮಾಲೆ, ಮಣಿಮಾಲೆ ತಂದುಕೊಟ್ಟು ಇವೆಲ್ಲ ಧ್ಯಾನಕ್ಕೆ ಸಹಕಾರ ಎನ್ನುತ್ತಾ ನೋಡನೋಡುತ್ತಾ ಮಾರಿಬಿಡುತ್ತಾನೆ. ಪಾಂಡ ಕಣ್ಣುಬಿಟ್ಟು ಜಪ ನಿಲ್ಲಿಸಿ ಹಿಂದಿಯಲ್ಲಿ ''ಸಾಬ್‌ಜೀ, ಆಪ್ ತೊ ಗ್ರೇಟ್ ಸೇಲ್ಸ್‌ಮ್ಯಾನ್ ಹೈ'' ಎಂದು ಹೊಗಳುತ್ತಾನೆ. ''ಬನಿಯಾ ಹೂ ನಾ'' ಎಂದು ಅರವಿಂದ್ ನಗುತ್ತಾನೆ.

ಆ ವೃದ್ಧ ಮಹಿಳೆ ಮತ್ತೆ ನನ್ನ ಹತ್ತಿರ ಬಂದು ''ಬಾಯ್‌ಫ್ರೆಂಡ್ ನನ್ನ ಹತ್ತಿರ ವಾಪಸು ಬರಲು ಏನು ಮಾಡಬೇಕು'' ಎಂದು ಪಿಸುಗುಟ್ಟುತ್ತಾಳೆ. ನಾನು ಗಂಭೀರವಾಗಿ ''ಅದಕ್ಕೂ ಉಪಾಯವಿದೆ. ಪ್ರತಿ ಶುಕ್ರವಾರ 11 ಮೇಣದ ಬತ್ತಿ ಹಚ್ಚಿ ಪ್ರಾರ್ಥನೆ ಮಾಡು. ನಂತರ ಒಂದು ಲೋಟ ಹಾಲನ್ನು ಬೆಕ್ಕಿಗೆ ಕುಡಿಸು. ನಾಲ್ಕು ವಾರಗಳ ನಂತರ ನಿನ್ನ ಇಚ್ಛೆ ಈಡೇರುತ್ತದೆ'' ಎನ್ನುತ್ತೇನೆ. ಅರವಿಂದ್ ಅಂಗಡಿಯ ಒಳಗೆ ಹೋಗಿ ಕ್ಯಾಂಡಲ್‌ಗಳೊಂದಿಗೆ ಸುಂದರ ಸ್ಟಾಂಡ್ ತಂದುಕೊಡುತ್ತಾನೆ. ಬೆಕ್ಕಿಗೆ ಹಾಲು ಕುಡಿಸಲು ತಾಮ್ರದ ಪಡಗ ಮಾರಿಬಿಡುತ್ತಾನೆ.

ಈಗ ಬಂದವನು ಸುಮಾರು 40 ವಯಸ್ಸಿನವನು. ಅವನಿಗೆ ನನ್ನ ಉಪದೇಶ ಬೇಡ. ಪಾಂಡ ಪಕ್ಕ ಕುಳಿತು ಗಾಯತ್ರಿ ಮಂತ್ರ ಕಲಿಸು ಎಂದು ದುಂಬಾಲು ಬೀಳುತ್ತಾನೆ. ಅರವಿಂದ್ ಬೇಗ ಬೇಗ ಬಂದವನೇ ''ಅದಕ್ಕೆ ಮುಂಚೆ ನೀನು ಓಂಕಾರ ಇರುವ ಶಾಲು ಹೊದೆಯಬೇಕು'' ಎಂದು ಒಳಗಿನಿಂದ ಶಾಲು ತರುತ್ತಾನೆ. ನಮ್ಮ ನಾಯಕ ಶಾಲು ಹೊದ್ದು ಚಕ್ಕಂಪಟ್ಟಳ ಹಾಕಿ ಕುಳಿತು ಅಪಸ್ವರದಲ್ಲಿ ತಪ್ಪುತಪ್ಪಾಗಿ ಓಂ ಭೂರ್ ಭುವ ಸ್ವಹ ಹೇಳಲು ಪ್ರಯತ್ನಿಸುತ್ತಾನೆ.

ನನಗೆ ತಡೆಯಲಾಗದೇ ಹಿಂದಿಯಲ್ಲಿ ಅರವಿಂದನಿಗೆ ಗಾಯತ್ರಿ ಮಂತ್ರದ ಧ್ವನಿ ಸುರುಳಿ ಮಾರಿ ಕೆಲಸ ಮುಗಿಸು ಎನ್ನುತ್ತೇನೆ. ಪಾಂಡಾ ಮುಂಗೋಪಿ. ಮುಖ ಸಿಂಡರಿಸಿಕೊಂಡು ನನ್ನ ಕಡೆ ನೋಡುತ್ತಾನೆ. ನಾನು ನೋಡದೆ ಹಾಗೆ ಮುಖ ತಿರುಗಿಸಿಕೊಂಡು ''ನಾರಾಯಣ ನಾರಾಯಣ'' ಎನ್ನುತ ನಾರದ ಮುನಿಗಳಿಗೆ ಹೊಟ್ಟೆಕಿಚ್ಚು ಬರಿಸುತ್ತೇನೆ. ಆ ಮನುಷ್ಯ ಸಿಡಿ ತೆಗೆದುಕೊಂಡು ಹೋಗುತ್ತಾನೆ.

ಟೀನಾ ನಮ್ಮೆಲ್ಲರಿಗೂ ಬಿಸಿ ಕಾಫಿ ತರುತ್ತಾಳೆ. ಪಾಂಡಾ ಬಾಯಿಬಿಡುತ್ತಾನೆ. ''ಸಾಬ್‌ಜಿ, ನೀವು ಅಂಗಡಿಗೆ ವ್ಯಾಪಾರ ಕೊಡುತ್ತಿದ್ದೀರೇ ವಿನಹ ನಮ್ಮ ತಟ್ಟೆಗೆ ಕಾಣಿಕೆ

ಬೀಳುತ್ತಿಲ್ಲ ಎಂದು ಗಮನಿಸಿಲ್ಲ. ಚಳಿಯಲ್ಲಿ ಹೊರಗೆ ಕುಳಿತು ಮೈ ಮರಗಟ್ಟಿ ಹೋಗಿದೆ'' ಎಂದು ತಕರಾರು ಮಾಡುತ್ತಾನೆ. ಅರವಿಂದ್ ನಗುತ್ತಾ ''ಪಾಂಡಾಜಿ, ಎಲ್ಲಕ್ಕೂ ವ್ಯವಸ್ಥೆ ಮಾಡಿದ್ದೀನಿ. ಟೀನಾ ಮಾರಾಟ ಮಾಡಿದ ಮೊತ್ತದಲ್ಲಿ ನಮಗೆ 10% ಕಮಿಷನ್ ಸಿಗುತ್ತದೆ. ಈಗಾಗಲೇ ಸುಮಾರು 30 ಯೂರೋಗಳು ನಮ್ಮ ತಟ್ಟೆಯಲ್ಲಿ ಬಿದ್ದಿವೆ'' ಎಂದು ಸಮಜಾಯಿಸಿದ.

ಟೀನಾಳಿಗೆ ಭರಭರ ವ್ಯಾಪಾರವಾಯಿತು. ನಮಗೆ ಚುರುಚುರು ಹಸಿವೆಯಾಗಿತ್ತು. ಇನ್ನೇನು ಏಳಬೇಕು ಅನ್ನುವಾಗ ''ನೀವುಗಳು ಇಂಡಿಯಾದಿಂದ ಬಂದಿದ್ದೀರಾ'' ಎಂದು ನಾಲ್ಕು ಮಹಿಳೆಯರು ಬರುತ್ತಾರೆ. ''ನಮಗೆ ಕಾಶಿ ಯಾತ್ರೆ ಮಾಡಬೇಕಾಗಿದೆ, ಹೇಗೆ ಹೋಗುವುದು ಎಂದು ತಿಳಿಸಿ'' ಎನ್ನುತ್ತಾರೆ. ನಾನು ''ಓಂ ನಮಃ ಶಿವಾಯ'' ಜಪ ಪ್ರಾರಂಭಿಸುತ್ತೇನೆ. ಅರವಿಂದ್ ತಟಕ್ಕನೇ ತನ್ನ ಲ್ಯಾಪ್‌ಟ್ಯಾಪ್ ತೆಗೆದುಕೊಂಡು ಅಂಗಡಿಯ ಒಳಗಿನಿಂದ ಕನೆಕ್ಷನ್ ತಂದು ಗೂಗಲ್ ಗುರುವಿನ ಸಹಾಯದಿಂದ ಕಾಶಿ ವಿಶ್ವೇಶ್ವರನ ವರ್ಚುಯಲ್ ದರ್ಶನ ಮಾಡಿಸಿ ಕಾಣಿಕೆಯ ತಟ್ಟೆ ತೋರಿಸುವ ಮುನ್ನ ಪಾಂಡಾ ಕೈನಲ್ಲಿ ಅಂಗಡಿಯಿಂದ ತಂದ ಶಿವನ ಪ್ರತಿಮೆಗೆ ಮಂಗಳಾರತಿ ಮಾಡಿಸಿ ಗಂಗಾ ಸ್ಥಾಲಿಗೆ ಪೂಜೆ ಮಾಡಿಸಿ ಅವರಿಗೆ ಕೊಟ್ಟು ಸಾರ್ಥಕನಾಗುತ್ತಾನೆ. ಮಾತಾಜಿಯ ಆಶೀರ್ವಾದ ತೆಗೆದುಕೊಳ್ಳಿ. ಅತಿ ಶೀಘ್ರವಾಗಿ ನೀವು ನಮ್ಮ ದೇಶಕ್ಕೆ ಬಂದು ನಿಜವಾದ ವಿಶ್ವೇಶ್ವರನ ದರ್ಶನ ಮಾಡುತ್ತೀರಿ ಎನ್ನುತ್ತಾನೆ. ಅವರೆಲ್ಲ ನನಗೆ ನಮಸ್ಕರಿಸುವ ಮೊದಲೇ ನಾನು ಪಿಸುದನಿಯಲ್ಲಿ ''ಪಾಂಡಾ ವಿಶಾಲಾಕ್ಷಿ ಪೂಜೆ ಮರೆಯಬೇಡ'' ಎಂದು ಸೂಚಿಸುತ್ತೇನೆ. ಅರವಿಂದ್ ಒಳಗೆ ಹೋಗಿ ವಿಶಾಲಾಕ್ಷಿ ವಿಗ್ರಹ ತಂದು ''ಎಲ್ಲವೂ ಸೇರಿ ಬರೀ 40 ಯೂರೋ ಮಾತ್ರ'' ಎಂದು ಬಿಲ್ ತೋರಿಸುತ್ತಾನೆ. ಮಂಗಳಾರತಿ ಮಾಡಿದ ಪಾಂಡಾಗೆ ಎರಡು ಯೂರೋ ಮತ್ತು ಮಾತಾಜಿ ನಮಸ್ಕಾರದ ಐದು ಯೂರೋಗಳು ನಮ್ಮ ತಟ್ಟೆಯಲ್ಲಿ ಬೀಳುತ್ತವೆ.

ಡೇನಿಯಲ್ ಸ್ವೆನ್ಸನ್ ನೋಡಲು ಭಯಾನಕ. ದಾಡಿ ಮಾಡದ ಮುಖ, ಜಾಸ್ತಿ ಮದಿರಾ ಪಾನ ಮಾಡಿದಂತೆ ಕಾಣುವ ಕಣ್ಣುಗಳು ''ನನಗೆ ಜೀವನ ಬೇಸರವಾಗಿ ಹೋಗಿದೆ. ಕೆಲಸ ಹೋಯಿತು. ಗರ್ಲ್‌ಫ್ರೆಂಡ್ ಓಡಿಹೋದಳು. ಮಿತ್ರರೆಲ್ಲಾ ಕಳಚಿಕೊಂಡು. ಆತ್ಮಹತ್ಯೆ ಮಾಡಿಕೊಳ್ಳುವ ಇಚ್ಛೆ ಪ್ರಬಲವಾಗುತ್ತಿದೆ'' ಎನ್ನುತ್ತಾನೆ. ನಾನು ತುಂಬಾ ಕರುಣೆಯಿಂದ ಅವನತ್ತ ನೋಡಿ ''ಪುತ್ರಾ, ದೇವರ ಮೇಲೆ ಭರವಸೆ ತಪ್ಪಿಹೋಗಿದೆ. ಆದರೆ ಆ ಕರುಣಾಮಯಿ ನಿನ್ನನ್ನು ಕೈಬಿಡುವುದಿಲ್ಲ. ಮೊದಲು ಮದಿರಾಪಾನ ಬಿಟ್ಟು, ಸ್ನಾನ ಮಾಡಿ ಚರ್ಚಿಗೆ ಹೋಗಿ ಪ್ರಾರ್ಥನೆ ಮಾಡು. ನಿನ್ನಂಥ ಒಳ್ಳೆಯ ಮನುಷ್ಯನಿಗೆ ನೂರಾರು ದಾರಿಗಳಿವೆ. ಒಂದು ಕೆಲಸ ಹೋದರೆ ಇನ್ನೊಂದು ಸಿಗುತ್ತದೆ. ಹೊಸ ಗರ್ಲ್‌ಫ್ರೆಂಡ್ ಖಂಡಿತಾ ಸಿಗುತ್ತಾಳೆ. ಎಲ್ಲಿ ನಿನ್ನ ಕೈ ತೋರಿಸು'' ಎಂದು ಅವನ ಹಸ್ತ ನೋಡಿ ''ಇಂಥಾ ಒಳ್ಳೆ ಭವಿಷ್ಯವಿದೆ ನೋಡು. ಹುಚ್ಚುಹುಡುಗ. ಆತ್ಮಹತ್ಯೆ ಹೇಡಿಗಳಿಗೆ. ನಿನ್ನಂಥಾ ಬುದ್ಧಿವಂತ, ಹೃದಯವಂತ ಯುವಕರಿಗಲ್ಲ'' ಎಂದು ಸ್ವಲ್ಪ

ಜಾಸ್ತಿಯೇ ಮಾತನಾಡಿ ಅವನ ತಲೆಯ ಮೇಲೆ ಕೈ ಇಟ್ಟೆ. ಅವನು ಭಾವುಕನಾಗಿ ನನ್ನ ಕೈಹಿಡಿದು ''ಮಾತಾಜೀ, ನೀವು ಇಂದು ನನ್ನ ಪಾಲಿನ ದೇವತೆ. ಮನೆಗೆ ಹೋಗಿ ವಿಷ ಸೇವಿಸುವವನಿದ್ದೆ. ನಿಮ್ಮ ನುಡಿ ನನಗೆ ಹೊಸ ಚೈತನ್ಯ ಕೊಟ್ಟಿದೆ. ನಾಳೆಯೇ ಎಂಪ್ಲಾಯಿಮೆಂಟ್ ಬ್ಯೂರೋಗೆ ಹೋಗಿ ಹಾಜರಿ ಹಾಕುವೆ'' ಎನ್ನುತ್ತಾ ನಗುನಗುತ್ತಾ ಹೊರಟ. ಅರವಿಂದ್ ಮತ್ತು ಪಾಂಡಾ ಅವನಿಗೆ ಗಾಯತ್ರಿ ಮಂತ್ರದ ಸಿಡಿ ಅಲ್ಲದೇ ಧ್ಯಾನ ಮಾಡುವ ಮತ್ತು ಯೋಗಾಭ್ಯಾಸದ ಸಿಡಿ ಕೂಡಾ ಮಾರಿದರು. ನನಗೆ ದಕ್ಷಿಣೆ ಕೊಡಲು ಬಂದ. ''ಪುತ್ರ ನಿನ್ನ ಹಣ ನನಗೆ ಬೇಕಿಲ್ಲ. ನೀನು ಆತ್ಮಹತ್ಯೆ ವಿಚಾರ ಬಿಟ್ಟು ನಿನ್ನ ಜೀವನ ಸರಿಮಾಡಿಕೋ. ನನ್ನ ಆಶೀರ್ವಾದ ನಿನ್ನ ಜೊತೆಯಿದೆ'' ಎಂದು ಹೇಳಿ ಕಳಿಸಿದೆ. ಅರವಿಂದ್ ನಾಟಕೀಯವಾಗಿ ಕಣ್ಣು ಒರೆಸಿಕೊಳ್ಳುವಂತೆ ನಟಿಸಿ ''ಧನ್ಯನಾದೆ ಮಾತಾಜಿ'' ಎಂದು ನನ್ನತ್ತ ನೋಡಿ ನಕ್ಕ.

ಮಧ್ಯಾಹ್ನ ಎರಡು ಗಂಟೆಯವರೆಗೆ ನಮ್ಮ ಕಾರ್ಯ ನಡೆಯಿತು. ಟೀನಾ ತನ್ನ ಅಂಗಡಿಯ ಸುಮಾರು ಸ್ಟಾಕ್ ಮಾರಿದ್ದಳು. ನಮ್ಮ ಕಮಿಷನ್ ಎಂದು 50 ಯೂರೋ ಕೊಟ್ಟಳು. ಪಾಂಡಾ ''ಇನ್ನೊಂದು ಯೂರೋ ಕೊಡು. ಸರಿಯಾಗಿ ಮೂರು ಭಾಗ ಮಾಡಬಹುದು'' ಎನ್ನುತ್ತಾ ಇನ್ನೊಂದು ಯೂರೋ ತೆಗೆದುಕೊಂಡ. ನಮ್ಮ ತಟ್ಟೆಯಲ್ಲಿ ಸುಮಾರು 30 ಯೂರೋ ಬಂದಿದ್ದವು. ಎಲ್ಲಾ ಸೇರಿ ಪ್ರತಿಯೊಬ್ಬರಿಗೂ 27 ಯೂರೋಗಳ ಕಮಾಯಿ.

ನೀವು ಭಾರತೀಯರೇ? ಎಲ್ಲಿಂದ ಬಂದಿದ್ದೀರಿ? ನಾವು ಇಲ್ಲಿಗೆ ಪ್ರಾಜೆಕ್ಟ್ ಮೇಲೆ ಹೈದರಾಬಾದ್‌ನಿಂದ ಬಂದಿದ್ದೇವೆ'' ಎನ್ನುತ್ತಾ 4 ಚೂಟಿ ಹುಡುಗರು ಬಂದರು. ನಮ್ಮ ಮೂವರಿಗೂ ಆವರಿಸಿದ್ದ ಮಂಪು ಹರೆದು ಎಚ್ಚರವಾದೆವು. ಕೆಫೆಯ ಬಿಲ್ ಕೊಟ್ಟು ಆ ಹುಡುಗರ ಜತೆ ಮಾತನಾಡಲು ಅರವಿಂದ್ ಮುಂದೆ ಹೋದ. ಪಾಂಡಾ ತನ್ನ ಭಾಷೆಯಲ್ಲಿ ದೀನಬಂಧು ಎಂಬ ಜಗನ್ನಾಥನ ಹಾಡನ್ನು ಗುನುಗುನಿಸುತ್ತಿದ್ದ. ಸ್ಪಿರಿಚುವಲ್ ಎನ್‌ಲೈಟನ್‌ಮೆಂಟ್ ಅಂಗಡಿಯ ಕಡೆ ನೋಡಿ ನಾನು ಮುಗುಳ್ನಗೆ ನಕ್ಕೆ. ನಾನು ಮಾತಾಜಿ ಆದದ್ದು ಕೇಳಿ ನನ್ನ ಪತಿ ಮತ್ತು ಮಕ್ಕಳು ಎಷ್ಟು ನಗುವರೋ ಎಂದುಕೊಂಡೆ. ಒಟ್ಟಿನಲ್ಲಿ ನಮ್ಮ ಕನಸು ಮತ್ತು ಊಹಾನುಭವ ಒಮ್ಮೊಮ್ಮೆ ಎಷ್ಟೊಂದು ಸ್ವಾರಸ್ಯವಾಗಿರುತ್ತವೆ ಎಂದುಕೊಳ್ಳುತ್ತಾ ಗೆಸ್ಟ್‌ಹೌಸಿಗೆ ಹೋಗಿ ಕುಕ್ಕರ್‌ನಲ್ಲಿ ಖಿಚಡಿ ಮಾಡುವುದು ಎಂದು ಮೆದುಳಿಗೆ ಹೊಸ ಕೆಲಸ ಕೊಟ್ಟೆ.

## ಅಭಿನಂದನೆಗಳು ಯಾರಿಗೆ

ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಮೊದಲ ಸಲಕ್ಕೆ ತೇರ್ಗಡೆಯಾದಾಗ ನಮ್ಮ ತಂದೆತಾಯಿಯರಿಗೆ ಅಭಿನಂದನೆಗಳು ಎಂದು ತಂತಿ ಕಳಿಸುವುದರಲ್ಲಿದ್ದೆ. ಅವರಿಗೆ ಅಭಿನಂದನೆಗಳು ಏಕೆಂದರೆ ನನ್ನಂಥ ಮಗನನ್ನು ಪಡೆದದ್ದಕ್ಕೆ.

ಡಾ. ಪ್ರಭುಶಂಕರ ಅವರ – ನಾನೆಂಬ ಅಪರಿಚಿತ ಲೇಖನದಿಂದ

# ಕಸುಬುಗಾರಿಕೆ

● ಓಂಪ್ರಕಾಶ್

**ನ**ಗರದ ಪ್ರತಿಷ್ಠಿತ ಉದ್ಯಮಗಳಿರುವ ತಾಣದಲ್ಲಿ ಅದೂ ಒಂದು ಭವ್ಯವಾದ ಹತ್ತು ಮಹಡಿ ಕಟ್ಟಡ. ನೀವು ಅದನ್ನು ಪ್ರವೇಶಿಸಿ, ಸೆಕ್ಯೂರಿಟಿ ರೆಜಿಸ್ಟರಿನಲ್ಲಿ ನಿಮ್ಮ ಪ್ರವರ ಬರೆದ ನಂತರವೇ ಲಿಫ್ಟ್ ಬಳಿ ಹೋಗುವುದು ಸಾಧ್ಯ. ಆ ಭವನದ ಎಂಟನೇ ಮಹಡಿಯಲ್ಲಿ ಒಂದು ಖ್ಯಾತ ರಿಸರ್ಚ್ ಸೆಂಟರ್ ನೆಲೆಸಿದ್ದು ಅತಿ ಮಹತ್ವದ ಸಂಶೋಧನೆಗಳನ್ನು ನಡೆಸುತ್ತಿದೆ ಎಂಬ ಪ್ರತೀತಿ.

ಒಂದು ದಿನ ಬೆಳಗ್ಗೆ ಒಬ್ಬ ವ್ಯಕ್ತಿ ಈ ಭವನದ ಬಳಿ ಬಂದ. ಸುಮಾರು ನಲವತ್ತು ವರ್ಷ ವಯಸ್ಸು. ದೊಗಲೆ ಪ್ಯಾಂಟು, ಕೆದರಿದ ಕೂದಲು, ಹೊಂದಾಣಿಕೆಯೇ ಇಲ್ಲದ ಟೈ, ಪಾಲಿಷ್ ಕಂಡು ಬಹುದಿನಗಳಾಗಿದ್ದ ಷೂಗಳು. ಈ ವಿಚಿತ್ರ ಪ್ರಾಣಿಯನ್ನು ನೋಡಿ ಸೆಕ್ಯೂರಿಟಿಯವನಿಗೂ ಬೇಸರ. ಬಂದವನು, ಸೆಕ್ಯೂರಿಟಿ ರಿಜಿಸ್ಟರಿನಲ್ಲಿ ತನ್ನ ವಿವರಗಳನ್ನು ಬರೆದು, ಎಂಟನೆಯ ಮಹಡಿಯಲ್ಲಿರುವ ಡಾ|| ಶರ್ಮ ಅವರನ್ನು ನೋಡಬೇಕು ಅಂತ ಹೇಳಿದ. ''ಅಪಾಯಿಂಟ್‌ಮೆಂಟ್ ಇಲ್ಲದೇ ಅವರು ಯಾರನ್ನೂ ನೋಡುವುದಿಲ್ಲ. ಸುಮ್ಮನೆ ಯಾಕೆ ಮೇಲೆ ಹೋಗ್ತೀರಿ'' ಅಂತ ಸೆಕ್ಯೂರಿಟಿಯವನು ಹೇಳಿದ್ದನ್ನೂ ಕಿವಿಗೆ ಹಾಕಿಕೊಳ್ಳದೇ ನಮ್ಮ ದೊಗಲೆ ಪ್ಯಾಂಟ್ ಆಸಾಮಿ ನೇರವಾಗಿ ಲಿಫ್ಟ್ ಏರಿ ಎಂಟನೆಯ ಮಹಡಿ ಸೇರಿದ. ಸೆಕ್ಯೂರಿಟಿಯವನು ಕುತೂಹಲದಿಂದ ರಿಜಿಸ್ಟರ್ ನೋಡಿದ. ಅದರಲ್ಲಿ ಅವನ ಹೆಸರು ಸುಧಾಕರನ್ ಅಂತ ಇತ್ತು.

ಇಡೀ ಎಂಟನೆಯ ಮಹಡಿ ಡಾ|| ಶರ್ಮ ಅವರ ರಾಜ್ಯ. ಅಲ್ಲಿದ್ದ ಸ್ವಾಗತಕಾರಿಣಿ, ಸುಧಾಕರನ್ ಅತ್ತ ದೃಷ್ಟಿಹಾಯಿಸಿ ಮುಖ ವಕ್ರ ಮಾಡಿದಳು. ''ನೋಡಿ, ಸುಧಾಕರ್, ನಮ್ಮ ಬಾಸನ್ನ ನೋಡಬೇಕಾದರೆ, ಒಂದು ತಿಂಗಳು ಮುಂಚೇನೇ ಅವರಿಂದ ಭೇಟಿ ಅನುಮತಿ ಪಡೆದಿರಬೇಕು. ನೀವು ಹೀಗೆ ದಿಢೀರ್ ಅಂತ ಬಂದ್ರೆ ಅವರನ್ನು ನೋಡಕ್ಕಾಗುಲ್ಲ'' ಅಂತ ಖಡಾಖಂಡಿತವಾಗಿ ಹೇಳಿದಳು.

ಸುಧಾಕರ್ ಗೋಗರೆಯಲು ಪ್ರಾರಂಭಿಸಿದ. ''ನಾನು ಚೆನ್ನೈನಿಂದ ಬಂದಿದೀನಿ ಮೇಡಂ, ಎರಡೇ ನಿಮಿಷ ಅವರನ್ನ ನೋಡೋ ಅವಕಾಶ ಕೊಡಿ'' ಅಂದ. ಸ್ವಾಗತಕಾರಿಣಿ, ಶರ್ಮರವರ ಆಪ್ತ ಕಾರ್ಯದರ್ಶಿಗೆ ಫೋನ್ ಮಾಡಿದಳು. ''ನಿಮ್ಮ ಅದೃಷ್ಟ ಚೆನ್ನಾಗಿದೆ.

ಲಾ ಕಾಲೇಜಿನಲ್ಲಿ ಸೀಟು ಸಿಗಲಿಲ್ಲಾಂತ ವಿದ್ಯಾರ್ಥಿಯೊಬ್ಬನು
ಆಗಲೇ ಮೊಕದ್ದಮೆ ಹೂಡಿದ್ದಾನೆ.

ಜಪಾನಿನಿಂದ ಬರೋ ಇಬ್ಬರು ಭೇಟಿಕಾರರು, ತಮ್ಮ ಫ್ಲೈಟ್ ತಡವಾಗಿದೆ ಅಂತ ಮೇಸೇಜ್ ಕಳಿಸಿದ್ದಾರಂತೆ. ಐದು ನಿಮಿಷ ಮಾತ್ರ ನೀವು ಅವರನ್ನು ನೋಡಬಹುದು'' ಅಂತ ಹೇಳಿ ಅವನನ್ನ ಒಳಗೆ ಕಳಿಸಿದಳು. ಸುಧಾಕರನ್ ಗರ್ಭಗುಡಿಯೊಳಗೆ ಹೆದರುತ್ತ ಪ್ರವೇಶಿಸಿದ. ಅಲ್ಲಿ ಇಬ್ಬರು ಸ್ಟೆನೋಗಳು ಶರ್ಮರ ಬಾಗಿಲನ್ನು ದ್ವಾರಪಾಲಕಿಣಿಯರಂತೆ ಕಾಯುತ್ತಿದ್ದರು. ಅವರಿದ್ದದ್ದು ವಿಶಾಲವಾದ ಹಜಾರ. ಭೇಟಿಕಾರರಿಗೆಂದೇ ಇರಿಸಿದ್ದ ಲೆದರ್ ಸೋಫಾಗಳು ಅಲ್ಲಿನ ಶ್ರೀಮಂತಿಕೆಯನ್ನು ಸಾರಿ ಹೇಳುತ್ತಿದ್ದವು ಒಬ್ಬ ಸ್ಟೆನೋ ಇವನ ವಿಸಿಟಿಂಗ್ ಕಾರ್ಡನ್ನು ಕೇಳಿದಳು. ಸುಧಾಕರನ್ ''ನನ್ನ ಹತ್ರ ಕಾರ್ಡೇ ಇಲ್ಲಮ್ಮ'' ಅಂದ. ಆಕೆ ತಿರಸ್ಕಾರದ ನಗೆ ನಕ್ಕು, ''ಬೆಸ್ಟ್ ಆಫ್ ಲಕ್'' ಎಂದು ಹೇಳಿ ಅವನನ್ನ ಒಳಕ್ಕೆ ಕಳಿಸಿದಳು.

ಡಾ. ಶರ್ಮ ಪಿ.ಎಚ್.ಡಿ., ಅವರು ತಮ್ಮ ಭವ್ಯವಾದ ಸೋಫಾದ ಮೇಲೆ ಸುಖಾಸೀನರಾಗಿದ್ದರು. ಅವರ ಮುಂದಿದ್ದ ವಿಶಾಲವಾದ ಮೇಜಿನ ಮೇಲೆ, ಎರಡು ಕಂಪ್ಯೂಟರುಗಳು, ಹಲವಾರು ಇಂಟರ್‌ಕಾಮ್‌ಗಳು ರಾರಾಜಿಸುತ್ತಿದ್ದವು. ಶರ್ಮರು ಸುಧಾಕರನ್ ಕಡೆ ದುರುಗುಟ್ಟಿ ನೋಡಿದರು.

''ಏನು ಬೇಕಾಗಿತ್ತು?'' ಅಂತ ಗಡಸು ದನಿಯಲ್ಲಿ ಕೇಳಿದರು.

''ಸಾರ್, ನಾನು 'ಬಿ ಅಷ್ಯೂರ್ಡ್ ಇನ್ಶೂರೆನ್ಸ್ ಕಂಪನಿ'ಯ ಏಜೆಂಟು. ನೀವು ನನ್ನಿಂದ ಒಂದು ಪಾಲಿಸಿ ತಗೋಬೇಕು ನೀವು ನನಗೆ ಪಾಲಸಿ ಕೊಟ್ಟರೆ ನನಗೆ ಇನ್‌ಕ್ರಿಮಂಟ್ ಸಿಗುತ್ತೆ'' ಅಂತ ದೈನ್ಯದಿಂದ ಪ್ರಾರ್ಥಿಸಿದ. ಶರ್ಮ ಅವನನ್ನೇ ನೋಡುತ್ತಾ, ''ಈಗಾಗಲೇ ಬೇಕಾದಷ್ಟು ಪಾಲಿಸಿಗಳಿವೆ ನನ್ನ ಹತ್ರ. ಸುಮ್ನೆ ನನ್ನ ಕಾಲ ವ್ಯರ್ಥಮಾಡಬೇಡಿ. ಇನ್ನು ನೀವು ಹೋಗಬಹುದು'' ಅಂದ ಗುಡುಗಿದರು.

ಸುಧಾಕರನ್ ಮರುಮಾತನಾಡದೇ ಬಾಗಿಲತ್ತ ಹೋಗಲು ಪ್ರಾರಂಭಿಸಿದ. ಅವನು ಬಾಗಿಲನ್ನು ಸೇರುವಷ್ಟರಲ್ಲಿ, ಹಿಂದಿನಿಂದ ಶರ್ಮರ ದನಿ ಕೇಳಿಸಿತು.

''ರೀ, ಬನ್ರೀ ಇಲ್ಲಿ. ಎಂಥ ಸೇಲ್ಸ್‌ಮನ್ ರೀ ನೀವು? ಹೋಗು ಅಂದ ತಕ್ಷಣ ಹೊರಟೇ ಬಿಡೋದೇ? ಹೀಗಾದ್ರೆ ನಿಮ್ಮ ಕೈಲಿ ಒಂದು ಪಾಲಿಸೀನೂ ಮಾರುಕ್ಕೆ ಆಗುಲ್ಲ. ಈ ಸೇಲ್ಸ್‌ಮನ್ ಕೆಲಸ ಅಂದ್ರೆ, ತಮಾಷೆ ಅಂದ್ಕೊಂಡ್ ಬಿಟ್ಟಿದೀರಾ? ನನ್ನಂತಹ ಉನ್ನತ ಅಧಿಕಾರಿಗಳನ್ನ ನೋಡುಕ್ಕೆ ಬರೋವಾಗ ಶಿಸ್ತಿನಿಂದ ಟ್ರಿಮ್ಮಾಗಿ ಬರಬೇಕ್ರಿ. ನಿಮ್ಮ ದೊಗಲೆ ಪ್ಯಾಂಟ್ ನೋಡಿ, ಆ ಟೈ ನೋಡಿ. ಹೀಗೆ ಯಾರಾದ್ರೂ ಬರ್ತಾರೇನ್ರಿ? ಹೋಗ್ಲಿ, ಇನ್ನು ಮೇಲಾದ್ರೂಸ್ವಲ್ಪ ಅಗ್ರೆಸಿವ್ ಆಗಿ ಇರೋದನ್ನು ಕಲಿತುಕೊಳ್ಳಿ.'' ಅಂತ ಹೇಳಿ, ಬೆಲ್ ಒತ್ತಿ ಕಾರ್ಯದರ್ಶಿಯನ್ನು ಕರೆದು ತಮ್ಮ ಪಿ.ಎ. ಪ್ರದೀಪನನ್ನು ಕರೆಯುವಂತೆ ಹೇಳಿದರು. ಪ್ರದೀಪ ಬಂದಾಗ, ಶರ್ಮ, ''ನೋಡಿ ಸುಧಾಕರನ್, ಈತ ನನ್ನ ಬಲಗೈ, ನಾನು ಕಂಪನಿ ಪ್ರಾರಂಭಿಸಿದಾಗ ಈತ ನಿಮ್ಮ ತರಹಾನೇ ಡಿಫಿಡೆಂಟ್ ಡಿಷೆಲ್ವ್ಡ ಆಗಿದ್ದ ವ್ಯಕ್ತಿ. ಈಗ ನೋಡಿ. ಹೇಗೆ ಮುಂದೆ ಬಂದಿದ್ದಾನೆ. ಧೈರ್ಯ ಆತ್ಮಗೌರವ ಬೆಳೆಸ್ಕೋ ಬೇಕು

ಸುಧಾಕರನ್. ಇಗೋ ಈಗ ಐವತ್ತು ಲಕ್ಷಕ್ಕೆ ಒಂದು ಪಾಲಿಸಿ ನನಗೆ ಕೊಡಿ. ನಿಮಗೆ ಸ್ವಲ್ಪ ಕಾನ್ಫಿಡೆನ್ಸ್ ಬರಲಿ ಅಂತ ಈ ಕೆಲಸ ಮಾಡ್ತಿದ್ದೇನೆ. ದೇವರು ಒಳ್ಳೆಯದು ಮಾಡಲಿ'' ಅಂತ ಹೇಳಿ ಅವನನ್ನು ಬೀಳ್ಕೊಟ್ಟರು. ಸುಧಾಕರನ್ ಆನಂದಭಾಷ್ಪಗಳನ್ನು ಒರೆಸಿಕೊಳ್ಳುತ್ತಾ ಅಲ್ಲಿಂದ ಹೊರಟ.

★★★

ಆರು ತಿಂಗಳು ಕಳೆದವು. ಪಂಚತಾರಾ ಹೋಟೆಲ್ ಒಂದರಲ್ಲಿ ಯಾವದೋ ಒಂದು ಬಿಸಿನೆಸ್ ಸೆಮಿನಾರ್ ನಗರದ ಪ್ರತಿಷ್ಠಿತ ಉದ್ಯಮಪತಿಗಳೆಲ್ಲರೂ ಅಲ್ಲಿ ನೆರೆದಿದ್ದರು. ಸಂಜೆಯ ಔತಣ ಕೂಟಕ್ಕೆ ಶರ್ಮಾ ಅವರು ತಮ್ಮ ಮಡದಿಯೊಂದಿಗೆ ಅಲ್ಲಿಗೆ ಬಂದಿದ್ದರು. ಅನೇಕ ಪರಿಚಿತರನ್ನು ಮಾತನಾಡಿಸುತ್ತಿದ್ದಾಗ ಅವರ ಗೆಳೆಯರೊಬ್ಬರು ಅಲ್ಲಿದ್ದ ಗಣ್ಯ ಅತಿಥಿಯೊಬ್ಬರನ್ನು ಶರ್ಮರಿಗೆ ಪರಿಚಯಿಸಿದರು.

''ಇವರು ವಾಸನ್ ಅಂತ. ಬಿ ಅಷ್ಯೂರ್ಡ್ ಇನ್ಶೂರೆನ್ಸ್ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಬಹಳ ಪ್ರತಿಭಾವಂತರು'' ಪರಸ್ಪರ ಕುಶಲ ಪ್ರಶ್ನೆಗಳಾದನಂತರ ಶರ್ಮರಿಗೆ ತಮ್ಮ ಐವತ್ತು ಲಕ್ಷದ ಪಾಲಿಸಿಯ ನೆನಪು ಬಂದಿತು.

''ವಾಸನ್‌ರವರೇ ನಾನೂ ನಿಮ್ಮ ಕಂಪನಿಯ ಪಾಲಿಸಿ ಒಂದನ್ನು ತೆಗೆದುಕೊಂಡಿದ್ದೇನೆ. ಪಾಪ ನಿಮ್ಮ ಒಬ್ಬ ಹೊಸ ಏಜೆಂಟ್ ಒಬ್ಬ ನನ್ನ ಬಳಿ ಬಂದಿದ್ದ. ಸೇಲ್ಸ್‌ಮನ್‌ಷಿಪ್ ಅಂದ್ರೆ ಸುತರಾಂ ಏನೂ ತಿಳಿದಿರಲಿಲ್ಲ ಅವನಿಗೆ. ಅವನನ್ನ ಪ್ರೋತ್ಸಾಹಿಸೋಣ ಅಂತ ಅವನಿಂದ ಖರೀದಿಸಿದ್ದು ಆ ಪಾಲಿಸಿ'' ಅಂದರು ಶರ್ಮ.

ವಾಸನ್‌ರವರು ಮೆಲುನಗೆ ನಕ್ಕು ಹಜಾರದ ಆ ಬದಿಯಲ್ಲಿ ಗೆಳೆಯರೊಂದಿಗೆ ಮಾತನಾಡುತ್ತಾ ನಿಂತಿದ್ದ ವ್ಯಕ್ತಿಯೊಬ್ಬನನ್ನು ಕೈ ಬೀಸಿ ಕರೆದರು. ಆತ ಇವರಿಬ್ಬರ ಬಳಿ ಬಂದ. ಸೊಗಸಾದ ಕ್ರಾಪ್, ಟ್ರೀಮ್ ಆಗಿದ್ದ ಸೂಟನ್ನು ಧರಿಸಿದ್ದ ಈ ನಗುಮುಖದ ವ್ಯಕ್ತಿ ಶರ್ಮರನ್ನು ನೋಡಿ, ಕೈ ಕುಲುಕುತ್ತಾ ನನ್ನ ನೆನಪಿರಬಹುದಲ್ಲವೇ? ಅಂತ ಕೇಳಿದ.

ಒಮ್ಮೆಲೇ ಶರ್ಮರಿಗೆ ಅವನ ನೆನಪು ಬಂತು. ಸುಧಾಕರನ್!

ವಾಸನ್ ನಗುತ್ತಾ, ''ಸುಧಾಕರನ್ ನಮ್ಮ ವೈಸ್ ಪ್ರೆಸಿಡೆಂಟ್. ಆರು ತಿಂಗಳ ಹಿಂದೆ ನಾವಿಬ್ಬರೂ ಮಾತನಾಡುತ್ತಿದ್ದಾಗ, ಮಾತು ನಿಮ್ಮ ಬಗ್ಗೆ ತಿರುಗಿತು. ನೀವು ಬಹಳ ಹುಷಾರು ವ್ಯಕ್ತಿ ನಿಮಗೆ ಕವಡೆ ಕಾಸಿನಷ್ಟು ಪಾಲಿಸಿಯನ್ನು ಮಾರುವುದೂ ಅಸಾಧ್ಯ ಅಂತ ನಾನು ಹೇಳಿದೆ. ಸುಧಾಕರನ್ 'ವ್ಯಕ್ತಿಗೆ ತಕ್ಕ ವಿಧಾನವನ್ನು ಅನುಸರಿಸಿದರೆ ಯಾರಿಗಾದರೂ ಪಾಲಿಸಿ ಮಾರಬಹುದು.' ಅಂದ. ನಾನು ಅವನೊಂದಿಗೆ ಬೆಟ್ ತೆಗೆದುಕೊಂಡೆ. ನಾನು ಬೆಟ್ ಸೋತ ವಿಷಯ ನಿಮಗೇ ತಿಳಿದಿರಬಹುದಲ್ಲವೇ?'' ಎಂದು ಹೇಳಿದರು.

ಪಾನೀಯಗಳ ಗ್ಲಾಸುಗಳನ್ನು ವಾರಣವಾಗಿ ಜೋಡಿಸಿದ್ದ ತಟ್ಟೆಯೊಂದನ್ನು ವೇಯ್ಟರ್ ಒಬ್ಬ ಇವರ ಮುಂದೆ ಹಿಡಿದ. ಎಲ್ಲರೂ ಪರಸ್ಪರ ಶುಭ ಕೋರುತ್ತಾ, ''ಛೀರ್ಸ್'' ಅಂದರು.

# ಪ್ರಾತಸ್ಮರಣೀಯರು

• ಡಾ. ಶರಣಬಸವೇಶ್ವರ ಅಂಗಡಿ

''ನೀನು ನಿಮ್ಮಪ್ಪನ ಎಷ್ಟನೇ ಮಗ? ಇದನ್ನ ಇಂಗ್ಲೀಷ್‌ನ್ಯಾಗ ಕೇಳು, ನೋಡೂಣು ಹ್ಯಾಂಗ ಕೇಳತೀ? ಆಗೂದಿಲ್ಲ, ಹೌದಲ್ಲೋ? ಅದ ಬಿಡು ಇನ್ನೊಂದು ಚಾನ್ಸ್, ಇದನ್ನ ಟ್ರೈ ಮಾಡು. 'ಈ ಕೆಲಸ ಆಗೂದಿಲ್ಲ, ಆದರ ಆಗೇ ಆಗ್ತೈತಿ ಆಗೇ ಆಗ್ತೈತಿ ಆಗೇ ಆಗ್ತೈತಿ' ನನಗ ಗೊತ್ತದ ಇದೂನೂ ಆಗೋದೇ ಇಲ್ಲ. ಸುಮ್ನ ಒಪ್ಗೋ ಇಂಗ್ಲೀಷ್ ಏನ್ ಮಹಾ ದೊಡ್ಡ ಭಾಷೆ ಅಲ್ಲ ಅಂತ'' ಬಲರಾಮ ಮಾಧವ ಪಾಮಡಿಯ ಚಾಲೆಂಜ್ ಮುಕುಂದ ಕೃಷ್ಣಾಚಾರ್ಯ ಜೋಷಿಗೆ.

**ಕಲಿಕೆಯನ್ನು ರಂಜನೀಯವಾಗಿಸಿದ ಈ ಮಾಸ್ತರರು ಪ್ರಾತಃಸ್ಮರಣೀಯರೂ ಹೌದು**

ಅದಕ್ಕ ಜೋಷಿ, 'ಅಲ್ಲೋ ಪಾಮಡಿ ಆಯಾ ಭಾಷಾಕ್ಕ ಅದರದೇ ಇತಿ, ಮಿತಿ ಅಂತ ಇರ್ತಾವಪಾ, ವಿಚಾರ ಮಾಡ್ನೀ ಎಲ್ಲಾನೂ ಎಲ್ಲಾ ಭಾಷೆಗೆ ತರ್ಜುಮೆ ಮಾಡ್ಲಿಕ್ಕೆ ಆಗೂದಿಲ್ಲ. ಇಂಗ್ಲೀಷ್‌ನ್ಯಾಗ ಆರ್ ಯು ದಿ ಫಸ್ಟ್ ಸನ್ ಆಫ್ ಯುವರ್ ಫಾದರ್?' ಅಂತ ಕೇಳಿದ್ರಾತು.

'ಹಂಗ್ಯಾಂಗ ಆಗ್ತೈತೋ ವಾಕ್ಯನಽ ಬದಲೀ ಆತಲಾ, ನೀ ಏನೇ ಅನ್ನಪ್ಪಾ ನಮ್ಮ ಕನ್ನಡದ ಮುಂದ ಇಂಗ್ಲೀಷ್ ವೀಕ್ ಅನ್ನಿಸ್ತದ.'

ಈ ಸಂವಾದ ಸುಮಾರು 40 ವರ್ಷ ಹಿಂದಿನದು. ಆದರೆ ಮೈಂಡ್‌ನಲ್ಲಿ ಫ್ರೆಶ್ ಆಗ್ಯದ. ಆವಾಗ ನಾವೆಲ್ಲ ಧಾರವಾಡದ ಕೃಷಿ ಮಹಾವಿದ್ಯಾಲಯ ಅರ್ಥಾತ್ ಎತ್ತಿನಗುಡ್ಡದ ಒಕ್ಕಲುತನದ ಕಾಲೇಜು ಸೇರಿದ ಹೊಸದು. ನಮ್ಮಲ್ಲಿ ಭಾಳಷ್ಟು ಹುಡಗುರು ರೈತರ ಮಕ್ಳು. ನಾವೆಲ್ಲ ಭಾಳಂದ್ರ ಭಾಳ ಕಚ್ಚಾ ಇದ್ವಿ. ಎಷ್ಟ ಕಚ್ಚಾ ಇದ್ವಿ ಅಂದ್ರ ನಮ್ಮನ್ನ ನೋಡಿದ ಮಂದ್ಯಾಗ ಕೆಲವ್ರು, ಇವು ಯಾವಾಗರೇ ಪಕ್ಕಾ ಅಗ್ತಾವೇನಂತ ಅನುಮಾನ ಪಡ್ತಿದ್ರು. ಇನ್ನೂ ಹಲವ್ರು ಇವು ಪಕ್ಕಾ ಆಗೂದು ಸಾಧ್ಯಾನ ಇಲ್ಲ ಬಿಡು ಅಂತ ನಿರ್ಧಾರ ಮಾಡಿಬಿಟ್ಟಿದ್ರು. ಒಟ್ಟನ್ಯಾಗ ಇವ್ರೆನ್ನೆಲ್ಲ ಎಲ್ಲಿಂದ ಹಿಡಕೊಂಡ ಬಂದಾರ ಅಥವಾ ಎಲ್ಲಿಲ್ಲಿಂದ ಹೊಡ್ಕೊಂಡ್ ಬಂದಾರ ಅನ್ನೂಹಾಂಗ ಇದ್ವಿ. ಹಳ್ಳಿ ಸಾಲಿ, ಆಮ್ಯಾಲ ಸ.ಕ.ಮಾ.ಶಾ. ಅದೇ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ವಿದ್ಯಾ ಕಲ್ತು ಒಂದು

*ಒಂದು ಮನೆಗೆ ಒಂದೇ ವಾರದಲ್ಲಿ ಏಳು ಬಾರಿ ಕನ್ನ ಹಾಕಿದರಂತೆ,*
*ಆದರೂ ಮನೆ ಖಾಲಿ ಆಗಲಿಲ್ಲ.*

ವರ್ಷ ಪಿ.ಯು.ಸಿ.ಯಲ್ಲಿ ಎಲ್ಲ ವಿಷಯಗಳನ್ನೂ ಇಂಗ್ಲೀಷ್‌ನಲ್ಲಿ ಕಲಿಯಾಕ ಕೊಸರ್ಯಾಡಿ ಹೆಂಗೋ ಪಾಸಾಗಿ ಬಂದವ್ರು! ರೆನ್ ಅಂಡ್ ಮಾರ್ಟಿನ್ ಇಂಗ್ಲೀಷ್ ಗ್ರಾಮರ್ ಬುಕ್ಕಿನಿಂದ ಪಾಸಾಗಾಕಽ ಎಷ್ಟು ಬೇಕೋ ಅಷ್ಟು ಇಂಗ್ಲೀಷ್ ಕಲ್ತವ್ರು. ಇಂಗ್ಲೀಷ್ ನೆಟ್ಟಗ ಬರ್ತಿದ್ದಿಲ್ಲ, ಅದಕ್ಕ ಆಂಗ್ಲ ಭಾಷೆಯ ಬಗ್ಗೆ ಅಪಾರ ಗೌರವ ಮಿಶ್ರಿತ ಭಯ! ಯಾರಾರ ಇಂಗ್ಲೀಷ್ ಪೇಪರ್ ಓದ್ತಿದ್ರ, 'ನೋಡೋ ಇಂಗ್ಲೀಷ್ ಓದಾಕ ಹತ್ಯಾನ, ಭಾಳ ಶ್ಯಾಣ್ಯಾ ಇರಬೇಕು' ಅಂತ ಮಾತಾಡಿಕೊಂತಿದ್ವಿ.

ನಮ್ಮ ಕ್ಲಾಸ್‌ಮೇಟುಗಳಲ್ಲಿ ಕೆಲವರು ಹುಬ್ಬಳ್ಳಿಗ್ಹೋಗಿ ಇಂಗ್ಲೀಷ್ ಸಿನೆಮಾ ನೋಡಿ ಬಂದು ಅದರ ಬಗ್ಗೆ ಮಾತಾಡಿಕೊಂತಿದ್ರ, ನಾವು ಅಡ್ಡಬಾಯಿ ಹಾಕಿ 'ನಿಮಗ ಸಿನೆಮಾ ಪೂರ್ತಿ ಅರ್ಥ ಆಗ್ಯಾದ?' ಅಂತ ಕೇಳಿದ್ರ ಅವ್ರು ನಮ್ಮನ್ನ ಒಂಥರಾ ನೋಡಿ 'ವಿ ಹ್ಯಾಡ್ ಕಾನ್ವೆಂಟ್ ಎಜುಕೇಷನ್ ಯು ನೊ. ನಾಟ್ ಲೈಕ್ ಯು ಕನ್ನಡ ಮೀಡಿಯಂ ಫೆಲೋಸ್' ಅಂತಿದ್ರು. ಅದಕ್ಕ ನಾವು 'ಹೌ ಡು ವಿ ನೊ' ಅಂತೇನೇನೋ ಬಡಬಡಿಸಿ ಸುಮ್ನಾಗ್ತಿದ್ವಿ. ಅದಕ್ಕವ್ರು ಒಂಥರಾ ನಗ ನಗತಿದ್ರು.

ಒಟ್ಟಿನ್ಯಾಗ ಒಂಥರಾ ಗಲಿಬಿಲಿ, ಗೊಂದಲ. 'ನಾವು ಇವರಿಗಿಂತ ಕಮ್ಮಿ' ಅನಸಲಿಕ್ಕೆ ಹತ್ತಿತ್ತು. ಅಂಥಾ ಪರಿಸ್ಥಿತಿಯೊಳಗ ನಮಗ ಆಶಾಕಿರಣ ಮೂಡಿ ಬಂದಿದ್ದು ಸಹಪಾಠಿ ರಾಜು, ಅರವಿಂದ ಶರತ್ ಅಂತಹವರಿಂದ 'ಅದಕ್ಯಾಕೆ ಯೋಚ್ನೆ ಮಾಡ್ತೀರಿ ಬಿಡ್ರಲೇ ನಾವೂ ಕಲಿತರಾಯ್ತು ಇಂಗ್ಲೀಷ್ ಅದೇನು ಬರಲಾರದ ಬ್ರಹ್ಮವಿದ್ಯೆ' ಅಂತ ನಮಗ ಧೈರ್ಯ ತುಂಬ್ತಿದ್ರು. ಅಲ್ಪ ಸ್ವಲ್ಪ ಕಲ್ಯಾಕ ಸುರು ಮಾಡಿದ್ವಿ.

ಪಾಮಡಿಯ 'ಈ ಕೆಲಸ ಆಗೂದಿಲ್ಲ...' ಸವಾಲಿಗೆ ಅರವಿಂದನ ಉತ್ತರ 'ಅದರಾಗೇನೈತೋ ಹೀಂಗ ಹೇಳಿದ್ರಾತು ಧಿಸ್ ವರ್ಕ್ ಕೆನಾಟ್ ಬಿ ಡನ್, ಇಫ್ ಡನ್ ಡನ್ ಡನಾ ಡನ್ ಡನ್ ಡನಾ ಡನ್ ಡನ್ ಡನಾ ಡನ್.' ಬಲರಾಮನ ಬಾಯಿ ಬಂದ್!

'ಮಸ್ತ್ ಹೇಳಿದಿ ನೋಡಪಾ ಅರವಿಂದ' ಸ್ನೇಹಿತರ ಒಕ್ಕೊರಲಿನ ಪ್ರಶಂಸೆ. ಅದರಿಂದ ಉತ್ಸಾಹಿತನಾದ ಶರತ್ 'ನಾನು ಹಿಂದೊಮ್ಮೆ ಯಾರಪ್ಪಂದು ಏನ್ ಹೋಗ್ತೈತಿ? ಅನ್ನೋದನ್ನ ಹೂಸ್ ಫಾದರ್ ವಾಟ್ ಗೋಸ್? ಅಂತ ಹೇಳಿ ಭೇಷ್ ಅನ್ನಿಸ್ಕಂಡಿದ್ದೆ' ಅಂತ ಸೇರಿಸಿದ್ದ.

ಅದಕ್ಕ ರಾಥೋಡ 'ನಮ್ಮ ಡ್ರಿಲ್ ಮಾಸ್ತರರೊಬ್ಬರಿದ್ರೋ‌ಯಪ್ಪಾ ನಮ್ಮ ಯೂನಿಫಾರಂ ತೋಳು ಮಡಚ್ ಅಬೋವ್ ದ ಮಣಕೈ' ಅಂತ್ಹೇಳಿ ಮಡಚಸ್ತಿದ್ರು. ಅದಕ್ಕಿಂತ ಮಸ್ತ್ ಅಂದ್ರ ನಮ್ಮ ಕೆಮಿಸ್ಟ್ರಿ ಮಾಸ್ತರು, ಒಮ್ಮೆ ಗಾಜಿನ ಫ್ಲಾಸ್ಕ್ ಭಾಳ ಕಾಯಿಸಿದ್ರ ಏನ್ ಅನಾಹುತ ಆಗ್ತದಂತ ಎಷ್ಟು ಛಲೋ ಹೇಳಿದ್ರಂತೀ? ಪ್ರಶ್ನೆ ಕೇಳಿದ ಮೇಲಗಿರಿ ಮುಂದುವರಿಸಿದ್ದ 'ಡೋಂಟ್ ಹೀಟ್, ಹೀಟ್, ಓವರ್ ಹೀಟ್, ಒನ್ಸ್ ಎ ಬಾಯ್ ಹೀಟೆಡಽ, ಹೀಟೆಡಽ, ಹೀಟೆಡಽಽ, ದ ಫ್ಲಾಸ್ಕ್ ಬ್ರೋಕಽ ಒನ್ ಚೂರ ವೆಂಟ್ ಇಂಟು ಹಿಸ್ ನೆಕ್ ಅಂಡ್ ಹಿ ಹರ್ಟೆಡ್' ಅಂದಿದ್ರು.

'ಇನ್ನೊಬ್ಬ ಮಾಸ್ತರು ನಾ ಈಗ ಖಾಲಿ ಇಲ್ಲ ಹಿಂದಾಗಡೆ ಬಂದು ಭೇಟ್ಟ್ಯಾಗು' ಅನ್ನೂದಕ್ಕ 'ಐ ಆಮ್ ನಾಟ್ ವೇಕೆಂಟ್ ನೌ. ಮೀಟ್ ಮಿ ಬಿಹೈಂಡ್ ದಿ ಕ್ಲಾಸ್' ಅಂದಿದ್ರು ಪರೀಕ್ಷಾದ ಮುಂದ ಫೀಸ್ ಕಟ್ರಿ ಅನ್ನೂದಕ್ಕ 'ಟೈ ದಿ ಫೀಸ್ ಇನ್ ಫ್ರಂಟ್ ಆಫ್ ದಿ ಎಕ್ಸಾಮ್' ಅಂತಾನೂ ಹೇಳಿದ್ರು, ಸೇರಿಸಿದ್ದ ಕಟ್ಟಿ.

ಇವೆಲ್ಲ ಮಾತು ಕತೆಗಳಿಂದ ನಮ್ಮ ಕೀಳರಿಮೆ ಕಡಿಮೆಯಾಗಿ ನಾವೂ ಇಂಗ್ಲೀಷ್ ಕಲಿಯಬೇಕೆಂಬ ಹುಮ್ಮಸ್ಸು, ಕಲೀತೀವಿ ಅನ್ನುವ ಧೈರ್ಯ ಹೆಚ್ಚತೊಡಗಿದ್ದವು.

ಅಂದಿನಿಂದ ಇಂದಿನವರೆವಿಗೂ ನನ್ನ ಮತ್ತು ವ್ಯಂಗ್ಲಿಷ್ (ವ್ಯವಸಾಯ ವಿಜ್ಞಾನದ ಇಂಗ್ಲೀಷ್‌ಗೆ ನಾನಿತ್ತಿರುವ ಹ್ರಸ್ವ ಹೆಸರು) ಬಾಂಧವ್ಯ, ಅವಿನಾಭಾವ ಸಂಬಂಧ ದೃಢವಾಗುತ್ತಲೇ ಇವೆ. ಆ ಅಪರೂಪದ ಮಾಸ್ತರುಗಳ ಭಾಷೆಯ ಸ್ವಚ್ಛಂದ ಬಳಕೆ, ಹೊಸ ಹೊಸ ಪ್ರಯೋಗಗಳ ಹಲವು ಆಯಾಮಗಳು ನನ್ನ ಮೇಲೆ ಅಚ್ಚಳಿಯದ ಪರಿಣಾಮ ಬೀರಿವೆ. ಕೆಲವು ಸ್ಯಾಂಪಲ್‌ಗಳು:

ಬೆಳೆ ವಿಜ್ಞಾನದ ಮೊದಲ ಕ್ಲಾಸು. ಮಾಸ್ತರರನ್ನು 'ಇಂಟ್ರೊಡಕ್ಷನ್ ಪ್ಲೀಸ್' ಅಂತ ಕೇಳಿದ್ದಕ್ಕೆ ಅವರು 'ವಾಟ್ ಇಂಟ್ರೊಡಕ್ಷನ್? ಐ ಜಾಯಿನ್ಡ್ ರಾಯಚೂರ್, ಟ್ರಾನ್ಸ್‌ಫರ್ಡ್, ಧಾರವಾಡ ಟೇಕಿಂಗ್ ಕ್ಲಾಸ್' ಎನ್ನಬೇಕೇ! ಅಲ್ಪ ಸ್ವಲ್ಪ ಭಾಷಾ ಜ್ಞಾನವಿದ್ದ ನಾವು ಓಹೋ! ಇದು ಟೆಲಿಗ್ರಾಫಿಕ್ ಭಾಷೆ ಅಂದ್ಕೊಂಡಿದ್ದೆವು.

ಅವರೇ ಒಮ್ಮೆ ನೀರಾವರಿಗೆ ಬಳಸುವ ಇರಿಗೇಷನ್ ಪೈಪ್‌ಗಳನ್ನು ವಿವರಿಸುತ್ತ 'ಯು ನೊ ಪೈಪ್, ರೌಂಡ್ ರೌಂಡ್ ರೌಂಡ್ ನಥಿಂಗ್ ಇನ್ ಸೈಡ್' ಅಂತ್ಹೇಳಿದಾಗ 'ಅಂದ್ರ ಹಾಲೊ ಏನ್ರೀ ಸರ್?' ಅಂತ ಕೇಳಿದ್ದ ಕುಲಕರ್ಣಿ. 'ಅದಽನೋ ನಾ ಹೇಳಿದ್ದು. ನಿನಗೊಬ್ಬಿಗೇ ಇಂಗ್ಲೀಷ್ ಬರ್ತದ ಅಂತ ಯಮಕ್ ಮಾಡಬ್ಯಾಡ ಮೊದಲ ವಿಷಯಾ ತಿಳಕೋ' ಅಂತ ಗದರಿಸಿದ್ರು. ಅಂದೇ ಅವರಿಗೆ ಅರವಿಂದನಿಂದ 'ನಥಿಂಗ್ ಇನ್‌ಸೈಡ್' ಬಿರುದು ಪ್ರಾಪ್ತವಾಯ್ತು.

ಜೋಳದ ಬೆಳೆಯ ಕೊಯಿಲನ್ನು ಹೇಳುತ್ತ 'ಟೇಕ್ ಎ ಸಿಕಲ್, ಕಟ್ ದಿ ಇಯರ್ ಹೆಡ್ಸ್, ಪುಟ್ ಇನ್ ಎ ಗನ್ನಿ ಬ್ಯಾಗ್ ಅಂಡ್ ಕಟ್ ಇಟ್' ಅಂದಾಗ ಮುದಕವಿ 'ಸರಽ ಚೀಲ ಕಟ್ ಮಾಡಿದ್ರ ತೆನಿ ಹೊರಗ ಬೀಳ್ತಾವಲ್ರೀ' ಎಂದು ಕೇಳಿದ. 'ಆ ಕಟ್ ಅಲ್ಲೋ ಕಟ್ಟು, ಕಟ್ಟು ದಾರ ಹಾಕಿ ಗಂಟು ಕಟ್ಟೋದು' ಅಂತ ಕಟ್ಟಿ ತೋರಿಸಿದ್ರು. 'ಭಲೇ, ಇವರೇ ನಿಜವಾದ ಕನ್ನಡದ ಕಟ್ಟಾಳು' ಅನ್ನಿಸಿತ್ತು.

ಕೊಎಜುಕೇಷನ್ ಇಲ್ಲದ ಅಂದಿನ ದಿನಗಳಲ್ಲಿ ಕಣ್ಣಿಗೆ ತಂಪೆನಿಸುವ ಹುಡುಗಿಯರಿಲ್ಲದೇ ಕ್ಯಾಂಪಸ್ ಬಿಕೋ ಎನ್ನುತ್ತಿತ್ತು. ಶಹರಕ್ಕೆ ಹೋಗಿ ಕಣ್ಣು ತಂಪಾಗಿಸಿಕೊಳ್ಳೋಣ ಅಂದ್ರೆ, ಪರೀಕ್ಷೆಯ ಬಿಸಿ. ಒಮ್ಮೊಮ್ಮೆ ಒಂದೇ ದಿನ ಎರಡು ಮೂರು ಪರೀಕ್ಷೆಗಳು. ಸಾಲದ್ದೆಂಬಂತೆ ಧಿಡೀರ್ ಕ್ವಿಝ್ ಎಂಬ ಅನಿರೀಕ್ಷಿತ ಪರೀಕ್ಷೆಯ ತೂಗುಕತ್ತಿ ತಲೆಯ ಮೇಲೆ! ಬದುಕು ಬರಡೆನ್ನಿಸಲು ಇನ್ನೇನು ಬೇಕು? ಹಾಗೂ ಹೀಗೂ

ಧೈರ್ಯಮಾಡಿ ನಗರದ ಸುಭಾಷ್ ರೋಡಿಗೆ ತಿರುಗಾಡಲು ಹೋದರೆ ಮಾಸ್ತರರ ಕಣ್ಣಿಗೆ ಬೀಳ್ತಿದ್ದೆವು. ಮಾರನೇ ದಿನ ಹಿತವಚನ – 'ಐ ಸಾ ಯು ರೊಟೇಟಿಂಗ್ ದಿ ಟೌನ್ ಯೆಸ್ಟರ್‌ಡೆ. ಡೋಂಟ್ ರೊಟೇಟ್ ಅನ್ ನೆಸೆಸಿರಲಿ. ಯು ವಿಲ್ ಪಾಸ್ ಓನ್ಲಿ ಇಫ್ ಯು ಸ್ಟಡಿ ಹಾರ್ಡ್ಲಿ.'

ಕೆಲಬಾರಿ ಪರೀಕ್ಷೆಗಳ ಲೋಡ್ ಜಾಸ್ತಿಯಾದಾಗ ನಮ್ಮಲ್ಲಿನ ಕೆಲ ಜ್ಞಾನಿಗಳು ಕರೆಂಟಿನ ಫ್ಯೂಜ್ ತೆಗೆದು ಕೃತಕ ಲೋಡ್ ಶೆಡ್ಡಿಂಗ್ ಸೃಷ್ಟಿಸಿ, ನೊ ಕರೆಂಟ್, ನೊ ಎಕ್ಸಾಂ ಟುಮಾರೊ ಪೋಸ್ಟ್‌ಪೋನ್ ಅಂತ ಅಧಿಕೃತವಾಗಿ ಘೋಷಿಸಿಬಿಡುತ್ತಿದ್ದರು. ಕೆಲ ಮೇಷ್ಟ್ರುಗಳು ನಮ್ಮ ಬೇಡಿಕೆಯನ್ನು ಈಡೇರಿಸುತ್ತಿದ್ದರು. ಆದರೆ ಕೆಲವರು 'ಡೋಂಟ್ ಲೈ ವಿತ್ ಮಿ ಐ ಸಾ ದಿ ಹೋಲ್ ಹಾಸ್ಟೆಲ್ ಬರ್ನಿಂಗ್ (ಓಹೋ ದೀಪ ಉರಿಯುತ್ತಿದ್ದವು ಅಂತಿದ್ದಾರೆ) ಎಂದು ಹೇಳಿ ನಂತರ ಶಾಂತ ಚಿತ್ತರಾಗಿ 'ಓಕೆ ವಿ ವಿಲ್ ಹ್ಯಾವ್ ದಿ ಎಕ್ಸಾಂ ಟುಮಾರೊ ಟುಮಾರೊ ಟುಮಾರೊ' ಅಂದ್ರು. ಆಗ ಪಾಟೀಲನ ಪಾಟೀ ಸವಾಲು: 'ಅಂದ್ರ ಆಫ್ಟರ್ ತ್ರೀ ಡೇಸ್ ಸಾರ್?'

'ಯಾಕಃ ನಿನಗ ಬ್ಯಾರೇ ಭಾಷಾದಾಗ ಹೇಳಬೇಕೇನು, ಮೂರು ಸಾರೆ ಟುಮಾರೋ ಅಂದಿದ್ದು ಕೇಳಿಸ್ಲಿಲ್ಲೇನ' ಅಂತ ಬಯ್ಸಿಗೊಂಡಿದ್ದ ದಡ್ಡ ಪಾಟೀಲ.

ಒಮ್ಮೆ ಕಾರಿಡಾರಿನಲ್ಲಿ ನಿಂತಿದ್ದ ನಮ್ಮೆಲ್ಲರನ್ನೂ 'ಆಲ್ ಔಟ್ ಸ್ಟ್ಯಾಂಡಿಂಗ್ ಸ್ಟೂಡೆಂಟ್ಸ್ ಕಂ ಇನ್‌ಸೈಡ್' ಅಂತ ಕ್ಲಾಸಿನೊಳಕ್ಕೆ ಆಹ್ವಾನಿಸಿದ್ದರು. ತಾವು ಮೆಟ್ಟಿಲಿಳಿಯುವ ಕ್ರಿಯೆಗೆ 'ಐ ವಾಸ್ ಗೊಡೌನಿಂಗ್ ದಿ ಸ್ಟೆಪ್ಸ್' ಎಂದಿದ್ದರು.

ಇನ್ನೊಬ್ಬ ಮಾಸ್ತರರಿಗೆ ಗಾದೆಗಳ ಗೀಳು. ಅವರನ್ನು ನಾವೆಲ್ಲ 'ಗಾದೆ ಪಂಡಿತರು' ಅಂತಿದ್ದೆವು. ನಿಮ್ಮ ಹಣೆಯ ಬರಹ ಯಾರೂ ಕೆಡಿಸೋದಿಲ್ಲ ಅವರ ಭಾಷೆಯಲ್ಲಿ ನೊ ಬಡಿ ಕೆನ್ ರೇಪ್ ಯುವರ್ ಫೊರ್ ಹೆಡ್ ರೈಟಿಂಗ್; ನಿಮಗೇನು ಹೇಳಿದರೂ ಹೊಳೆಯಲ್ಲಿ ಹುಣಸೇ ಹಣ್ಣು ತೊಳೆದಂತೆ – ಟೆಲ್ಲಿಂಗ್ ಯು ಎನಿಥಿಂಗ್ ಈಸ್ ಗೋಯಿಂಗಾನ್ ವಾಷಿಂಗ್ ಟಾಮರಿಂಡ್ ಇನ್ ಫ್ಲೊಯಿಂಗ್ ರಿವರ್; ಡೋಂಟ್ ಗೊ ಆನ್ ರೈಟಿಂಗ್ ಲೈಕ್ ಅ ಡಾಂಕಿ ಯೂರಿನೇಟಿಂಗ್ ಲಾಂಗ್ ಲಾಂಗ್ ಲಾಂಗ್ (ವಿವರಣೆ ಬೇಕಿಲ್ಲ ಅಲ್ಲವೇ?).

ವ್ಯಂಗ್ಲೀಷಿನ ವೈರಸ್ ಬೆಂಗಳೂರು ಕಾಲೇಜಿನ ಕ್ಯಾಂಪಸ್‌ನಲ್ಲೂ ಹಬ್ಬಿತ್ತು. ಅಲ್ಲಿನ ಮಾಸ್ತರರೊಬ್ಬರು ಯಾವಾಗಲೂ 'ಪ' ವನ್ನು ಫ ಎಂದೇ ಉಚ್ಚರಿಸುತ್ತಿದ್ದರು. ತಲೆ ಬಿಸಿಯಾದಾಗ ಅವರು ಹೇಳ್ತಿದ್ದುದು 'ಐ ಡೋಂಟ್ ಹ್ಯಾವ್ ಫೀಸ್ ಆಫ್ ಮೈಂಡ್ ಐಸೇ.' ಪ್ರತಿಯೊಂದು ವಾಕ್ಯವನ್ನೂ 'ಐ ಸೆ' ಇಂದ ಮುಗಿಸುತ್ತಿದ್ದ ಅವರು 'ಐ ಸೆ' ಮಾಸ್ತರರಾಗಿದ್ರು. ಅವರೊಮ್ಮೆ ಹೊಸದಾಗಿ ಸ್ಕೂಟರ್ ಕೊಂಡರು. ವಿದ್ಯಾರ್ಥಿಗಳ 'ಸರ್ ವೇರ್ ಈಸ್ ಯುವರ್ ನ್ಯೂ ಸ್ಕೂಟರ್?' ಪ್ರಶ್ನೆಗೆ ಉತ್ತರ ಮನೋಜ್ಞವಾಗಿತ್ತು: 'ಕಾಂಟ್ ಯು ಸೀ ಐ ಸೆ. ಇಟ್ ಈಸ್ ಅಂಡರ್‌ಸ್ಟಾಂಡಿಂಗ್ ದಟ್ ಟ್ರೀ ದೇರ್.'

ಹೊಸದಾಗಿ ಸುಣ್ಣ ಬಳಿದಿದ್ದ ತರಗತಿಯ ಕೋಣೆಯನ್ನು ನೋಡಿ 'ನೌ ದಿಸ್ ರೂಂ ಈಸ್ ಲೈಟರ್ ದ್ಯಾನ್ ಬಿಫೋರ್' ಎಂದು ಹೇಳಿ ಪರವಾಗಿಲ್ಲ ನೋಡಲು ನರಪೇತಲನಾಗಿದ್ದರೂ, ಇವರು ರೂಮನ್ನೇ ಎತ್ತಿ ತೂಕ ನೋಡಬಲ್ಲ ಬಲಿಷ್ಠರು ಎನ್ನುವ ಭಾವನೆ ನಮ್ಮಲ್ಲಿ ಮೂಡಿಸಿದ್ದರು.

ಈ ಎಲ್ಲ ಮಾಸ್ತರುಗಳಿಗೂ ಭಾಷಾ ಜ್ಞಾನದ ಕೊರತೆ ಎಂದೂ ತೊಡಕೆನ್ನಿಸಲಿಲ್ಲ. ಭಾಷೆ ಹೇಗೇ ಇರಲಿ ವಿಷಯವನ್ನಂತೂ ಪಕ್ಕಾ ಕಲಿಸ್ತಿದ್ರು. ಭಾಷಾ ಪಾಂಡಿತ್ಯ ಅವರಿಗೆ ಅಗತ್ಯವಾಗಿರಲಿಲ್ಲ. ತಮಗೆ ಗೊತ್ತಿದ್ದನ್ನು ಯಾವ ಹಿಂಜರಿಕೆಯೂ ಇಲ್ಲದೇ ಭಾಷೆಯ ಮಿತಿಯನ್ನು ದಾಟಿ ಬೋಧಿಸ್ತಿದ್ದರು. ತಮ್ಮ ಸ್ವೋಪಜ್ಞ (ಒರಿಜಿನಲ್) ಹಾಸ್ಯದಿಂದ ಕಲಿಕೆಯನ್ನು ರಂಜನೀಯವಾಗಿಸಿದರು. ಈ ಕಾರಣಗಳಿಗಾಗಿ ಅವರೆಲ್ಲರೂ 'ಪಾಠ' ಸ್ಮರಣೀಯರು ಹಾಗೂ ಪ್ರಾತಃ ಸ್ಮರಣೀಯರು.


# ಅಪರಂಜಿಗೆ 33ರ ಸಂಭ್ರಮದ

# ಶುಭಾಶಯಗಳನ್ನು

# ಕೋರುವ

**ಶ್ರೀಮತಿ ಮತ್ತು ಶ್ರೀ ಅಚ್ಯುತರಾವ್ ಪದಕಿ**

ಹಿರಿಯ ರಂಗಕರ್ಮಿಗಳು ಮತ್ತು ಹಾಸ್ಯ ಕಲಾವಿದರು

"ಕೃಷ್ಣ", 55/84, ಸರ್ವೇಯರ್ ರಸ್ತೆ

ಬಸವನಗುಡಿ

ಬೆಂಗಳೂರು 560 004

ಸಂಪರ್ಕ ದೂರವಾಣಿ: 9945622450


********

# ಫೋಟೋ - ಅಂದು, ಇಂದು

● ಡಾ. ಶ್ಯಾಮಲಾ ರವಿಶಂಕರ್

ಈಗಿನ ಯುವ ಜನಾಂಗ ಎಲ್ಲಂದರಲ್ಲಿ, ಹೇಗೆಂದರೆ ಹಾಗೆ, ಯಾವಾಗ ಅಂದರೆ ಆಗ ಸೆಲ್ಫಿಗಳನ್ನು ತೆಗೆದುಕೊಳ್ಳುವುದನ್ನು ನೋಡಿದರೆ ನನಗೆ ಬರೋ ಸಂಶಯಗಳು ಅಷ್ಟಿಷ್ಟಲ್ಲ ಯಾಕೆ ಅಂತೀರಾ? ಉದಾಹರಣೆಗೆ ಈ ಸೆಲ್ಫಿ ತೊಗೊಳ್ತಾ ತೊಗೊಳ್ತಾ ಅವರುಗಳು ಪ್ರಾಣಾಪಾಯಗಳಿಂದ ತಪ್ಪಿಸಿಕೊಂಡು ಜೀವಂತವಾಗಿ ಉಳಿದು ಬರಬೇಕು, ಆಮೇಲೆ ಅವರು ಆ ಫೋಟೋನ ನೋಡ್ತಾರಾ? ಅದು ಎಷ್ಟು ಸಲ? ಅದಕ್ಕಾಗಿ ಅಷ್ಟು ರಿಸ್ಕ್ ತೊಗೋಬೇಕೆ? ಇನ್ನೂ ತಾವು ನೋಡೋಕೆ ಮುಂಚೇನೇ ಅವರು ಅಪರಿಚಿತರೆಲ್ಲರಿಗೂ ಬೈ ಡಿ ಫಾಲ್ಟ್ ಎಲ್ಲರಿಗೂ ಗುಂಡಿ ಒತ್ತಿ ಕಳಿಸಿಬಿಟ್ಟಿರ್ತಾರಲ್ಲ. ಅವರುಗಳಿಗಾದರೂ ಇವನ್ನ ನೋಡೋ ವ್ಯವಧಾನವಿರುತ್ತೆ, ಅಥವಾ ಅವರೂ ಕೂಡ ನೋಡದೇನೆ ಮತ್ತಿನ್ನಷ್ಟು ಮಂದಿಗೆ ಫಾರ್ವಡ್ ಮಾಡ್ಬಿಟ್ಟಿರ್ತಾರಾ? ಹಾಗಂತ ಎಲ್ಲರೂ ಎಲ್ಲರಿಗೂ ಕಳಿಸ್ತಾನೇ ಇರ್ತಾರಲ್ಲ ಆ ಫೋಟೋಗಳನ್ನ ಎಷ್ಟೊಂತ ನೋಡ್ತಾರೆ? ಇದರಿಂದ ಆಗೋ ಪ್ರಮಾದ? ತಲೆನೋವು? ಈ ತರದ ಅಂಟು ಜಾಡ್ಯ ಹೇಗೆ ನಮ್ಮೂರಿಗೆ ನಮ್ಮವರಿಗೆ ಬಂತಪ್ಪ? ಇತ್ಯಾದಿ ಇತ್ಯಾದಿ...

ಇಷ್ಟೆಲ್ಲಾ ಫೋಟೋಗಳು ಬೇಕೆ? ಅನವಶ್ಯಕವಾಗಿ ಎಷ್ಟು ಕಾಲ, ಹಣ, ಎಲ್ಲಾ ಖರ್ಚುಮಾಡ್ತೀವಲ್ಲಾ? ಇಲ್ಲಿ ಖರ್ಚು ಅಂದರೆ ಬರ್ತಾ ಬರ್ತಾ ಇನ್ನೂ ಹೈ ಫೈ ಮೊಬೈಲ್‌ದೊಂದೇ ಅನ್ನಬಹುದು. ಆದರೂ ಈ ಫೋಟೋಗಳು ನಾವು ನೋಡ್ತೀವಾ,ನೋಡಿದ್ರೂ ಏನು ಸಾಧಿಸಿದ ಪ್ರಸಂಗ? ಹೀಗೇ ಅಂದ್ಕೊಳ್ತಿದ್ದಾಗ ಹಳೇ ನೆನಪುಗಳು ನನ್ನ ಚಿತ್ತಪಟಲದ ಮೇಲೆ ಸರಿದು ಹೋದವು.

ಹಿಂದೆ ಫೋಟೋ ತೆಗೆಸಿಕೊಳ್ಳುವುದು ಅಂದರೆ ಅದೊಂದು ಜೀವನದ ಪ್ರಮುಖ ಘಟನೆಗಳಲ್ಲೊಂದಾಗಿರಬೇಕು. ಅದೂ ಅಲ್ಲದೆ ಅದಕ್ಕೆ ಕೆಲವು ನಿಯಮಗಳು ಇದ್ದವು! ಹೇಗೆಂದರೆ ''ಮಕ್ಕಳ ಫೋಟೋಗಳು ತೆಗೆಯಬಾರದು, ದೃಷ್ಟಿ ತಾಕತ್ತೆ'' ಅನ್ನೋ ಅಜ್ಜಿಯರನ್ನು ಮೀರುವಂತೆಯೇ ಇರಲಿಲ್ಲ. ಅದಕ್ಕೆ ಸರಿಯಾಗಿ ಯಾರೋ ಒಬ್ಬ ಕರುಣ ಹೇಳಿದ ಮಾತು: ''ಮರ್ಫಿ (ಎಂಬ) ರೇಡಿಯೋ ಅಡ್ವರ್ಟೈಸ್‌ಮೆಂಟ್‌ನಲ್ಲಿ ಬಂದ ಮಗು ಸತ್ತು ಹೋಯಿತಂತೆ'' ಅಜ್ಜಿಯರ ಕೂಟ ''ಇನ್ನೇನಾಗುತ್ತೆ ಸಪ್ತ ಸಮುದ್ರ ಹಾರಿ ಬಂದ

*ಹಿಂಗ್ಯೆ ಹಣಕ್ಕೆ ರಸೀತಿ ಉಂಟೇ?*

ಫೋಟೋಗೆ ಅಷ್ಟೇ ವಾಪಸ್ ಆಗುವ ಕೆಟ್ಟದೃಷ್ಟಿ ಇರೋಲ್ವಾ?'' ಎಂದು ಉದ್ಗರಿಸಿತು. ಇದಕ್ಕೆ ತರಲೆ ಯುವಕರು ''ಆಕ್ಶನ್ ಅಂಡ್ ರಿಯಾಕ್ಷನ್... ಅನ್ನೋತರ'' ಎಂದು ಉಸಿರಿ ಉಗಿಸಿಕೊಂಡರು.

ಗಂಡು ಮಕ್ಕಳಾದರೆ ಅವರಿಗೆ ಜುಟ್ಟು ಬಿಡಿಸುವುದಕ್ಕೆ ಮುಂಚೆ ಅಂದರೆ ಐದನೆಯ ಅಥವಾ ಮೂರನೆಯ (ತುಂಬಾ ಆಧುನಿಕ ಸಂಪ್ರದಾಯದವರಾದರೆ) ವರ್ಷದಲ್ಲಿ ಸುಮುಹೂರ್ತಕ್ಕೆ ಮುಂಚೆ ಅವಕ್ಕೆ ಎರಡೆರಡು ಜಡೆಗಳನ್ನು ಹೆಣೆದು ಹೂವು ಮುಡಿಸಿ (ಕೆಲವರಾದರೆ ಫ್ರಾಕು ಕೂಡ ಹಾಕಿಸಿ) ಮುಖ 'ಬಿಂ' ಅನ್ನತ್ತೆ ಅಂತ ಕುಂಕುಮ ಹಚ್ಚಿ ಫೋಟೋ ಸ್ಟುಡಿಯೋಗೆ ನಾಲ್ಕಾರು ಬಾರಿ ಓಡಾಡಿ ಫೋಟೋ ತೆಗ್ಸಿತಿದ್ರು. ಹೆಣ್ಣು ಮಕ್ಕಳಿಗೆ ಅದೂ ಇಲ್ಲ ಗಂಡು ಮಕ್ಕಳು ಬೆಳೆದು ದೊಡ್ಡವರಾದ ಮೇಲೆ ಅದನ್ನ ನೋಡೋಕೆ ಅಸಹ್ಯ ಪಟ್ಟುಕೊಳ್ಳುತ್ತಿದ್ದರು. ಆದರೆ ಚಿಕ್ಕ ತಲೆಯಾದ ಮೇಲೆ ಅದನ್ನ ನೋಡಿ, 'ನೋಡ್ರೋ, ನನ್ನ ತಲೇಲಿ ಎಷ್ಟೊಂದು ಕೂದಲಿತ್ತು ಅಂತ! ನಿಮ್ಮಜ್ಜಿಕೈಲಿ ಸಿಕ್ಕಿ ಹಾಕ್ಕೊಂಡು ಹೀಗಾಯ್ತು ಅಂತ... ತುರುಬು ನೆನೆಸಿಕೊಂಡ್ಳು ಅನ್ನೋ ಗಾದೇನ ಸಾಕ್ಷಾತ್ಕಾರ ಪಡಿಸ್ತಿದ್ರು!

ಇನ್ನೊಂದು ಘಟ್ಟ ಅಂದರೆ ಡಿಗ್ರಿ ಪಡೆದಾಗ ಕಾನ್ವೊಕೇಶನ್‌ನಲ್ಲೇ ಸುಳಿದಾಡುತ್ತಿರುತ್ತಿದ್ದ ಫೋಟೋಗ್ರಫರ್‌ಗಳಿಗೆ ವ್ಯಾಪಾರ ಚೆನ್ನಾಗಿಯೇ ಆಗುತ್ತಿತ್ತು. ಈ ಕಾರ್ಯಕ್ರಮಕ್ಕೆ ಬರದೇ ಹೋದವರೂ ಕೂಡ ಸ್ಟುಡಿಯೋಗೆ ಹೋದರೆ, ಗೌನು, ತಲೆ ಮೇಲೆ ಕಟ್ಟಿ ತರದ ಟೋಪಿ ಎಲ್ಲಾ ಅಲ್ಲೇ ಸಿಗುತ್ತಿದ್ದುದರಿಂದ ಫೋಟೋಗೆ ನಿಂತು ಸೀರಿಯಸ್ಸಾಗಿ ಭಾರತದ ಸೇನೆಯ ಜವಾನನೋ ಎಂಬಂತೆ ಪೋಸ್‌ಕೊಟ್ಟು ತೆಗೆಸಿಕೊಂಡ ಫೋಟೋಗಳು! ಯಾಕಷ್ಟು ಗಾಂಭೀರ್ಯ ಅಂದರೆ ಕಷ್ಟಪಟ್ಟು ಓದಲಿಲ್ಲವಾ ಅದಕ್ಕೆ! ನಕ್ಕು ಬಿಟ್ಟರೆ ವಸ್ತು ಸ್ಥಿತಿಯ ಗಾಂಭೀರ್ಯಕ್ಕೆ ಧಕ್ಕೆ!

ತದನಂತರ ಕೆಲಸಕ್ಕೆ ಅರ್ಜಿ ಹಾಕಲು ಪಾಸ್‌ಪೋರ್ಟ್ ಸೈಜ಼್ ಫೋಟೋ ಅದರಲ್ಲೂ ಗುಮ್ಮಂತ ಇದ್ದಷ್ಟೂ ಗಾಂಭೀರ್ಯ ಒಟ್ಟಿನಲ್ಲಿ ನಗಬಾರದು ಅಷ್ಟೇ. ನಾನು ಅದರಲ್ಲೇ ತರಲೆ ಮಾಡಿ ಸ್ವಲ್ಪ ಹಲ್ಕಿರಿದು ಬಿಟ್ಟಿದ್ದೆ. ಅದನ್ನು ನೋಡಿದೊಡನೆ ಅನಾಹುತನೇ ಕಾದಿತ್ತು. ಮನೇಲಿ 'ಅದೇನು, ಕೊಲಿನೋಸ್ (ಅಂತ ಒಂದು ಟೂತ್ ಪೇಸ್ಟ್ ಇತ್ತು, ಆಗ!) ಕ್ವೀನ್ ಹಾಗೆ (ಅದೊಂದು ಸ್ಪರ್ಧೆ ಏರ್ಪಡಿಸಿತ್ತು, ಆ ಕಂಪನಿ) ಚೆಲ್ಲು ಚೆಲ್ಲಾಗಿ 32 ಹಲ್ಲುಗಳನ್ನು ಬಿಟ್ಟಿದ್ದೀಯಾ? ಗಾಂಭೀರ್ಯ ಗಾಳಿಗೆ ತೂರಿಸ್ಬಿಡ್ತಾರೆ ಈ ಕಾಲದ ಹುಡುಗಿಯರು ಅಂತ ಅದೆಷ್ಟೋ ಪ್ರಲಾಪ ನಡೆಸಿದರು ಹಿರಿಯರು ಹಾಗೆ ನೋಡಿದರೆ ನಾನು ತುಟಿ ಬಿಟ್ಟಿದ್ದೆ, ಆಗಲಿ ಹಲ್ಲು ಬಿಟ್ಟೇ ಇರಲಿಲ್ಲ ನನಗೆ ಛೀಮಾರಿ ಹಾಕಿದ್ದಕ್ಕೆ ಚಿಕ್ಕವರಿಗೆಲ್ಲಾ ಮುಸಿಮುಸಿ ನಗು, ತಾವೇನೋ ಸಾಧಿಸಿದಂತೆ!

ನಂತರ, ಮದುವೆ ಅಲ್ಲೇ ಛತ್ರದ ಹತ್ತಿರ ಪತ್ತಿರ ಇದ್ದ ಫೋಟೋ ಸ್ಟುಡಿಯೋದವನಿಗೆ ಬೀಗರಂತೆ ಊಟೋಪಚಾರಗಳು, ಹಾಗೂ ವ್ಯಾಪಾರ ಕೂಡ ದಕ್ಕುತ್ತಿತ್ತು. ಅವನ ಹತ್ತಿರ ಕಪ್ಪು ಬಿಳುಪು ರೋಗ ಹತ್ತಿಸಿದ ಪೆಡಂಭೂತದಂಥ ಕ್ಯಾಮರಾಗೆ ಫ್ಲಾಶ್‌ಗಾಗಿ ಛಾರ್ಜ್

ಮಾಡಲು ಮೈಲುಗಟ್ಟಲೆ ಉದ್ದುದ್ದದ ವೈರುಗಳು, ಪ್ಲಗ್ ಎಂಬ ವಿಶಿಷ್ಟೋಪಕರಣ ಎಲ್ಲಿರತ್ತೋ ಅಲ್ಲೀವರೆಗೂ ಗುಂಜೋಕ್! ಎರಡು ಮೂರು ಷಾಟ್ಸ್ ತೊಗೊಳ್ತಾ ಇರಲಿಲ್ಲವಾದ್ದರಿಂದ ಎಷ್ಟೋ ಸಲ ಧಾರೆ ಫೋಟೋ ಇಲ್ಲದೆ ನಾಗೋಲಿ ಫೋಟೋ ಇರಲಿಕ್ಕೂ ಉಂಟು ಅಥವಾ ಇದ್ದರೂ, ಓವರ್ ಫ್ಲಾಶೋ, ಅಂಡರ್ ಫ್ಲಾಶೋ ಆಗಿರಲೂ ಬಹುದು. ಒಟ್ಟಿನಲ್ಲಿ ಯಾರದೋ ಹಿಂದಿನ ಮತ್ಯಾರದೋ ಮುಂದಿನ ದೃಶ್ಯಗಳ ಕಲಬೆರಕೆ! ಒಂದ್ವತ್ತು ಫೋಟೋಗಳನ್ನು ಕೈಲಿತ್ತು ಕಾಸುತೆತ್ತು ಓಡುತ್ತಿದ್ದ ಫೋಟೋಗ್ರಾಫರ್. ಅಷ್ಟರಲ್ಲಿ ಅಂದಿನ ಮದುಮಗಳ ಸೀಮಂತ ಸಿದ್ಧವಾಗುತ್ತಿತ್ತು! ಆದಾಗ್ಯೂ ಇಲ್ಲಿ ನೋಡು ನನ್ನ ಕೈ, ಇದು ನನ್ನ ಜಡೇನೇ ಅಂತ ತಮ್ಮನ್ನು ತಾವೇ ಗುರ್ತಿಸ್ಕೊಳ್ಳುತ್ತಿದ್ದ ಹೆಂಗಳೆಯರು. ಆರತಕ್ಷತೆಯ ಫೋಟೋ ಅಂದರೆ 'ಜನಗಣಮನ' ಅನ್ನೋಸ್ಟೇಜು ಅದರಲ್ಲು ನಮ್ಮ ಹಿರಿಯರ ಫೋಟೋಗಳೆಲ್ಲಾ ಒಂದೇ ಫಾರ್ಮಟ್‌ಗೆ ಒಳಪಟ್ಟಂತೆ ಸೂಟು ಬೂಟು ಸರಿಗೆ ಪೇಟ (!) ಧರಿಸಿ ಕುರ್ಚಿಯಲ್ಲಿ ಕುಳಿತ ಗಂಡನ ಪಕ್ಕದಲ್ಲಿ ಚಿಕ್ಕ ಹುಡುಗಿಗೆ ಸೀರೆ ಉಟ್ಟು ಹೂವು ಮುಡಿದ ಜಡೆ ಮುಂದಕ್ಕೆ ಹಾಕಿ ಸ್ವಲ್ಪ ಹಿಂದಕ್ಕೆ ನಿಂತ ಹೆಂಡತಿ! ಯಾಕೆ ಹೀಗೆ ಅಂತ ಕೇಳಿ ಬೈಸಿಕೊಂಡಿದ್ದೆ.

ಇವೆಲ್ಲಾ ಒಂದಾದರೆ ಫ್ಯಾಮಿಲಿ ಅರ್ಥಾತ್ ಗ್ರೂಪ್ ಫೋಟೋದೇ ಒಂದು ಮಜ ಅದಕ್ಕೆ ಮನೆಮಂದಿಯೆಲ್ಲಾ ಇರಲೇಬೇಕು ಅದೂ ಅವರ ಮನೆಯಲ್ಲಿ ಎಷ್ಟೇ ಜನವಿರಲಿ ಅಷ್ಟು ಜನ ಶಾಶ್ವತವಾಗಿರುತ್ತಿದ್ದ ಅತಿಥಿಗಳನ್ನು ಕೂಡಿಕೊಂಡು ಎಲ್ಲರು ತುಟಿಪಿಟಕ್ಕೆನ್ನದೆ ರಜಾನೇ ತೊಗಂಡ್ರೋ! ಚಕ್ಕರಾದ್ರೂ ಹೊಡೆದ್ರೋ, ಅಂತೂ ಹಾಜರಾಗಬೇಕು ಮೋರ್ ದಿ ಮೇರಿಯರ್ ಅಲ್ವಾ. ಇಂಥಾದ್ದೊಂದು ನೆನಪು ತಮ್ಮಲ್ಲಿ ಹಂಚಿಕೊಳ್ಳುತ್ತಿದ್ದೇನೆ. ನಮ್ಮ ದೊಡ್ಡಜ್ಜನ 70 ವರ್ಷದ್ದೋ ಅಥವಾ ಕನಕಾಭಿಷೇಕದ್ದೋ ನನಗೆ ನೆನಪಿಲ್ಲ, ಅಂತೂ ಜನಜಂಗುಳಿಯ ಸಂಭ್ರಮ ಪೂಜೆ ಪುನಸ್ಕಾರ, ಶಾಂತಿ, ಕ್ರಾಂತಿ, ತಾಂಬೂಲ, ಎಲ್ಲಾ ಮುಗಿದ ಮೇಲೆ ಮನೆಯ ಹೆಂಗಸರೆಲ್ಲ 'ಉಶ್ಶಪ್ಪಾ' ಅಂತ ಸರಿಗೆ ಸೀರೆ ಕಿತ್ತು ಬಿಸಾಕಿ ಮಾಸಿದ ಕಾಟನ್ ಸೀರೆಯ ಮೊರೆ ಹೊಕ್ಕುತ್ತಿದ್ದ ಸಮಯ ಅಷ್ಟರಲ್ಲಿ ದೊಡ್ಡಜ್ಜ ಗುಡುಗು ಕೇಳಿಸಿತು. ''ಫೋಟೋ ಚಂದ್ರು ಬಂದಿದ್ದಾನೆ. ಎಲ್ರೂ ಐದು ನಿಮಿಷದೊಳಗೆ ತೋಟದಲ್ಲಿ ಮಲ್ಲಿಗೆ ಚಪ್ಪರದ ಪಕ್ಕದಲ್ಲಿ ಹಾಜರಾಗಿ'' ಎದುರಾಡಲು ಅಥವಾ ಇನ್ನೂ ಐದು ನಿಮಿಷ ಅವಧಿ ಕೇಳಲು ಯಾರಿಗೂ ಧೈರ್ಯ ಇರುತ್ತಿರಲಿಲ್ಲ. ಸಾಹಸನೂ ಮಾಡುತ್ತಿರಲಿಲ್ಲ. ಸರಿ ಎಲ್ಲಾ ಮಕ್ಕಳ ತಾಯಂದಿರು ತಮ್ಮ ತಮ್ಮ ಮಕ್ಕಳನ್ನು ಕರೆದು ಮುಖ ತೊಳೆದ ಶಾಸ್ತ್ರ ಮಾಡಿ ಅವಸರ ಅವಸರವಾಗಿ ಒಂದಷ್ಟು ಪೌಡರ್ ಬಳಿದು ಗಂಡು ಮಕ್ಕಳನ್ನು ಹೊರಗಟ್ಟಿ ಹೆಣ್ಣು ಮಕ್ಕಳಿಗೆ ಕುಂಕುಮದ ಬೊಟ್ಟಿಟ್ಟು, ರಭಸದಿಂದ ಕೂದಲು ಕಿತ್ತು ಬರೋ ಹಾಗೆ ಎಳೆದು ಜಡೆ ಹಾಕಿ ಹೂವು ಮುಡಿಸಿ, ತಾವು ಬೆಳಗಿನಿಂದ ಉಟ್ಟು ಸುಕ್ಕಿಟ್ಟಿದ್ದ ಸರಿಗೆ ಸೀರೆಗಳನ್ನು ಮತ್ತೆ ಉಟ್ಟು ಒಂದು ಬಾರಿ ನೆರಿಗೆಗಳನ್ನ ಜೋರಾಗಿ ಒದರಿ ಸೆರೆಗು ಸಿಕ್ಕಿಸಿಕೊಂಡು ಮುಖ ತೊಳೆಯಲೂ ಸಮಯ ಇಲ್ಲ ಅಂತ ಒದರಿಕೊಂಡು ರೆಡಿ ಅದರು. ಹೆಣ್ಣು ಮಕ್ಕಳು ಹಾಗೂ ಸೊಸೆಯರು. ಗಂಡಸರು ಉಟ್ಟ ಪಂಚೆ ಶರ್ಟುಗಳಲ್ಲಿ ಹೊರಟರು. ಅವರಲ್ಲೇ

ಒಬ್ಬಿಬ್ಬರು ಶೋಕಿಲಾಲರು ಪ್ಯಾಂಟು ತೊಟ್ಟು ಹಣೆಯಲ್ಲಿದ್ದ ಗಂಧಾಕ್ಷತೆ ಇತ್ಯಾದಿಗಳನ್ನು ಒರೆಸಿ ಹಾಕಿ ಬಾಚಣಿಗೆಯಲ್ಲಿ ತಂತಮ್ಮ ಕ್ರಾಪುಗಳನ್ನು ತೀಡುತ್ತಾ ನಡೆದರು. ದೊಡ್ಡಜ್ಜ ಮಾತ್ರ ತಮ್ಮ ಸರಿಗೆ ಪೇಟಾನ ನೇರವಾಗಿಟ್ಟು ಶೋಕಾಗಿ ಜರಿಪಂಚೆ ಕಚ್ಚೆ ಹಾಕಿ ಉಟ್ಟು ಕೋಟು ಧರಿಸಿ ವಾಕಿಂಗ್ ಸ್ಟಿಕ್ ಹಿಡಿದು ಹೊರಟೇಬಿಟ್ಟರು, ಅವರ ಶ್ರೀಮತಿ ಇನ್ ಲಾ! ಹೇಗೂ ಪಟ್ಟಾಣಿ ಸೀರೆ 1/2 ಸೇರು ಬಂಗಾರ ಮೈಮೇಲೆ ಸದಾ ಸರ್ವಕಾಲ ಇರುತ್ತಿತ್ತು. ಹಾಗಾಗಿ ಅವರು ಎವರ್ ರೆಡಿ!

ಇನ್ನು ತೋಟದಲ್ಲಿ ಎಷ್ಟು ಹೆಂಗಸರಿದ್ದರೋ ಅಷ್ಟು ಪ್ಲಸ್ ಒಂದು ಕುರ್ಚಿಗಳನ್ನು ಹಾಕಲಾಗಿತ್ತು. ಈ ಪ್ಲಸ್ ಕುರ್ಚಿ ದೊಡ್ಡಜ್ಜನಿಗಾಗಿ. ಕೂತಿರೋ ಹೆಂಗಸಿನ ಹಿಂದೆ ಅವಳ ಪತಿ ನಿಂತಿರಬೇಕು ಎಂಬ ಆಜ್ಞೆ ಹೊರಡಿಸಲಾಯಿತು. ಒಬ್ಬಾಕೆ ಒಳಗಿಲ್ಲದ್ದರಿಂದ ಅವಳು ಕುರ್ಚಿಯನ್ನು ಪಕ್ಕದ ಕುರ್ಚಿಗಳಿಂದ ಸ್ವಲ್ಪ ಬೇರ್ಪಡಿಸಲಾಯಿತು. ಅವಳ ಪತಿ ಅವಳ ಕುರ್ಚಿಗೆ ತಾಕದೆ ನಿಲ್ಲಬೇಕಾದ್ದರಿಂದ ಇದೇ ಯೂನಿ ಫಾರಂ ಆಗಿ ಇರಲು, ಮಿಕ್ಕೆಲ್ಲ ಗಂಡಸರು ತಮ್ಮ ಹೆಂಡತಿಯ ಕುರ್ಚಿಗೆ ತಾಗಬಾರದೆಂದಾಯಿತು. ಕನಿಷ್ಠ ಪಕ್ಷ 25–30 ಮೊಮ್ಮಕ್ಕಳು ಇದ್ದದ್ದರಿಂದ ಅವರೆಲ್ಲರೂ ಕುಳ್ಳಕ್ಕಿರುವವರು ಮಧ್ಯದಲ್ಲಿರುವಂತೆಯೂ ಎರಡೂ ಕೊನೆಗಳಿಗೆ ಎತ್ತರಕ್ಕಿರುವವರೂ ಮುಂದೆ ಕುಳಿತು ಕೊಂಡಾಯಿತು. ಯಾರೊಬ್ಬರೂ ಹಲ್ಲಿರಲಿ ತುಟಿಕೂಡ ಬಿಡಬಾರದೆಂದು 'ಚಟುಂ' ಅಂತ ಬೆನ್ನೆತ್ತಿ ಕುಳಿತುಕೊಳ್ಳಬೇಕೆಂದಾಯಿತು. ಕೈಕೂಸುಗಳು ತಮ್ಮ ತಮ್ಮ ತಾಯಂದಿರ ತೊಡೆಗಳನ್ನು ಅಲಂಕರಿಸಿದವು. ದೊಡ್ಡಜ್ಜ ದೊಡ್ಡಜ್ಜಿ ಕುರ್ಚಿಗಳ ಸಾಲಿನ ಮಧ್ಯದಲ್ಲಿ ಆಸೀನರಾದರು ಇಷ್ಟೆಲ್ಲಾ ನಡೆದು ಚಂದ್ರು ಆ ಕೊನೆಯಿಂದ ಈ ಕೊನೆಗೆ, ಈ ಕೊನೆಯಿಂದ ಆ ಕೊನೆಗೆ ಎರಡು ಬಾರಿ ಠಳಾಯಿಸಿ ಒಪ್ಪಿಗೆ ತೋರ್ಪಡಿಸಿ ಕೊಳಗದಂತಹ ಕ್ಯಾಮರಾನ ಅದರ ತ್ರಿಪಾದದ ಮೇಲೆ ಕೂರಿಸಿ 'ಅಪ್' ಆಗಲು ಕಪ್ಪು ಹೊದಿಕೆ ಹೊದಿಸಿ ಅದರ ಕೊನೆಯಿಂದ ತಾನೂ ಆ ಮಸುಕಿನೊಳಗೆ ನುಸುಳಿದ. ಅಷ್ಟರಲ್ಲಿ ಚಿಕ್ಕಮ್ಮ ಎಂದು ಕರೆಸಿಕೊಳ್ಳುತ್ತಿದ್ದ ಒಬ್ಬಾಕೆ (ಯಾರಿಗೆ ಚಿಕ್ಕಮ್ಮನೋ, ಅದು ಚಿದಂಬರ ರಹಸ್ಯ!) ಅಲ್ಲಾಡಿಕೊಂಡು ಬಂದಾಗ ತನಗೆ ಕುರ್ಚಿಯಿಲ್ಲ ಎಂದು ಬುಸುಗುಟ್ಟುತ್ತಿದ್ದಾಗ ಅಲ್ಲೇ ಇದ್ದ ಪಾಯ ಕಲ್ಲನ್ನು ಎಳೆದು ಇಲ್ಲಿ ಕೂರೆಂದರು. ಒಬ್ಬಾನೊಬ್ಬ ಗಂಡಸರು ಅವರು ತಣ್ಣಗಾಗುವಷ್ಟರಲ್ಲಿ ಎಲ್ಲಾ ಹೆಂಗಸರೂ 'ಅಯ್ಯೋ ಇಷ್ಟು ಹೊತ್ತಾಗುತ್ತೆ ಅಂತಿದ್ರೆ ನಾವೂ ಪೌಡರ್ ಹಚ್ಚಿ ಕಣ್ಣು ಕಪ್ಪು ಹಚ್ಚಿ, ಮುಂಗುರುಳು ತೀಡಿ ಬರ ಬರುತ್ತಿದ್ದೆವಲ್ಲಾ ಮುಮ್ಮಲ ಮರುಗಿದರು.

ಇದ್ದಕ್ಕಿದ್ದಂತೆ ಕಪ್ಪು ಹೊದಿಕೆ ಸರಿಯಿತು. ಚಂದ್ರು 'ರೆಡಿ... ರೆಡಿ' ಅಂತ ಕೂಗಿದ್ದಕ್ಕೆ ನಾವೆಲ್ಲಾ ಭಾರಿ ಚಪ್ಪಾಳೆ ತಟ್ಟಿ ಸ್ವಾಗತಿಸಿದೆವು. 'ನೋ ಕ್ಲಾಪ್ಸ್, ರೆಡಿ...' ಅಂದು ಹಲ್ಲಿ ಲೊಚಿಗುಟ್ಟುವಂತೆ 'ಕ್ಲಿಕ್' ಶಬ್ದ ಮಾಡಿದ ಅದೇ ಸಮಯಕ್ಕೆ ಪಾಯ ಕಲ್ಲಿನ ಮೇಲಿದ್ದ ಚಿಕ್ಕಮ್ಮ ಚಂಗನೆ ನೆಗೆದು ಕ್ಯಾಮರಾನ ದಬ್ಬಿಕೊಂಡು ಓಡಿ ಹೋದರು. ಕಾರಣ ಕ್ಯಾಮರಾಗೆ 2 ಫರ್ಲಾಂಗ್ ಹಿಂಬದಿ ದೂರದಲ್ಲಿದ್ದ ಕೊಟ್ಟಿಗೆಯಲ್ಲಿದ್ದ ಹಸುವೊಂದು ಅದೂ ಕಪಿಲ ಗೋವು – ಗೋಮೂತ್ರ ಬಿಡುಗಡೆ ಮಾಡಲಾಗಿ ಅದನ್ನು ತೀರ್ಥವಾಗಿ

ತೆಗೆದುಕೊಂಡು ಪಾಪಗಳನ್ನು ಹೋಗಿಸಿಕೊಂಡ ಚಿಕ್ಕಮ್ಮ ಎಲ್ಲರ, ಅದರಲ್ಲೂ ಚಂದ್ರುವಿನ ಪ್ರಚಂಡ ಶಾಪಕ್ಕೆ ಒಳಗಾದರು ಮತ್ತೆ ಚಂದ್ರುವನ್ನು ಶಾಂತಪಡಿಸಿದ ದೊಡ್ಡಜ್ಜ ತಾವೇ ಆ ಶಾಪವನ್ನು ಸ್ವೀಕರಿಸಿ ಎಲ್ಲರೂ ಸ್ವಸ್ಥಾನಕ್ಕೆ ಪ್ರತಿಷ್ಠಾಪಿತರಾಗಲು ಸಾಕಷ್ಟು ಸಮಯವೇ ಹಿಡಿಯಿತು. ಮತ್ತೆ ಚಂದ್ರುವಿನ 'ರೆಡಿ' ಎಂಬ ಕೂಗನ್ನು ಕರ್ಣಾಮೃತವಾಗಿ ಸ್ವೀಕರಿಸಿದ ನಾವುಗಳು ನೋಡುತ್ತಿದ್ದಂತೆ ಮೇಲೆಲ್ಲೋ ಹಾರುತ್ತಿದ್ದ ಕಾಗೆಯೊಂದು 'ಕಾ...ಕಾ...' ಎನ್ನಲಾಗಿ ಅದರ ಬಾಯಲ್ಲಿದ್ದ ಬಾದಾಮಿ ಹಣ್ಣೊಂದು ಚಂದ್ರುವಿನ ತಲೆಯನ್ನು ಕುಕ್ಕಿ ಅವನಿಗೆ ದಿಗ್ಭ್ರಾಂತಿಯನ್ನೇ ಮೂಡಿಸಿತು. ಅದೇನೆಂದು ತಿಳಿದ ಮೇಲೆ ಚಂದ್ರು ಮೂತಿ ಕೆಂಪಾಗಿ, ಮತ್ತೆ ಅವನ ನಿಷ್ಕ್ರಮಣ ಕ್ಯಾಮರಾ ಹಿಂದೆ, ಗೌಸಿನೊಳಗೆ!

ಅಂತೂ ಮುಟ್ಟಿದ್ದಕ್ಕೆ ಮೂರು ಬಾರಿ ಅಂತ ಈ ಸಲ ನಾವೆಲ್ಲ ರೆಡಿಯಾಗಿದ್ದು ಅವನೂ ಸ್ಟೆಡಿಯಾಗಿದ್ದು 'ಲೊಚ್' ಎಂಬ ಕ್ಲಿಕ್ಕಿನ ನಾದದೊಡನೆ ಫೋಟೋ ತೆಗೆದೇ ಬಿಟ್ಟಿದ್ದ! ಏಳೆಂಟು ದಿವಸಗಳಾಗಿ ಮೇಲೆ ಎಲ್ಲಾ ಶಾಖೆಗಳಿಗೂ ಕಾಪಿಗಳನ್ನು ರವಾನಿಸಿದರು ದೊಡ್ಡಜ್ಜ! ಅದರಲ್ಲಿ ಕೈಕೂಸೊಂದು ತನ್ನ ಪಕ್ಕದ ಕೈಕೂಸಿನ ಮೂಗಿಗೆ ಬೆರಳು ತೂರಿಸಿದ್ದರೆ ಕೆಲವಾರು ಕೈಕೂಸುಗಳು ತಾಯಿ ತಾಳಿ ಅಥವಾ ಸೆರಗನ್ನು ಮುಕ್ಕುತ್ತಿದ್ದವು. ಕಲ್ಲಾಸನದವರೆಗೂ ಕ್ಯಾಮರಾದ ಕಣ್ಣು ಹೋಗಿರಲಿಲ್ಲ ಎಂದು ರಂಪವೇ ಮಾಡುತ್ತಿದ್ದರು. ಮಿಕ್ಕೆಲ್ಲ ಗಂಭೀರ ಮುಖಧಾರಿಗಳು ತಮ್ಮ ಕಣ್ಣುಗಳಲ್ಲಿ ನಗು ತಡೆಹಿಡಿಯಲಾಗದೆ ಮಿನುಗುತ್ತಿದ್ದರು.

ಈಗಲೂ ಆ ಫೋಟೋನ ನೋಡಿದರೆ ಏನೆಲ್ಲಾ ಹಾಸ್ಯದ ಸಂಗತಿಗಳು ನೆನಪಿಗೆ ಬರುತ್ತವೆ! ಎಲ್ಲಿನ ಈ ಸೆಲ್ಫಿಗಳು ಎಲ್ಲಿನ ಇಂತಹ ಅಂದಿನ ಸಂಗತಿಗಳು?

ಇಷ್ಟೆಲ್ಲಾ ಕೇಳಿದ ನನ್ನ ಮೊಮ್ಮಗಳು ಯಾಕಷ್ಟು ಪಂಚಾಯ್ತಿ? ಫೋಟೋ ಶಾಪ್ ಮಾಡೋಕೂ ಬರ್ತಿರ್ಲಿಲ್ವಾ ಆ ಚಂದ್ರೂಗೆ ಅನ್ನಬೇಕಾ?

**ಇಳಿ ಗೋಪುರ ಕವನ**

ಸರಿಯಾದ ಜೋಡಿ ಇದು ನಿಜ
ಅಪರೂಪವಿದು ಮನುಜ
ವಿರಹಕೆ ಇನ್ನು ರಜ
ಸುಖವಿದು ಸಹಜ
ದುಃಖವಿನ್ನು ವಜ
ಬದುಕು ಮಜ
ನೀ ಜಲಜ
ನಾ ರಾಜ
ನಿಜ
ಜ

*– ಸುಕೇಶವ*

# ಗೋಡೆಯಿಂದಾಚೆಗೆ...

**● ಸಿ.ಆರ್. ಸತ್ಯ**

**ನ**ಮ್ಮ ಪಕ್ಕದ ಮನೇಗೂ ನಮ್ಮ ಮನೇಗೂ ಕೇವಲ ಒಂದು ಗೋಡೆಯ ಅಂತರವಿದೆ. ಅಷ್ಟೆ. ಹಾಗಾಗಿ ನಮಗಿರೋ ಬೋನಸ್ ಅಂದರೆ ಆ ಕಡೆ ಮನೆಯವರು ಏನೇನು ಮಾತಾಡ್ತಾರೋ ಅದೆಲ್ಲಾ ನಾವು ಕೇಳಿಸ್ಕೋಬಹುದು! (ನಮ್ಮ ಮಾತು ಕತೇನೂ ಅವರಿಗೂ ಕೇಳುತ್ತೆ ಅನ್ನೋದೂ ಸರಿಯೇ!). ನಾನು ರಿಟೈರ್ಡ್ ಆದಮೇಲೆ ಮನೇಲಿ ಬೇರೇ ಕೆಲಸ ಇಲ್ಲದ್ದರಿಂದ ಆವಾಗಾವಾಗ ಈ ಗೋಡೇಗೆ ನನ್ನ ಕಿವೀನ ಆತುಕೊಂಡು ಪಕ್ಕದ ಮನೇಲಿ ಏನು ಆಗ್ತಾ ಇದೆ ಅಂತ ಕೇಳೋ ದುರ್ಬುದ್ಧಿ ನನಗೆ ಬಂದಿದೆ. ನನ್ನ ಹೆಂಡ್ತೀಗಂತೂ ನನಗಿಂತಲೂ ಹೆಚ್ಚು ಕುತೂಹಲ. ಎಷ್ಟೋ ಸಲ ನಾವಿಬ್ಬರೂ ಗಂಟೆ ಗಟ್ಟಲೆ ಗೋಡೇಗೆ ಕಿವಿ ಕೊಟ್ಕೊಂಡು ಕೂತಿರ್ತೀವಿ. ದೇವರ ದಯೆಯಿಂದ ನಮ್ಮ ಕಿವಿಗಳು ಪರ್ಮನೆಂಟ್ ಆಗಿ ಶೇಪ್ ಬದಲಾಯಿಸಿಲ್ಲ! ಇತ್ತೀಚೆಗೆ ಪಕ್ಕದ ಮನೆಗೆ ಒಂದು ಹೊಸ ಸಂಸಾರ ಬಾಡಿಗೆಗೆ ಬಂತು. ಸ್ವಲ್ಪ ವಯಸ್ಸಾದ ಗಂಡ ಮತ್ತು ಹೆಂಡತಿ, ಇಬ್ಬರೇ. ನೋಡೋಕ್ಕೆ ಸಂತೋಷವಾಗಿರೋ ದಂಪತಿಗಳಾಗಿ ಕಾಣಿಸ್ತಿದ್ದರು. ಆದರೂ ಮಾತು ಕತೇಲಿ ಈ ಸಂಸಾರ ಹೇಗಿದ್ಯೋ ಏನೋ ಅಂತ ನಾವಿಬ್ಬರೂ ಗೋಡೆ ಪಕ್ಕಾನೇ ಇರ್ತಿದ್ವಿ. ಆದರೆ ಯಾಕೋ ಏನೋ, ಒಂದು ವಾರದ ತನಕ ಅವರ ಮನೆಯಿಂದ ಯಾವ ಶಬ್ದವೂ ಬರಲಿಲ್ಲ! ನಾವೂನು ಸ್ವಲ್ಪ ಹತಾಶರಾದ್ವಿ.

ಆದರೆ, ಒಂದು ಭಾನುವಾರದ ಬೆಳಿಗ್ಗೆ ನಮ್ಮ ಅದೃಷ್ಟ ಖುಲಾಯಿಸಿತು. ಇದ್ದಕ್ಕಿದ್ದ ಹಾಗೆ ಯಾರೋ ಯಾರನ್ನೋ ಅಟ್ಟಿಸಿಕೊಂಡು ಹೋಗೋ ಹಾಗೆ, ಓಡೋವಾಗ ಮುಗ್ಗರಿಸಿಕೊಂಡು ಬಿದ್ದ ಹಾಗೆ, ಎದ್ದ ಹಾಗೆ ಏನೇನೂ ಶಬ್ದಗಳು ಬಂದವು. ಅಷ್ಟರಲ್ಲಿ, ಆತನ ಧ್ವನೀನೇ (ಇನ್ಯಾವ ಗಂಡಸರಾಗಿದ್ದಿರಬೇಕು, ಹೇಳಿ) ಕೇಳಿಸ್ತು. ''ಅಯ್ಯೋ, ದಮ್ಮಯ್ಯಾ ಬಿಟ್ಟು ಬಿಡೇ. ನನ್ನ ಕೈಲಿ ಆಗಲ್ಲಾ, ಪ್ಲೀಸ್! ಏನೇ ಮಹಾರಾಯ್ತಿ, ಚಿಲಕಕ್ಕೆ ಬೀಗಾನೂ ಹಾಕ್ಬಿಟ್ಯಾ?'' ಅಂತ. ನಾನು, ''ನೀನು ಮುಂಚೆಯೆಲ್ಲಾ ನಾನು ಹೊರಗೆ ಕದ್ದು ಹೋಗಿ ಸಿಗರೇಟ್ ಸೇದಿಕೊಂಡು ಬರ್ತಿದ್ದೇ ಅಂತ ನನ್ನನ್ನೂ ಹೀಗೆ ಬೆಡ್‌ರೂಮ್‌ನಲ್ಲಿ ಕೂಡಿ ಹಾಗ್ತಾ ಇದ್ಯಲ್ಲ. ಅದೇ ಕತೇನೆ ಇದು'' ಅಂದೆ. ಅದಕ್ಕೆ ನನ್ನ ಹೆಂಡತಿ ''ನನ್ನನ್ನ ಡಿಸ್ಟರ್ಬ್ ಮಾಡ್ಬೇಡಿ. ಸುಮ್ನೆ ಕೇಳಿ. ಆಕೆ ಆತನ್ನ ಕೂಡಿಹಾಕ್ತಿರೋದು ಬೆಡ್‌ರೂಮ್‌ನಲ್ಲಿ ಅಲ್ಲ. ಬಾತ್‌ರೂಮ್ನಲ್ಲಿ ಅಂತ ಕಾಣುತ್ತೆ. ಯಾಕೇಂದ್ರೆ, ಒಂದು ಬಕೆಟ್

> *ಒಂದು ಪುಸ್ತಕದಿಂದ ಕದ್ದರೆ ಚೌರ್ಯ ಅನ್ನಿಸಿಕೊಳ್ಳುತ್ತೆ. ಹತ್ತಾರು ಪುಸ್ತಕಗಳಿಂದ ಕದ್ದರೆ ವಿಮರ್ಶಾ ಪಂಡಿತ ಅನ್ನಿಸಿಕೊಳ್ತಾನೆ.*

ಮಗುಚಿಕೊಂಡು ಬಿದ್ದ ಶಬ್ದ ಬಂತು'' ಅಂದಳು. ನಾನು ತೆಪ್ಪಗಾಗಿ ಗೋಡೆ ಕಡೆ ವಾಲಿದೆ. ಮತ್ತೆ ಆತನದೇ ಆಕ್ರಂದನ, ''ನನಗೆ ಯಾಕೇ ಈ ಯಾತನೆ ಕೊಡ್ತಿದ್ದೀಯಾ? ಅಮ್ಮಾ, ತಾಯೀ, ನನ್ನನ್ನ ಸುಮ್ನೇ ಬಿಟ್ಬುಡಮ್ಮಾ!'' ಅಂತ ಕೇಳಿಸ್ತು. ಆಕೆ (ನನ್ನ ಹೆಂಡತಿ ತರಹಾನೇ ಬಲು ಗಡಸು ಅಂತ ಕಾಣುತ್ತೆ) ''ತೆಪ್ಪಗಿರಿ. ನನಗೆ ಕೋಪ ಬಂದರೆ ನಿಮ್ಮನ್ನ ಸುಮ್ನೆ ಬಿಡೋಲ್ಲ'' ಅಂತ ರೇಗಿ, ಚೊಂಬನ್ನೋ ಬಕೆಟ್ ಅನ್ನೋ ಹೇಗೆ ಎಸೆದರು ಅಂದರೆ, ಆ ಶಬ್ದದಿಂದ ನಮ್ಮ ಗೋಡೇನೇ ಬಿದ್ದು ಹೋಗುತ್ತೇನೋ ಅನ್ನೋ ಹಾಗೆ ಭಯ ಆಯ್ತು. ನನಗೆ ಇದನ್ನ ತಡೆದುಕೊಳ್ಳಕ್ಕೆ ಆಗಲಿಲ್ಲ.

''ಎಂತಹ ಹೆಂಗಸೇ ಈಕೆ...? ಈ ಪುಣ್ಯಕ್ಕೆ ಆತ ಆಕೇನಾ ಯಾಕಾದರೂ ಮದುವೆ ಮಾಡಿಕೊಂಡರೋ ಏನೋ!'' ಅಂತ ಅಂದೆ. ನನ್ನ ಹೆಂಡತಿ ನನ್ನ ಕಡೆ ದುರುಗುಟ್ಟಿಕೊಂಡು ನೋಡ್ತಾ, ''ಆಕೇದೇ ತಪ್ಪು ಅಂತ ನಿಮಗೆ ಹೇಗೆ ಗೊತ್ರೀ? ಯಾವಾಗಲೂ ಹೆಂಗಸರನ್ನ ಅನ್ನಬೇಡಿ'' ಅಂತ ಗುಡುಗಿದಳು. ಇವಳ ಗುಡುಗಿನ ಜೊತೆಗೆ ಆಚೆ ಮನೆಯಿಂದ ಒಂದು ಸಿಡಲೂ ಬಡೀತು. ''ಅಯ್ಯೋ! ನನ್ನ ಚರ್ಮ ಸುಲಿಯೋದಕ್ಕೆ ಅಣಿ ಮಾಡ್ತಿದ್ದೀಯೇನೆ? ನಾನೇನೇ ಅಂತಹ ತಪ್ಪು ಮಾಡ್ದೆ? ಆ ಬಾಗಿಲಿನ ಬೀಗ ತೆಗೆಯಮ್ಮ, ನಾನು ಹೊರಗೆ ಹೋಗ್ತೀನಿ, ಪ್ಲೀಸ್!'' ಅಂತ ಆತ ಕೂಗಿದರು. ಆಗ ಆಕೆ, ''ಸುಮ್ಮನೆ ಕೂತ್ಕೋತ್ತೀರೋ, ಅಥವಾ ಈ ಕೆಂಡದ ಸೌದೆಯಿಂದ ಬರೆ ಇಡಲೋ?'' ಅಂತ ಕೇಳಿದ್ರು. ''ಅಯ್ಯೋ ದೇವರೇ, ನಾಳೆ ನಾನು ಆಫೀಸ್‌ನಲ್ಲಿ ಯಾರಾದರೂ ಬರೆಗಳು ಹೇಗೆ ಬಂದವು ಅಂತ ಕೇಳಿದರೆ ಏನೇ ಹೇಳಲಿ?'' ಅಂತ ಅರಚಿಕೊಂಡರು.

ಮುಂದೇನಾಗುತ್ತೋ ಅಂತ ನಾವಿಬ್ಬರೂ ನಮ್ಮ ಕಿವಿಗಳನ್ನ ಇನ್ನೂ ಸ್ವಲ್ಪ ಗಟ್ಟಿಯಾಗೇ ಗೋಡೆಗೆ ಅಂಟಿಸಿದ್ವಿ. (ದೇವರ ದಯೆಯಿಂದ ಗೋಡೆ ಭದ್ರವಾಗಿದೆ!). ಆತನ ಮೇಲೆ ಆಕೆ ಕೋಪದಿಂದ ಏನೋ ಎಸೆದ ಹಾಗೆ ಶಬ್ದ ಬಂತು. ತಕ್ಷಣ ಆತಾನೂ ''ಅಯ್ಯೋ, ಬಿಸಿ! ಬಿಸಿ!!'' ಅಂತ ಕೂಗಿದ್ದೂ ಕೇಳಿಸ್ತು. ನಾನು ಮೂಲತಃ ಒಳ್ಳೆಯವನು. ನನ್ನಲ್ಲೂ ಕನಿಕರ ಅನ್ನೋದು ಇದೆ. ಹಾಗಾಗಿ, ನನ್ನ ಹೆಂಡತಿ ಕಡೆ ತಿರುಗಿ, ಪೊಲಿಟಿಕಲೀ ಕರೆಕ್ಟ್ ಆಗಿರುತ್ತೆ ಅಂತ, ''ಅಲ್ಲವೇ, ಕೆಲವರು ಮದುವೆಗೆ ಮುಂಚೆ ಎಷ್ಟು ಚೆನ್ನಾಗಿ ಜಾತಕಗಳನ್ನ ಹೋಲಿಸಿ ಮದುವೆ ಮಾಡ್ಕೋತಾರೆ. ಈ ಪುಣ್ಯಾತ್ಮನಿಗೆ ಸಿಕ್ಕಿರೋ ಹೆಂಡತಿ ಯಾಕೋ ಪೂರಾ ಮಿಸ್ ಫಿಟ್'' ಅಂದೆ. ಈಗ ನಮ್ಮನೇಲೂ ನನ್ನ ಹೆಂಡತಿ ಕಡೆಯಿಂದ ಸಿಡಿಲು ಹೊಡೀತು. ''ನಮ್ಮಿಬ್ಬರ ಜಾತಕಗಳನ್ನೂ ನಮ್ಮ ಅಪ್ಪ ಮ್ಯಾಚ್ ಮಾಡಲಿಲ್ಲವೇ? ಏನು ಪ್ರಯೋಜನ? ನೀವೇನು, ನಿಮ್ಮ ಜಾತಕದಲ್ಲಿ ಬರೆದಿರೋ ಹಾಗೆ ಇದ್ದೀರೇನೂ?'' ಅಂತ ಸವಾಲ್ ಹಾಕಿದಳು. ನಾನು ತೆಪ್ಪಗಾದೆ. ಮುಂದಿನ ಹದಿನೈದು ನಿಮಿಷಗಳಲ್ಲಿ ಗೋಡೆ ಮೂಲಕ ಬಂದ ಚೀರಾಟ ಅಷ್ಟಿಷ್ಟಲ್ಲ. ನನಗೆ ಇವರ ಮನೆಯಲ್ಲಿ ಏನಾದರೂ ಹಾರರ್ ಮೂವಿ ನೋಡ್ತಾ ಇದಾರೋ ಅಥವಾ ಇದೆಲ್ಲಾ ನಿಜವಾಗಿ ನಡಿತಿದ್ಯೋ ಅಂತಾನೂ ಅನ್ನಿಸ್ತು. ಹಾಗಿತ್ತು ಆತನ ರೋದನ. ''ಅಯ್ಯೋ, ಬಿಸಿ ಕಣೇ, ಬಿಸಿ!!!'' ಅಂತ ಸುಮಾರು ಐವತ್ತು ಸಲ ಕೂಗಿಕೊಂಡು, ಅಮೇಲೆ ''ನನ್ನ ಕಣ್ಣು! ನನ್ನ ಕಣ್ಣು!!'' ಅಂತ ಅಳೋಕ್ಕೆ


ಶುರುಮಾಡಿದ ಹಾಗೆ ಕೇಳಿಸ್ತು. ''ನೋಡಿದ್ರೆ, ಆತನ ಕಣ್ಣಿಗೆ ಆಕೆ ಮೆಣಸಿನ ಪುಡಿ ಎರಚಿದ ಹಾಗೆ ಕಾಣುತ್ತೆ ಕಣೆ'' ಅಂತ ನಾನು ಉಸುರಿದೆ. ಆಮೇಲೆ ಆತ ''ಸುಸ್ತು, ಸುಸ್ತು!'' ಅಂದ ಹಾಗೆ ಆಯಿತು. ಇಷ್ಟೆಲ್ಲಾ ರಂಪ ಆದ ಮೇಲೆ ಬಾಗಿಲಿನ ಚಿಲಕ ತೆಗೆದ ಶಬ್ದವೂ ಬಂತು, ಆತ ಧೊಪ್! ಅಂತ ಹಾಸಿಗೆ ಮೇಲೋ, ದಿವಾನ್ ಮೇಲೋ, ''ಸ್ವಾಮಿ, ನಮ್ಮಪ್ಪಾ, ವೆಂಕಟರಮಣಾ, ಕಾಪಾಡಪ್ಪಾ'' ಅಂತ ಹೇಳ್ತಾ ಬಿದ್ದ ಹಾಗೆ ಆಯಿತು. ''ಅಯ್ಯೋ ಪಾಪವೇ, ಆತನಿಗೆ ಜ್ಞಾನ ತಪ್ಪಿದೇ ಅಂತ ಕಾಣುತ್ತೆ ಕಣೆ. ಈ ರೀತಿ, ಆಕೆ ಅವರನ್ನ ಹೀಗೆ ಕಾಡುತ್ತಿದ್ರೆ, ಆತ ಎಷ್ಟು ದಿವಸಗಳು ಬದುಕಿರ್ತಾರೋ?'' ಅಂತ ನಾನು ದುಃಖ ಪಟ್ಟೆ.

''ಮೆಲ್ಲಗೆ ಮಾತಾಡ್ರಿ. ಆಕೇಗೆ ನೀವು ಹೀಗೆ ಹೇಳೋದು ಕೇಳಿಸಿದ್ರೆ, ನಿಮ್ಮನ್ನೂ ಹಾಗೆ ತರಾಟೆಗೆ ತೊಗೋತಾಳೆ'' ಅಂತ ವಾರ್ನಿಂಗ್ ಕೊಟ್ಟಳು. ಅಷ್ಟರಲ್ಲಿ ನಮ್ಮನೆ ಕರಗಂಟೆ ಶಬ್ದ ಮಾಡ್ತು. ಬಾಗಿಲು ತೆರೆದರೆ, ಆಕೇನೆ ಅಲ್ಲಿ ಪ್ರತ್ಯಕ್ಷವಾಗಿರಬೇಕೇ! ಕದ್ದು ಕೇಳಿದ್ದು ಆಕೆಗೆ ಗೊತ್ತಾಯಿತೋ ಏನೊ, ನನ್ನ ಗತಿ ಏನು ಅಂತ ನಾನು ನಮ್ಮ ಬೆಡ್ ರೂಮ್ ಒಳಗೆ ಅವಿತುಕೊಂಡೆ. ನನ್ನ ಹೆಂಡತೀಗೂ ಸ್ವಲ್ಪ ಗಾಬರಿ ಆದ ಹಾಗಿತ್ತು. ''ಓ ನೀವಾ, ಬನ್ನಿ, ಬನ್ನಿ, ಒಳಗೇ ಬನ್ನಿ'' ಅಂತ ಕರೆದಳು.

ಆಕೆ ಒಳಗೆ ಬಂದು, ''ಮೆಣಸಿನ ಕಷಾಯ ಮಾಡೊದಕ್ಕೆ ಹಾಲು ಕಾಯ್ತಿಸಿದ್ದೆ. ಪಾತ್ರೆ ಬಿದ್ದು ಹಾಲೆಲ್ಲಾ ಚೆಲ್ಲಿಹೋಯ್ತು. ಸ್ವಲ್ಪ ಹಾಲು ಕೊಡಿ'' ಅಂತ ಡೀಸೆಂಟ್ ಆಗೆ ಕೇಳಿದ್ರು. ಆ ಪಾಟಿ ಹಲ್ಲೆ ಮಾಡಿದ್ರೆ, ಬರೀ ಹಾಲು ಚೆಲ್ಲೋದೇನೂ, ಭೂಮಿನೇ ನಡುಗುತ್ತೆ ಅಂತ ಅಂದುಕೊಂಡೆ. ನನ್ನ ಹೆಂಡತಿ ಒಳಗಿನಿಂದ ಒಂದು ಕಪ್ ಹಾಲು ತಂದಳು. ಎಷ್ಟಾದರೂ ಇನ್ನೊಬ್ಬರ ವಿಷಯ ತಿಳಿಯೋದರಲ್ಲಿ ಅವಳು ಚಾಣಾಕ್ಷೆ. ''ಯಾಕೆ? ನಿಮಗೋ ನಿಮ್ಮ ಯಜಮಾನ್ರಿಗೋ ಮೈನಲ್ಲಿ ಹುಷಾರಿಲ್ಲವೆ? ಮೆಣಸಿನ ಕಷಾಯ ಅಂತ ಅಂದ್ರಲ್ಲ, ಅದಕ್ಕೇ ಕೇಳಿದೆ'' ಅಂತ ಬತ್ತಿ ಹಚ್ಚಿದಳು. ''ಅಯ್ಯಯ್ಯೋ, ಚೆನ್ನಾಗೇ ಇದ್ದೀವಮ್ಮ. ಇವತ್ತು ಭಾನುವಾರ ಅಲ್ಲವೇ? ನಮ್ಮ ಯಜಮಾನರಿಗೆ ಎಣ್ಣೆ ನೀರು ಹಾಕಿದೆ. ನನ್ನ ತಂದೆ ನಾಟಿ ವೈದ್ಯರು ಮದುವೆ ಆದಾಗ, ಏನೇ ಆಗಲಿ, ನಿನ್ನ ಗಂಡನಿಗೆ ತಪ್ಪದೆ ಪ್ರತಿ ಭಾನುವಾರ ಎಣ್ಣೆ ನೀರು ಹಾಕಮ್ಮ. ಅವರ ದೇಹಕ್ಕೆ ಒಳ್ಳೇದು ಅಂತ ಹೇಳಿದ್ರು. ಆದ್ರೆ ನೋಡಿ ಅವರಿಗೆ ಎಣ್ಣೆ ಅಂದರೆ ಆಗೋಲ್ಲ. ಸೀಗೆ ಪುಡೀಗೆ ಅಲರ್ಜೀ ಅಂತಾರೆ. ಬಿಸಿ ನೀರು ನೋಡಿದ್ರೆ, ಸಾಕು, ರಂಪ ತೆಗೀತಾರೆ. ಒಂದೊಂದು ಸಲ ಬಲವಂತಕ್ಕೆ ಅವರನ್ನ ಎಳೆದುಕೊಂಡು ಹೋಗಿ ಎಣ್ಣೆ ನೀರು ಹಾಕ್ತೀನಿ. ಇವತ್ತು ನೀರು ಸ್ವಲ್ಪ ಜಾಸ್ತಿ ಬಿಸಿಯಾಗಿತ್ತು ಅಂತ ಕಾಣುತ್ತೆ. ಪಾಪ, ಈಗ ಬೆಚ್ಚಗೆ ಮಲಗೋಕ್ಕೆ ರೆಡಿ ಆಗ್ತಿದಾರೆ. ಅದಕ್ಕೇ ಅವರಿಗೆ ಕಷಾಯ ಕುಡಿಸ್ತಿನಿ ಅಂತ ಹೋದವಳು ಹಾಲನ್ನ ಚೆಲ್ಲಿ ಬಿಟ್ಟೆ. ಕಷಾಯ ಕುಡಿಸಿ ಬಿಟ್ಟರಂತೂ ಒಳ್ಳೇ ಮಗೂ ತರಹ ಮಲಗ್ಬಿಡ್ತಾರೆ! ಬರ್ತೀನಿ, ಥ್ಯಾಂಕ್ಸ್''. ಅಂತ ಹೊರಟರು. ನಾನು ಯಾವ ಅಪಾಯವೂ ಇಲ್ಲ ಅಂತ ಬೆಡ್‌ರೂಮ್‌ನಿಂದ ಹೊರಕ್ಕೆ ಬಂದೆ. ನನ್ನ ಹೆಂಡತಿ ಆಕೇನೆ ನೋಡ್ತಾ ಪೆದ್ದು ಪೆದ್ದಾಗಿ ನಿಂತಿದ್ಲು. ಆಮೇಲೆ ಸುಧಾರಿಸಿಕೊಂಡು , ''ನಿಜ, ನಿಜ, ಕಷಾಯ ತುಂಬಾ ಒಳ್ಳೇದೇ! ನಾನೂ ನಮ್ಮ ಯಜಮಾನರಿಗೆ ಆವಾಗಾವಾಗ ಮಾಡಿಕೊಡ್ತಾನೆ ಇರ್ತೀನಿ''

ಅಂತ ಒಂದು ಕಳ್ಳ ನಗೆ ಬೀರಿದ್ಲು. ಆಕೆ ಈಗ ನಮ್ಮಿಬ್ಬರ ಮೇಲೂ ಕಣ್ಣು ಹಾಯಿಸಿದ್ರು. ''ಓ, ಚೆನ್ನಾಗಿದ್ದೀರಾ? ಅಂದ ಹಾಗೆ, ಯಾಕೇ, ನಿಮ್ಮಿಬ್ಬರ ಎಡ ಕಿವಿಗ್ಳೂ ಚಪ್ಪಟ್ಟೆ ಆಗಿ ಕೆಂಪಗೆ ಊದಿಕೊಂಡಿವೆಯಲ್ಲಾ? ಏನಾದ್ರೂ ಅಲರ್ಜಿ ಏನೂ?'' ಅಂತ ಕೇಳ್ಬೇಕೇ?

ಒಂದೊಂದು ಸಲ ನಾನೂ ಚೂಟಿ ಆಗ್ತೀನಿ. ''ಹೌದು, ಹೌದು. ಹಾಗೇ ಕಾಣುತಮ್ಮ. ನೆನ್ನೆ ರಾತ್ರಿ ಅಂಗಡಿಯಿಂದ ಕೊಂಡು ತಂದ ಹೊಸ ದಿಂಬುಗಳ ಮೇಲೆ ಮಲಗಿದ್ವಿ. ಬೆಳಿಗ್ಗೆ ಎದ್ದಾಗಿನಿಂದ ಹೀಗೆ ಆಗಿವೆ ನೋಡಿ. ಎಂತಹ ಹತ್ತೀನೋ. ಎಂತಹ ಬಟ್ಟೇನೋ, ತೊಗೊಂಡು ಹೋಗಿ ವಾಪಸ್ ಮಾಡ್ಬೇಕು'' ಅಂದೆ. ಅದಕ್ಕೆ ಆಕೆ ''ಅಯ್ಯೋ ನಮ್ಮನೇಗೆ ಈಗ ಬನ್ನಿ. ಒಂದು ಅಲರ್ಜಿ ಕ್ರೀಮ್ ಕೊಡ್ತೀನಿ. ಹಚ್ಕೊಳ್ಳಿ. ಒಂದು ದಿನದಲ್ಲಿ ಅಲರ್ಜಿ ಮಾಯವಾಗುತ್ತೆ'' ಅಂತ ನನ್ನನ್ನು ಅವರ ಮನೇಗೆ ಕರೆದು ಕೊಂಡು ಹೋದರು. ಇನ್ನೇನು ಮಾಡ್ಲಿ? ಹೋದೆ. ಆಕೆ ಟ್ಯೂಬ್ ತರೋಕ್ಕೆ ರೂಮ್ ಒಳಗೆ ಹೋದಾಗ, ಅವರ ಇನ್ನೊಂದು ರೂಮಿನಲ್ಲಿ ಇಣುಕಿ ನೋಡಿದೆ. ಕಷಾಯ ಕುಡಿಯೋದಕ್ಕೆ ಮುಂಚೇನೆ ಅದೆಷ್ಟು ಸಂತೋಷದಿಂದ ಮಗು ತರಹ ಮಲಗಿಕೊಂಡು, ರಗ್ ಹೊದ್ದುಗೊಂಡು, ಆಗಲೇ ಆತ ಗೊರಕೇಗೆ ಇಳಿದಿದ್ರೂ, ಅಂತೀರಿ! ಪುಣ್ಯಾತ್ಮ!!



# ಕುಟುಂಬದಲ್ಲಿ ಹಾಸ್ಯ

• ಜಯಣ್ಣ

ನನಗೆ ಕುಟುಂಬ ಎಂಬ ಮಾತೆ ನಗು ತರಿಸುತ್ತೆ. ಏಕೆಂದರೆ ಅನೇಕರು ಕುಟುಂಬ ಎಂದರೆ ಹೆಂಡತಿ ಎಂದೇ ಭಾವಿಸುತ್ತಾರೆ. ನಮ್ಮ ಕುಟುಂಬಕ್ಕೆ ಸೌಖ್ಯ ಇಲ್ಲ, ನಮ್ಮ ಫ್ಯಾಮಿಲೀನ ಊರಿಗೆ ಕಳಿಸಿದ್ದೇನೆ ಎಂದು ಹೇಳುವುದು ಸಾಮಾನ್ಯ. ಫ್ಯಾಮಿಲಿ ಎಂಬ ಇಂಗ್ಲಿಷ್ ಪದಕ್ಕೆ ಹೆಂಡತಿ ಎಂಬ ಅರ್ಥ ಇಲ್ಲ. ಬಹುಶಃ ಈ ಅರ್ಥ ಇಂಗ್ಲಿಷಿಗೆ ನಮ್ಮ ಕೊಡುಗೆ.

ಅದು ಹೇಗೆ ಯಾವಾಗ ಇಡೀ ಕುಟುಂಬದ ಸ್ಥಾನವನ್ನು ಹೆಂಡತಿ ಆಕ್ರಮಿಸಿದಳೊ ತಿಳಿಯದು. ಇಡೀ ಕುಟುಂಬದ ಜವಾಬ್ದಾರಿಯನ್ನೆಲ್ಲ ಆಕೆಯ ಮೇಲೆ ಹೊರಿಸಿ ಹಾಯಾಗಿರಬಹುದೆಂಬ ಗಂಡಸಿನ ಕುತಂತ್ರವೊ. ಇಲ್ಲಾ ಆಕೆ ಇಲ್ಲದಿದ್ದರೆ ಕುಟುಂಬದ ಅಸ್ತಿತ್ವವೇ ಇಲ್ಲ ಎಂಬ ಮನ್ನಣೆಯ ಭಾವವೊ. ಮನ್ನಣೆ ಇರಲಿ ಬಿಡಲಿ ಹೆಂಡತಿ ಬರದೆ ಕುಟುಂಬ, ಸಂಸಾರ, ಆಗುವುದೇ ಇಲ್ಲ ಎಂಬ ಮಾತಂತೂ ಸತ್ಯ. ಗೃಹಿಣಿ ಬರಬೇಕಾದರೆ ಮದುವೆ ಆಗಲೇಬೇಕು.

ಮದುವೆ ಎಂದರೆ ಮದುವೆ ಆಗದವರಿಗೆ ನಿಷ್ಕಾರಣವಾದ ಭಯ. ಆದವರಿಗೆ ಸಕಾರಣವಾದ ಭಯ. ಜಾಣರು ವಿವೇಕಿಗಳು ಎನಿಸಿಕೊಂಡ ಅನೇಕ ಮದುವೆಯಾದ ಹಿರಿಯರು, ಮದುವೆ ಎಂದರೆ ಬ್ಯಾಚುಲರ್ಸ್ ಡಿಗ್ರಿ ಕಳೆದು ಹೋಗುತ್ತೆ, ಮಾಸ್ಟರ್ಸ್ ಡಿಗ್ರಿ ಬರೋದಿಲ್ಲ ಎಂದು ಕಿರಿಯರನ್ನು ಕಾಲ ಕಾಲಕ್ಕೆ ಹೆದರಿಸುತ್ತಾ ಬಂದಿದ್ದಾರೆ. ಆದರೆ ಹಾಗೆಂದು ಮದುವೆಗಳು ಆಗುವುದೇನೂ ತಪ್ಪಿಲ್ಲ.

ಮದುವೆ ಸಂದರ್ಭ ಎಂದರೆ ಹಾಸ್ಯಕ್ಕೆ ಹಸೆಮಣೆ ಹಾಕಿದ ಹಾಗೆ. ಸಂಭ್ರಮ, ಸಡಗರ, ಓಡಾಟ, ಗದ್ದಲಗಳ ನಡುವೆ ಎಲ್ಲೆಲ್ಲೂ ನಗುವಿನ ಅಲೆಗಳು ಏಳುತ್ತಿರುತ್ತವೆ. ಏನೋ ಹಾಸ್ಯದ ಪ್ರಸಂಗ, ಏನೋ ಹಾಸ್ಯದ ಚಟಾಕಿ, ಮಾತಿನ ಚಾತುರ್ಯ ನಗುವಿನ ಚಿಲುಮೆಗಳನ್ನು ಉಕ್ಕಿಸುತ್ತಿರುತ್ತವೆ. ಹಳೆಯ ಸಂಪ್ರದಾಯದ ಮದುವೆಗಳಲ್ಲಂತೂ ನಾಗೋಲೆ ಹಾಸ್ಯದ ಗಂಗೋತ್ರಿ. ಜೊತೆಗೆ ಬೀಗರ ಪರಸ್ಪರ ಮೂದಲಿಕೆ, ಲೇವಡಿ ಹಾಡುಗಳು ಹಾಸ್ಯದ ಪಟಾಕಿಗಳನ್ನು ಹಚ್ಚುತ್ತವೆ.

ಶಂಕರನ ಮದುವೆಯಲ್ಲಿ ಅವನನ್ನೂ ಅವನ ಹೆಂಡತಿಯನ್ನೂ ಬಾಗಿಲ ಬಳಿ ತಡೆದ ಪ್ರಮದೆಯರ ಗುಂಪು ಹೆಂಡತಿಯ ಹೆಸರು ಹೇಳಿದರೇನೆ ದಾರಿ ಬಿಡೋದು ಎಂದು

> *''ಕಮಿಷನರ್, ಡೆಪ್ಯುಟಿ ಕಮಿಷನರ್, ಅಸಿಸ್ಟೆಂಟ್ ಕಮಿಷನರ್ ಎಂಬ ಹೆಸರುಗಳು ಹೇಗೆ ಬಂದವು?'' – ಕೇಳಿದರು ಮೇಷ್ಟ್ರು*
> *''ಅವರು ಕಮಿಷನ್ ಹೊಡೆದು ಬದುಕುವುದರಿಂದ ಸಾರ್!'' ಅಂದ ವಿದ್ಯಾರ್ಥಿ*

ಶಂಕರನನ್ನು ಪೀಡಿಸಿದರು. ಸಾವಿರ ಸಲ ಬೇಕಾದರೂ ಸಲೀಸಾಗಿ ಹೆಸರು ಹಿಡಿದೆ ಕೂಗುವಂತಹವನು ಶಂಕರ. ಅಷ್ಟು ಸುಲಭವಾಗಿ ಹೇಳಿಬಿಟ್ಟರೆ ಸಂದರ್ಭದ ಸ್ವಾರಸ್ಯವೇ ಕೆಡುತ್ತದೆ ಎಂದು ಅವನೂ ಕೊಂಚ ಹೊತ್ತು ನಾಚಿದಂತೆ ನಟಿಸಿ, ಅವರನ್ನು ಸತಾಯಿಸಿ ಕೊನೆಗೆ ಎಲ್ಲಿ ಮುತ್ತೇ ಸುರಿದು ಹೋಗುತ್ತೋ ಎಂಬಂತೆ ಒಡಪು ಹೇಳಿ ಶ್ರೀರಾಮ ಬಂಟರ ರಾಣಿ ವಾನರೇಶ್ವರನ ಕಣ್ಮಣಿ ರುಮೆ ಎಂದು ಹೆಂಡತಿಯ ಕಡೆ ತುಂಟ ಕಟಾಕ್ಷವನ್ನು ಬೀರಿ ನಸುನಕ್ಕ. ಎಲ್ಲರೂ ಹೋ ಎಂದು ನಕ್ಕರು. ಇದೀಗ ಕೆಂಪಾದ ಮುಖದ ಗಿರಿಜೆಯ ಸರದಿ. ಗಂಡನ ಹೆಸರು ಹೇಳಬೇಕು. ಅವಳೇನು ಕಮ್ಮಿ! ತಾನೂ ಒಂದು ಒಡಪು ಹೇಳಿ 'ನನ್ನ ಜೀವದ ಜೀವ ರಾಜ ಸುಗ್ರೀವ' ಎಂದು ಬಿಟ್ಟಳು. ಸೇರಿಗೆ ಸವ್ವಾಸೇರು. ಸೂರು ಹಾರುವ ಹಾಗೆ ನಗೆ ಭೋರ್ಗರೆಯಿತು.

ಇದು ಬೇಕೆಂದೇ ಹಾಸ್ಯ ಮಾಡುವ ಮಾತಾಯಿತು. ಕೆಲವು ಸಲ ಹಾಸ್ಯ ಮಾಡುವ ಉದ್ದೇಶವೇ ಇಲ್ಲದೆ ಸಹಜವಾಗಿ ಆಡಿದ ಮಾತು ನಗುವಿಗೆ ಕಾರಣವಾಗುತ್ತದೆ. ಇದು ಹಲವು ವರ್ಷಗಳ ಹಿಂದೆ ನಡೆದ ಸಂಗತಿ. ನಾವು ನಾಲ್ಕು ಜನ ಸ್ನೇಹಿತರಲ್ಲಿ ಒಬ್ಬರಿಗೆ ಮಾತ್ರ ಮದುವೆಯಾಗಿತ್ತು. ತಾವು ನೋಡಲು ಲಕ್ಷಣವಾಗಿರುವುದರಿಂದ ಬೇಗ ಮದುವೆ ಆಯಿತು ಎಂದು ಜಂಭ ಕೊಚ್ಚಿ ಕೊಳ್ಳುತ್ತಿದ್ದರು. ಅವರಿಗೆ ಮಗು ಆಯಿತು. ಹುಟ್ಟಿ ಒಂದೆರಡು ವಾರದ ಮೇಲೆ ನಾವೆಲ್ಲರೂ ಮಗುವನ್ನು ನೋಡಲು ಹೋದೆವು. ನಮ್ಮಲ್ಲಿ ಒಬ್ಬರು 'ಮಗು ಎಲ್ಲ ತಂದೆಯನ್ನೇ ಹೋಲುತ್ತೆ ಅಲ್ಲವಾ' ಎಂದರು. ತಕ್ಷಣ ಇನ್ನೊಬ್ಬ ಮಿತ್ರರು ತೀರ ಸಹಜವಾಗಿ, 'ಛೇ ಇಲ್ಲ. ಮಗು ಒಳ್ಳೆ ಲಕ್ಷಣವಾಗಿ ಚೆನ್ನಾಗಿ ಇದೆ' ಎಂದು ಬಿಟ್ಟರು. ನಮಗೆ ನಗು ತಡೆಯಲಾಗಲಿಲ್ಲ. ಮಗುವಿನ ತಂದೆಯ ಮುಖ ಸೊಟ್ಟಗಾದುದನ್ನು ನೋಡಿ ಮತ್ತಷ್ಟು ನಕ್ಕೆವು.

ನಮ್ಮ ಪಿಲ್ಟೂಗೆ 3 ವರ್ಷವಾದಾಗ ''ನಾಳೆ ಸ್ಕೂಲ್ ತೆರೆಯುತ್ತೆ. ಪಿಲ್ಟೂನ ನರ್ಸರಿಗೆ ಸೇರಿಸೋಣ. ಮನೇಲಿ ಕೊಂಚ ಚೇಷ್ಟೆ ಅವಾಂತರಗಳು ಕಡಿಮೆ ಆಗುತ್ತವೆ'' ಎಂದು ರಾತ್ರಿ ನಾನೂ ಲಲಿತಾ ಮಾತಾಡಿಕೊಂಡೆವು. ನಿದ್ರೆ ಮಾಡುತ್ತಿದ್ದಾನೆ ಎಂದು ನಾವು ಭಾವಿಸಿದ್ದ ಪಿಲ್ಟೂ ಎಲ್ಲವನ್ನೂ ಕೇಳಿಸಿಕೊಂಡಿರಬೇಕು. ಮಾರನೆ ದಿನ ಬೆಳಿಗ್ಗೆ 10 ಘಂಟೆ ಹೊತ್ತಿನಲ್ಲಿ ಹೊರಗೆ ಹೋಗಿದ್ದ ಪಿಲ್ಟು ಮನೆಗೆ ಬಂದ. ಎಲ್ಲೋ ಹೋಗಿದ್ದೆ ಅಲೆಯೋಕೆ? ಎಂದೆ. ಅವನು ''ಸ್ಕೂಲಿಗೆ ಹೋಗಿದ್ದೆ ಅಪ್ಪಾ. ನನ್ನನ್ನು ಸೇರಿಸ್ಕೊಳ್ಳಿ ಅಂದೆ. ಅದಕ್ಕೆ ಮಿಸ್ಸು ಹಾಗೆಲ್ಲ ಸಣ್ಣ ಮಕ್ಕಳನ್ನ ಸೇರಿಸ್ಕೊಳಲ್ಲ. ನಿಮ್ಮ ತಂದೇನೋ ತಾಯಿನೋ ಕಳಿಸು ಸೇರಿಸ್ಕೊತೀವಿ ಅಂದರು. ನೋಡಿ ನಿಮ್ಮನ್ನಾದ್ರೆ ಸೇರಿಸ್ಕೋತಾರಂತೆ. ನಾನಂತೂ ಆಟಕ್ಕೆ ಹೋಗ್ತೀನಪ್ಪಾ ಎಂದು ಬಹು ಖುಷಿಯಾಗಿ ಓಡಿಹೋದ ಆ ತುಂಟ.

ಮನೆಯಲ್ಲಿ ಹಾಸ್ಯದ ಸಂದರ್ಭಗಳು ಬರುತ್ತಲೇ ಇರುತ್ತವೆ. ಉದಾಹರಣೆಗೆ ಹೇರ್ ಕಟ್ ಮಾಡಿಸಿಕೊಂಡು ಬಂದಾಗ ಎಲ್ಲರೂ ತಲೆಯನ್ನೇ ಸುತ್ತ ನೋಡುತ್ತ ನಗತೊಡಗುತ್ತಾರೆ. ವಾತ್ಸಲ್ಯ ಮೂರ್ತಿ ತಾಯಿಯೇ ಆಗಲಿ, ಸುಖದುಃಖಗಳಲ್ಲಿ ಸಮಭಾಗಿಯಾದ ಮೆಚ್ಚಿನ ಮಡದಿಯೇ ಆಗಲಿ ಮೊದಮೊದಲು ಗಂಭೀರವಾಗಿದ್ದಂತೆ

ತೋರಿಸಿಕೊಂಡರೂ ಕಿಸಕ್ ಎಂದು ನಗುತ್ತ ತಡೆ ಹಿಡಿದಂತೆ ಮಾಡಿ – ದೂರ ಹೋಗಿ ನಗುವಿನ ಹೆಬ್ಬಾಗಿಲನ್ನು ತೆರೆದುಬಿಡುತ್ತಾರೆ. ಒಂದು ವಾರಗಟ್ಟಲೆ ನಮ್ಮ ತಲೆ ಅವರ ಹಾಸ್ಯಕ್ಕೆ ನಗುವಿಗೆ ಆಹಾರ ಒದಗಿಸುತ್ತೆ.

ಒಂದು ಸಲ ಮಟ ಮಟ ಮಧ್ಯಾಹ್ನ ಎನ್ನುವ ವೇಳೆಯಲ್ಲಿ ನನ್ನ ತಂಗಿ ತನ್ನ ಮಗ 7 ವರ್ಷದ ಸತೀಶನ್ನು ಕರಕೊಂಡು ನಮ್ಮ ಮನೆಗೆ ಬಂದಳು. ಬೆಳಗ್ಗೆ ಎಲ್ಲಾ ಸುತ್ತಿ ಸುಸ್ತಾಗಿ ಬಂದವನೆ ಊಟ ಮಾಡಿ 1 ಘಂಟೆ ನಿರಾತಂಕವಾಗಿ ನಿದ್ರೆ ಮಾಡೋಣ ಎಂದು ಸಜ್ಜು ಮಾಡಿಕೊಳ್ಳುತ್ತಿದ್ದೆ. ಸತೀಶನಿಗೆ ಹೇರ್‌ಕಟ್ ಮಾಡಿಸಬೇಕು, ನಿಮ್ಮ ಮನೆ ಹತ್ತಿರದ ಬಾರ್ಬರ್ ಆದರೆ ಸ್ಮೂಥ್ ಆಗಿ ಮಾಡ್ತಾನೆ ಅಂತ ಅಂದಳು. ಸತೀಶನಿಗೆ ಹೇರ್‌ಕಟ್ ಅಂದರೆ ಅಳು. ಅದು ಅವನ ಹಿಂದಿನ ಕಟು ಅನುಭವ, ನನ್ನ ಮಧ್ಯಾಹ್ನದ ನಿದ್ರೆ ಖೋತಾ ಆದುದಕ್ಕೆ ಒಳಗೇ ಸಿಟ್ಟು ನನಗೆ. ಸತೀಶನನ್ನೇ ಈಗ ನಾನು ಆಶ್ರಯಿಸಬೇಕು. ಹೋಗೋಣವೇನೊ, ಅಳೋದಿಲ್ಲ ತಾನೆ ಎಂದೆ. ಓ, ಅಳಲ್ಲ. ನಿಮ್ಮ ಬಾರ್ಬರ್ ಆದರೆ ಚೆನ್ನಾಗಿ ಮಾಡ್ತಾನೆ ಅಂತ ಅಂದು ಬಿಟ್ಟ. ನನ್ನ ತಂಗಿ ಒಳಗೆಲ್ಲೊ ಹೋದಾಗ ಸತೀಶನಿಗೆ ಹೇಳಿದೆ. ಕರೆಕ್ಟ್ ಬಹಳ ಚೆನ್ನಾಗಿ ಮಾಡ್ತಾನೆ. ಅವನು ಕತ್ತರಿ ಮಿಷನ್ನು ಏನೂ ಹಾಕಲ್ಲ. ಒಂದು ಪುಟ್ಟ ಕತ್ತೆಮರಿ ಇಟ್ಟುಕೊಂಡಿದ್ದಾನೆ. ಒಂದು ಸೈಡಿಂದ ಮೇಯೋಕೆ ಬಿಟ್ ಬಿಡ್ತಾನೆ. ಐದು ನಿಮಿಷದಲ್ಲಿ ಅದು ಆ ಕಡೆಯಿಂದ ಈ ಕಡೆ ಮೇದು ಹಾಕ್ಬಿಡುತ್ತೆ. ಅಷ್ಟೇ. ಆಗೋಯ್ತು ಹೇರ್‌ಕಟ್ – ಬಾ. ಹೋಗೋಣ. ಎಲ್ಲವನ್ನೂ ಕಣ್ಣರಳಿಸಿ ಕೇಳಿದ ಸತೀಶ್. ಹೆದರಿ ಕತ್ತೆಮರೀನೆ? ಎಂದ. ಮತ್ತೆ ಕಳೆದ ಸಲ ನಾನು ಹೇರ್‌ಕಟ್ ಮಾಡಿಸಿಕೊಂಡು ಬಂದಾಗ ನಿಮ್ಮಮ್ಮ ನೋಡಿ ಹೇಳ್ಲಿಲ್ಲವಾ, ಕತ್ತೆಮೇದ ಹಾಗಿದೆ ಅಂತ ಎಂದು ನೆನಪಿಸಿದೆ. ಅಯ್ಯಪ್ಪಾ – ಹಂಗಾರೆ ಬೇಡಪ್ಪಾ– ಅಮ್ಮಾ ನಾ ಹೇರ್‌ಕಟ್ ಮಾಡಿಸ್ಕೊಳ್ಳಲ್ಲಾಮ್ಮ – ಎಂದು ರಾಗ ಎಳೆದು ಅಳುತ್ತ – ಮಾಡಿಸ್ಕಳಲ್ಲ ಮಾಡಿಸ್ಕಳಲ್ಲ ಮಾಡಿಸ್ಕಳಲ್ಲ ಎಂದು ಮೂರು ಸಲ ತಲಾಖ್ ಎಂದು ಹೇಳಿದ ಹಾಗೆ ಹೇಳಿಬಿಟ್ಟ. ಅದಾದ ಮೇಲೆ ಅವರಮ್ಮನಿಗೆ ಗೊತ್ತು ಇನ್ನು ಅವತ್ತು ಹೇರ್‌ಕಟ್ ಮಾತನ್ನೇ ಎತ್ತೋ ಹಾಗಿಲ್ಲ ಅಂತ. ನಾನು ಆರಾಮವಾಗಿ ನಿದ್ರೆ ಮಾಡಿದೆ. ಚಾಪೆ ತಲೆದಿಂಬು ಸಿದ್ಧತೆ ವೇಸ್ಟ್ ಆಗಲಿಲ್ಲ.

ತರಕಾರಿಯಿಂದ ಹಿಡಿದು ವೇಷಭೂಷಣಗಳವರೆಗೆ ನಾವು ಕೊಳ್ಳುವಾಗ ತೋರುವ ಜಾಣತನ ಬೀಳುವ ಬೇಸ್ತು ಮನೆಮಂದಿಯನ್ನೆಲ್ಲ ನಗಿಸುತ್ತವೆ. ಮನೆಗೆ ಸಮೀಪದಲ್ಲಿ ರಸ್ತೆಯ ಬದಿ 70 ಪೈಸೆಗೆ ಕೊತ್ತಂಬರಿ ಸೊಪ್ಪಿನ ಒಂದು ಕಂತೆ. 7.5 ಪೈಸೆಗೊಂದು ನಿಂಬೆ ಹಣ್ಣು ಎಂದು ಕೇಳಿದಾಗ ಲಾಯರ್ ಶ್ರೀಧರ ಅವರಿಗೆ ಬಹಳ ಕೋಪ ಬಂತು. ಸಾತ್ವಿಕ ಆಕ್ರೋಶ ಸಿಟಿ ಮಾರ್ಕೆಟ್ ರೇಟಿಗೂ ಬಡಾವಣೆಯ ರೇಟಿಗೂ ಏನೊ ಐದು ಹತ್ತು ಪೈಸೆ ವ್ಯತ್ಯಾಸವಿರಲಿ. ಆದರೆ ಇಷ್ಟು ಸುಲಿಗೆಯೇ ಎಂದು ಸೀದಾ ಸಿಟಿ ಮಾರ್ಕೆಟಿಗೆ ಸ್ಕೂಟರ್ ಹತ್ತಿ ಹೋದರು. 2 ಕಂತೆ ಕೊತ್ತಂಬರಿ ಸೊಪ್ಪು, 4 ನಿಂಬೆ ಹಣ್ಣು ಕೊಂಡು ತಂದು ಹೆಂಡತಿಗೆ ಹೇಳಿದರು 80 ಪೈಸೆ ಉಳಿಸಿದುದಾಗಿ.

ಕೇಳಿ ನಾವೆಲ್ಲ ನಕ್ಕೆವು. ಎರಡು ರೂಪಾಯಿ ಪೆಟ್ರೋಲ್ ಕುಡಿದ ಸ್ಕೂಟರ್ ಅವತ್ತೇ ನಕ್ಕಿರಬೇಕು.

ಮೊನ್ನೆ ಮಾರ್ಕೆಟ್ ಬಳಿ ನನ್ನ ಹಳೆಯ ಸ್ನೇಹಿತ ಗುಂಡ ಸಿಕ್ಕಿದ್ದ. ಎಷ್ಟೋ ವರ್ಷಗಳಾಗಿತ್ತು. ಏನೋ ಸಮಾಚಾರ. ಈಚೆಗೆ ಮದುವೆಗಿದುವೆ ಆಗಿದೀಯೊ ಇಲ್ಲಾ ಮೊದಲಿನ ಹಾಗೇ, ನಿನ್ನ ಅನ್ನ ನೀನೇ ಬೇಯಿಸಿಕೊಳ್ಳೋದು – ನಿನ್ನ ಬಟ್ಟೆ ನೀನೇ ಒಗೆದು ಹಾಕುವುದು, ಕಿತ್ತುಹೋದ ಗುಂಡಿ ನೀನೇ ಹಚ್ಚಿಕೊಳ್ಳೋದು, ನೀನೆ ಹರಿದ ಬಟ್ಟೆ ರಿಪೇರಿ ಮಾಡಿಕೊಳ್ಳೋದು ಇತ್ಯಾದಿ ಫಜೀತಿಗಳಲ್ಲಿ ಇನ್ನೂ ಒದ್ದಾಡ್ತಾ ಇದೀಯೊ ಎಂದು ಕೇಳಿದೆ. ಅವನು ನನ್ನನ್ನು ನೋಡುತ್ತಲೂ ಖುಷಿಯಿಂದ ಮುಖ ಅರಳಿಸಿ – ಈ ಕಿವಿಯಿಂದ ಆ ಕಿವಿವರೆಗೂ ನಗೆಯನ್ನು ಹೀಚಿದ್ದವನು ಈ ಪ್ರಶ್ನೆ ಕೇಳುತ್ತಲೂ ಹ್ಯಾಪಲು ಮುಖಕ್ಕೆ ಬದಲಾಯಿಸಿ – ಹ್ಞೂ, ಹೌದು ಎಂದು ಮುಲುಗಿದ. ಏನೋ ಹಾಗೆಂದ್ರೆ, ಯಾವುದಕ್ಕೆ ಹೌದೂನೊ ಎಂದೆ. ಆತ ''ಎರಡಕ್ಕೂ ಮದುವೇನೂ ಆಗಿದ್ದೀನಿ. ಮೊದಲಿನ ಹಾಗೆ ಆ ಕೆಲಸಗಳನ್ನು ಮಾಡ್ತಾ ಒದ್ದಾಡ್ತಾನೂ ಇದೀನಿ ಎಂದ'' ಛೇ! ನಾನೀ ಪ್ರಶ್ನೇನೆ ಹಾಕಬಾರದಾಗಿತ್ತು. ವೃಥಾ ನನ್ನನ್ನು ಕಂಡ ಅವನ ಮೂಡ್ ಹಾಳು ಮಾಡಿದೆ ಎಂದು ಖೇದ ಪಟ್ಟುಕೊಂಡೆ. ಗುಂಡನೇ ಈಗಲೂ ಅಡಿಗೆ ಮಾಡಬೇಕಾಗಿ ಬಂದಿರುವುದು ನೋಡಿದರೆ ಅವನು ಮದುವೆಯಾದ ಹೆಂಡತಿ ಅದೃಷ್ಟವಂತೆಯೊ–ಗಟ್ಟಿಗಿತ್ತೀನೋ ಎಂದು ಯೋಚಿಸತೊಡಗಿದೆ.

ಗುಂಡನೇ ಅಡಿಗೆ ಮಾಡಬೇಕಾಗಿ ಬಂದಿದ್ದರೆ ಅದರಲ್ಲಿ ತಪ್ಪೇನೂ ಇಲ್ಲ, ನಗುವಂತ ಹುದೂ ಇಲ್ಲ. ಆತ ಚೆನ್ನಾಗಿ ಅಡಿಗೆ ಮಾಡಬಲ್ಲ. ನನ್ನಂತಹವನಾಗಿದ್ದರೆ ಕಷ್ಟ, ನಾನು ಮದುವೆ ಮಾಡಿಕೊಳ್ಳುವಾಗ ನಮ್ಮ ಹಿರಿಯರೊಬ್ಬರು ಆಪ್ತವಾಗಿ ಹೇಳಿದ್ದರು. ''ನೋಡು ಅಣ್ಣಯ್ಯ, ರುಚಿಯಾಗಿ ಅಡಿಗೆ ಮಾಡಬಲ್ಲವಳು ಸಿಕ್ಕಿದರೆ ನಿನ್ನ ದಾಂಪತ್ಯ ಜೀವನದ ಸುಖ ಅರ್ಧ ಖಚಿತವಾದಂತೆ. ''ಹಾಗೆಂದೇ ಆಶೀರ್ವಾದ ಮಾಡಿ ಮಾಮಾ'', ಎಂದು ಕೇಳಿಕೊಂಡೆ, ಶುದ್ಧವಾದ ಭಾವದಿಂದ, ಕುಹುಕದಿಂದಲ್ಲ. ಅವರಾದರೂ ಮನಃಪೂರ್ವಕವಾಗಿ ಆಶೀರ್ವಾದ ಮಾಡಿದರು ಎಂದು ಕಾಣುತ್ತೆ. ಕಾಣುವುದೇನು. ಆಶೀರ್ವಾದ ಫಲಿಸಿದುದು ಅನುಭವಕ್ಕೆ ಬಂದಿದೆ. ನಾನೀಗ ಸವಿ ಸವಿಯಾದ ಊಟ – ತಿಂಡಿ ಪಡೆಯುತ್ತ ಸುಖವಾಗಿ ಇದ್ದೇನೆ ನಿಜ. ಆದರೆ ರುಚಿಗೆ ಕಟ್ಟು ಬಿದ್ದು ದೇಶ ವಿದೇಶಾಟನೆಗಳಿಗೆ ನಾಲಾಯಕ್ಕಾಗಿ ಬಿಟ್ಟಿದ್ದೇನೆ. ಬೇರೆ ಯಾವ ಶೈಲಿಯ ಊಟವೇ ರುಚಿಸದೆ – ಪ್ರವಾಸದ ಯೋಚನೆಯನ್ನೇ ಬಿಟ್ಟು ಬಿಟ್ಟಿದ್ದೇನೆ.

ಆಕೆ ತೌರು ಮನೆಗೆ ಹೊರಟು ಹೋದಳೊ ಒಂದೆರಡು ವಾರ, ಯಾಕೆ ಆಕೆ ಬರುವವರೆಗೂ ನನಗೆ ಹೋಟೆಲೇ ಗತಿ, ''ಒಂದು ಅನ್ನಕೂಡ ಮಾಡುವುದಕ್ಕೆ ಬರೋಲ್ಲವಲ್ರೀ. ಛೇ. ನಾಚಿಕೆಗೇಡು'', ಎಂದು ಆಕೆ ಹೀಯಾಳಿಸಿದರೂ ನಾನು ಸುಧಾರಿಸಲಿಲ್ಲ. ''ಅನ್ನ! ಅದೇನು ಮಹಾ. ಫಸ್ಟ್ ಕ್ಲಾಸಾಗಿ ಒಳ್ಳೆ ಮಲ್ಲಿಗೆ ಹೂವಿನ ಹಾಗೆ ಮೃದುವಾಗಿರೊ ಅನ್ನ ಮಾಡಿ ತೋರಿಸಿದರಾಯಿತೊ ಇಲ್ಲವೊ. ಹಾಗೆ ನೋಡಿದರೆ ಸಾರು ಪಲ್ಯ ಎಲ್ಲಾನೂ ಮಾಡ ಬಲ್ಲೆ – ನೀನು ಕೊಂಚ ಏನೇನು ಎಷ್ಟೆಷ್ಟು ಹಾಕಬೇಕು'', ಎಂದು ಹೇಳಿ ಕೊಟ್ಟರೆ ಅದೇನು ಬ್ರಹ್ಮ ವಿದ್ಯೆಯೇ ಎಂದು ಜಂಭ ಕೊಚ್ಚುತ್ತಾ ಇದ್ದೆ. ಮಾಡುವ ಗೇಜಿಗೂ ಹೋಗುತ್ತಿರಲಿಲ್ಲ. ಕಲಿಯುವ ಶ್ರದ್ಧೆಯನ್ನೂ ತೋರುತ್ತಿರಲಿಲ್ಲ. ಅವಳಿಗೂ

ಅದು ಚೆನ್ನಾಗಿ ಗೊತ್ತು. ಎಲ್ಲಿ ಬನ್ನಿ ಮಾಡಿ. ನೋಡೋಣ ಎಂದಾಗಲಿ – ಕಲಿಸುತ್ತೇನೆ – ನಡೆಯಿರಿ ಅಡಿಗೆ ಮನೆಗೆ ಎಂದಾಗಲಿ ಅವಳು ಯಾವತ್ತೂ ಛಾಲೆಂಜ್ ಮಾಡಿ ನನ್ನ ಮಾನ ತೆಗೆಯಲಿಲ್ಲ. ಜಾಮೂನು, ಕೇಸರಿಬಾತು ಚಕ್ಕುಲಿ, ಕೋಡಬಳೆ ಮಾಡುವಾಗ ನಾನು ಉತ್ಸಾಹಿತನಾಗಿ ಏನಾದರೂ ಸಣ್ಣ ಪುಟ್ಟ ನೆರವು ನೀಡಲೇ ಎಂದು ಒಳಗೆ ಹೋದರೆ – ''ದಮ್ಮಯ್ಯಾ ನಿಮ್ಮ ಪಾಡಿಗೆ ನೀವು ಮಹಾರಾಯರ ಹಾಗೆ ಅದೇನೊ ಬರೆಯುವುದಿದೆ ಎಂದಿರಲ್ಲ ಅದನ್ನು ಬರೀತಾ ಕೂತಿರಿ'', ಎಂದು ಅಟ್ಟುತ್ತಿದ್ದಳು. ಅಡಿಗೆ ಮನೆಯ ಯಾವ ವಿದ್ಯಮಾನಕ್ಕೂ ಮಧ್ಯೆ ತಲೆಹಾಕಲು ಬಿಡುತ್ತಿರಲಿಲ್ಲ.

ಒಂದು ಸಲ ಮಾತ್ರ ಅದೇನು ಬುದ್ಧಿ ಬಂತೊ – ಸ್ವಲ್ಪ ಚೇಷ್ಟೆ ಮಾಡಿ ಬುದ್ಧಿ ಕಲಿಸೋಣ ಎಂದು ಅನಿಸಿತೊ. 'ಅದೇನು ಮಹಾ ಅನ್ನ ಮಲ್ಲಿಗೆ ಹೂನ ಹಾಗೆ' ಎನ್ನುತ್ತಲೂ ಒಪ್ಪಿಬಿಟ್ಟಳು. ಅನ್ನ ಯಾವಾಗಲಾದರೂ ಒಮ್ಮೆ ಇಲ್ಲಾ ಕಿಚಡಿ ಇಲ್ಲಾ ಮಿಡ್ಡೆ ಆದಾಗ ನಾನು ಮೂದಲಿಸುತ್ತಿದ್ದುದು ನೆನಪಿಗೆ ಬಂತೋ ಏನೋ – ಅಂತೂ ರಾತ್ರಿ ಅನ್ನ ಮಾಡುವ ಅನುಮತಿ ಸಿಕ್ಕಿತು. ಮಕ್ಕಳೂ ತಾಯಿ ಪರವಾಗಿಯೊ ನನ್ನ ಪರವಾಗಿಯೊ ಬಹು ಉತ್ಸಾಹದಿಂದ ಕುಣಿದಾಡಿದರು. ನಾನು ಅನ್ನ ಮಾಡಿ ಕರೆಯುವವರೆಗೆ ಯಾರೂ ಅಡಿಗೆ ಮನೆಯೊಳಗೆ ಬರಕೂಡದೆಂದು ನಿಬಂಧನೆ ಹಾಕಿದೆ. ವಿನಾಕಾರಣ ತಲೆ ಹಾಕಿ ನನ್ನ ಆತ್ಮ ವಿಶ್ವಾಸವನ್ನು ಕುಗ್ಗಿಸಬಹುದು ಎಂಬ ಅಳುಕಿನಿಂದ ಹೀಗೆ ಮಾಡಬೇಕಾಯಿತು. ಅಕ್ಕಿ ತೊಳೆಯೊದು ಸರಿಯಾದ ನೀರಿನ ಮಟ್ಟ ಇರಿಸೋದು, ಕುಕ್ಕರ್ ರೆಡಿಮಾಡಿ ಒಲೆ ಮೇಳಿರಿಸೋದು ಒಲೆ ಹೊತ್ತಿಸೋದು ಹೀಗೆ ಎಲ್ಲ ಕೆಲಸಗಳನ್ನೂ ಕ್ರಮಬದ್ಧವಾಗಿ ಮಾಡಿದೆ. ಯಾವ ಟೆನ್ಷನ್ನೂ ಇರಿಸಿಕೊಳ್ಳದೆ ಹಾಯಾಗಿ ಪ್ರಸನ್ನಚಿತ್ತನಾಗಿ ಹೋಗಿ ಓದುತ್ತ ಮಲಗಿದೆ. ಕುಕ್ಕರ್ ಕೂಗಿದ್ದು ಸ್ಟೋವ್ ಆರಿಸಿದ್ದು ಎಲ್ಲ ಕಾಲಕಾಲಕ್ಕೆ ಆಯಿತು. ನನ್ನ ಹೆಂಡತಿಯು ತನ್ನ ಪಾಡಿಗೆ ಏನೊ ಮಾಡಿಕೊಂಡಿದ್ದಳು. ರಾತ್ರಿ 9 ಆಯಿತು. ಬನ್ನಿ ಊಟಕ್ಕೆ ಎಂದೆ. ಆಕೆಗೆ ಅನ್ನ ಹೇಗಾಗಿದೆ ಮೊದಲು ನೋಡಬೇಕು ಎಂಬ ಕುತೂಹಲ. ಮಕ್ಕಳಿಗೂ ಅತೀವ ಕುತೂಹಲ. ನಾನೇ ಹೋಗಿ ಕುಕ್ಕರ್ ಇಳಿಸಿ ಮುಚ್ಚಳ ತೆಗೆದೆ. ನೋಡುತ್ತೇನೆ ಖಾಲಿ! ಅನ್ನದ ಡಬರಿಯೇ ಇಲ್ಲ! ಏನು ಚೋದ್ಯ! ಅಂದು ಆ ಕಡೆ ನೋಡಿದರೆ ಅಕ್ಕಿ ತೊಳೆದು ನೀರಿನ ಮಟ್ಟ ನೋಡಿ ಇರಿಸಿದ ಪಾತ್ರೆ ಅಲ್ಲೇ ಹೊರಗೇ ಇದೆ! ನನ್ನ ಹೆಂಡತಿ ಕಿಸಕ್ಕನೆ ನಕ್ಕು – ಬಾಯಿ ಹಿಡಿದು ತಡೆದುಕೊಂಡಳು ವಿಷಯವೇನೆಂದು ತಿಳಿದ ಮಕ್ಕಳು ಹಸಿದಿದ್ದ ಆ ಸ್ಥಿತಿಯಲ್ಲೂ ಹೋ ಎಂದು ನಕ್ಕವು. ನಾನು ಮಾತಾನಾಡಲಿಲ್ಲ. ಊಟ 1/2 ಘಂಟೆ ತಡ ಆಯಿತು. ಈಗಲೂ ನನ್ನ ಹೆಂಡತಿ ಆ ಸುದ್ದಿ ಎತ್ತಿ ಹಂಗಿಸುತ್ತಿರುತ್ತಾಳೆ. ಅದೊಂದು ಮರೆವಿನ ತಪ್ಪಾಗದೆ ಇದ್ದಿದ್ದರೆ ಅನ್ನ ಹೇಗಿರಬೇಕು ಎಂಬುದನ್ನು ಪ್ರತ್ಯಕ್ಷ ತೋರಿಸುತ್ತಾ ಇದ್ದೆ ಎಂದು ಈಗಲೂ ವಾದಿಸುತ್ತೇನೆ. ಆದರೆ ಅನ್ನ ಮಾಡಲು ಮಾತ್ರ ನನ್ನಾಕೆ ಇದುವರೆಗೂ ಬಿಟ್ಟಿಲ್ಲ. ಅನ್ನದ ಸವಾಲಿನ ಮಾತು ಬಂದಾಗಲೆಲ್ಲ ಎಲ್ಲರಿಗೂ ನಗುವುದಕ್ಕೆ ಒಂದು ಅವಕಾಶ ಸಿಕ್ಕುತ್ತಿದೆ.

# ಅಪರಂಜಿಗೆ ಹಾರ್ದಿಕ ಶುಭಾಶಯಗಳು

## ಡಾ. ಎಚ್.ಎಸ್. ಮುರಳಿ

ನೇತ್ರ ವೈದ್ಯರು

**ದಿ ಐ ಕ್ಲಿನಿಕ್**

ಅಣ್ಣಯ್ಯ ಕಾಂಪ್ಲೆಕ್ಸ್

ಹೊಸಳ್ಳಿ ರಸ್ತೆ, ಮಂಡ್ಯ

ಫೋನ್: 224834

ಸಮಯ: ಬೆಳಗ್ಗೆ 9 ರಿಂದ 1 ಗಂಟೆ

**ಮಾಲಸ ಐ ಕ್ಲಿನಿಕ್**

ಬಸ್ ಸ್ಟಾಂಡ್ ಸರ್ಕಲ್

ಚಾಮುಂಡೀಪುರಂ

ಮೈಸೂರು 570 004

ಫೋನ್: 2332225

ಸಮಯ: ಸಂಜೆ 5 ರಿಂದ 8 ಗಂಟೆ

ಮೊಬೈಲ್: 94487 40093

# ನೆಲಚರ ಒಕ್ಕಣ್ಣರು

● ನ. ರತ್ನ

**ಒ**ಕ್ಕಣ್ಣ ಶುಕ್ರಾಚಾರ್ಯರ ಬಗ್ಗೆ ಎಲ್ಲರಿಗೂ ತಿಳಿದಿದೆ. ದೈತ್ಯರ ಗುರುಗಳಾಗಿದ್ದರು. ಅವರು ಬಹಳ ನಿಷ್ಠೆಯಿಂದ ತಮ್ಮ ಶಿಷ್ಯ ಬಲಿಯ ಐಶ್ವರ್ಯ ಉಳಿಸಲು ಹೋಗಿ ಒಂದು ಕಣ್ಣು ಕಳೆದುಕೊಂಡು ಒಕ್ಕಣ್ಣರಾಗಿಬಿಟ್ಟರು. ರಾಕ್ಷಸರ ಗುರುಗಳಾಗಿ ಉಳಿದುಬಿಟ್ಟರು.

ಗ್ರೀಕ್ ಸಾಹಸಗೀತೆ ಒಡಿಸ್ಸಿಯ ವೀರ ಒಡಿಸ್ಸಿಯಸ್ ಕೊಂದ ಒಕ್ಕಣ್ಣ ರಾಕ್ಷಸ ಸೈಕ್ಲಾಪಸ್ ಬಗ್ಗೆಯೂ ನೀವು ಕೇಳಿರಬೇಕು. ಹಾಗೆ ನೋಡುತ್ತಾ ಹೋದರೆ ಸುಮಾರು ಎಲ್ಲ ದೇಶದ ಎಲ್ಲ ಜನಾಂಗಗಳಲ್ಲಿಯೂ ದುಷ್ಟ ಒಕ್ಕಣ್ಣ ರಾಕ್ಷಸರ ಕಥೆಗಳಿವೆ. ಜಲಚರ ಪ್ರಾಣಿಗಳಲ್ಲಿಯೂ ಒಂದು ಒಕ್ಕಣ್ಣ ತಿಮಿಂಗಿಲವಿದೆ. ಅಂತರ್ಜಾಲದಲ್ಲಿ ಹುಡುಕಿದರೆ ಒಕ್ಕಣ್ಣ ರಾಕ್ಷಸರ ದೊಡ್ಡ ಪಟ್ಟಿಯೇ ಸಿಗುತ್ತದೆ.

ಒಟ್ಟಾರೆ ಒಂಟಿ ಕಣ್ಣಿಗೂ ದುಷ್ಟತನಕ್ಕೂ ಏನೋ ನಂಟು. ನಾನು ಈಗ ದೂರುತ್ತಿರುವುದು ಒಂದು ಬೇರೆ ಒಂಟಿ ಕಣ್ಣರ ಸೈನ್ಯದ ಬಗ್ಗೆ.

ನೀವು ಇತ್ತೀಚೆಗೆ ಯಾವುದೋ ಮದುವೆ, ಪೂಜೆ ಪುಸ್ತಕ ಬಿಡುಗಡೆ ಅಥವಾ ಗಣ್ಯರ ಸನ್ಮಾನವೋ ಯಾವುದೋ ಸಮಾರಂಭಕ್ಕೋ ಹೋಗಿರಲೇಬೇಕು. ತಪ್ಪಿಸಿಕೊಳ್ಳುವುದು ಹೇಗೆ? ಈಗ ತಾನೇ ಆಷಾಢ ಮಾಸ ಮುಗಿದಿದೆ. ಮತ್ತೆ ಸರ್ಕಾರದ ಅನುದಾನದಿಂದಲೇ ಬೆಳೆಯುವ ಸಂಘ, ಸಂಸ್ಥೆಗಳೂ, ವ್ಯಕ್ತಿಗಳೂ ಇದ್ದಾರೆ. ಅವರೆಲ್ಲ ಮಾರ್ಚ್ ಮೂವತ್ತೊಂದರಲ್ಲಿ ಪಡೆದ ಹಣ ಖರ್ಚು ಮಾಡಿಬಿಡಬೇಕು. ಮುಂದಿನ ವರ್ಷದ ದಾನಕ್ಕೆ ಅರ್ಜಿ ಹಾಕಬೇಕು! ಮತ್ತೆ ಯುವ ದಂಪತಿಗಳು ಈಗಲೇ ಮದುವೆ ಮುಗಿಸಿಕೊಂಡು ವಿದೇಶಗಳಲ್ಲಿ ಓದು ಮುಂದುವರೆಸಲು ಹೋಗಬೇಕು. ಕಾರಣವೇನೇ ಇರಲಿ, ಈಗೆಲ್ಲಾ ಸಮಾರಂಭದ ಮೇಲೆ ಸಮಾರಂಭಗಳು.

ನಾವು ಹೋದಲ್ಲೆಲ್ಲ ನೀವು ನನ್ನ ವೈರಿ ಒಕ್ಕಣ್ಣ ರಾಕ್ಷಸರನ್ನು ಭೇಟಿಯಾಗಿರಲೇಬೇಕು. ಸ್ವಲ್ಪ ತಾಳಿ, ನಾನು ಹಾಗೆನ್ನಬಾರದು. ಅವರು ನನ್ನ ಶತ್ರುಗಳಲ್ಲ, ಮಿತ್ರರೂ ಅಲ್ಲ. ನನ್ನ ಇರಿವಿನ ಬಗ್ಗೆ ಅವರಿಗೆ ಲೆಕ್ಕವೇ ಇಲ್ಲ. ಆಗೀಗ ನನ್ನಕಡೆ ಕಣ್ಣು ಕುಕ್ಕುವಂತೆ ಬೆಳಕು ಬಿಟ್ಟು ತಮ್ಮ ಒಂಟಿ ಕಣ್ಣನ್ನು ನನ್ನಕಡೆ ಹಾಯಿಸಿ, ನನ್ನ ಮೂಲಕ ಹಾದು ಹೋಗಿಬಿಡುವವರಿಗೆ

*''ಪೀಟಿಲನ್ನ ಐವತ್ತು ರೂಪಾಯಿಗೆ ಮಾರಿದೆ ಕಣೋ! ಗೊತ್ತಾಯ್ತೋ?*
*ಪಕ್ಕದ ಮನೆಯೋರು ಕೊಂಡುಕೊಂಡಿರಬೇಕು.*

ನಾನು ಯಾವ ಲೆಕ್ಕ? ನಾನು ಆಕಸ್ಮಿಕವಾಗಿ ಕಂಡರೂ ಕಾಣಬಹುದು; ಆದರೂ ನಾನು ಅಗಣ್ಯ! ಒಂದು ರೀತಿಯಲ್ಲಿ ನನಗೇ ಅವರ ಮೇಲೆ ಸಿಟ್ಟು ಅಷ್ಟೆ. ನಾನು ಅವರ ವೈರಿ, ದ್ವೇಷಿ! ಅವರಿಗೆ ನಾನು ಯಾರೂ ಅಲ್ಲ.

ತಿಳಿಯಿತಲ್ಲಾ ನಿಮಗೆ? ನನ್ನ ಈ ಒಂಟಿ ಕಣ್ಣ ರಾಕ್ಷಸರು ಯಾರೂ ಅಂತ!

ಒಂದು ಪುಸ್ತಕ ಬಿಡುಗಡೆಯ ಹಬ್ಬ ನೆನಪಿಸಿಕೊಳ್ಳಿ. ಬಹಳ ಅದ್ಧೂರಿಯಾಗಿ ಎಲ್ಲ ವ್ಯವಸ್ಥೆ ಮಾಡುತ್ತಾರೆ. ಹಿರಿಯರು ಗಣ್ಯರು ಆಗಮಿಸಿರುತ್ತಾರೆ. ಯಾವುದೇ ಸಮಾರಂಭ ಸರಿಹೊತ್ತಿಗೆ ಪ್ರಾರಂಭವಾಗುವುದಿಲ್ಲ. ಅದರ ಕಥೆ ಮತ್ತೊಮ್ಮೆಗೆ ಇರಲಿ. ಆದರೂ ಪುಸ್ತಕ ಬಿಡುಗಡೆಯ ಸಮಯ ಬಂದು ಬಿಡುತ್ತದೆ, ಗಣ್ಯರು ಎದ್ದು ನಿಲ್ಲುತ್ತಾರೆ. ಇನ್ನೇನು ಬಿಡುಗಡೆಯ ಮುಹೂರ್ತ ಹತ್ತಿರವಾದಂತೆ, ಈ ಗಣ್ಯರ ಮುಂದೆ ಬಂದು ನಿಲ್ಲುತ್ತಾರೆ ನೋಡಿ, ಈ ದುಷ್ಟ ಒಕ್ಕಣ್ಣರ ಸೈನ್ಯ.

ಪುಸ್ತಕ ಬಿಡುಗಡೆ ಅಥವಾ ಗಣ್ಯರು ಯಾರೂ ಪ್ರೇಕ್ಷಕರ ಕಣ್ಣಿಗೆ ಕಾಣುವುದಿಲ್ಲ. ಸಾಧಾರಣವಾಗಿ ಪುಸ್ತಕ ಬಿಡುಗಡೆ ಮಾಡುವವರು. ಪುಸ್ತಕಗಳು ಮುಚ್ಚಿಟ್ಟಿದ್ದ ಬೊಂತೆಯಿಂದ, ಅದರ ಕಗ್ಗಂಟು ಬಿಚ್ಚಿ ಪುಸ್ತಕಗಳನ್ನು ನಿಜವಾಗಿಯೇ ಸೆರೆಯಿಂದ ಬಿಡುಗಡೆ ಮಾಡಿ ಪ್ರತಿಗಳನ್ನು ವೇದಿಕೆಯ ಮೇಲಿರುವವರಿಗೆ ಹಂಚಿ, ಎಲ್ಲರೂ ಪುಸ್ತಕ ತೆರೆದು ಹಿಡಿದು ನಿಲ್ಲುತ್ತಾರೆ.

ಆದರೆ ನೆರೆದ ಪ್ರೇಕ್ಷಕರಿಗೆ ಆ ಪುಸ್ತಕದ ಮುಖಪುಟವಾಗಲೀ, ಬೆನ್ನಾಗಲೀ ಕಾಣುವುದೇ ಇಲ್ಲ; ಗಣ್ಯರ ಮುಖಗಳೂ ಕಾಣುವುದಿಲ್ಲ. ಪ್ರೇಕ್ಷಕರಿಗೆ ಸಿಗುವ ದೃಶ್ಯಭಾಗ್ಯ ಅಂದರೆ ಆ ಒಕ್ಕಣ್ಣ ಹಿಡಿದವರ ಪೃಷ್ಟ ಸಾಲು ಪ್ರದರ್ಶನ; ಅವರ ಹಿಂಭಾಗ ಮಾತ್ರ!

ಹಿಂದೊಮ್ಮೆ, ಸಿನಿಮಾ ಪ್ರಪಂಚದ ಕಿರುತಾರೆ ಒಬ್ಬಳು ತನಗೆ ತುಂಬಾ ಇಷ್ಟವಾದ ಆಟ ಕ್ರಿಕೆಟ್ ಎಂದು ಹೇಳಿಕೊಂಡಿದ್ದಳು. ಆಕೆ ಕೊಟ್ಟಕಾರಣ, ಟಿ.ವಿ.ಯಲ್ಲಿ ಮ್ಯಾಚ್ ನೋಡುತ್ತಿದ್ದರೆ ಎದ್ದು ಕಾಣುವ ಕ್ರಿಕೆಟಿಗರ ಹಿಂಭಾಗ, ನಿತಂಬ ಅಂತ. ಆಕೆಗೆ ಈ ಪುಸ್ತಕ ಬಿಡುಗಡೆಯ ದೃಶ್ಯ ಖುಷಿ ಕೊಟ್ಟಿತು. ಅದು ಆಕೆಗೆ ಇರಲಿ! ನನಗದು ಬೇಡ. ಹಾಗೆ ನೋಡಿದರೆ ಈ ಒಕ್ಕಣ್ಣಧಾರಿಗಳು ಹಾಕುವ ಪ್ಯಾಂಟುಗಳು ಅಸಹ್ಯ. ಸುಮಾರು ಇಪ್ಪತ್ತುವರ್ಷಗಳ ಹಿಂದೆ ಅಮೇರಿಕದಲ್ಲಿ ನವೀನ ಎನಿಸಿದ ಪ್ಯಾಷನ್ ಈಗ ಇಲ್ಲಿ ಮೆರೆಯುತ್ತಿವೆ. ನಮ್ಮ ಬಡತನವನ್ನು ಅಣಕಿಸುವಂತೆ ಹರಿದ, ಮಾಸಿದ ಜೀನ್ಸ್ ಹಾಕಿದ ಬೆನ್ನುಗಳನ್ನು ನೋಡಬೇಕಾದದ್ದು ನಮ್ಮ ದುರಾದೃಷ್ಟ!

ಇನ್ನು ಸನ್ಮಾನಿತ ಗೆಳೆಯರ ಶಾಲುಹೊದ್ದ, ಹಾರ ಹಾಕಿದ ಪೇಟಧಾರಿ ಚಿತ್ರ ನಮಗೆ ಕಾಣುವುದು ಮಾರನೆಯ ದಿನ ವೃತ್ತಪತ್ರಿಕೆಯಲ್ಲಿ ಮಾತ್ರ! ಅಲ್ಲಿಯವರೆಗೆ ನಮಗೆ ಲಭಿಸುವುದು ಈ ಒಕ್ಕಣ್ಣ ಖುಷಿಗಳ ಬೆನ್ನಷ್ಟೇ!

ಇವು ಹೀಗಾದರೆ ಮದುವೆಯ ಗೋಳು ಇನ್ನೂ ಅತ್ತತ್ತ! ವಧುವಿಗೆ ವರ ತಾಳಿಕಟ್ಟುವ ಅಥವಾ ಅಂತರ್‌ಪಟ ಸರಿಸುವ ಸಮಯ ಬಂದ ಸೂಚನೆ ಓಲಗದಿಂದ ಬರುತ್ತಿದ್ದಂತೆ,

ಬೊಮ್ಮನಹಳ್ಳಿಯ ಕಿನ್ನರಿ ಕೇಳಿದಾಗ ಹೊರಬಂದ ಇಲಿಗಳಂತೆ ಎಲ್ಲೆಡೆಯಿಂದ ಹೊರಬೀಳುತ್ತವೆ. ವಿವಿಧ ರೀತಿಯ, ಆಕಾರದ ಮೊಬೈಲುಗಳು, ಐ ಪ್ಯಾಡುಗಳು, ಅವು ಮೊದಲೇ ಜಮಾಯಿಸಿದ್ದ ಒಕ್ಕಣ್ಣುಗಳ ಜೊತೆ ಸೇರಿಕೊಂಡುಬಿಡುತ್ತವೆ. ನಾವು ಆಶೀರ್ವದಿಸುವ ಅಕ್ಷತೆ ಕಾಳುಗಳು ಇವರೆಲ್ಲರ ವ್ಯೂಹವನ್ನು ದಾಟುವುದೇ ಇಲ್ಲ! ನಮ್ಮ ಮನದಾಳದ ಹರಕೆಗಳು ಶುಭಾಶಯಗಳು, ಮನೋವೇಗದಲ್ಲಿ ಅಶರೀರವಾಗಿ ಮಾತ್ರ ವಧುವರರಿಗೆ ತಲುಪಬೇಕಷ್ಟೆ!

ಇದು ಪ್ರೇಕ್ಷಕರ ಬವಣೆಯಾದರೆ ಈ ಒಕ್ಕಣ್ಣುಗಳ ಎದುರು ನಿಂತವರ ಪಾಡೇ ಬೇರೆ. ಅವರು ವಿವಿಧ ದೃಷ್ಟಿಕೋನಗಳಿಂದ ಕಾಣುವಹಾಗೆ ನಾಲ್ಕೈದು ಸಲ ತಾಳಿಕಟ್ಟಬೇಕು! ''ಸ್ವಲ್ಪ ಈ ಕಡೆ'' ಮತ್ತೆ ಹಾರಹಾಕಿ, ಬಲಗೈ ಮೇಲೆತ್ತಿ ಇತ್ಯಾದಿ ಕೋರಿಕೆಗಳನ್ನು ಪುರೋಹಿತರೂ ಪಾಲಿಸಬೇಕು! ಅಂತರ್‌ಪಟ ಪದೇ ಪದೇ ತೂರಾಡಬೇಕು. ನಿಂತವರೆಲ್ಲ ಅತ್ತ ಇತ್ತ ಜಾಗ ಬದಲಿಸಬೇಕು.

ಕಡೆಗೆ ನಾವು ವಧೂವರರನ್ನು ವಿವಾಹ ಮಂಟಪದಲ್ಲಿ ನೋಡಬೇಕೆಂದರೆ, ಮದುವೆಯಾಗಿ ತಿಂಗಳಾದ ಮೇಲೆ ವಧು ಅಥವಾ ವರನ ತಂದೆಯ ಮನೆಗೆ ಹೋದಾಗ ಅವರು ನಿಮ್ಮ ಮಡಿಲಲ್ಲಿ ಹಾಕುವ ಮಣಗಟ್ಟಲೆ ಭಾರವಾದ ಆಲ್ಬಮ್ಮು ನೋಡಲು ಕಾಯಬೇಕು. ಅಲ್ಲೋ, ಮನೆಯವರೊಬ್ಬರು ನಿಮ್ಮ ಹಿಂದೆಯೇ ನಿಂತು ಎಲ್ಲರ ಪರಿಚಯ ಬೇರೆ ಮಾಡುತ್ತಾರೆ. ''ಆ ನೀಲಿ ಸೀರೆಯವರು ನಮ್ಮ ಊರಿನ ಮಲ್ಲತ್ತೆಯ ನಾದಿನಿ, ಪಕ್ಕದಲ್ಲಿರುವವರು ಅವರ ಮೂರನೆಯ ಅಕ್ಕ'' – ನಮಗೆ ಅವರು ಯಾಕೆ? ನಾವು ನೋಡಬೇಕೆಂದಿದ್ದದ್ದು ವಧೂ ವರರನ್ನು ಮಾತ್ರ! ಆದರೆ ಅವರು ದೇಶಬಿಟ್ಟು ಹೋಗಿ ಎರಡು ವಾರವಾಗಿರುತ್ತದೆ ಅಥವಾ ಅವರನ್ನು ಕಣ್ಣಾರೆ ನೋಡುವ ಬಯಕೆಯಿದ್ದರೆ ನೀವೂ ಒಂದು ಒಕ್ಕಣ್ಣು ಹಿಡಿದು ಈ ವಾನರ ಸೈನ್ಯ ಸೇರಿರಿ!

## ಏರು ಗೋಪುರ ಕವನ

ಲೆ
ಎಲೆ
ಕಮಲೆ
ಹೂವಮಾಲೆ
ತರುವಾಗಲೆ
ಕಾಣಿಸಿದೆಯಲೆ
ಶುಭ ಶಕುನದಲೆ
ನಾ ನಿನ್ನ ಕೈ ಹಿಡಿಯಲೆ
ಜಗವದು ಮೆಚ್ಚಿದ ಮೇಲೆ
ಷುರು ನನ್ನ ನಿನ್ನ ಬಾಳ ಲೀಲೆ

*– ಸುಕೇಶವ*

# ಸುಖ ಸಂಸಾರಕ್ಕೆ ಜಾಣ ಸೂತ್ರಗಳು

● ಸಹನಾ ಪ್ರಸಾದ್

## ಆತ

**ಸ್ವಗತ** : ಏನಪ್ಪ ಇವಳು, ಮನೆಗೆ ಗಂಡ ಬಂದ ಎಂಬ ಗಮನವೂ ಇಲ್ಲದೆ ನೆರೆಮನೆಯಾಕೆಯೊಂದಿಗೆ ಹರಟುತ್ತಾ ಇದ್ದಾಳೆ. ಬೆಳಗ್ಗಿನಿಂದ ಕೆಲಸದಲ್ಲಿ ಸಾಕಾಗಿ ಬಂದರೆ ಒಂತೊಟ್ಟು ಕಾಫಿಯೂ ಇಲ್ಲವಲ್ಲ. ಹೆಣ್ಣು ಸಂಸಾರದ ಕಣ್ಣು. ಆದರೆ ನಮ್ಮ ಮನೆಯ ಕಣ್ಣಿಗೆ ಕುರುಡು. ಮನೆಯೊಡೆಯ ಎಂದೂ ಒಂಚೂರೂ ಮರ್ಯಾದೆಯಿಲ್ಲ. ಇವಳ ಜುಟ್ಟು ಹಿಡಿದು ಚೆನ್ನಾಗಿ ಚಚ್ಚಬೇಕು. ಮೊನ್ನೆ ತಾನೆ ಹೊಸ ಬಳೆ ಮಾಡಿಸಿಕೊಟ್ಟರೂ ಇವಳು ಬದಲಾಗೇ ಇಲ್ಲ!

**ಜೋರಾಗಿ** : ಒಂದ್ಲೋಟ ಕಾಫಿ ಕೊಡ್ತಿಯೇನೆ? ನಾನೆ ಮಾಡಿಕೊಳ್ಳಬಹುದು. ಆದರೆ ನಿನ್ನ ಕೈ ರುಚೀನೆ ಬೇರೆ ಅಮೃತ. ಬಳೆ ಘಲ್ಲೆನಿಸುತ್ತಾ ನೀನು ಕಾಫಿ ತಂದಿಟ್ಟರೆ, ಆಹಾ, ಸ್ವರ್ಗ ಮೂರೇ ಗೇಣು.

**ಸ್ವಗತ** : ಇದೊಂದು ಕಾಫಿಯಾ? ಒಳ್ಳೆ ವಿಷ ಕುಡಿದ ಹಾಗಿದೆ. ಆ ಪಕ್ಕದ ಮನೆ ರತ್ನಳ ಜತೆ ಆಡಿದ ನಂಜಿನ ಮಾತೆಲ್ಲಾ ಇದರಲ್ಲೇ ತುಂಬಿರುವ ಹಾಗಿದೆ. ನಮ್ಮತ್ತೆ ಜಾಣರು. ಈ ಪೆದ್ದನ್ನು ನನ್ನ ತಲೆಗೆ ಕಟ್ಟಿ ಅವರು ಆರಾಮವಾಗಿ ಇದ್ದಾರೆ. ಕಾಫಿ ಮಾಡಲು ಸಹ ಕಲಿಸಿಲ್ಲ. ಈಗ ಟೀವಿಯ ಮುಂದೆ ಕುಳಿತರೆ ಇನ್ನು ಏಳುವುದು 9 ಕ್ಕೆ ಬೆಳಿಗ್ಗೆ ಮಾಡಿದ ತಂಗಳು ಬಡಿಸುವುದಕ್ಕೆ!

**ಜೋರಾಗಿ** : ಅಲ್ಲವೇ ನನ್ನ ರಾಣಿ. ಕಾಫಿ ಪುಡಿ ಹೊಸದಾ? ಸಕ್ಕರೆ ಹಾಕಿಲ್ಲ ಅನ್ನಿಸುತ್ತೆ. ಹೋಗಲಿ ಬಿಡು. ಬೆಳಿಗ್ಗೆಯಿಂದ ಕೆಲಸ ಮಾಡಿ ನೀನು ಸುಸ್ತಾಗೀದಿಯ. ಟೀವಿ ಹಾಕಲಾ?

**ಸ್ವಗತ** : ಅಯ್ಯೋ, ನನ್ನ ಜನುಮವೇ. ಈ ಸಾರು ತಿಂದರೆ ನಾನು ಈ ರಾತ್ರಿಯೇ ಗೊಟಕ್. ಇದರ ಬಣ್ಣ ಮಣ್ಣಿನದು. ರುಚಿ ಹಳಸಿದ್ದು. ಈ ಸೀರೆಯಲ್ಲಿ

> ವೈದ್ಯನೊಬ್ಬ ಶವನಗಳನ್ನು ಕೂಡ ಬರೆಯುತ್ತಾನಂತೆ ಪೇನಾವನ್ನು ಕುಲುಕಿಕುಲುಕಿ, ದಿನಕ್ಕೆ ಮೂರು ವೇಳೆ ಬರೀ ಹೊಟ್ಟೆಯಲ್ಲಿ ಬರೆಯಬಹುದು.

ಎಷ್ಟು ದಪ್ಪಕ್ಕೆ ಕಾಣಿಸುತ್ತಿದ್ದಾಳೆ. ಅದು ಉಟ್ಟಿರುವ ರೀತಿಯೋ, ದೇವರಿಗೆ ಪ್ರೀತಿ. ಅದೇ ನನ್ನ ಆಫೀಸಿನ ಲತಾ, ಆಹಹ. ಬಳ್ಳಿ ಮಿಂಚಿನ ಬಳ್ಳಿ. ಎಷ್ಟು ನಾಜೂಕಾಗಿ ಸೀರೆ ಉಡುತ್ತಾಳೆ. ಎಷ್ಟು ಬಳುಕುತ್ತಾಳೆ. ಅವಳ ಮುಗುಳ್ನಗುವೇ ಸಾಕು ಹೊಟ್ಟೆ ತುಂಬಲು.

**ಜೋರಾಗಿ** : ಅಲ್ಲವೆ ಅರ್ಧಾಂಗಿ, ಸಾರಿಗೆ ಉಪ್ಪು ಕಡಿಮೆ. ನೀನ್ಯಾಕೆ ಸಾರಿನ ಪುಡಿಹುರಿದು. ಮಿಕ್ಸರ್‌ಗೆ ಹಾಕಿ ಕಷ್ಟ ಪಡಬೇಕು. ಎಮ್ಟೀಆರ್ ಪುಡಿ ತೊಗೊ. ಇಲ್ಲಾ ಬರುವ ತಿಂಗಳಿಂದ ಅಡುಗೆಯವರನ್ನು ಇಟ್ಟುಕೊ. ಚೆನ್ನಾಗಿ ತಿಂದು ಸಂತೋಷವಾಗಿರೋಣ. ಈ ಜನುಮವೆ ಆಹ ದೊರಕಿದೆ ರುಚಿ ಸವಿಯಲು.....

**ಆಕೆ**

**ಸ್ವಗತ** : ಅಬ್ಬಾ, ಇವರು ಬರುವ ಹೊತ್ತಾಯಿತು. ಮೂರನೆ ಮನೆಯ ಜಾನಕಮ್ಮನ ವಿಷಯ ನೆರೆಮನೆಯವರ ಜತೆ ಮಾತಲಾಡಲೇ ಆಗಿಲ್ಲ. ಮೊನ್ನೆ ಅವರ ಗಂಡ ಹೊಸ ಸೀರೆ ಕೊಡಿಸಿ ಹೋಟಲ್ಲಿಗೆ ಹೋದವೆಂದು ಹೇಳಿದರಲ್ಲ. ಅದು ಬರೀ ಸುಳ್ಳು. ದೇವಸ್ಥಾನಕ್ಕೆ ಹೋಗಿ ಬಂದಿದ್ದಾರೆ ಅಷ್ಟೇ. ಆ ಸೀರೆ ಅವರ ನಾದಿನಿ ಕೊಟ್ಟಿದ್ದಂತೆ. ಪಾಪ, ನನ್ನ ನೆರೆಯಾಕೆಗೆ ಇದೆಲ್ಲ ತಿಳಿದಿರಬೇಕು.

**ಜೋರಾಗಿ** : ಒಂತೊಟ್ಟು ಕಾಫಿ ನೀವೇ ಮಾಡಿಬಿಡಿ. ಬೆಳಗ್ಗಿನಿಂದ ಟೀವಿ ನೋಡಿ ತಲೆ ಎಲ್ಲಾ ನೋಯ್ತಿದೆ. ಮೊನ್ನೆ ನೀವು ಕೊಡಿಸಿದ ಬಳೆ ನನ್ನ ಗೆಳತಿಯರಿಗೆಲ್ಲ ತೋರಿಸಿದೆ. ಎಲ್ಲರೂ ನನ್ನನ್ನು ಅದೃಷ್ಟವಂತೆ ಅಂದರು.

**ಸ್ವಗತ** : ಅಬ್ಬಾ, ಇವರು ಮಾಡುವ ಕಾಫಿ, ರಾಮ, ರಾಮ. ಪಕ್ಕದ ಮನೆಯ ದಿಲೀಪ್ ಎಷ್ಟು ಚೆನ್ನಾಗಿ ಟೀ ಮಾಡುತ್ತಾರೆ. ಅದರ ಜತೆಗೆ ಹೆಂಡತಿಗೆ ಬೇಕರಿಯಿಂದ ಬನ್ ಸಹ ತಂದು ಕೊಟ್ಟರಲ್ಲ. ಹೊಸ ಮಾದರಿಯ ಸರ ಸಹ ಕೊಡಿಸಿದ್ದಾರೆ. ಅವಳ ಮುಸುಡಿಗೆ ಅದು ಒಪ್ಪುವುದೇ ಇಲ್ಲ. ಹೂ. ಎಲ್ಲ, ಅವರವರ ಪುಣ್ಯ.

**ಜೋರಾಗಿ** : ರೀ, ನೀವು ಎಷ್ಟು ಒಳ್ಳೆಯವರು. ನಿಮ್ಮ ಕೈ ಅಡುಗೆ ತಿನ್ನಬೇಕಂಬ ಆಸೆಯಾಗುತ್ತಿದೆ. ಇವತ್ತು ಹೊಸ ಸೀರಿಯಲ್ ಶುರುವಾಗುತ್ತಿದೆ. ಬೆಳಗ್ಗಿನ ಹುಳಿ ಮಿಕ್ಕಿದೆ ಅಷ್ಟೆ. ಮಂಗಳೂರು ಸೌತೇಕಾಯಿ ಕಹಿ ಬಿಟ್ಟು ಹುಳಿ ತಿನ್ನಲಾಗುತ್ತಿಲ್ಲ. ನಿಮ್ಮ ತಾಯಿ ನಿಮಗೆ ಬೆಂಡೇಕಾಯಿ ಗೊಜ್ಜು ಕಲಿಸಿದ್ದಾರಲ್ಲ. ಅದು ಮಾಡಿಬಿಡಿ ಸಾಕು.

**ಸ್ವಗತ** : ಯಪ್ಪ. ಈ ಲುಂಗಿ ಎಷ್ಟು ಹಳೆಯದಾಗಿದೆ. ಇದನ್ನು ಉಟ್ಟು ಇವರಂತೂ ಒಳ್ಳೆ ಅಡುಗೆಯವರಂತೆ ಕಾಣಿಸುತ್ತಿದ್ದಾರೆ. ನನ್ನ ತಂಗಿಯ ಗಂಡ ಎಷ್ಟು

ಸ್ಮಾರ್ಟ್. ಮನೆಯಲ್ಲೂ ಸಹ ನೀಟಾಗಿರುತ್ತಾರೆ. ಪೈಜಾಮ ಜುಬ್ಬ ಹಾಕಿ ಒಳ್ಳೆ ಹೀರೋ ಥರ.

**ಜೋರಾಗಿ** : ಅಲ್ಲರೀ ಈ ಸಲ ಸಂಬಳ ಬಂದ ಮೇಲೆ ನೀವ್ಯಾಕೆ ಜುಬ್ಬ ಪೈಜಾಮ ಹೊಲೆಸಬಾರದು? ನಿಮ್ಮ ಹೈಟ್, ವೇಯ್ಟ್‌ಗೆ ಸಕ್ಕತ್ತಾಗಿ ಕಾಣುತ್ತೆ. ನೀವದನ್ನು ಹಾಕಿಕೊಂಡು, ನಾನು ಸಹ ನೀವು ಹೊಸದಾಗಿ ಕೊಡಿಸಿರುವ ಚೂಡಿದಾರ್ ಹಾಕಿಕೊಂಡು ಊಟವಾದ ಮೇಲೆ ಮೂಲೆಯಲ್ಲಿರುವ ಐಸ್ಕ್ರೀಮ್ ಪಾರ್ಲರ್‌ಗೆ ಹೋಗೋಣಾ? ಆ ಮೂರನೆ ಮನೆಯ ಜ್ಯೋತಿ ಮದುವೆಯಾಗಿ 8 ವರುಷಗಳಾದರೂ ಗಂಡನ ಕೈ ಹಿಡಿದು ಪ್ರತಿ ರಾತ್ರಿ ವಾಕಿಂಗ್ ಹೋಗುತ್ತಾಳೆ ರೀ. ಎಷ್ಟು ಡುಮ್ಮಿ ಆಗಿದ್ದಾಳೆ ಈಚೀಚಿಗೆ, ಗಮನಿಸಿದ್ದೀರಾ?

**ಗಂಡನ ಸ್ವಗತ** : ಅಯ್ಯೋ, ಬೇರೆ ಹೆಣ್ಣನ್ನು ನೋಡುವ ಭಾಗ್ಯ ನನಗೆಲ್ಲೇ, ನನ್ನನ್ನು ನೀನೊಂದು ನಿಮಿಷವೂ ಒಂಟಿಯಾಗಿ ಬಿಡದಿರುವಾಗ. ಅವಳು ಡುಮ್ಮಿಯಾದರೆ ಏನಂತೆ. ರುಚಿಯಾಗಿ ಅಡುಗೆ ಮಾಡುತ್ತಾಳೆ. ಅವತ್ತು ಕೋಸಂಬರಿ ಕಳಿಸಿದ್ದಳಲ್ಲ. ಆಹಾ, ಏನು ರುಚಿ, ಏನು ಸವಿ! ನಿನ್ನ ಸವಿ ಮಾತಿಗೆ ನಾ ಮರುಳಾಗಲ್ಲ. ಹೊಸ ಡ್ರೆಸ್ಸ್‌ಗೆ ನನ್ನ ಬಳಿ ಹಣವಿಲ್ಲ. ನೀ ಇರುವ ಬಟ್ಟೆಗಳೆಲ್ಲ ಖರ್ಚು ಮಾಡು ಮೊದಲು. ಆ ಐಸ್ ಕ್ರೀಮ್ ಪಾರ್ಲರ್ಗೆ ಹೋದರೆ ನನ್ನ 10 ದಿನಗಳ ಸಂಬಳ ಬ್ಲೇಡು.

ಗಂಡ ಜೋರಾಗಿ ಏನೂ ಹೇಳಲಿಲ್ಲ. ಏಕೆಂದರೆ ಮಾರನೆ ದಿನ ಕೆಲಸದವಳು ಬರುವುದಿಲ್ಲ ಎಂದು ಹೇಳಿದ್ದಳು. ಟೀವಿಯಲ್ಲಿ ಸೀರಿಯಲ್ ಹೊಸ ತಿರುವು ಪಡೆಯುವುದರಲ್ಲಿತ್ತು.

ಅರ್ಥ ಆಯಿತಲ್ಲವೇ?

## ರಸ್ತೆ ನಿನಗಿದೋ ನಮ್ಮ ನಮಸ್ತೆ

ನಮ್ಮ ರಸ್ತೆಗಳ ವಿಷಯ ನಿಮಗೆ ತಿಳಿದೇ ಇದೆ. ಹಾಗೆ ನೋಡಿದರೆ ಈ ನಮ್ಮ ಊರಿನಲ್ಲಿ ರಸ್ತೆಗಳೇ ಇಲ್ಲ. ನೂರಾರು ಸಾವಿರಾರು ಗುಂಡಿಗಳ ನಡುವೆ ಇರುವ ಟಾರಿನ ಅವಶೇಷಗಳ ಕುಣಿಗಳಿವೆ. ಅವನ್ನೇ ಸಧ್ಯಕ್ಕೆ ರಸ್ತೆಗಳು ಎಂದು ಕರೆಯೋಣ. ನೀವು ದೇಶ ವಿದೇಶಗಳಲ್ಲಿ ಸಾಲ ಮಾಡಿ ಅವಕ್ಕೆ ನಮ್ಮ ಸ್ತ್ರೀಯರು ಮುಖಕ್ಕೆ ಸ್ನೋ ಬಳಿದುಕೊಳ್ಳುವಂತೆ ಟಾರ್ ಬಳಿದು ಅವರು ಪೌಡರ್ ಉದುರಿಸಿಕೊಳ್ಳುವಂತೆ ಮರಳು ಉದುರಿಸಲು ಪ್ರಯತ್ನಿಸುತ್ತೀರಿ. ಆದರೂ ರಸ್ತೆಗಳು ಸರಿಯಾಗಿವೆಯೇ. ಎಲ್ಲಾದರೂ ಒಂದು ರಸ್ತೆಯನ್ನು ತೋರಿಸಬಲ್ಲಿರಾ?

ಬೆಸ್ಟ್ ಆಫ್ ಪ್ರಭುಶಂಕರ – ಹುಚ್ಚಾಸ್ಪತ್ರೆ ಲೇಖನದಿಂದ

# ಚಿತ್ರಾ ಅವರ ಅರಣ್ಯ ಪರ್ವ

**ಕುಂ**ಟೆಬಿಲ್ಲೆ ಅಂತಹ ಗ್ರಾಮೀಣ ಆಟವನ್ನೂ ನಗರದ ಕಾನ್ವೆಂಟ್ ಮಕ್ಕಳು ಇಂಗ್ಲೀಷಿನಲ್ಲೇ ಆಡುತ್ತಿರುವಂತಹ ವಾತಾವರಣ ಇರುವಾಗ ಮಕ್ಕಳಿಗಾಗಿ ಕನ್ನಡದಲ್ಲಿ ಕತೆ ಬರೆದು ಪ್ರಕಟಿಸುವುದು ಸಾಹಸವೇ ಸರಿ. ಆದರೂ ಅಪರಂಜಿ ಬಳಗದ ಚಿತ್ರಾ ರಾಮಚಂದ್ರನ್ ಎಂಬ 70+ ವರ್ಷದ ತರುಣಿ ಮಕ್ಕಳಿಗಾಗಿ ಒಂದು ಸಾಹಸ ಕತೆಯನ್ನೇ ಹೆಣೆದಿದ್ದಾರೆ. 'ಪಿಂಡಾರಳ್ಳಿಯ ಪೆಡಂಭೂತ' ಕಾಡಿನಲ್ಲಿ ಮಕ್ಕಳ ಅನುಭವ ಸಾಹಸಗಳನ್ನು ಚಿತ್ರಿಸುವ ಒಂದು ರೋಮಾಂಚಕಾರಿ ಕಥನ. ಇದು ಕತೆಯಷ್ಟೇ ಅಲ್ಲ ಒಂದು ಪರಿಸರ ಪಾಠವಾಗಿಯೂ ಹೊರಹೊಮ್ಮಿದೆ. ಸುಮಾರು 170 ಪುಟಗಳಲ್ಲಿ ಕಾಡುಮೇಡು, ಪಶುಪಕ್ಷಿ, ವನ್ಯಪ್ರಾಣಿ, ಗಿಡಮರ, ಹೂವುಹಣ್ಣು, ಹೆಜ್ಜೆಹೆಜ್ಜೆಗೂ ಸಿಕ್ಕಿ ಓದುಗರ ಮುಂದೆ ಅರಣ್ಯವೇ ಸೃಷ್ಟಿಗೊಂಡಂತಾಗುತ್ತದೆ. ನಗರದ ಮಗುವೊಂದು ಮೊದಲ ಬಾರಿಗೆ ಕಾಡು ಹೊಕ್ಕು ಆ ವೈವಿಧ್ಯಮಯ ಪ್ರಪಂಚವನ್ನು ಬೆಡಗು, ಕಾತುರದಿಂದ ಸವಿಯುವಂತೆ ಓದುಗರೂ ಆ ಅರಣ್ಯ ಪ್ರದಕ್ಷಿಣೆ ಹಾಕುತ್ತಾರೆ. 'ಪಿಂಡಾರಳ್ಳಿಯ ಪೆಡಂಭೂತ'ದ ಹಿಂದೆ ಪರಿಸರ ಸಂರಕ್ಷಣೆಯ ನೀತಿ ಪಾಠವಿದೆ. ಸಾಹಸ ಕಥನದ ಜತೆಗೆ ಜೈವಿಕ ವೈವಿಧ್ಯತೆಯ ಮಹತ್ವದ ಬಗ್ಗೆ ವಿವರಗಳಿವೆ. ಕತೆಯನ್ನು ಆಸ್ವಾದಿಸುತ್ತಾ ಪರಿಸರವನ್ನು ಅರಿಯುವ ಮತ್ತದನ್ನು ಕಾಪಾಡುವ ಬಗ್ಗೆ ಮಕ್ಕಳಿಗೆ ತಿಳಿಸಿ ಹೇಳುವುದರಲ್ಲಿ ಚಿತ್ರಾ ಸಫಲರಾಗಿದ್ದಾರೆ. ಮಕ್ಕಳು ಕನ್ನಡ ಪುಸ್ತಕಗಳನ್ನು ಓದುವುದರ ಬಗ್ಗೆ ಸಂದೇಹ ಇರುವಾಗ ಅಪ್ಪ ಅಮ್ಮಂದಿರಾದರೂ ಇದನ್ನು ಕೊಂಡು ಮಕ್ಕಳ ಜತೆ ಓದಿ ಖುಷಿ ಪಟ್ಟರೆ ಚಿತ್ರಾ ಅವರ ಶ್ರಮ ಸಾರ್ಥಕವಾದೀತು.

## ''ಪಿಂಡಾರಳ್ಳಿಯ ಪೆಡಂಭೂತ''

ಮಕ್ಕಳ ಸಾಹಸ ಕಥೆ

ಪ್ರಕಾಶ ಸಾಹಿತ್ಯ, ಬೆಂಗಳೂರು – 53

ಪುಟಗಳು 174, ಬೆಲೆ ರೂ. 110/–

**ಆನಂದ**

ಆಗಿನ ಕಾಲದಲ್ಲಿ ನನ್ನ ಚಿನ್ನಾ, ನನ್ನ ಬಂಗಾರ ಅಂತ ಪ್ರೇಯಸಿಯನ್ನು ಕರೆಯುತ್ತಿದ್ದರು. ಈಗ ನನ್ನ ಯುರೇನಿಯಂ, ನನ್ನ ಥೊರಿಯಂ ಅಂತ ಕರೆಯಬೇಕಾದಿತು.

# ಸ್ಕೂಟರೆಂಬೊ ಸಂಗಾತಿಯ ಸೇರಿ..

● ವೈ.ಎನ್. ಗುಂಡೂರಾವ್

ಹಳ್ಳಿಯಲ್ಲಿದ್ದಾಗಿನಿಂದಲೂ ನನಗೆ ತೀವ್ರವಾಗಿ ಕಾಡುತ್ತಿದ್ದ ಆಸೆಯೆಂದರೆ ಜಾವಾ ಬೈಕ್ ಮೇಲೆ ಸುತ್ತಾಡುವುದು. ಮೈಸೂರಿನಿಂದ ಜಾವಾ ಮೋಟರ್‌ಬೈಕ್‌ನಲ್ಲಿ ಯಾರಾದರು ಹಳ್ಳಿಗೆ ಬಂದರೆ ಅದರ ರ್‍ರೊಂಯ್ ಎಂಬ ಶಬ್ದ ಕೇಳುತ್ತಿದ್ದಂತೆ ಯಾರೋ ರಾಜಕುಮಾರ ಬಂದನೆಂದೇ ತಿಳಿಯುತ್ತಿದ್ದೆವು.

ಯಳೆಂದೂರಿನಲ್ಲಿ ಹೈಸ್ಕೂಲಿಗೆ ಸೇರಿದಾಗ ಈ ಜಾವಾ ಬೈಕ್ ಆಸೆ ಇನ್ನೂ ಹೆಚ್ಚಾಗತೊಡಗಿತು. ನಮಗಿಂತ ಸೀನಿಯರ್ಸ್ ಆಗಿದ್ದು ಎಸ್.ಎಸ್.ಎಲ್.ಸಿ. ಫೇಲೋ, ಪಾಸೋ ಆದ ಕೆಲ ಹುಡುಗರು ತರಗತಿಯ ವೇಳೆಯಲ್ಲಿ ಹೈಸ್ಕೂಲಿನ ಮುಂದಿದ್ದ ಹೊಂಗೆ ಮರದ ಸುತ್ತ ರ್‍ರೊಂಯ್, ರ್‍ರೊಂಯ್ ಎಂದು ಸುತ್ತಿಸುತ್ತಿದ್ದ ಜಾವಾ ಬೈಕ್‌ನ ಮ್ಯೂಸಿಕಲ್ ಟ್ಯೂನ್‌ನಂತಹ ಶಬ್ದ ಕೇಳಿದಾಗಲೆಲ್ಲಾ ನನ್ನ ಜ್ಞಾನ ಚರಿತ್ರೆ, ಭೂಗೋಳದ ಪಾಠಗಳಿಂದ ಎಗರಿ ಹೋಗುತ್ತಿತ್ತು. ನಾವು ಶಾಲೆ ಬಿಟ್ಟೊಡನೆ ಆ ರ್‍ರೊಂಯ್, ರ್‍ರೊಂಯ್ ಶಬ್ದ ಕೇಳಲು ಆತುರಾತುರವಾಗಿ ಇಳಿದು ಓಡಿಬಂದರೆ ಹಾಳಾದ ಆ ಹುಡುಗರು ಎಂಬತ್ತು ಮೈಲಿ ವೇಗದಲ್ಲಿ ಎತ್ತಲೋ ಕಣ್ಮರೆಯಾಗಿ ಬಿಡುತ್ತಿದ್ದರು. ಜಾವಾ ಬೈಕಿನ ಹಿಂಬದಿ ಸವಾರಿಯಾಗುವುದು ಹಾಗಿರಲಿ ಅದರ ಮೃದುವಾದ ಹೊಳೆಯುವ ಕೆಂಬಣ್ಣದ ಮೈಯನ್ನು ಸವರಿ ತೃಪ್ತಿಪಟ್ಟುಕೊಳ್ಳುವುದಕ್ಕೆ ಕೂಡಾ ಅಂದಿನ ಸಂದರ್ಭದಲ್ಲಿ ಸಾಧ್ಯವಿರಲಿಲ್ಲ.

ಎಸ್.ಎಸ್.ಎಲ್.ಸಿ.ಯ ನಂತರ ಬೆಂಗಳೂರಿಗೆ ಬಂದು ಕಾಲೇಜಿಗೆ ಸೇರಿದ ನಂತರ ಬೆಂಗಳೂರಿನಲ್ಲಿ ಕಂಡದ್ದು ಜಾವಾ ಬೈಕ್‌ಗಿಂತ ರಾಜದೂತ್ ವಾಹನದ್ದೆ ಕಾರುಬಾರು. ಬೆಳೆಯುತ್ತಿದ್ದ ಬೆಂಗಳೂರಿನಲ್ಲಿ ಮನೆಕಟ್ಟಿಸುತ್ತಿದ್ದ ಕಂಟ್ರಾಕ್ಟರುಗಳ ಅಚ್ಚು ಮೆಚ್ಚಿನ ವಾಹನ ರಾಜ್‌ದೂತ್ ಇಲ್ಲವೇ ಲ್ಯಾಂಬ್ರೆಟಾ ಸ್ಕೂಟರುಗಳು. ಒಮ್ಮೊಮ್ಮೆ ಬೆನ್ನಹಿಂದಿನಿಂದ ಜಾವಾ ಬೈಕ್ ಸುಯ್ಯೆಂದು ಹಾದು ಹೋದರೆ ಸಾಕು ಎಲ್ಲವನ್ನು ಮರೆತು ರಸ್ತೆಯಲ್ಲಿ ನೋಡುತ್ತಾ ನಿಂತುಬಿಡುತ್ತಿದ್ದೆ.

ಹೀಗೆ ಹಳ್ಳಿಯಲ್ಲಿದ್ದಾಗಿನಿಂದಲೂ ಜಾವಾ ಬೈಕ್ ಬಗ್ಗೆ ಅದೆಂತಾದ್ದೊ ಆಕರ್ಷಣೆ ಒಳಗೊಳಗೇ ಬೆಳೆಯುತ್ತಲೇ ಹೋಯಿತು. ಇದಕ್ಕೆ ಸರಿಯಾಗಿ ನಾನು ಕಾಲೇಜಿನಲ್ಲಿ

ಹಗಲು ಕಂಡ ತಾರೆಯನ್ನು ಇರುಳು ಗುರ್ತಿಸಲು ಅಸಾಧ್ಯ

ಓದುತ್ತಿದ್ದಾಗ ಪಕ್ಕದ ಮನೆಯಲ್ಲಿದ್ದ ಶೆಟ್ಟರೊಬ್ಬರು ಯಾವುದೋ ಕಂಪನಿ ನಡೆಸುತ್ತಿದ್ದು ಪ್ರತಿ ದಿನ ಓಡಾಡಲು ರಿಕ್ಷಾವನ್ನೇ ನಂಬಿದ್ದರು. ಆಗ ಬೆಂಗಳೂರಿನಲ್ಲಿ ರಿಕ್ಷಾಗಳ ಓಡಾಟದ ಪ್ರಾರಂಭದ ಯುಗ. ಇದು ಬಿಟ್ಟರೆ ಟಾಂಗಾ ರಿಕ್ಷಾಗಳು ರಸ್ತೆಗೆ ಬಂದನಂತರ ಟಾಂಗಾದಲ್ಲಿ ಓಡಾಡುವುದು ತಮ್ಮ ಮರ್ಯಾದೆಗೆ ಕಡಿಮೆ ಎಂದು ಭಾವಿಸಿದ ಕೆಲವರು ರಿಕ್ಷಾಗಾಗಿ ಕಾಯುತ್ತಾ ನಿಲ್ಲುವುದು ಸರ್ವೇಸಾಮಾನ್ಯವಾಗಿತ್ತು. ಹೀಗೆ ಕಾಯುತ್ತಿದ್ದವರಲ್ಲಿ ನಮ್ಮ ಮನೆಯ ಪಕ್ಕದಲ್ಲಿದ್ದ ಶೆಟ್ಟರೂ ಒಬ್ಬರು. ಇವರ ಕಿವಿಗೆ ಆದಾರು ಊದಿದರೋ ನಾಕಾಣೆ ಜಾವಾ ಜೆಟ್ ಕೊಂಡುಕೊಂಡರೆ ನಿಮ್ಮ ಓಡಾಟಕ್ಕೆ ಅನುಕೂಲ, ಓಡಿಸುವುದು ತುಂಬ ಸುಲಭ, ಅಂತಹ ಭಾರವಾದ ವಾಹನವೇನಲ್ಲ' ಎಂದು ಅದರ ಗುಣಗಾನ ಮಾಡಿದರಂತೆ ಈ ಜಾವಾಜೆಟ್ ಹೇಗಿತ್ತೆಂದರೆ ಇಂದಿನ ಟಿ.ವಿ.ಎಸ್. ಸ್ಕೂಟಿ ಇ.ಎಸ್.ಗಿಂತ ಕೊಂಚ ಸ್ಲಿಮ್ ಎಂದೆ ಹೇಳಬಹುದು. ಬಿಡಿ ಈಗ ಈ ವಾಹನ ಹಾಗಿರಲಿ ಜಾವಾ ಬೈಕ್ ಕೂಡಾ ಕಾಣಸಿಗುವುದು ಅಪರೂಪವೇ ಏಕೆಂದರೆ ಜಾವಾ ಕಂಪನಿ ಮುಚ್ಚಿಹೋಗಿರುವುದರಿಂದ.

ಇದನ್ನು ಕೊಂಡ ಶೆಟ್ಟರು ಕಲಿಯಲು ನನ್ನ ಸಹಾಯ ಕೇಳಿದಾಗ ನನಗೆ ಸ್ವರ್ಗ ಮೂರೇಗೇಣು ಎನಿಸಿತು. ಏಕೆಂದರೆ ಇದುವರೆವಿಗೂ ಜಾವಾಬೈಕ್ ಮುಟ್ಟಿರದಿದ್ದರೂ ಅದರದ್ದೇ ವಂಶದ ಕುಡಿಯ ಮೇಲೆ ಸವಾರಿ ಮಾಡುತ್ತೇನೆನ್ನುವ ಒಂದು ಬಗೆಯ ಮಾನಸಿಕ ಸಂತೃಪ್ತಿಯೇ ಜಾವಾಜೆಟ್ ಮೇಲೆ ಕುಳಿತು ಬೆಂಗಳೂರಿನ ಪ್ರದಕ್ಷಿಣೆ ಬಂದಷ್ಟೇ ತೃಪ್ತಿಕೊಟ್ಟಿತು. ಅವರಿಗೆ ಸ್ವಲ್ಪ ಸ್ವಲ್ಪ ಆ ವಾಹನ ಓಡಿಸುವ ಪರಿಜ್ಞಾನವಿದ್ದುದರಿಂದ ಚಾಮರಾಜಪೇಟೆಯ ಶಂಕರಮಠದ ಹಿಂಭಾಗದಲ್ಲಿದ್ದ ಮೈದಾನವನ್ನು ಹೇಗೋ ತಲುಪಿ ಕಲಿಯಲು ಪ್ರಾರಂಭಿಸಿದೆವು. ಕಲಿಯುವುದು ಬಹಳ ಸುಲಭವೆನಿಸಿತು. ಅವರೊಟ್ಟಿಗೆ ನಾನೂ ಕಲಿತೆ, ಅವರು ಬಿದ್ದಾಗ ನಾನೂ ಬಿದ್ದೆ, ಅವರು ಎದ್ದಾಗ ನಾನು ಎದ್ದೆ. ಒಮ್ಮೆ ಇಬ್ಬರೂ ಬಿದ್ದ ರಭಸಕ್ಕೆ ನಮ್ಮಿಬ್ಬರಿಗೂ ಏನೂ ಅಪಾಯವಾಗದಿದ್ದರೂ ವಾಹನ ಸ್ಟಾರ್ಟ್ ಆಗಲು ಬಲು ಮೊಂಡಾಟ ಮಾಡಿತು. ಕತ್ತಲಾದ್ದರಿಂದ ಕಡೆಗೆ ತೋಟಕಾಯುತ್ತಿದ್ದ ಮಾಲಿಯ ಮನೆ ಮುಂದೆ ತಳ್ಳಿ, ಚಳಿಯಾಗದಿರುವಂತೆ ಅದಕ್ಕೊಂದು ಗೋಣಿಚೀಲ ಹೊದಿಸುವಂತೆ ತಾಕೀತು ಮಾಡಿ ಮಾರನೆಯ ದಿನ ಚಿಕ್ಕಪೇಟೆಯಿಂದ ಮೆಕ್ಯಾನಿಕ್ ಒಬ್ಬನನ್ನು ಕರೆದುಕೊಂಡು ಹೋಗಿ ಅದರ ರೋಗಕ್ಕೆ ಮದ್ದು ಕೊಡಿಸಿದ ನಂತರ ಜಿಗರೆಯಂತೆ ಓಡತೊಡಗಿತು.

ಓಡಿಸಲು ಚೆನ್ನಾಗಿ ಕಲಿತನಂತರ ಆಫೀಸಿಗೆ ತೆಗೆದುಕೊಂಡು ಹೋಗತೊಡಗಿದರು. ನಾವಿದ್ದುದು ಚಾಮರಾಜಪೇಟೆಯ ಐದನೆಯ ರಸ್ತೆಯ ಐದನೇ ಕ್ರಾಸ್‌ನಲ್ಲಿ. ಅವರ ಕಚೇರಿ ಮೈಸೂರು ರಸ್ತೆಯಲ್ಲಿ ಐದನೇ ಕ್ರಾಸಿನಲ್ಲೇ ನೇರ ಹೋಗಿ ಮೈಸೂರು ರಸ್ತೆಗೆ ಸೇರಬಹುದಾಗಿದ್ದರೂ ರಸ್ತೆ ತುಂಬಾ ಕಡಿದಾಗಿದ್ದುದರಿಂದ ಆ ವಾಹನ ಹತ್ತದೆ ಅರ್ಧದಲ್ಲಿ ನಿಂತುಬಿಟ್ಟರೆ ಎಂಬ ಭಯ. ಜೊತೆಗೆ ನಿಂತಾಗ ತಳ್ಳಿಕೊಂಡು ಹೊರಟರೆ ಯಾರಾದರು ನೋಡಿಬಿಟ್ಟರೆ ಅವಮಾನ ಇವೆರಡರಿಂದ ತಪ್ಪಿಸಿಕೊಳ್ಳಲು ಶೆಟ್ಟರು ಸಮತಟ್ಟಾಗಿರುವ ರಸ್ತೆಯಲ್ಲಿ ಸುತ್ತಿಕೊಂಡು ಹೋಗಿ ಆಫೀಸು ತಲುಪುತ್ತಿದ್ದರು.

ಒಮ್ಮೆ ಹೀಗೆ ಹೋಗುವಾಗ ಮರಳಿದ್ದ ರಸ್ತೆಯಲ್ಲಿ ಜಾರಿಬಿದ್ದು ಎಡಗೈನ ಒಂದು ಬೆರಳಿಗೆ ಪೆಟ್ಟುಮಾಡಿಕೊಂಡು ಬ್ಯಾಂಡೇಜ್ ಹಾಕಿಕೊಳ್ಳಬೇಕಾಯಿತು. ಕೆಲಕಾಲ ಅವರು ವಾಹನ ಓಡಿಸುವುದನ್ನು ನಿಲ್ಲಿಸಿದ್ದರಿಂದ ಬೇಕಾದರೆ ಕಾಲೇಜಿಗೆ ತೆಗೆದುಕೊಂಡು ಹೋಗು ಎಂದು ಹೇಳುತ್ತಿದ್ದರು. ಬಿಡಿ, ಬೆಂಗಳೂರಲ್ಲಿ 60-70ರ ದಶಕದಲ್ಲಿ ಈ ಪರಿ ವಾಹನ ಸಂಚಾರವಿರದೆ ಮೆರವಣಿಗೆಯ ರೀತಿ ಒಬ್ಬರೇ ಯಾವ ಬಗೆಯ ವಾಹನದಲ್ಲಾದರೂ ಖುಷಿಯಾಗಿ ಸಂಚರಿಸಬಹುದಿತ್ತು. ಆದರೂ ಅವರೇ ಬಿದ್ದನಂತರ ಇದು ನನ್ನನ್ನು ಬೀಳಿಸಿಬಿಟ್ಟರೆ ಎಂಬ ಭಯ ಕಾಡತೊಡಗಿ, ಬೇಡಿ ನಾನು ಸ್ನೇಹಿತರ ಜೊತೆ ಆರಾಮವಾಗಿ ನಡೆದೇ ಹೋಗುತ್ತೇನೆ ಎಂದು ಸಬೂಬು ಹೇಳಿ ತಪ್ಪಿಸಿಕೊಂಡಿದ್ದೆ. ಕಡೆಗೆ ಅವರೂ ಆದೇಕೋ ಬಲು ಕಡಿಮೆ ಬೆಲೆಗೆ ಮಾರಾಟ ಮಾಡೇಬಿಟ್ಟರು.

ಈಗ ಅವರ ಬಳಿಯೂ ವಾಹನವಿಲ್ಲದಿದ್ದುದರಿಂದ ನನಗೆ ಬೆಂಗಳೂರಿನಲ್ಲಿದ್ದಾಗ ಜಾವಾ ಬೈಕ್‌ನ ಆಕರ್ಷಣೆ ಒಮ್ಮೊಮ್ಮೆ ಕಡಿಮೆಯಾದರೆ ಊರಿಗೆ ಹೋದಾಗ, ನಮ್ಮೂರಿಗೆ ಹತ್ತಿರವಿದ್ದ ಮೈಸೂರು ಜಾವಾ ಕಂಪನಿಯಲ್ಲಿ ಕೆಲಸದಲ್ಲಿದ್ದ ಕೆಲವರು ಜಾವಾಬೈಕ್ ಓಡಿಸಿಕೊಂಡು ಊರಿಗೆ ಹಬ್ಬಕ್ಕೆ ಬಂದಾಗ ಆಸೆ ಮತ್ತು ಚಿಗುರಿಕೊಳ್ಳುತ್ತಿತ್ತು.

ಕಳೆದ ಶತಮಾನದ 60-70ರ ದಶಕಕ್ಕೆ ಹೋದರೆ ವಾಹನಗಳ ತಯಾರಿಕೆಯು ಕೆಲವೇ ಖಾಸಗಿ ಕಂಪನಿಗಳ ಸ್ವತ್ತಾಗಿದ್ದು ಅಂಬಾಸಡರ್ ಫಿಯಟ್ ಮುಂತಾದ ಕಾರುಗಳು, ದ್ವಿಚಕ್ರ ವಾಹನ ತಯಾರಿಕೆಯಲ್ಲಿ ಜಾವಾ ಬೈಕ್ಸ್, ಎನ್‌ಫಿಲ್ಡ್, ರಾಜ್‌ದೂತ್‌ಗಳ ಜೊತೆಗೆ ಸ್ಕೂಟರ್ ಆವಿಷ್ಕಾರ ಪಡೆದನಂತರ ವೆಸ್ಪಾ, ಲ್ಯಾಂಬ್ರೆಟಾ, ಬಜಾಜ್ ಪಂಗಡದ ವಾಹನಗಳು ಏಕಸ್ವಾಮ್ಯ ಹೊಂದಿದ್ದವು.

ಓದು ಮುಗಿದ ನಂತರ ಉದ್ಯೋಗ ನಂತರ ಮದುವೆ, ಹೀಗೆ ಸಂಸಾರದ ಅಭಿವೃದ್ಧಿಕಾರ್ಯ ಕ್ರಮಗಳು ಎಲ್ಲರ ಬದುಕಿನಲ್ಲೂ ಬೆಳೆಯುತ್ತಾ ಹೋದಂತೆ ನನ್ನ ಬದುಕಿನಲ್ಲಿಯೂ ಬೆಳೆಯತೊಡಗಿತು. ಹಳ್ಳಿಬಿಟ್ಟು ತಂದೆತಾಯಿಗಳು ಬೆಂಗಳೂರಿಗೆ ಬರುತ್ತಿದ್ದಂತೆ ನನ್ನಣ್ಣನ ಮದುವೆಯಾಗಿ ನನ್ನ ಮದುವೆಯ ಪ್ರಸ್ತಾಪ ಬರತೊಡಗಿತು. ನಾನು ಇನ್ನೊಂದೆರಡು ವರ್ಷ ಬೇಡವೆಂದೆ ಒಳಗಿನ ಆಸೆ ಮದುವೆಗೆ ಮುಂಚೆ ಹಣ ಸೇರಿಸಿ ಜಾವಾಬೈಕ್‌ಕೊಳ್ಳುವುದು. ಈ ನನ್ನ ಆಸೆ ನನ್ನ ತಂದೆತಾಯಿಗಳಿಗೆ ಅದು ಹೇಗೋ ತಿಳಿದು ಅವರು ಬೈಕ್‌ಕೊಳ್ಳಲು ಬಿಲ್‌ಕುಲ್ ಒಪ್ಪಲೇ ಇಲ್ಲ. ನಂತರವೇ ತಿಳಿದದ್ದು, ಅದಾರೋ ಹಳ್ಳಿಯಲ್ಲಿದ್ದಾಗ ಬೈಕನ್ನು ಕಲ್ಲಿಗೆ ಗುದ್ದಿ ಪ್ರಾಣಕಳೆದುಕೊಂಡಿದ್ದರೆಂಬುದು. ಈ ಭಯ ತಂದೆ ತಾಯಿಗಳ ಮನಸ್ಸನ್ನು ಆಕ್ರಮಿಸಿಕೊಂಡಿತ್ತು.

ಜಾವಾ ಕಂಪನಿಯಲ್ಲಿ ದಿನ ಬೆಳಗಾದರೆ ಸ್ಟ್ರೈಕ್ ನಡೆಯುತ್ತಿದ್ದುದರಿಂದ ನನ್ನ ಆಸೆಯೂ ಜಾವಾಬೈಕ್ ಬಗ್ಗೆ ಕಡಿಮೆಯಾಗತೊಡಗಿತು. ಅಷ್ಟರಲ್ಲಿ ಸ್ಕೂಟರುಗಳು ಆಕರ್ಷಕವಾಗಿ ಕಾಣತೊಡಗಿದ್ದರಿಂದ ಒಂದು ಸೆಕೆಂಡ್ ಹ್ಯಾಂಡ್ ಸ್ಕೂಟರ್‌ಕೊಂಡೆ. ಅದು ವಿಪರೀತ ರಿಪೇರಿಗೆ ಬರುತ್ತಿದ್ದುದರಿಂದ ಮದುವೆಯ ನಂತರ ಮಾರಿಬಿಟ್ಟು ಹೊಸ ಸ್ಕೂಟರ್‌ನ್ನೇ ಕೊಳ್ಳುವುದೆಂದು ನಿರ್ಧರಿಸಿದೆ. ಆಗೆಲ್ಲ ಬಜಾಜ್ ಸ್ಕೂಟರ್‌ಗಳ ಬುಕ್ಕಿಂಗ್

ಎಂದರೆ ಎಂಟು–ಹತ್ತು ವರುಷಗಳಿಗೆ ಕಡಿಮೆ ಸಿಗುತ್ತಿರಲಿಲ್ಲ. ಹೊರಗಡೆ ಕೊಳ್ಳುತ್ತೇನೆಂದರೆ ಐದಾರು ಸಾವಿರ ರೂ. ಪ್ರೀಮಿಯಮ್ ತೆರಬೇಕಿತ್ತು. ಈಗಿನಷ್ಟು ವಿಧವಿಧವಾದ ವಾಹನಗಳ ತಯಾರಿಕೆ ಇರಲಿಲ್ಲ. ಸರಿ ಬುಕ್‌ಮಾಡಿದನಂತರ ಪ್ರತಿ ತಿಂಗಳು ಬುಕ್ಕಿಂಗ್ ಆಫೀಸ್‌ನಲ್ಲಿ ಸೀನಿಯಾರಿಟಿ ನಂಬರ್ ನೋಡುವುದು, ''ಓ! ಈ ತಿಂಗಳು 120 ವಾಹನಗಳು ಹೊರಬಂದಿವೆ. ಯಾವ ವರ್ಷ ನಮಗೆ ಸಿಗುತ್ತದೆ ಎಂದು ಲೆಕ್ಕಹಾಕುವುದು!'' ಹೀಗೆ ಮಾಡುತ್ತಾ ಮಾಡುತ್ತಾ ಕಡೆಗೆ ಏಳು ವರ್ಷಗಳ ನಂತರ ಬಜಾಜ್‌ಸೂಪರ್ ಬಂದಾಗ ಅನುಭವಿಸಿದ ಸಂತಸ ಹೇಳತೀರದಾಗಿತ್ತು.

ವಾಹನ ಕೊಂಡ ನಂತರ ಅದು ಸಲ್ಲಿಸಿರುವ ಸೇವೆಯನ್ನು ಲೆಕ್ಕವಿಡಲಾದೀತೇ? ಸಭೆ ಸಮಾರಂಭಗಳಿಗೆ ಅದು ಹೊತ್ತೊಯ್ದ ಸಾಮಾನು ಸರಂಜಾಮುಗಳಿಗೆ ಲೆಕ್ಕವಿಲ್ಲ. ನಾನು ನನ್ನ ಹೆಂಡತಿ ಹಾಗಿರಲಿ ಮಕ್ಕಳು ಮೊಮ್ಮಕ್ಕಳು ಸಂಸಾರದ ಇತರ ಸದಸ್ಯರನ್ನು ಹಗಲು ರಾತ್ರಿ ಎನ್ನದೆ ಸಂತೋಷದಿಂದ ಹೊತ್ತು ಸಾಗಿಸಿದೆ. ಮಾರ್ಗಮಧ್ಯದಲ್ಲಿ ಬೇಸರಿಸಿ ಕೆಟ್ಟು ನಿಂತು ಎಂದೂ ತೊಂದರೆ ಕೊಟ್ಟಿದ್ದಿಲ್ಲ. ಮೊನ್ನೆ ಸಿಲ್ವರ್ ಜ್ಯೂಬಿಲಿಯನ್ನು ಸಂಭ್ರಮದಿಂದ ಆಚರಿಸಿಕೊಂಡಿದೆ. ಯಾರಾದರೂ ಬಂದು ಹ್ಯಾಂಡಲ್ ತಿರುಗಿಸಿದರೆ ಅವರತ್ತ ಮುಖಮಾಡಿ ಸಂತಸದಿಂದ ಬೀಗುತ್ತದೆ. ಇಪ್ಪತ್ತೈದು ವರ್ಷಗಳು ಸತತವಾಗಿ ಚಳಿ, ಮಳೆ, ಗಾಳಿಯನ್ನು ಲೆಕ್ಕಿಸದೆ ಮಾಡಿದ ಆದರ ಸಾರ್ಥಕ ಸೇವೆಗೆ ಪ್ರತಿಫಲವೆನ್ನುವಂತೆ ಒಂದೆಡೆ ನಿಲ್ಲಿಸಿ ವಿಶ್ರಾಂತಿ ನೀಡಿದ್ದೇವೆ.

ಚಳಿ, ಮಳೆ, ಗಾಳಿಯಲ್ಲಿ ಸ್ಕೂಟರಿನಲ್ಲಿ ಸುತ್ತುತ್ತಿದ್ದ ನಮ್ಮ ದೇಹವೂ ಈಗ ವಿಶ್ರಾಂತಿಬೇಡುತ್ತದೆ. ಬೇಕೆಂದಲ್ಲಿಗೆ ಕರೆದೊಯ್ಯಲು ಸಿದ್ಧರಿರುವ ಮಕ್ಕಳ ಎ.ಸಿ. ಕಾರುಗಳಲ್ಲಿ ಸುಖವಾಗಿ ಪ್ರಯಾಣಿಸಬಹುದಾಗಿದೆ. ಒಂದೆಡೆ ನಿಂತಿರುವ ಬಜಾಜ್ ಸೂಪರ್ ಸ್ಕೂಟರ್ ನಮ್ಮೆಲ್ಲರ ಸುಖ ಶಾಂತಿಯನ್ನು ನೋಡಿ ಕಣ್ತುಂಬ ತುಂಬಿ ಕೊಳ್ಳುತ್ತಿದೆ.



# (ಸರಿ ಬೆಸದ ಸಾಂಗತ್ಯ) ಸರಿ - ಬೆಸ ಎಷ್ಟು ಸರಿ?

● ಕೃಷ್ಣ ಸುಬ್ಬರಾವ್

**ಭಾ**ರತೀಯರು ಬದಲಾವಣೆಗೆ ಸಲೀಸಾಗಿ ಬಾಗುವುದಿಲ್ಲ ಎಂಬ ಅಭಿಪ್ರಾಯವನ್ನು ದೆಹಲಿಯ ನಾಗರಿಕರು ಸುಳ್ಳಾಗಿಸಿದ್ದಾರೆ. ಸಂಚಾರ ದಟ್ಟಣೆಯಿಂದಾಗಿ ಪರಿಸರ ಹಾಳಾಗುತ್ತಿರುವುದನ್ನು ತಡೆದು, ಕಮ್ಮಿ ಮಾಡಲು ಹೊಸದೊಂದು ಸೂಕ್ತ ಪರಿಹಾರ ಕಂಡು ಪ್ರಯೋಗಕ್ಕೆ ಅಣಿಯಾದರು. ಯಶಸ್ವಿಯಾಗಿ ಸರಿ ಬೆಸ ಸಂಖ್ಯೆಯ ವಾಹನದ ಸರದಿ ಪದ್ಧತಿಯನ್ನು ಶಾಶ್ವತವಾಗಿ ಜಾರಿಗೊಳಿಸಲು ಕಾದು ಕುಳಿತಿದ್ದಾರೆ.

ಹುಟ್ಟಿನಿಂದಲೂ ನಾವು ಸರಿ ಬೆಸ ಸಂಖ್ಯೆಯೊಡನೆ ಅವಿನಾಭಾವ ಸಂಬಂಧ ಇಟ್ಟುಕೊಂಡೇ ಬಂದಿದ್ದೇವೆ. ಸರಿ ಬೆಸದ ಸಾಂಗತ್ಯದ ಸವಿಯನ್ನುಂಡೇ ಬದುಕಿದ್ದೇವೆ. ಜನ್ಮ ಪಡೆಯಲು ಒಂಬತ್ತು ತಿಂಗಳು ಕಾದಿದ್ದೇವೆ. ಆದರೆ ಹುಟ್ಟುವ ದಿನ ಬೆಸ ಸಂಖ್ಯೆಯದೋ ಇಲ್ಲ ಸಮ ಸಂಖ್ಯೆಯದೋ ಖಾತರಿಯಿರೋದಿಲ್ಲ (ಸಿಸೆರಿಯನ್ ಮಾಡಿಸಿಕೊಂಡವರನ್ನು ಹೊರತಾಗಿ) ಬೆಸ ಅಷ್ಟು ಒಳ್ಳೆಯದಲ್ಲ, ಸಮಸಂಖ್ಯೆ ಒಳ್ಳೆಯದು ಎಂಬ ಮೂಢನಂಬಿಕೆ ಅನೇಕರಿಗಿದೆ. ಸಂಗೀತದ ಸ್ವರ ಏಳು ಬಣ್ಣಗಳು ಏಳಾದರೂ ವ್ಯಾಪಾರಿಗಳು ಅಳತೆ ಮಾಡುವಾಗ ಸೇರಿನಲ್ಲಿ ಅಳೆಯುವಾಗ ಏಳು ಅನ್ನುವಾಗಲೆಲ್ಲ ಆರು ಮತ್ತೊಂದು ಎಂದು ಹೇಳುವುದನ್ನು ಕೇಳಿದ್ದೇವೆ. ಮನುಷ್ಯರ ಲೆಕ್ಕಾಚಾರವೇ ವಿಚಿತ್ರ. ಕೆಲವುದಕ್ಕೆ ಬೆಸಸಂಖ್ಯೆಯೇ ಬೇಕು, ಮತ್ತೆ ಕೆಲವಕ್ಕೆ ಸಮಸಂಖ್ಯೆ. ದೇವರಿಗೆ ಕಾಣಿಕೆ ಕೊಡುವಾಗ ದಾನ ಕೊಡುವಾಗ ಯಾರಿಗಾದರೂ ಮುಂಗಡ ಹಣ ಕೊಡುವಾಗ ನೂರು ರೂಪಾಯಿಗೆ ಒಂದು ರೂಪಾಯಿ ಸೇರಿಸಿ ಕೊಡುತ್ತೇವೆ. ಬೆಸ ಸಂಖ್ಯೆಯಲ್ಲಿರುವ ತಾಕತ್ತು ಸಮಸಂಖ್ಯೆಗಿಲ್ಲ ಎನ್ನುವುದಕ್ಕೆ ನೂರರ ಸಂಖ್ಯೆಯ ಕೌರವರನ್ನು ಪಂಚ ಪಾಂಡವರು ಸೋಲಿಸಿದ ಉದಾಹರಣೆ ನೀಡುತ್ತೇವೆ.

ಚಿಕ್ಕಂದಿನಿಂದಲೇ ಹುಣಸೆಬೀಜವನ್ನು ಅಂಗೈಲಿ ಮುಚ್ಚಿಕೊಂಡು ಸರಿಯೋ ಬೆಸವೋ ಎಂದು ಕೇಳುವ ಆಟವನ್ನು ಆಡುತ್ತಾ ಬೆಳೆದವರು ನಾವು. ಸರಿಯಾಗಿ ಹೇಳಿದವರಿಗೆ ಕೈಯಲ್ಲಿ ಮುಚ್ಚಿಟ್ಟುಕೊಂಡ ಬಿತ್ತಗಳನ್ನು ಕೊಟ್ಟು ಬಿಡುತ್ತಿದ್ದೆವು. ಪರಮಪದಸೋಪಾನ

> ರವಿ ಕಾಣದುದನ್ನು ಕವಿ ಕಂಡಿರಬಹುದು ಕವಿ ಕಾಣದುದನ್ನು
> ಎಕ್ಸ್‌ರೆಯಲ್ಲಿ ಕಾಣಬಹುದು.

ಪಟ, ಪಗಡೆ ಹಾಗೂ ಚೌಕಾಭಾರ ಎಲ್ಲ ವಯಸ್ಸಿನವರಿಗೂ ಗೃಹಕ್ರೀಡೆ. ಐದು ಮನೆ ಅಥವಾ ಏಳು ಘಟ್ಟದ ಆಟದ ಯಶಸ್ಸಿನ ಕೈವಾಡ ಕವಡೆಯದು. ಕವಡೆಗೂ ಕಿಮ್ಮತ್ತು ಕೊಡುವ ಏಕೈಕ ಆಟ ಚೌಕಾಭಾರ ಬಾಳಿನಾಟದ ಭವಿಷ್ಯ ತಿಳಿಯಲು ಕವಡೆಯ ಗರ ಮುಖ್ಯ. ಬೇಕಾದಾಗ ನಮಗೆ ಅಗತ್ಯವಿರುವ ಗರ ಬೀಳದೆ ನಾವು ಗರಬಡಿದವರ ಹಾಗೆ ಕುಳಿತಿರುತ್ತೇವೆ. ನಮ್ಮ ಕಾಯಿಗಳು ಹಣ್ಣಾಗಲು ಮುಕ್ತದ್ವಾರದಲ್ಲಿ ಕಾಯುತ್ತಾ ಕುಳಿತಿದ್ದಾಗ ಬೀಳಬೇಕಾದ 'ಒಂದು' ಬೀಳದೆ ಸಮಸಂಖ್ಯೆಯ ಹೆಚ್ಚಿನ ಗರ ಬಿದ್ದು ಸತಾಯಿಸುತ್ತಿರುತ್ತೆ.

ಒಂಟಿ ಇದ್ದರೆ ಅಪಾಯ, ಜೋಡಿ ಇದ್ದರೆ ಕ್ಷೇಮವೆಂದು ಆಟದಲ್ಲಿ. ನಿಜಜೀವನದಲ್ಲಿ ಜೋಡಿ ಮಾಡುವ ಕಾತುರ ಜನಗಳಿಗೆ, ಜೋಡಿ ಬಿಟ್ಟು ಮತ್ತೆ ಒಂಟಿಯಾಗುವುದನ್ನು ಕಾಣುತ್ತಿದ್ದೇವೆ. ಒಟ್ಟಿನಲ್ಲಿ ಒಂಟಿ-ಜಂಟಿಯ ಜಟಾಪಟಿಯೊಡನೆ ಬಾಳುವುದು ಅನಿವಾರ್ಯ. ಬೆಸಸಂಖ್ಯೆಗಳನ್ನು ಬೆಸೆದು ಸಮಮಾಡುವುದೇ ಸಮನ್ವಯವಲ್ಲವೆ? ಸಂಖ್ಯಾಬಲದ ಮೂಲಕವೇ ಅಧಿಕಾರ ಹಿಡಿಯುವ ರಾಜಕಾರಣಿಗಳಿಗೆ ತಮಗೆ ಬೇಕಾದಾಗ ಬೆಸ ಸಂಖ್ಯೆಯನ್ನು ಅಥವಾ ಸಮಸಂಖ್ಯೆಯನ್ನು ಬಳಸಿಕೊಳ್ಳುತ್ತಾರೆ. ಮುಖ್ಯಮಂತ್ರಿಗಳಿಗೆ ಆಪ್ತರೊಬ್ಬರನ್ನು ಸಂಪುಟದಲ್ಲಿ ಸೇರಿಸಿಕೊಳ್ಳಲು ಅಥವಾ ತಮಗೆ ಆಗದವರನ್ನು ಮಂತ್ರಿಮಂಡಲದಿಂದ ಕಿತ್ತುಹಾಕಲು ಸರಿ ಬೆಸ ಸಂಖ್ಯೆಯ ನೆವವೊಡ್ಡುತ್ತಾರೆ. ಬಹುಮತ ಸಾಧಿಸಲು ವಿಫಲರಾದಾಗ ಫಿಫ್ಟಿ-ಫಿಫ್ಟಿ ಆಧಾರದ ಮೇಲೆ ಸರದಿ ಪ್ರಕಾರ ಸರ್ಕಾರ ನಡೆಸಲು ಹವಣಿಸುತ್ತಾರೆ. ಆದರೆ ಅಧಿಕಾರ ಹಸ್ತಾಂತರ ಸಮಯ ಬಂದಾಗ ಕುರ್ಚಿಬಿಡುವುದಿಲ್ಲ. ಹೀಗಾಗಿ ಸಮಸಂಖ್ಯೆಯನ್ನು ರಾಜಕೀಯ ಧುರೀಣರೂ ನಂಬುವುದಿಲ್ಲ.

ಸ್ಕೂಲಿಗೆ ಸೇರುತ್ತಲೆ ಗುಂಪುಗಾರಿಕೆ ಶುರುವಾಗುತ್ತದೆ. ಶಿಕ್ಷಕರೆ ವಿದ್ಯಾರ್ಥಿಗಳನ್ನು ಸಾಲಾಗಿ ನಿಲ್ಲಿಸಿ 'ಒಂದು' 'ಎರಡು' ಹೇಳಿಸಿ 'ಒಂದು' ಹೇಳಿದವರನ್ನೆಲ್ಲ ಒಂದು ಗುಂಪು ಮಾಡಿ 'ಎರಡು' ಹೇಳಿದವರನ್ನೆಲ್ಲ ಮತ್ತೊಂದು ಗುಂಪು ಮಾಡುತ್ತಾರೆ. ಕೈಲಾಸಂನವರ ಪೋಲಿಕಿಟ್ಟಿ ಸ್ಕೂಲಿನ ಆವರಣಕ್ಕೆ ತಡವಾಗಿ ಬಂದು ಶಿಕ್ಷಕರಿಗೆ ''ಸಾರ್ ನಾನು ಆಡುಗಳ ಜೊತೆಗೆ ಸೇರಿಕೊಳ್ಳಲಾ?'' ಎಂದು ಕೇಳುತ್ತಾನೆ. ಇಂಗ್ಲಿಷ್‌ನ 'ಆಡ್' (odd) ಗುಂಪಿಗೆ ಸೇರೋದಕ್ಕೆ ಅಪ್ಪಣೆ ಪಡೆದುಕೊಳ್ಳುತ್ತಾನೆ. ಬೆಸ ಸಂಖ್ಯೆಯ ಗುಂಪು ಎಂಬುದು ಒಂದರ್ಥವಾದರೆ ವಿದ್ಯಾರ್ಥಿಗಳನ್ನು ಕುರಿಮಾಡುವ ಶಿಕ್ಷಣ ಪದ್ಧತಿಯನ್ನು ಟೀಕಿಸಲು ಆಂಗ್ಲಭಾಷೆಯ 'ಆಡ್' ಕನ್ನಡದ 'ಆಡು'ಗಳಾಗಿ ಮಾರ್ಪಟ್ಟಿದ್ದು ಕೈಲಾಸಂರವರ ಕುಹಕವೆಂದು ಅನಿಸುವುದಿಲ್ಲವೇ. ಸಂಖ್ಯೆಗೆ ತನ್ನದೆ ಮಹತ್ವವಿಲ್ಲ ನಾವು ಕೊಟ್ಟ ಸ್ಥಾನ ಅದಕ್ಕೆ ಎಂಬ ವಿಚಾರವು ಇದೆ. ಈ ರೀತಿಯ 'ಗುಂಪುಗಾರಿಕೆ' ದೊಡ್ಡ ದೊಡ್ಡ ಮ್ಯಾನೇಜ್‌ಮೆಂಟ್ ತರಬೇತಿ ಕೇಂದ್ರಗಳಲ್ಲೂ ಜಾರಿಯಲ್ಲಿದೆ. ಗುಂಪಿನ ಚರ್ಚೆಗೆ ಹೆಚ್ಚು ಒತ್ತು ನಾಯಕನನ್ನು ಗುರುತಿಸುವ ವಿಧಾನವೂ ಹೌದು ಒಟ್ಟಿನಲ್ಲಿ ಸಂಖ್ಯೆಯು ನಮ್ಮಲ್ಲಿ ಗುಂಪುಗಾರಿಕೆ ಹುಟ್ಟಿಸುತ್ತದೆ.

ನಮ್ಮ ಟೈಂ ಸರಿಯಿಲ್ಲ ಎಂದು ಆಗಾಗ್ಗೆ ಹೇಳುತ್ತಿರುತ್ತೇವೆ. ಆದರೆ ಕಾಲದ ಆಳತೆಯು 'ಸರಿ'ಯಾಗಿರುತ್ತೆ, ಅರ್ಥಾತ್ ಸಮಸಂಖ್ಯೆಯಲ್ಲಿರುತ್ತೆ. ದಿನಕ್ಕೆ ಇಪ್ಪತ್ನಾಲ್ಕು ಗಂಟೆ, ಗಂಟೆಗೆ 60 ನಿಮಿಷ ನಿಮಿಷಕ್ಕೆ 60 ಸೆಕೆಂಡು ಆದರೆ ನಮ್ಮ ವಾರ, ವರ್ಷ 'ಸರಿ'ಯಿರೊಲ್ಲ. ವಾರಕ್ಕೆ ಏಳು ದಿನ ವರ್ಷಕ್ಕೆ 365 ದಿನಗಳು ದೆಹಲಿಯಲ್ಲಿ ಬೆಸ ಸರಿ ಸಂಖ್ಯೆ ವಾಹನಗಳು ಸರದಿ ಪ್ರಕಾರ ಓಡಾಡುವಲ್ಲಿ ಸಮಾನತೆ ಸಾಧಿಸಬೇಕಾದರೆ ಭಾನುವಾರದಂದು ಸರಿ ಬೆಸ ಎರಡೂ ಸಂಖ್ಯೆಯ ವಾಹನಗಳು ಓಡಾಡಬೇಕು ಅಥವಾ ಎಲ್ಲ ವಾಹನಗಳನ್ನು ನಿಷೇಧಿಸಬೇಕು. ಅದೇ ಸಾಮಾಜಿಕ ನ್ಯಾಯ. ತಿಂಗಳಲ್ಲಿ ಕೆಲವಕ್ಕೆ 30 ದಿನಗಳು ಮತ್ತೆ ಕೆಲವಕ್ಕೆ 31 ದಿನಗಳು ಹಾಗಾಗಿ ಸರಿ ಬೆಸ ಸಂಖ್ಯೆಗಳು ಒಂದಕ್ಕೊಂದು ಅಂಟಿಕೊಂಡೇ ಇರುತ್ತೆ ಎನ್ನುವುದಕ್ಕೆ ಇದಕ್ಕಿಂತ ಉತ್ತಮ ಉದಾಹರಣೆ ಬೇಕೆ?

ದೆಹಲಿ ಪ್ರಯೋಗದಲ್ಲಿ ಜನಸಾಮಾನ್ಯನಿಗೆ ಆಗಿರುವ ಲಾಭನಷ್ಟಗಳ ಬಗ್ಗೆ ದೃಷ್ಟಿಹರಿಸಬೇಕು. ಏಕೆಂದರೆ ಮುಂದೆ ಅದು ನಮ್ಮ ನಗರದಲ್ಲೂ ಜಾರಿಯಾಗಬಹುದು. ನಾವು ಈಗಲೇ ತಯಾರಿ ಮಾಡಿಕೊಳ್ಳುವುದು ಬುದ್ಧಿವಂತಿಕೆಯಲ್ಲವೆ? ಸರಿ ಬೆಸ ಸಂಚಾರ ಪದ್ಧತಿಯಿಂದಾಗಿ ಕೆಲವು ಒಲವಿನ ಹಕ್ಕಿಗಳು (ಲವ್‌ಬರ್ಡ್ಸ್) ಬೇರೆ ಬೇರೆ ಆಯಿತಂತೆ. ಹೇಳಿದ ದಿನ ಭೇಟಿಯಾಗಲು ಅವರ ವಾಹನದ ನಂಬರ್ ಪ್ಲೇಟ್ ಅಡ್ಡಿಯಾಯಿತಂತೆ. ಅನುಕೂಲಕರ ಸಂಖ್ಯೆಯ ವಾಹನದ ಒಡೆಯ ಪ್ರೇಯಸಿಯ ಒಡೆಯನಾದ ದೃಷ್ಟಾಂತಗಳಿವೆ. ಈ ರಾಕೆಟ್‌ಯುಗದಲ್ಲಿ ಕಾಯುವ ಸಂಯಮ ಯಾರಿಗೂ ಇಲ್ಲವಂತೆ. ಆದರೆ ಕೆಲವು ಗಟ್ಟಿಗಿತ್ತಿ ಹೆಣ್ಣುಗಳು ತಮಗೆ ದೊರೆತ ರಿಯಾಯಿತಿಯಿಂದಾದ ಹುಡುಗನ ಕಾರನ್ನು ತಾವೇ ಪಡೆದು ತಮ್ಮ ಹಕ್ಕನ್ನು ಚಲಾಯಿಸುತ್ತಾ ವಾಹನವನ್ನು ಚಲಾಯಿಸಿದರಂತೆ.

ಸರಿ ಬೆಸ ಪದ್ಧತಿಯ ಫಲಾನುಭವಿಗಳೆಂದರೆ ತಡವಾಗಿ ಮನೆ ತಲುಪುವ ಗಂಡಂದಿರಿಗೆ 'ಹೊಸ ಕುಂಟನೆಪ' ಸಿಕ್ಕಿತಂತೆ. ಮನೆ ಕಟ್ಟುವ ಕಂಟ್ರಾಕ್ಟರು, ರಿಪೇರಿ ಕೆಲಸ ಮಾಡಲು ಒಪ್ಪಿಕೊಂಡ ಕರ್ಮಿಗಳು ಸುನಾಯಾಸವಾಗಿ ಹೊಸಪದ್ಧತಿಯಿಂದಾಗಿ ತಮ್ಮ ಅಸಹಾಯಕತೆಯನ್ನು ಸೂಚಿಸಿ ದಿನದೂಡುವ ಕೈಂಕರ್ಯಕ್ಕೆ ಕೈ ಹಾಕಬಹುದು. ಒಂದು ದಿನ ತಪ್ಪಿದರೆ 'ನಾಳೆ' ಬರುತ್ತೇನೆ ಎನ್ನುವ ಬದಲು 'ನಾಡಿದ್ದು' ಎನ್ನುವ ಪಲ್ಲವಿ ಹಾಡಬಹುದು.

ಸೃಷ್ಟಿಯಲ್ಲಿ ನಮಗೆ ಕಣ್ಣು, ಕಿವಿ, ಕಾಲು, ಕಿಡ್ನಿ ಎಲ್ಲವನ್ನು ಎಲ್ಲರಿಗೂ ಸಮನಾಗಿ ಕೊಡದಿದ್ದರೂ ಸಮಸಂಖ್ಯೆಯಲ್ಲಿ ಎರಡೆರಡು ಕೊಟ್ಟಿದ್ದಾನೆ ಭಗವಂತ. ಬಾಯಿ, ನಾಲಗೆ, ಮೂಗು, ಹೃದಯ ಒಂದೊಂದನ್ನೆ ದಯಪಾಲಿಸಿದ್ದಾನೆ. ಸರಿಬೆಸಗಳ ಸಮನ್ವಯ ನಮ್ಮ ದೇಹದಲ್ಲೇ ಇದೆ. ಒಂದು ವೇಳೆ ದೇವರೇನಾದರೂ ದೆಹಲಿ ಪ್ರಯೋಗದಿಂದ ಪ್ರೇರಿತನಾಗಿ ನಮ್ಮ ಅಂಗಾಂಗಳ ಕೆಲಸವನ್ನು ಸರಿ ಬೆಸದ ಪ್ರಕಾರ ಸರದಿ ಆಧಾರದ ಮೇಲೆ ನಿರ್ವಹಿಸುವಂತೆ ಮಾಡಿದರೆ ಗತಿ?

# ಪರ್ವತ ಪತ್ನಿಯ ಯೋಗಾಭ್ಯಾಸ

• ಅನಿತಾ ನರೇಶ್ ಮಂಚಿ

ಅವರ ಹೆಸರು ಪಾರ್ವತೀಪತಿಯೆಂದು ಗೊತ್ತಿದ್ದದ್ದು ಪೋಸ್ಟ್ ಮ್ಯಾನ್ ಮತ್ತು ಅವರು ಕೆಲಸ ಮಾಡುತ್ತಿದ್ದ ಆಫೀಸಿನ ಬಾಸ್ ಇಬ್ಬರಿಗೇ. ಅವರು ಕೂಡಾ ಆ ಹೆಸರನ್ನು ಕೊಂಚ ತಿರುಚಿ 'ಪರ್ವತ ಪತಿ' ಎಂದು ನಗೆಯಾಡುತ್ತಿದ್ದುದು ಪಾರ್ವತೀಪತಿಯವರಿಗೆ ತಿಳಿಯದ ವಿಷಯವೇನೂ ಆಗಿರಲಿಲ್ಲ. ನಮಗಂತೂ ಅವರ ಹೆಸರು 'ನಾಮ್ ಕೇ ವಾಸ್ತೆ' ಮಾತ್ರ ಬೇಕಾಗುವುದರಿಂದ ನಾವು ಆ ಹೆಸರನ್ನು ಬಬ್ಬಲ್ ಗಮ್ಮಿನಂತೆ ಅಷ್ಟುದ್ದ ಎಳೆಯದೇ 'ಪಿ.ಪಿ.' ಎಂದು ಶಾರ್ಟ್ ಆಗಿ ಕರೆಯೋಣ.

**ಹೆಂಡತಿಯನ್ನು ಯಾವುದಾದರೂ ಒಂದು ವಿಷಯದಲ್ಲಾದರೂ ತನ್ನದೇ ಲೆವೆಲ್ಲಿಗೆ ಇಳಿಸಿಬಿಡುವ ಹುನ್ನಾರ ಗಂಡನದು**

ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತ ಈಗ ಹಲವು ವಿಷಯಗಳಲ್ಲಿ ಸುದ್ದಿ ಮಾಡುತ್ತಿದ್ದು ಸದ್ಯದ ಸುದ್ದಿಯಾಗಿ ನಮ್ಮ ಅತ್ಯಮೂಲ್ಯ ವಿದ್ಯೆಯಾದ ಯೋಗಕ್ಕೊಂದು ದಿನವನ್ನು ಗುರುತಿಸಿ ಆ ದಿನವನ್ನು ವಿಶ್ವವೆಲ್ಲಾ ಯೋಗ ದಿನವನ್ನಾಗಿ ಆಚರಿಸುವಂತೆ ಮಾಡಿದ್ದು ಸಣ್ಣ ಸಾಧನೆಯೇನೂ ಅಲ್ಲ.

ಯೋಗ ದಿನಕ್ಕೂ ಪಿ.ಪಿ.ಗೂ ಏನ್ರೀ ಸಂಬಂಧ ಅಂತ ಹರಿ ಹಾಯಬೇಡಿ. ಪಿ.ಪಿ. ಸುದ್ದಿಯನ್ನು ಏಕಾಏಕಿ ಬಿಟ್ಟು ಯೋಗದ ವಿಷಯವನ್ನು ಎಳೆದು ತಂದಿದ್ದಕ್ಕೆ ಸಕಾರಣವಿದೆ. ನಿಮಗೆ ಮೊದಲೇ ತಿಳಿಸಿದಂತೆ ಅವರ ಹೆಸರು ಗೊತ್ತಿರುವವರ ಬಗ್ಗೆ ಹೇಳಿದೆ. ಹಾಗಾದ್ರೆ ಉಳಿದವರು ಅವರನ್ನು ಯಾವ ಹೆಸರಿನಲ್ಲಿ ಗುರುತಿಸುತ್ತಾರೆ ಎಂಬ ಕುತೂಹಲ ನಿಮ್ಮಲ್ಲೂ ಮೂಡಿರಬೇಕಲ್ಲ. ಅವರನ್ನು ಜನ ಗುರುತಿಸುವುದು ಸರಸೋತಮ್ಮನ ಗಂಡ ಎಂಬ ಹೆಸರಿನಲ್ಲಿ. ಇದಕ್ಕೂ ಕಾರಣವಿದೆ. ಗಂಡ ಹೆಂಡತಿ ಜೊತೆಯಾಗಿ ಹೋದರೆ ಹತ್ತು ಎಂದು ಬರೆದಂತೆ ಕಾಣುವ ಜೋಡಿ ಜೀವಗಳಿವು. ಸರಸೋತಮ್ಮ ಸುಮೋ ಪೈಲ್ವಾನರನ್ನು ನಾಚಿಸುವಂತೆ ಬರೋಬ್ಬರಿ ನೂರಾ ಎಂಟು ಕೆ.ಜಿ. ತೂಕವೂ, ಐದೂವರೆ ಅಡಿ ಉದ್ದವೂ ಉದ್ದಕ್ಕೆ ಸರಿಯಾಗಿ ಮೂರೂವರೆ ಅಡಿ ಅಗಲವನ್ನೂ ಹೊಂದಿದ ಭೂಮಿ ತೂಕದ

*ಸಂಗೀತ ಕಳಾನಿಧಿಯವರು ನಾಲ್ಕು ತಾಸು ಹಾಡಿದಾಗ ಕೇಳುತ್ತಿದ್ದವರ ಹೊಟ್ಟೆ ತಪ್ಪದೆ ತಾಳ ಹಾಕುತ್ತಿತ್ತು.*

ಹೆಂಗಸಾದರೆ ಪಿ.ಪಿ. ಯವರದ್ದು ನೇರ ಅಡಿಕೆ ಮರದಂತಹ ರಚನೆ ಹೊಂದಿದ ಆರಡಿ ಉದ್ದದ ಅರ್ಧ ಅಡಿ ಅಗಲದ ಶರೀರ.

ತಮ್ಮನ್ನು ಹೆಂಡತಿಯ ಹೆಸರಿನಲ್ಲಿ ಗುರುತಿಸುವುದಕ್ಕೆ ಪಿ.ಪಿ. ಯವರ ವಿರೋಧವಿದ್ದರೂ ಅದನ್ನು ಸರಸೋತಮ್ಮನ ಎದುರಿನಲ್ಲಿ ಪ್ರದರ್ಶಿಸುವ ಧೈರ್ಯ ಅವರಲ್ಲಿರಲಿಲ್ಲ. ಯಾಕೆಂದರೆ ಸರಸೋತಮ್ಮನ ಅಪ್ಪ ತಮ್ಮ ಮಗಳನ್ನು ಕೊಟ್ಟು ಆಸ್ತಿಯನ್ನು ಕೊಟ್ಟು ಉದ್ಯೋಗ ತೆಗೆಸಿಕೊಟ್ಟು ಪಿ.ಪಿ. ಯವರನ್ನು ಉದ್ಧರಿಸಿದ ಉದಾರ ಪುರುಷರಾಗಿದ್ದ ಕಾರಣ ಪಿ.ಪಿ.ಯವರ ಗಂಟಲಿನಿಂದ ಸ್ವರ ಹೊರಡುವಂತಿರಲಿಲ್ಲ.

ತಮ್ಮ ಹೆಂಡತಿಯನ್ನು ಯಾವುದಾದರೂ ಒಂದು ವಿಷಯದಲ್ಲಾದರೂ ತಮ್ಮದೇ ಲೆವೆಲ್ಲಿಗೆ ಇಳಿಸಿಬಿಡುವ ಹುನ್ನಾರ ಪಿ.ಪಿ. ಯವರದ್ದು. ಅದಕ್ಕೆಂದು ಅವರು ಆಯ್ದುಕೊಂಡದ್ದು ಈ ಮಾರ್ಗ. ದೈಹಿಕವಾಗಿ ಅವರನ್ನು ಕುಗ್ಗಿಸಿದರೆ ಮತ್ತೆ ನಿಧಾನಕ್ಕೆ ಬಗ್ಗಿಸಬಹುದು ಎಂದುಕೊಂಡಿದ್ದರೇನೋ. ಆದರೆ ಸರಸೋತಮ್ಮನ ತೂಕ ಇಳಿಸಲು ಪಿ.ಪಿ. ಯವರು ಪಡಬಾರದ ಕಷ್ಟಗಳನ್ನೆಲ್ಲಾ ಪಟ್ಟು ತಮ್ಮ ತೂಕ ಇಳಿಸಿಕೊಂಡು ಬಿ.ಪಿ. ಏರಿಸಿಕೊಂಡಿದ್ದರು.

ಇದೀಗ ವಿಶ್ವವೇ ಆಚರಿಸುವ ಯೋಗ ದಿನವನ್ನು ತಮ್ಮ ಹೆಂಡತಿಯ ಆರೋಗ್ಯದ ಹೆಸರಿನಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳುವುದಕ್ಕಾಗಿ ಬಳಸಿಕೊಳ್ಳುವ ಯೋಜನೆ ಪಿ.ಪಿ. ಯವರದ್ದು. ಆ ದಿಕ್ಕಿನಲ್ಲಿ ಕಾರ್ಯೋನ್ಮುಖರಾದರು.

ಸರಸೋತಮ್ಮ ಅನಿವಾರ್ಯ ಕಾರಣಗಳಿಂದ ಟಿ.ವಿ.ಯ ಮುಂದಿನಿಂದ ಎದ್ದಾಗ ಅಲ್ಲಿದ್ದ ರಿಮೋಟನ್ನು ಹಿಡಿದು ಯೋಗದ ಚಾನೆಲ್ಲಿಗೆ ತಿರುಗಿಸುತ್ತಿದ್ದರು. ಮರಳಿ ಬಂದು ತನ್ನ ಕುರ್ಚಿಯನ್ನಲಂಕರಿಸುವ ಆಕೆ ಅದನ್ನು ಒಮ್ಮೆ ನೋಡಿದಂತೆ ಮಾಡಿ ಕೂಡಲೇ ತನ್ನ ಅಳುಬುರುಕ ಸೀರಿಯಲ್ ಬರುವ ಚಾನೆಲ್ಲಿಗೆ ಹಾಕುತ್ತಿದ್ದರು. ಆದರೆ ಪಿ.ಪಿ. ಯವರ ಸತತ ಪ್ರಯತ್ನಗಳ ಫಲವೇನೋ ಎಂಬಂತೆ ಒಂದು ದಿನ ಆಕೆ ಯೋಗ ಕಾರ್ಯಕ್ರಮದ ಚಾನೆಲ್ಲನ್ನು ಬದಲಾಯಿಸದೇ ನೋಡತೊಡಗಿದರು.

ಅದೇ ದಿನ ಶಾಪಿಂಗಿಗೆ ಪಿ.ಪಿ. ಯವರನ್ನು ಎಳೆದೊಯ್ದ ಸರಸೋತಮ್ಮ ಮರಳಿ ಬರುವಾಗ ಒಂದಕ್ಕೆ ಮೂರರಷ್ಟು ಕ್ರಯ ಕೊಟ್ಟು ಕೊಂಡುಕೊಂಡ ಯೋಗ ಮಾಡಲೆಂದೇ ಇರುವ ಡ್ರೆಸ್‌ಗಳ ಕಟ್ಟು ಹೊತ್ತ ಪಿ.ಪಿ. ಬಸವಳಿದು ಬೆಂಡಾಗಿದ್ದರು.

ಆದರೇನು? ಯಾರು ಹೆಂಡತಿಯನ್ನು ಪ್ರೀತಿಸುತ್ತಾರೋ ಅವರು ಯೋಗ ಡ್ರೆಸ್ ತೆಗೆಸಿಕೊಡುತ್ತಾರೆ ಎಂಬ ಹೊಸ ಟ್ಯಾಗ್ ಲೈನ್‌ನ ಅಡಿಯಲ್ಲಿ ಖರೀದಿಸಿದ ಬಟ್ಟೆಗಳಾದ ಕಾರಣ ಗಂಡನ ಬಗ್ಗೆ ಹೆಮ್ಮೆ ತಾಳಿದ ಸರಸೋತಮ್ಮನ ಪ್ರಸನ್ನ ಚಿತ್ತ ಅವರನ್ನೂ ಪ್ರಸನ್ನವಾಗಿಸಿತ್ತು.


ಹೀಗಾದರೂ ಸರಿ ಅವಳು ಯೋಗ ಮಾಡಿ ನನ್ನಂತೆ ಜೀರೋ ಸೈಜಿಗೆ ಬಂದರೆ ಎಂಬ ಹೊಸ ಕನಸು ಪಿ.ಪಿ. ಯವರನ್ನು ಹಗಲು ಇರುಳು ಕಾಡತೊಡಗಿತು.

ವಿಶ್ವ ಯೋಗ ದಿನದಂದು ನೀನು ಕೂಡಾ ಯೋಗ ಮಾಡಲು ಪ್ರಾರಂಭಿಸಿದರೆ ಅದೊಂದು ಐತಿಹಾಸಿಕ ದಾಖಲೆಯಾಗಿ ಉಳಿಯುತ್ತದೆ. ಎಂದು ಪಿ.ಪಿ. ಯವರೂ ತಮ್ಮ ಹೆಂಡತಿಯನ್ನು ಹುರಿದುಂಬಿಸಿದರು. ಬಾಯಲ್ಲಿರುವ ಹುರಿಗಾಳಿನಿಂದಾಗಿ ಮಾತನಾಡಲು ಸಾಧ್ಯವಾಗದೇ ಉದ್ದುದ್ದಕ್ಕೆ ತಲೆ ಆಡಿಸಿದ ಹೆಂಡತಿಯನ್ನು ಕಂಡು ಪಿ.ಪಿ.ಗೆ ಸಮಾಧಾನವಾಯಿತು.

ಹೆಂಡತಿಗೆ ಇನ್ನಷ್ಟು ಉತ್ತೇಜನ ನೀಡಲು ತಾವೂ ಆ ದಿನದಿಂದ ಯೋಗಾಭ್ಯಾಸ ಪ್ರಾರಂಭಿಸುವುದಾಗಿ ಹೇಳಿದರು.

ಬೆಳ್ಳಂಬೆಳಗ್ಗೆಯೇ ಎದ್ದು ನಿತ್ಯ ವಿಧಿಗಳನ್ನು ಪೂರೈಸಿ ಖಾಲಿ ಹೊಟ್ಟೆಯಲ್ಲಿ ಪಿ.ಪಿ. ಸಿದ್ಧವಾದರೆ ಸರಸೋತಮ್ಮನವರು ತಮ್ಮ ಮೈಯನ್ನು ಹೇಗೋ ಹೊಸ ಬಟ್ಟೆಯೊಳಗೆ ತೂರಿಸಿಕೊಂಡು ಮುನ್ನಾದಿನವೇ ತಂದಿಟ್ಟದ್ದ ಬ್ರೆಡ್ಡಿಗೆ ಒಂದಿಷ್ಟು ಬೆಣ್ಣೆ, ಒಂದಷ್ಟು ಜ್ಯಾಮ್ ಸವರಿ ತಟ್ಟೆಯ ಮೇಲೆ ಪೇರಿಸಿದರು. ಪಕ್ಕದಲ್ಲೇ ಒಂದು ದೊಡ್ಡ ಚೆಂಬು ತುಂಬುವಷ್ಟು ಕಾಫಿಯನ್ನೂ ಇರಿಸಿಕೊಂಡರು. ಟಿ.ವಿ. ಆನ್ ಮಾಡಿ ಯೋಗ ಕಾರ್ಯಕ್ರಮ ಆರಂಭ ಆದೊಡನೆ ಸೋಫಾದ ಮೇಲೆ ಕಾಲು ಚಾಚಿ ಬ್ರೆಡ್ ತಿನ್ನುತ್ತಾ ಕಾಫಿ ಕುಡಿಯುತ್ತಾ ಮಂತ್ರಿ ಮಹೋದಯರು ಯೋಗ ಮಾಡುವುದನ್ನು ನೋಡುತ್ತಾ ಕುಳಿತು ಬಿಟ್ಟರು.

ಈ ವೈಪರೀತ್ಯವನ್ನು ನೋಡಿದ ಪಿ.ಪಿ. ಇನ್ನೂ ಶವಾಸನದಲ್ಲಿಯೇ ಮಲಗಿದ್ದಾರೆ ಎಂಬುದು ಇದೀಗ ಬಂದ ಸುದ್ದಿ.



## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

– ದಂನಳ

- ಎಲ್ಲಾದರು ಇರು ಎಂತಾದರು ಇರು ಸಿಗ್ನಲ್ ಸಿಗೋ ಹಾಗಿರು.
- ನಿಮ್ಮ ಗುರಿ ನೋಡಿ ಜನ ನಗುತ್ತಿದ್ದರೆ ಅದು ತುಂಬಾ ಸಣ್ಣಗಿದೆ ಎಂದೇ ಅರ್ಥ.
- ಸಿಬ್ಬಂದಿಯ ಆರೋಗ್ಯವೇ ಕಂಪನಿಯ ಭಾಗ್ಯ .
- ಟ್ರಾವೆಲ್ ಈಸ್ ಒನ್ ಕಲ್ಚರ್ ಲುಕಿಂಗ್ ಅಟ್ ಅನದರ್.
- ನೀವು ನೀರಿನೊಳಗೆ ವಾಸಿಸುತ್ತಿದ್ದರೆ ಮೀನುಗಳ ಜತೆ ವಿರಸ ಕಟ್ಟಿಕೊಳ್ಳುವುದು ತರವಲ್ಲ.
- ಕಾರ್ಯಶೀಲತೆ ಮತ್ತು ಉಪಯುಕ್ತ ಸಮಯವನ್ನು ನಾಶ ಮಾಡುವ ಆಧುನಿಕ ಬರ್ಮುಡ ತ್ರಿಕೋಣ: ಟ್ವಿಟ್ಟರ್, ಫೇಸ್‌ಬುಕ್ ಮತ್ತು ವಾಟ್ಸ್ ಅಪ್.
- ದಿ ವರ್ಲ್ಡ್ ಈಸ್ ಫುಲ್ ಆಫ್ ಬುಕ್ಸ್ ಇನ್ ಸರ್ಚ್ ಆಫ್ ಆಥರ್ಸ್.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಇಡೀ ಜಗತ್ತು ಏಕೆ ಅಸುಖಿಯಾಗಿದೆ ಎಂದರೆ ಅದಕ್ಕೆ ಸರಳವಾಗಿರುವುದು ಗೊತ್ತಿಲ್ಲ.
- ನನ್ನ ಮುಂದಿನ ವೆಕೇಷನ್ ಎಲ್ಲಿಗೆ ಎಂದು ಯೋಚನೆ ಮಾಡುತ್ತಾ ಕೂರುವ ಬದಲು ಬದಲು ಅಂತಹ ಬಿಡುಗಡೆ ಬೇಕಾಗುವಂತಹ ಜೀವನ ನಡೆಸದಿರುವುದೇ ವಾಸಿ.
- ಆರೋಗ್ಯ ಎಂಬುದು ನೀವು ಪಡೆದುಕೊಳ್ಳಬೇಕಾದುದಲ್ಲ. ಅದು ನಿಮ್ಮಲ್ಲಿಯೇ ಇರುತ್ತದೆ ಡಿಸ್ಟರ್ಬ್ ಮಾಡದಿದ್ದಲ್ಲಿ.
- ಗಿವಿಂಗ್ ಈಸ್ ಮೋರ್ ಇಂಪಾರ್ಟೆಂಟ್ ದ್ಯಾನ್ ರಿಸೀವಿಂಗ್.
- ಚರ್ಚೆ ಎಂದರ ಜ್ಞಾನದ ವಿನಿಮಯ. ವಾದ ಎಂದರೆ ಅಜ್ಞಾನದ ವಿನಿಮಯ.
- ಸ್ವರ್ಗ ಎಂಬುದು ಒಂದು ಭೌಗೋಳಿಕ ಕೇಂದ್ರವಲ್ಲ. ಅದು ಬದುಕುವ ವಿಧಾನ.
- ಐ ಲೈಕ್ ದಿ ಸೌಂಡ್ ಯು ಮೇಕ್ ವೆನ್ ಯು ಶಟ್ ಅಪ್.
- ಪ್ರಿಸ್‌ಕ್ರಿಪ್ಷನ್, ಹಣ ಮತ್ತು ಪ್ರಭಾವದಿಂದ ಆರೋಗ್ಯವನ್ನು ಕೊಳ್ಳಲಾಗದು.

# ಭವಿಷ್ಯದ ವಿಷ್ಯ

● ಗೌತಮ

ಸೆಳೆತ ಅನ್ನೋ ಪದದಲ್ಲೇ ಅದೆಂಥದೋ ಸೆಳೆತ ಇದೆ ಅಲ್ಲವೇ? ಬಲ್ಗೇರಿಯಾದಲ್ಲಿ ರೋ ಯಾವನೋ ಒಬ್ಬ ಉಚ್ಚರಿಸಲಾಗದಂತಹ ಹೆಸರನ್ನಿಟ್ಟುಕೊಂಡವ. ನಮ್ಮ ಬ್ಯಾಡರಹಳ್ಳಿ ಕೆರೆಯ ಸೆಳೆತಕ್ಕೆ ಒಳಗಾಗಿ ಮೂರು ಸಲ ಮುಳುಗಿ ಎರಡು ಸಲ ಮೇಲೇಳ್ತಾನೆ. ಇಥಿಯೋಪಿಯಾದಿಂದ ಇಲ್ಲಿಗೆ ಪ್ರವಾಸಾರ್ಥಿಯಾಗಿ ಬಂದವ ರಿಂಗ್‌ರೋಡಿನ ಜಾಲಿ ರೈಡಿನ ಸೆಳೆತಕ್ಕೊಳಗಾಗಿ ಬಿಎಂಟಿಸಿ ಚಕ್ರದಡಿ ಸಿಲುಕಿ ಸಾವನ್ನಪ್ಪುತ್ತಾನೆ ಪಾಪ. ಇಂಥ ಸಾವುಗಳಿಗೆ ಲೆಕ್ಕವಿಲ್ಲ ಅನ್ನೋದು ನಿಮಗೆಲ್ಲಾ ತಿಳಿದಿರುವ ವಿಷಯವೇ.

ಛೆ ಛೆ... ಇದೇನಿದು, ಹಾಸ್ಯ ಲೇಖನ ಅಂತಂದು ಸಾವಿನ ವಿಷಯ ಷುರು ಮಾಡ್ತಾ ಇದಾನೆ ಅಂತ ಬೇಸರಿಸಿಕೊಳ್ಳಬೇಡಿ. ಇಗೋ, ಸೀದಾ ವಿಷಯಕ್ಕೆ ಬಂದುಬಿಡ್ತೀನಿ.

ನಾನು ಆ ಬಸ್ ಸ್ಟಾಪ್‌ನಲ್ಲಿ ಸರಿಯಾಗಿ ಒಂಭತ್ತೂವರೆಗೆ ಇರಬೇಕು. ಅಲ್ಲಿ ಇನ್ನೊಂದು ಬಸ್ ಹತ್ತಿ ನನ್ನ ಗಮ್ಯ ಸ್ಥಾನಕ್ಕೆ ತೆರಳಬೇಕು. ಯಾಕೇಂದ್ರೆ, ಆ ಬಸ್ ಮಿಸ್ ಆದರೆ, ಅಲ್ಲಿಂದ ಹೊರಡುವ ಮುಂದಿನ ಬಸ್ ಇರೋದು ಮಟಮಟ ಮಧ್ಯಾಹ್ನ ಹನ್ನೆರಡಕ್ಕೆ! ಆ ಹನ್ನೆರಡರ ಬಸ್ ಹಿಡಿದು ಕೆಲಸಕ್ಕೆ ಹೋದರೆ ಕೆಲಸಕ್ಕೆ ಎಷ್ಟು ಹೊತ್ತಿಗೆ ಹೋಗ್ತೀನಿ ಅನ್ನೋದನ್ನ ನೀವೇ ಲೆಕ್ಕ ಹಾಕ್ಕೊಳ್ಳಿ. ಆದರೆ, ಒಂಭತ್ತೂವರೆಗೆ ಹೊರಡಬೇಕಾಗಿರೋ ಬಸ್ ಮಾತ್ರ ಒಂದು ದಿನಕ್ಕೂ ಒಂಭತ್ತೂವರೆಗೆ ಸರಿಯಾಗಿ ಹೊರಟಿಲ್ಲ. ಹಾಗಂತ ನಾನು ನನ್ನ ಪಂಕ್ಚುಯಾಲಿಟಿ ಪಾಲಿಸಿಯನ್ನು ಬಿಡಲಾದೀತೇ? ಅವನು ಒಂಭತ್ತೂವರೆಗೇ ಹೊರಡಲಿ ಹತ್ತೂವರೆಗೇ ಹೊರಡಲಿ ನಾನಂತೂ ಒಂಭತ್ತೂವರೆಗೆ ಅಲ್ಲಿ ಹಾಜರ್!

ಮುಂದೆ?

ನಾನು ಆ ಬಸ್ ಸ್ಟಾಪ್‌ನಲ್ಲಿ ಇಳಿಯುವಷ್ಟರಲ್ಲಿ ಅಂದರೆ ಫುಟ್‌ಪಾತಿನ ಮೇಲೆ ಒಬ್ಬ ಗುರೂಜಿ ಉಪಸ್ಥಿತನಾಗಿರ್ತಾನೆ. ಅವನೇನೂ ಸ್ವಯಂಘೋಷಿತ ಗುರೂಜಿಯಲ್ಲ. ಹಾಗೆ ಕರೀಬೇಕು ಅಂತ ನನಗನ್ನಿಸಿತು ಅಷ್ಟೆ. ಯಾಕೇಂದ್ರೆ, ಬೆಳಿಗ್ಗೆ ಟೀವಿಯ ಎಲ್ಲ ವಾಹಿನಿಗಳಲ್ಲಿ ಕಾಣಿಸಿಕೊಳ್ಳುವವರೆಲ್ಲರೂ ಗುರೂಜಿಗಳೇ ಆಗಿರುವಾಗ ನಾನು ಯಾಕೆ ಈತನನ್ನು ಗುರೂಜಿ ಅಂತ ಕರೀಬಾರದೂ? ಕರೆದೆ.

*ಕಳ್ಳಾಕಳ್ಳ! ಅಂತ ಕೂಗಿಕೊಂಡು ಯಾರು ಮೊದಲು ಓಡಿ ಹೋಗುತ್ತಾರೋ ಅವರನ್ನು ಹಿಡಿದರೆ ಸುಮಾರು ಸರ್ತಿ ಕಳ್ಳ ಸಿಕ್ಕಿದ ಹಾಗೇನೇ?*

ಅಜಾಜಿನದಂತಿರುವ (ಕೃಷ್ಣಾಜಿನ ಅನ್ನೋ ಹಾಗೆ ಇದು ಅಜಾಜಿನ. ಅಜ ಅಂದರೆ ಕುರಿ) ಒಂದು ಚಾಪೆ. ಅದರ ಮೇಲೆ ಚಕ್ಕಂಬಕ್ಕಳ ಹಾಕಿ ಅವ ಕೂತಿರ್ತಾನೆ. ಸ್ನಾನ ಮಾಡಿರ್ತಾನೋ ಇಲ್ಲವೋ ಗೊತ್ತಿಲ್ಲ. ಆದರೆ, ಲಕ್ಷಣವಾಗಿ ಹಣೆತುಂಬ ವಿಭೂತಿ ಪಟ್ಟೆ. ಅದರ ಮಧ್ಯೆ ಹೊಸಾ ಒಂದು ರೂಪಾಯಿನಗಲದ ಕುಂಕುಮ. ಒಗೆದಿರೋದೋ ಒಗೆದಿಲ್ಲದಿರುವುದೋ ಗೊತ್ತಾಗದಂತಹ ಮಾಸಲು ಮಣ್ಣಿನ ಬಣ್ಣದ ಜುಬ್ಬ. ಮುಂದೆ 4 x 4 ಅಳತೆಯ ಒಂದು ದೊಡ್ಡ ಪ್ಲಾಸ್ಟಿಕ್ ಹಾಳೆ. ಅದರ ಮೇಲೆ ಫಳಫಳ ಹೊಳೆಯುವ ಹತ್ತು ಹನ್ನೆರಡು ಸ್ಟೈನ್‌ಲೆಸ್ ಸ್ಟೀಲ್ ಬಟ್ಟಲುಗಳು. ಒಂದೊಂದರಲ್ಲೂ ಹತ್ತು ಹನ್ನೆರಡು ತರಹೇವಾರಿ ಉಂಗುರಗಳು. ಹಾಳೆಯ ಮಧ್ಯದಲ್ಲಿ ಒಂದುಗಾಜಿನ ಮುಚ್ಚಳವಿರೋ ಮರದ ಪೆಟ್ಟಿಗೆ. ಆ ಪೆಟ್ಟಿಗೆಯ ಕಟ್ಟಿನ ಮೇಲೆ ಪಂ. ಲಿಂಗರಾಜ ದೊಡ್ಡಣ್ಣವರ್ ಅಂತ ಬಣ್ಣದಲ್ಲಿ ಬರೆಯಲಾಗಿದ್ದ ಒಂದು ಬೋರ್ಡು. ಪಂ. ಅನ್ನೋದರ ಅರ್ಥ ಮೊದಲಿಗೆ ಅರ್ಥವಾಗಲಿಲ್ಲ. ಮೊದಮೊದಲು 'ಪ್ರೊ' (ಪ್ರೊಪ್ರೈಟರ್) ಅನ್ನೋದು ಅಪಭ್ರಂಶಗೊಂಡು ಪಂ. ಆಗಿರಬಹುದು ಎಂದುಕೊಂಡೆ. ಹಾಗಾಗಲು ಸಾಧ್ಯವಿಲ್ಲವೆಂದು ಮೆದುಳಿನ ಇನ್ನೊಂದು ಭಾಗ ಹೇಳಿದಾಗ ಹೌದೆನ್ನಿಸಿತು. ಹಾಗೇ ತಲೆಕೆರೆದುಕೊಂಡಾಗ, ಅದು ಪಂಡಿತ್ ಅಂತಲೇ ಇರಬೇಕೆಂಬ ಜ್ಞಾನೋದಯವಾಯಿತು. ಇರಲಿ ಅದರಲ್ಲಿ, ಅಂದರೆ ಆ ಪೆಟ್ಟಿಗೆಯಲ್ಲಿ ಸ್ಪೆಷಲ್ ಉಂಗುರಗಳು, ಪಕ್ಕದಲ್ಲಿ ಒಂದು ಆಡಿಯೋ ಪ್ಲೇಯರ್, ಅದರಿಂದ ಆಡಿದ್ದನ್ನೇ ಆಡೀ ಆಡೀ 1847ನೇ ಇಸವಿಯ ಗ್ರಾಮಾಫೋನ್‌ನಿಂದ ಬರೋ ಹಾಡಿನಂತೆ ಅತ್ಯಂತ ಕರ್ಕಶ ಧ್ವನಿಯಲ್ಲಿ ಕಿರುಚಿಕೊಳ್ಳುವ ಒಂದೂ... ಒಂದೂ... ಏನೂ...? ಪ್ರಚಾರ ಭಾಷಣ ಅನ್ನಬಹುದು. ಅದು ಹೆಚ್ಚು ಕಡಿಮೆ ಹೀಗಿರತ್ತೆ. ನನಗೆ ಷಾರ್ಟ್ ಹ್ಯಾಂಡ್ ಬರಲ್ಲ. ಬಂದಿದ್ದಿದ್ದರೂ ಆ ಧ್ವನಿಯನ್ನು ಕೇಳಿ ಅರ್ಥೈಸಿಕೊಂಡು ಬರೆದುಕೊಳ್ಳುವ ಜ್ಞಾನವಂತೂ ನನಗೆ ದೇವರಾಣೆಗೂ ಇಲ್ಲ ಅಂತ ಒಪ್ಪಿಕೊಂಡು ಬಿಡ್ತೀನಿ. ಹಾಗಾಗಿ, ನಾನು ಕೇಳಿದ್ದನ್ನು ನೆನಪಿಸಿಕೊಂಡಾಗ ಹೊಳೆದದ್ದನ್ನು ಬರೆದಿದ್ದೇನೆ.

ಮಹಾಜನಗಳೇ, ನೋಡೀ, ಇದು ಐದು ಧಾತುಗಳ ಪಂಚಲೋಹದ ಉಂಗುರದ ಪ್ರಚಾರ. ಈ ಐದು ಧಾತುಗಳ ಪಂಚಲೋಹದ ಉಂಗುರದಲ್ಲಿ ಏನೇನಿರತ್ತಪ್ಪಾ ಅಂದರೆ, ಕಬ್ಬಿಣ, ತಾಮ್ರ, ಬೆಳ್ಳಿ, ಚಿನ್ನ, ಕುದುರೆ ಲಾಳ ಮತ್ತು ಆನೆಯ ಬಾಲದ ಕೂದಲು. (ಕುದುರೆ ಲಾಳ, ಆನೆಯ ಬಾಲದ ಕೂದಲುಗಳು ಅದು ಯಾವ ಧಾತುಗಳೋ ನನಗೆ ಖಂಡಿತ ಗೊತ್ತಿಲ್ಲ). ಇದೆಲ್ಲಾ ಒಂದುಕಡೆ ಸೇರಿದರೆ ಅದನ್ನು ಐದು ಲೋಹಗಳ ಪಂಚಲೋಹದ ಉಂಗುರ ಅಂತ ಕರೀತಾರೆ. ಇದರ ಮಹಾತ್ಮೆ ಏನಪ್ಪಾ ಅಂತನ್ನುವುದನ್ನ ನಾನೀಗ ನಿಮಗೆ ಹೇಳುತ್ತೀನಿ. ದಯವಿಟ್ಟು ಕೇಳಿ. ಇದನ್ನು ಹಿಮಾಲಯದಲ್ಲಿ ಬೆತ್ತಲಾಗಿ ಕುಳಿತು ನೂರಾರು ವರ್ಷ ತಪಸ್ಸು ಮಾಡಿದ ಬಾಬ ಕಂಡುಹಿಡಿದಂತಹ ಪಂಚಲೋಹ. ಅವರಿಂದ ಆಶೀರ್ವಾದ ಪಡೆದುಕೊಂಡು ಬಂದಿರುವ ಈ ಉಂಗುರಗಳು ಪರಮ ಪವಿತ್ರವಾದವುಗಳು. ಇದು ಎಲ್ಲರಿಗೂ ಸಿಗುವಂತಹ ಉಂಗುರವಲ್ಲ. ಇದರಿಂದ

ಏನೇನಾಗುತ್ತೆ ಕೇಳಿ. ಇದರ ಪ್ರಯೋಜನವನ್ನು ಪಡೆದ ಜನರ ಸಂಖ್ಯೆ ನೂರಾರು ಸಾವಿರಾರು ಲಕ್ಷಾಂತರ. ನೀವೂ ಇದನ್ನು ನಿಮ್ಮ ಬೆರಳುಗಳಲ್ಲಿ ಧರಿಸಿಕೊಂಡು ಅದರ ಲಾಭವನ್ನು ಪಡೆಯಿರಿ. ಇದರಿಂದ ಆಗುವ ಲಾಭಗಳನ್ನು ಹೇಳುತ್ತೇನೆ ಕೇಳಿ. ಅಣ್ಣತಮ್ಮಂದಿರೇ, ಅಕ್ಕ ತಂಗಿಯರೇ, ಎಲ್ಲರೂ ದಯಮಾಡಿ ಕೇಳಿಸಿಕೊಳ್ಳಿ. ಸಂಸಾರದಲ್ಲಿ ನಿಮಗೆ ತುಂಬಾ ಕಷ್ಟಗಳೇ? ಇದನ್ನು ಧರಿಸಿ ಕೂಡಲೇ ಅವೆಲ್ಲ ಮಾಯವಾಗಿಬಿಡತ್ತೆ. ಇದು ನಿಜ. ನೀವು ಗಂಡ ಹೆಂಡತಿಯರೇ? ನಿಮ್ಮಿಬ್ಬರಲ್ಲಿ ಅನ್ಯೋನ್ಯತೆ ಇಲ್ಲವೇ? ಇದನ್ನು ಧರಿಸಿ. ಮೂರೇ ತಿಂಗಳಲ್ಲಿ ನಿಮ್ಮ ಹೆಂಡತಿ ನೀವು ಹೇಳಿದ ಹಾಗೆ ಕೇಳಿಕೊಂಡಿರ್ತಾಳೆ. ಹೆಂಗಸರು ಧರಿಸಿದರೆ? ಅಂತ ನೀವು ಕೇಳಬಹುದು. ಅವರೂ ಅಷ್ಟೇ. ನಿಮ್ಮ ಗಂಡ ನಿಮ್ಮ ಮಾತಿಗೆ ಬೆಲೆ ಕೊಡುತ್ತಾ ಇಲ್ಲವೇ? ನಿಮ್ಮ ಗಂಡನಿಗೆ ಇನ್ನೊಂದು ಸಂಬಂಧ ಇದೆಯೇ? ಈ ಐದು ಧಾತುಗಳ ಪಂಚಲೋಹದ ಉಂಗುರವನ್ನು ನಿಮ್ಮ ಕೈಗೆ ಹಾಕಿಕೊಳ್ಳಿ. ಕೇವಲ ಹದಿಮೂರು ವಾರಗಳಲ್ಲಿ ಅವಳು ಪರಾರಿ. ಇದನ್ನ ಬೇಕಾದರೆ ಕಾಗದದ ಮೇಲೆ ಬರೆದಿಟ್ಟುಕೊಳ್ಳಿ. ಆಮೇಲೆ ನೀವು ಹೇಳಿದಂತೆ ಕೇಳಿಕೊಂಡು, ನೀವು ಹಾಕಿದ್ದನ್ನು ತಿಂದುಕೊಂಡು, ನೀವು ಕೇಳಿದ್ದನ್ನು ಕೊಡಿಸಿಕೊಂಡು ನಾಯಿಯಂತೆ ಬಿದ್ದಿರ್ತಾರೆ. ಇನ್ನು ವ್ಯಾಪಾರದ ವಿಷಯ. ನಿಮ್ಮ ವ್ಯಾಪಾರದಲ್ಲಿ ನಷ್ಟವಾಗುತ್ತಿದೆಯೇ? ಈ ಅದ್ಭುತವಾದ ಐದು ಧಾತುಗಳ ಪಂಚಲೋಹದ ಉಂಗುರವನ್ನು ಹಾಕಿಕೊಳ್ಳಿ. ಮೂರು ತಿಂಗಳಲ್ಲಿ ನೀವು ಲಾಭವನ್ನು ಗಳಿಸುತ್ತೀರೋ ಇಲ್ಲವೋ ನೀವೇ ನೋಡಿ. ಇನ್ನು, ಮದುವೆ ಆಗಿಲ್ಲ ಎಂಬ ಚಿಂತೆಯೇ? ಚಿಂತೆಯನ್ನು ಮರೆತುಬಿಡಿ. ಉಂಗುರತೊಟ್ಟ ಆರು ಪಕ್ಷಗಳಲ್ಲಿ ನಿಮಗೆ ಮದುವೆ ನಿಶ್ಚಯ ಆಗೋದು ಗ್ಯಾರಂಟಿ. ಆಗದಿದ್ದರೆ ಉಂಗುರವನ್ನು ವಾಪಸ್ ಮಾಡಿಬಿಡಿ. ದುಡ್ಡು ವಾಪಸ್ ಕೊಡ್ತೀವಿ. ಇನ್ನು ಸಂತಾನದ ವಿಷಯ. ನಿಮಗೆ ಮಕ್ಕಳಾಗಿಲ್ಲವೇ? ಅದಕ್ಕೂ ನಮ್ಮಲ್ಲಿ ಉಂಗುರವಿದೆ. ಆದರೆ ಈ ವಿಷಯದಲ್ಲಿ ಮಾತ್ರಾ ಗಂಡ ಹೆಂಡತಿ ಇಬ್ಬರೂ ಉಂಗುರ ಹಾಕಿಕೊಳ್ಳಲೇಬೇಕು. ಉಂಗುರ ಹಾಕಿಕೊಂಡ ಐವತ್ತು ವಾರಗಳಲ್ಲಿ ಮಕ್ಕಳಾಗದಿದ್ದರೆ ಕೇಳಿ. ವಿದ್ಯಾರ್ಥಿಗಳ ವಿಷಯಕ್ಕೆ ಬಂದರೆ ಇದನ್ನು ಧರಿಸಿಕೊಂಡು ಓದಿದರೆ ಮತ್ತು ಇದನ್ನು ಧರಿಸಿಕೊಂಡು ಪರೀಕ್ಷೆ ಬರೆದರೆ ಒಳ್ಳೆ ಮಾರ್ಕು ಬರೋದರಲ್ಲಿ ಯಾವ ಅನುಮಾನವೂ ಇಲ್ಲ. ಇನ್ನು ನೀವು ಪ್ರೀತಿಸುತ್ತಿರುವ ಹುಡುಗ ಹುಡುಗಿಯರ ಜೊತೆ ಮದುವೆಯಾಗಲು ನಿಮ್ಮ ಮನೆಯವರು ಒಪ್ಪುತ್ತಿಲ್ಲವೇ? ಇದನ್ನು ಧರಿಸಿ ನೋಡಿ. ಪುಂಗಿಯ ಮುಂದಿನ ನಾಗರಹಾವಿನಂತೆ ನಿಮ್ಮ ಅಪ್ಪ ಅಮ್ಮಂದಿರು ನಿಮ್ಮ ಮದುವೆಗಳಿಗೆ ಒಪ್ಪಿ ಅಕ್ಕಿಕಾಳನ್ನು ನಿಮ್ಮತಲೆ ಮೇಲೆ ಸುರಿಯುತ್ತಾರೆ. ಇದು ಶತಸ್ಸಿದ್ಧ. ಸಕಲ ಸೌಭಾಗ್ಯಗಳನ್ನೂ ಕೊಡುವ ಏಕೈಕ ಉಂಗುರ ಈ ಐದು ಧಾತುಗಳ ಪಂಚಲೋಹಗಳ ಉಂಗುರ. ಬನ್ನಿ ಬನ್ನಿ ನಿಮ್ಮ ಅದೃಷ್ಟವನ್ನು ಬದಲಾಯಿಸಿಕೊಳ್ಳಿ. ಇವತ್ತು ಶುಕ್ರವಾರ. ಒಂಭತ್ತು ಗಂಟೆಯಿಂದ ಹತ್ತೂವರೆಗಂಟೆಯ ಸಮಯ ತುಂಬಾ ಶುಭ ಮುಹೂರ್ತ. ಖಂಡಿತ ನಿಮ್ಮ ಆಸೆಗಳೆಲ್ಲಾ ಪೂರೈಸುತ್ತದೆ. ಬನ್ನಿ ಬನ್ನಿ.

ಇದೇ ಮತ್ತೆ ರಿಪೀಟು, ರಿಪೀಟು.

ಇದರ ಸೆಳೆತಕ್ಕೆ ಸಿಕ್ಕಿ ಉಂಗುರವನ್ನು ಕೊಳ್ಳುವ ಮಂದಿಯನ್ನು ಪ್ರತಿದಿನವೂ ನೋಡುತ್ತೇನೆ. ನಾನಿರುವ ಹತ್ತು ಹದಿನೈದು ನಿಮಿಷಗಳಲ್ಲಿ ಐದಾರು ಜನ ಉಂಗುರವನ್ನು ಕೊಳ್ಳುವುದನ್ನು ನೋಡಿದ್ದೇನೆ.

ಅಂಥದೇ ಇನ್ನೊಂದು ದಿನ. ಸಣ್ಣ ನಡುವಿನ, ಚೂಪು ಮೂಗಿನ, ಚುರುಕುಗಣ್ಣುಗಳ ಕೃಷ್ಣಸುಂದರಿಯೊಬ್ಬಳ ಎಂಟ್ರಿ ಆಯ್ತು. ಅವಳ ದರ್ಶನವಾಗುತ್ತಿದ್ದಂತೆ ನಮ್ಮ ಉಂಗುರದೊಡೆಯ ಹುಲಿಯನ್ನು ಕಂಡ ಹುಲ್ಲೆಯಂತಾಗಿ ಹೋದ. ಆಗಲೇ ನನಗೆ ಗೊತ್ತಾಗಿಹೋಯಿತು, ಅವಳೇ ಇವನ ಹೆಂಡತಿ ಅಂಬೋದು. ಎಷ್ಟಾತ್ತೂ? ಗರ್ಜಿಸಿ ಕೇಳಿದಳು. ಸಿಡಿಲಿನಂತಹಧ್ವನಿ. ಇನ್ನೂ ಈಗ ತಾನೇ ಕುಂತೀನಲ್ಲ ಅಂತಂದ ಹೆದರು ಹೆದರುತ್ತಲೇ ತಡವರಿಸಿ ತಡವರಿಸಿ. ಧಸಕ್ ಅಂತ ಅವನ ಮುಂದೆ ಕುಕ್ಕರಗಾಲಿನಲ್ಲಿ ಕೂತು ನೇರ ಅವನ ಜೇಬಿಗೆ ಕೈ ಹಾಕಿದಳು. ಅದರಲ್ಲಿದ್ದುದನ್ನೆಲ್ಲಾ ಹೊರಕ್ಕೆಳೆದು ಕೈ ಬಿಡಿಸಿ ನೋಡಿದಳು. ಐವತ್ತರ ಐದು ನೋಟುಗಳು. ಮುಖವನ್ನು ಸಿಂಡರಿಸಿಕೊಂಡು ಅವನ ಮೂತಿಯನ್ನು ತಿವಿಯುತ್ತ ನಿನ್ನ ಮಾರಿ ನೋಡು ಅಂತಂದು ಅದರಲ್ಲಿ ಒಂದು ನೋಟನ್ನು ಅವನಿಗೆ ಕೊಟ್ಟು ಓಗು, ಒಂದೋಶಿ ತಗಂಬಾ ಅಂತಂದು ಉಳಿದದ್ದನ್ನು ತನ್ನ ಕುಬುಸದೊಳಗೆ ಸೇರಿಸಿದಳು. ಅದನ್ನು ನೋಡಿ ನಮ್ಮ ರಾಜ ಎರಡು ಮೂರು ಸಲ ಎಂಜಲು ನುಂಗಿ ದೋಶಿ ತರಲು ಮೇಲೆದ್ದ. ತಕ್ಷಣ ಅವನ ಜಾಗದಲ್ಲಿ ಇವಳು ಕೂತಳು. ಪ್ಲೇಯರ್‌ನ ಕಿವಿ ಹಿಂಡಿ ಅದು ಮಾತನಾಡದಂತೆ ಮಾಡಿದಳು. ಬಾಯಿ ಬಿಟ್ಟಳು – ಪಟಾಕಿ ಸರಕ್ಕೆ ಬೆಂಕಿ ತಾಕಿದಂತೆ.

ಬರ್ರಿ ಬರ್ರಿ. ನಿಮ್ಮ ಅದೃಷ್ಟಾನ  ಬದಲಾಯಿಸಕೋ ಬರ್ರಿ. ಬರೇ ಇನ್ನೂರು ರುಪಾಯ್ರೀ. ಇವತ್ತು ಶುಕ್ರವಾರ. ಭಾಳ ಛಲೋ ವಾರಾ. ಇವತ್ತೇ ಕೊಳ್ರಿ. ಲಕ್ಷ್ಮಿ ನಿಮ್ಮ ಕಾಲ ಬುಡದಾಗೆ ಬಂದು ಬೀಳ್ತಾಳ್ರೀ. ನಿಮ್ಮ ಹೆಂಡ್ರು ನಿಮ್ಮ ಮಾತು ಕೇಳ್ತಾ ಇಲ್ಲೇನ್ರೀ? ತಗೋರಿ ಇದನ್ ಹಾಕ್ಕೊಂಡು ಆ ಮಾರಿ ಮುಂದ ನಿಂದರ್ರೀ ಸಾಕು. ಹ್ಯಾಂಗ ತಲೆ ತಗ್ಗಿಸಿ ನಿಲ್ತಾಳ ಅಂಬೋದನ್ನ ನೀವಾ ನಿಮ್ಮ ಕಣ್ಣಾರ ನೋಡ್ರೀ. ನನ್ನ ಮಾತು ನಂಬ್ರಿ. ನನ್ನ ನಾಲಿಗಿಯಿಂದ ಬರೊ ಮಾತ ಎಂದೂ ಸುಳ್ಳಾಗಿಲ್ರೀ. ಆಗೂದೂ ಇಲ್ರೀ. ಅದೃಷ್ಟದ ಉಂಗುರಾನ್ನ ನಾನೇ ನನ್ನ ಕೈಯ್ಯಾರೆ ನಿಮ್ಮ ಬೆಳ್ನ್ಯಾಗೆ ತೊಡಸ್ತೀನ್ರೀ. ಬರ್ರಿ ಬರ್ರಿ.

ಸರದ ಪಟಾಕಿಗಳು ಹತ್ತಿ ಉರಿಯುವಷ್ಟರಲ್ಲಿ ಜನ ಅವಳ ಸುತ್ತ ಮುತ್ತಿದ್ದರು. ಅದೆಷ್ಟು ಮಂದಿ ತಮ್ಮ ಬೆರಳುಗಳಿಗೆ ಉಂಗುರಗಳನ್ನು ಅವಳಿಂದ ತೊಡಿಸಿಸಿಕೊಂಡರೋ ನನ್ನ ಅರಿವಿಗೆ ಬರಲಿಲ್ಲ. ಯಾಕಂದ್ರೆ ಅವಳ ಸುತ್ತ ಮಂದಿಯ ಕೋಟೆ! ಗಜಿಬಿಜಿ. ಗಡಬಡ.

ಗಂಡ ದೋಶಿ ತಂದ. ಹೆಂಡತಿ ದಿಡಿಂಗ್ ಅಂತ ಎದ್ದಳು. ಅವನ ಕೈಯ್ಯಲ್ಲಿದ್ದ ಪಟ್ಟಣವನ್ನು ಪಟಕ್ ಅಂತ ಕಿತ್ತುಕೊಂಡಳು. ಕುಪ್ಪುಸದೊಳಗಿದ್ದ ನೋಟುಗಳನ್ನು ಹೊರತೆಗೆದುತನ್ನ ಹತ್ತಿರವಿದ್ದ ನೋಟುಗಳ ಜೊತೆ ಸೇರಿಸಿ ಎಣಿಸಿದಳು. ಹತ್ತಿರ ಹತ್ತಿರ ಸಾವಿರವಿರಬಹುದು ಅನ್ನಿಸಿತು ನನಗೆ. ಅವಳು ಎಣಿಸುತ್ತಿದ್ದುದನ್ನು ಆ ಗಂಡ ಅನ್ನೋ ಪ್ರಾಣಿ ಎವೆಯಿಕ್ಕದೆ ನೋಡುತ್ತಿತ್ತು. ಪಾಪ. ನೂರರ ಒಂದು ನೋಟನ್ನು ಅವನ ತೆರೆದ ಅಂಗೈ ಮೇಲೆ ಕುಕ್ಕುತ್ತಾ ತಗಾ. ಊಟ ಮಾಡ್‌ಕ್ಯೋ ಅಂತಂದು ಮಿಕ್ಕ ನೋಟುಗಳನ್ನು

ಮತ್ತೆ ಸ್ವಸ್ಥಾನಕ್ಕೆ ಸೇರಿಸಿ ಬಿರುಗಾಳಿಯಂತೆ ಅಲ್ಲಿಂದ ನಿರ್ಗಮಿಸಿದಳು. ಅವನ ಜೊತೆ ಮಿಕ್ಕ ಮಿಕಗಳೂ ಬಿಟ್ಟಕಣ್ಣು ಬಿಟ್ಟಬಾಯಿಂದ ಅವಳು ನಡೆದ ದಾರಿಯತ್ತ ನೋಡುತ್ತಾ ನಿಂತವು. ಅವಳು ಅವರುಗಳಿಂದ ಕಣ್ಮರೆಯಾಗುತ್ತಿದ್ದಂತೆ ಜನಸಾಗರ ಕರಗಿಹೋಯಿತು. ಪೂಜೆಯಿಲ್ಲದ ದೇವರಂತೆ ನಮ್ಮ ಪಂಡಿತ ಏಕಾಂಗಿಯಾಗಿ ಕುಳಿತಿದ್ದ.

ನನ್ನ ಬಸ್ ಬಂತು. ಹತ್ತಿಕೂತು ಕಣ್ಮುಚ್ಚಿ ಆಕ್ಷನ್ ರಿ-ಪ್ಲೇ ಗುಂಡಿಯನ್ನು ಒತ್ತಿಕೊಂಡೆ.

ಮಾರನೆ ದಿನ. ಅದಾಗ ತಾನೇ ಪ್ಲೇಯರ್ ಆನ್ ಆಗಿತ್ತು. ಎಂದಿಗಿಂತ ಹತ್ತು ನಿಮಿಷ ಮುಂಚಿತವಾಗಿ ಮಾಮೂಲಿ ಸ್ಥಳದಲ್ಲಿದ್ದೆ. ಅವನ ಮುಂದೆ ಯಾರೂ ಇರಲಿಲ್ಲ. ನಾನೇ ಕುಕ್ಕರಗಾಲಿನಲ್ಲಿ ಕೂತೆ. ಆಸೆಗಂಗಳಿಂದ ನನ್ನನ್ನು ನೋಡಿ ತೊಂದರಿ ಏನೈತಿ ಸಾರೂ? ಅಂದ. ಸುತ್ತ ಮುತ್ತ ನೋಡಿ ಮೆಲ್ಲಗಿನ ಧ್ವನಿಯಲ್ಲಿ, ಅವನಿಗೆ ಮಾತ್ರ ಕೇಳಿಸುವಂತೆ ನನ್ನ ಹೆಂಡತೀ ತುಂಬಾ ಗಯ್ಯಾಳಿ. ಪ್ರತಿದಿನವೂ ನನಗೆ ಚಿತ್ರಹಿಂಸೆ ಕೊಡ್ತಾಳೆ. ನಾನು ಹೇಳಿದಹಾಗೆ ಕೇಳಿಕೊಂಡಿರಬೇಕಾದರೆ ಯಾವ ಉಂಗುರ ಹಾಕ್ಕೋಬೇಕು ಗುರುವೇ? ಕೇಳಿದೆ. ಅಷ್ಟೇ ತಾನೇ. ನೀವೇನು ಚಿಂತಿ ಮಾಡಬ್ಯಾಡ್ರೀ. ನಿಮ್ಮ ಹೆಸರು ಹೇಳಿ ಅಂದ. ಪಂ. ಲಿಂಗರಾಜ ದೊಡ್ಡಣ್ಣವರ್ ಕಣ್ಣಿಗೆ ಕಂಡು, ಲಿಂಗಯ್ಯ ಅಂದೆ. ಲಿ ಅಂತ ಬಾಯಲ್ಲಿ ಗೊಣಗಿಕೊಂಡು ಏನೋ ಲೆಕ್ಕಹಾಕಿ ಕಡೆಗೆ, ಆರ್ಕಿಮಿಡೀಸನಂತೆ ಹಾಂ ಅಂತ ಜೋರಾಗಿ ಕೂಗಿ ಪೆಟ್ಟಿಗೆಯನ್ನು ತೆರೆದು ಒಂದು ಹಸಿರು ಕಲ್ಲಿನ ಉಂಗುರವನ್ನು ತೆಗೆದು ತೋರಿಸುತ್ತಾ, ನೋಡ್ರಿ ಸರಾ, ನಿಮ್ಮ ಸಮಸ್ಯೆಗೆ ಇದಾ ಬೆಷ್ಟ್ ಉಂಗುರ. ಇವತ್ತಾ... ಗುರುವಾರ ಐತಿ. ಮುಂದಿನ ಗುರುವಾರದೊಳಗಾ ನಿಮ್ಮನಿಯಾಕಿ ನೀವು ಹೇಳಿದ್ಹಂಗ ಕೇಳದಿದ್ದರಾ ಕೇಳಿ ಅಂದ. ಹೌದಾ? ಎಷ್ಟು? ಕೇಳಿದೆ. ನೀವಾ ನೋಡಿಕೊಂಡು ಕೊಡ್ರಿಯಪ್ಪಾ ಅಂದ. ನೂರೈವತ್ತು ತೆಗೆದು ಅವನಿಗೆ ಕೊಟ್ಟು, ಪಂಡಿತರೇ, ಇದನ್ನ ಹ್ಯಾಗೆ ಬೆರಳಿಗೆ ಸೇರಿಸೋದು ತೋರಿಸಿಕೊಡ್ರಿ ಅಂದೆ ಅವ ಹೀಂಗ್ರೀಯಪ್ಪ ಅನ್ನುತ್ತಾ ತನ್ನ ಬೆರಳಿಗಿಟ್ಟುಕೊಂಡು ನನ್ನಕಡೆ ನೋಡಿದ. ಚೆನ್ನಾಗಿದೆ ಅಂದೆ. ಹಿಂದೆತಿರುಗಿದೆ. ನನ್ನ ಬಸ್ ಬಂದು ನಿಲ್ಲುತ್ತಿತ್ತು.

ಛಟ್ ಅಂತ ಎದ್ದು ಗುರುವೇ, ಇದನ್ನ ನಿಮಗೋಸ್ಕರಾನೇ ನಾನು ತೊಗೊಂಡಿದ್ದು. ನಾನು ಒಂದು ವಾರ ರಜಾ. ಮುಂದಿನ ಗುರುವಾರಾನೇ ನಾನು ಬರೋದು. ನಿಮಗೆ ಒಳ್ಳೇದಾಗಲಿ. ಆಲ್ ದಿ ಬೆಸ್ಟ್ ಅಂತನ್ನುತ್ತಾ ಓಡಿ ಬಸ್ ಹತ್ತಿ ಕೂತೆ.

ಮುಂದಿನ ಗುರುವಾರ ಇಳಿದೆ. ಅದೇ ಸ್ಪಾಟು. ಅದೇ ಟೈಮು. ಅದೇ ಪಂ. ಲಿಂಗರಾಜದೊಡ್ಡಣ್ಣವರ್. ನನ್ನ ಅದೃಷ್ಟ. ನಾನು ಅಲ್ಲಿ ಇಳಿಯುವುದಕ್ಕೂ ಪಂಡಿತ ಪತ್ನಿ ಪಂಡಿತನತ್ತ ಬಿರುಗಾಳಿಯಂತೆ ಬರುವುದಕ್ಕೂ ಸರಿಹೋಯಿತು. ಅದೇ ಗತ್ತು, ಅದೇ ಗಮ್ಮತ್ತು, ಅದೇ ದೌಲತ್ತು. ಸುಂಟರಗಾಳಿ ಅವನ ಹತ್ತಿರ ಬರುವುದಕ್ಕೆ ಮುಂಚೆಯೇ ನಮ್ಮ ಪಂಡಿತ ಎದ್ದು ನಿಂತಿದ್ದ - ದೊಡ್ಡ ಸಾಹೇಬರು ಬರುವಾಗ ಎದ್ದು ನಿಲ್ಲುವ ಪೀವನಿನಂತೆ. ಅದೇ ಜೇಬು, ಅದೇ ಕೈಯ್ಯಿ, ಅದೇ ಲೂಟಿ, ಅದೇ ಐವತ್ತು, ಅದೇ ಓಗು, ಒಂದೋಶಿ ತಗಂಬಾ..

# ಘೋಸ್ಟ್ ರೈಟರ್ಸ್!

● ಗಣೇಶ ಹೆಗ್ಗಡೆ

**ಒಂ**ದು ಭಾನುವಾರ ಕಣ್ರಿ. ಬೆಳಿಗ್ಗೆ ಎಂಟು ಘಂಟೆಯಾದರೂ ನಾನು ಎದ್ದೇ ಇರಲಿಲ್ಲ. ಹಾಸಿಗೆಯಲ್ಲಿ ಹೊರಳಾಡುತ್ತಲೇ ಇದ್ದೆ. ಈ ಹೊರಳಾಡುವ ಅಭ್ಯಾಸ ನನಗೆ ಅನುವಂಶೀಯವಾಗಿ ಬಂದದ್ದು. ಅದಕ್ಕೆಂದೇ ಏನೋ ನನ್ನ ಸೌಭಾಗ್ಯವತಿ ಪದ್ದಿ ಇತ್ತೀಚೆಗೆ ನನಗೆ ಹೊರಳಾಡ ಕನ್ನಡಿಗ ಪ್ರಶಸ್ತಿ ನೀಡಿ ಗೌರವಿಸಿರುವುದು. ನನ್ನ ಸವಿ ನಿದ್ದೆಗೆ ಬ್ರೇಕ್ ಬಿತ್ತು. ಹಾಸಿಗೆಯ ಪಕ್ಕದಲ್ಲೇ ಇದ್ದ ರಿಂಗಣಿಸುತ್ತಿರುವ ಮೊಬೈಲು ಫೋನನ್ನು ಎತ್ತಿಕೊಂಡೆ. ಆ ಕಡೆಯಿಂದ ದನಿ ಅಪರಂಜಿ ಪತ್ರಿಕೆಯ ಉಪಸಂಪಾದಕರದ್ದು.

**ರೈಟರುಗಳ ಹಿಂದೆ ಘೋಸ್ಟ್ ರೈಟರ್ರುಗಳು ಸರಿ. ಅದರೆ ಈ ರೈಟರ್ರುಗಳ ಒಳಗೇ ಘೋಸ್ಟ್‌ಗಳು ಸೇರಿಕೊಂಡರೆ?**

''ಎಸ್ ಸರ್, ಮಾರ್ಚ್ ಒಂದರ ವೇಳೆಗೆ ಖಂಡಿತಾ ಕಳುಹಿಸ್ತೀನಿ ಸರ್. ಖಂಡಿತಾ ಬರಿತೀನಿ ಸರ್'' ಎಂದು ಕೋಲೆಬಸವನಂತೆ ತಲೆಯಾಡಿಸುತ್ತಿದ್ದ ನನ್ನತ್ತ ಅಚಾನಕ್ಕಾಗಿ ಬಂದ ಪದ್ದಿ ಪ್ರಶ್ನಾತೀತವಾಗಿ ನೋಡಿದಾಗ ''ಅದೇ ಕಣೆ ಪತ್ರಿಕೆಯವರು. ಏಪ್ರಿಲ್ ತಿಂಗಳ ಅವರ ವಿಶೇಷ ಸಂಚಿಕೆಗೆ ಒಂದು ಲೇಖನ ಕೋರಿದ್ದಾರೆ. ನನ್ನ ಮೇಲೆ ಕೆಟ್ಟ ನಂಬಿಕೆ ಅವರಿಗೆ'' ಎಂದೆ.

''ಸರಿ ಬಿಡಿ. ನೀವು ಕಳುಹಿಸಿದ್ರಿ, ಅವರು ಪ್ರಿಂಟ್ ಮಾಡಿದ್ರು.''

''ಲೇ, ಅದ್ಯಾಕೆ ಹಾಗೆ ಮೂಗು ಮುರೀತೀಯಾ?''

''ಇನ್ನೇನ್ರಿ ಮತ್ತೆ? ನಿಮ್ಮಂಥ ಸೋಮಾರಿತನದ ಮನುಷ್ಯರನ್ನೇ ನಾನು ಕಂಡಿಲ್ಲ. ಕನಿಷ್ಠ ದಿನಸಿ ಅಂಗಡಿ ಸಾಮಾನು ಪಟ್ಟಿ ಬರ್‍ಕೊಳ್ರೀ ಎಂದರೂ ನೀವು ಮುಖ ಕಿವಿಚ್ಕೋತೀರಿ, ಇನ್ನು ಲೇಖನದ ಬಗ್ಗೆ ಹೋದ್ರಿ.''

''ಅವಮಾನ ಮಾಡ್ಬೇಡ್ವೇ ಪದ್ದಿ. ನಿಮ್ಮಂದೆ ಛಾಲೆಂಜು. ಇನ್ನು ಒಂದು ವಾರದೊಳಗೆ ಲೇಖನ ಬರೀದಿದ್ರೆ.. ಇನ್ಮುಂದೆ ಪೆನ್ನನ್ನೇ ಹಿಡಿಯುವುದಿಲ್ಲ'' ಎಂದು ಶಪಥ ಮಾಡಿದೆ.

''ಒಳ್ಳೇದೇ ಆಯ್ತು. ಪೆನ್ನಿನ ಬದ್ಲು ಇನ್ಮುಂದೆ ಸೌಟನ್ನಾದರೂ ಹಿಡ್ಕೊಳ್ಳಿ. ನನಗೆ ಸಹಾಯವಾಗುತ್ತದೆ'' ಎಂದು ಎದ್ದು ಹೋದಳು.

*ಅಂದ ಹಾಗೇ ವಿಮಾನ ಯಾನ ಮಾಡೊಕ್ಕೆ ಮುಂಚೆ ವಿಮೆ ಮಾಡಿಸ್ತಾರೆ ಅಲ್ವಾ?*

ಆದರೆ ಬರಾಬರಿ 15 ದಿನ ಕಳೆದು ಹೋದ್ರು ಲೇಖನ ಸಿದ್ಧ ಪಡಿಸೋಕೆ ಯಾವ ವಸ್ತುವೂ ನನಗೆ ಸಿಗುವೊಲ್ಲದು. ನನ್ನ ಗ್ರಹಚಾರವೇ ಸರಿಯಿಲ್ಲ ಕಣ್ರಿ. ಅಡುಗೆ ಮನೇಲಿ ಪದ್ದಿ ಸೌಟು ಹಿಡ್ಕೊಂಡು ಓಡಾಡ್ತಿದ್ರೆ ಆದಷ್ಟೂ ಅವಳನ್ನು ಅವಾಯ್ಡ್ ಮಾಡ್ಕೊಂಡು ಓಡಾಡೊ ಕೆಟ್ಟ ಪರಿಸ್ಥಿತಿ ನನ್ನದು. ಪೆನ್ನಿನಿಂದ ಸೌಟ್‌ಗೆ ಟ್ರಾನ್ಸ್‌ಫರ್ ಆಗೋ ಭಯ ಬೇರೆ. ದಿಕ್ಕೇ ತೋಚದೆ ಮುಂದಿನ ಮಾರ್ಗದರ್ಶನಕ್ಕಾಗಿ, ನನ್ನ ಮಾನಸ ಗುರುಗಳಾದ ಪ್ರೊ|| ತೋಲಾಂಡರಾಯರ ಮೊರೆ ಹೋದೆ. ನನ್ನ ಕಥೆಯನ್ನೆಲ್ಲಾ ಸವಿವರವಾಗಿ ಕೇಳಿದ ಅವರು ಹುಸಿನಗೆ ನಕ್ಕು ''ಪ್ರಾಬ್ಲಮ್ ಈಸ್ ಸಾಲ್ವ್ಡ'' ಎಂದು ನನ್ನ ಬೆನ್ನ ಮೇಲೆ ಕೈಯಾಡಿಸಿ ''ಹಿಟ್ ಅಂಡ್ ರನ್ ಕೇಸಿನ ಬಗ್ಗೆ ಬರೆಯಬಹುದು ಕಣಯ್ಯ'' ಎಂದರು.

''ಸರ್, ಆ ಕೇಸು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ. ಬರೆದರೆ ಸಬ್‌ಜುಡಿಸ್ ಆಗೊಲ್ವೆ? ಮೇಲಾಗಿ ನಾನು ಬರೆಯಬೇಕಾಗಿರುವುದು ನಗೆ ಲೇಖನ.''

''ಯು ಆರ್ ಟೋಟಲಿ ಕನ್ಫ್ಯೂಸ್ಡ್ ಮೈ ಬಾಯ್. ನಾನು ಹೇಳ್ತಾ ಇರೋದು ಬಾಲಿವುಡ್ ನಟನ ಕೇಸಲ್ಲ.''

''ಮತ್ತೆ?''

''ನಮ್ಮೂರಿನ ಸೌಗಂಧಿಕ ಪಾರ್ಕಿಗೆ ಬೆಳಗಿನ ವೇಳೆ ಭೇಟಿ ಕೊಟ್ಟಿದ್ದೀಯ?''

''ಹ್ಞೂ ಸರ್.''

''ಅಲ್ಲಿ ಕಾಣುವ ದೃಶ್ಯ ಕೊಂಚ ಇಮ್ಯಾಜಿನ್ ಮಾಡ್ಕೊ.''

''ಸರ್. ಅಲ್ಲಿ ನಡುವಯಸ್ಸಿನ ಮತ್ತು ಮುದಿವಯಸ್ಸಿನ ಸಿಟಿಜನ್‌ಗಳು, ಸ್ಪೋರ್ಟ್ಸ್ ಷೂಸು, ಟ್ರಾಕ್ ಸೂಟು ಧರಿಸಿ ಗಾಬರಿ ಮುಖದಲ್ಲಿ ಟ್ರ್ಯಾಕಿನಲ್ಲಿ ಓಡ್ತಿರ್‍ತಾರೆ.''

''ಹ್ಞಾಂ. ಇವೇ ಹಿಟ್ ಅಂಡ್ ರನ್ ಕೇಸುಗಳು ಅರ್ಥಾತ್ ಇವೆಲ್ಲಾ ಡಯಾಬಿಟೀಸು ಪೇಷೆಂಟುಗಳು. ಇವರ ದೈನಂದಿನ ಫುಡ್, ಅನ್ನದಿಂದ ರಾಗಿ ಹಿಟ್ಟಿಗೆ ಕನ್ವರ್ಟ್ ಆಗಿ, ಆಯಸ್ಸು ಹೆಚ್ಚಿಸಿಕೊಳ್ಳಲು ಪಾರ್ಕಿನಲ್ಲಿ ಹೀಗೆ ರನ್ ಮಾಡುತ್ತಿರುತ್ತಾರೆ. ಇವರ ಮೇಲೆ ಬರೀ..''

ಗುರು ಪ್ರೊ|| ತೋಲಾಂಡರಾಯರಿಗೆ ಶಿರಸಾ ನಮಿಸಿ, ಮಾರನೆಯ ಬೆಳಿಗ್ಗೆಯೇ ವಸ್ತುನಿಷ್ಠತೆಯ ಪರೋಕ್ಷ ಅನುಭವಕ್ಕಾಗಿ, ನಮ್ಮೂರಿನ ಸೌಗಂಧಿಕಾ ಪಾರ್ಕಿಗೆ ಒಬ್ಬನೇ ಭೇಟಿ ಕೊಟ್ಟೆ. ಇಲ್ಲೇ ಕಣ್ರಿ ಆಗಿದ್ದು ಎಡವಟ್ಟು. ಆ ಪಾರ್ಕಿನ ಕಲ್ಲು ಬೆಂಚಿನ ಮೇಲೆ ಕುಳಿತಿದ್ದ ಮಹಿಳಾಮಣಿಯೊಬ್ಬರು ನನ್ನನ್ನು ಕಂಡೊಡನೆಯೆ ಥಟ್ಟನೆ ಎದ್ದು, ''ಇದೇನು ಒಬ್ರೇ ಬಂದಿದ್ದೀರಿ, ಎಲ್ಲಿ ಪದ್ದಮ್ಮನವರು?'' ಎಂದು ಕೇಳಿದಾಗ ಎದುರು ನಿಂತವರನ್ನು ಗುರ್ತಿಸಲು ಬಲು ಪ್ರಯಾಸ ಪಟ್ಟೆ. ಅವರು ನಮ್ಮ ಪದ್ದಿಯ ಖಾಸಾ ಫ್ರೆಂಡ್ ಅಂಬುಜಮ್ಮ. ನಮ್ಮ ಮನೆಯ ಹಿಂದಿನ ಕ್ರಾಸಿನಲ್ಲಿರುವವರು.

''ಅದೇನು ನೀವಿಲ್ಲಿ?'' ಎಂದು ಮರು ಪ್ರಶ್ನಿಸಿದೆ.

''ಏನಿಲ್ಲಪ್ಪ. ಇವ್ರೂ ಬಂದಿದ್ದಾರೆ. ಅಲ್ಲಿ ನೋಡಿ ಜಾಗಿಂಗ್ ಮಾಡ್ತಿರೋದು. ನನ್ಗೋ ಹಾಳು ಮಂಡಿ ನೋವು. ಹೀಗೆ ಕಲ್ಲುಬೆಂಚಿನ ಮೇಲೆ ಕುಳಿತು, ಇವ್ರು ಎಷ್ಟು ರೌಂಡ್ ಹೊಡೆದ್ರು ಅಂತ ಲೆಕ್ಕ ಹಾಕ್ಕೋತಾ ಇರ್ತೀನಿ'' ಎಂದ ಅಂಬುಜಮ್ಮ ಬಲಗೈ ಮುಷ್ಠಿಯಲ್ಲಿ ಹಿಡಿದಿದ್ದ ಹತ್ತು ಸಣ್ಣ ಕಲ್ಲುಗಳನ್ನು ತೋರಿಸಿದರು.

ನಾನು ಬೆಚ್ಚಿಬಿದ್ದಿದ್ದನ್ನು ಗಮನಿಸಿರದ ಅಂಬುಜಮ್ಮ, ''ಇವತ್ತು ಮಧ್ಯಾಹ್ನವೇ ಪದ್ಮಮ್ಮನವರಿಗೆ ಫೋನ್ ಮಾಡ್ತೀನಿ. ನಾಳೆಯಿಂದ ನೀವು ದಂಪತಿಗಳು ತಪ್ಪದೇ ಪಾರ್ಕಿಗೆ ಬನ್ನಿ. ನಮ್ಮೆಜಮಾನ್ರಿಗೆ ನೀವೂ ಜತೆಯಾದಂತೆ ಆಗುತ್ತೆ'' ಅಂತಂದಾಗ ಕಾಲು ಕೆಳಗಿನ ಭೂಮಿಯೇ ಕುಸಿದಂತಾಗಿ, ಮನಸ್ಸಿನಲ್ಲೇ ಪ್ರೊ|| ತೋಲಾಂಡರಾಯರನ್ನು ಶಪಿಸಿಕೊಂಡು ಮನೆಯತ್ತ ಹೆಜ್ಜೆ ಹಾಕಿದೆ. ಆಗಲೇ ಕಣ್ರೀ ಆಪತ್‌ಬಾಂಧವನಂತೆ ಎದುರಿಗೆ ನನ್ನ ಬಾಲ್ಯ ಸ್ನೇಹಿತ ಕಿಟ್ಟಿ ಎದುರಾದದ್ದು. ಹತ್ತಿರದಲ್ಲೇ ಇದ್ದ ದೋಸಾ ಕಾರ್ನರ್‌ಗೆ ನನ್ನನ್ನು ದರದರನೆ ಎಳೆದುಕೊಂಡು ಹೋದ ಕಿಟ್ಟಿ, ದಾರಿಯಲ್ಲಿ ನನ್ನ ಲೇಖನದ ಬವಣೆ ಕೇಳಿ ''ಬನ್ನೇರುಘಟ್ಟದ ಚಿರತೆ ನೋಡಿ ನಾವೆಲ್ಲಾ ಇನ್‌ಸ್ಪೈರ್ ಆಗಬೇಕಯ್ಯಾ. ಹ್ಯಾಗೆ ತಪ್ಪಿಸಿಕೊಂಡ್ತು ನೋಡು. ಒಂದು ಲೇಖನ ಬರೆಯೋಕೆ ನಿನ್ ಕೈಲಿ ಆಗ್ತಾ ಇಲ್ಲ'' ಎಂದ ಕಿಟ್ಟಿ, ವಾಚು ನೋಡಿಕೊಂಡವನೆ ''ಯುರೇಖಾ'' ಅಂದ.

''ಏನಾಯ್ತು ಕಿಟ್ಟಿ?'' ಎಂದೆ.

''ಈ ವಾಚಿನ ಮೇಲೇ ಬರಿಯಯ್ಯಾ, ಲೇಟೆಸ್ಟ್ ಕಥಾವಸ್ತು. ಇದರ ಬಗ್ಗೆ ನಮ್ಮ ಹಾಲಿ ಸಿ.ಎಂ.ಗೂ, ಮಾಜಿ ಸಿ.ಎಂ.ಗೂ ದೊಡ್ಡ ಯುದ್ಧವೇ ನಡೆದು ಹೋಗಿ, ಇದರ ಬಿಸಿ ತೀರಾ ಪರ್ಸನಲ್ ವಿಚಾರಗಳಿಗೂ ತಟ್ಟಿದೆ ಕಣಯ್ಯ.''

''ಥ್ಯಾಂಕ್ಸ್ ಕಿಟ್ಟಿ. ಇವತ್ತು ರಾತ್ರೆಯೇ ಲೇಖನ ಬರೆದು ಕಳುಹಿಸ್ತೀನಿ'' ಅಂತ ಆಶ್ವಾಸನೆ ಕೊಟ್ಟು ಬೀಗಿದ ಮುಖ ಹೊತ್ತು ಮನೆಯ ಕಡೆ ದಾಪುಗಾಲು ಹಾಕಿದೆ.

ಮನೆಯ ವೆರಾಂಡದಲ್ಲಿ ನಮ್ಮ ಪದ್ದಿ ಹಾಗೂ ಮನೆಯ ಪುರೋಹಿತರಾದ ಕೃಷ್ಣ ಜೋಯಿಸರು ಕುಳಿತಿರುವುದು ಕಂಡಿತು.

''ನಮಸ್ಕಾರ ಜೋಯಿಸರೆ'' ಎಂದು ಶಿಷ್ಠಾಚಾರದಿಂದ ಕೈ ಮುಗಿದೆ.

ಆದರೆ ಪ್ರತಿನಮಸ್ಕರಿಸಲು ಅವರಿಗಾಗದೇ ಬಲಗೈಯೆಲ್ಲಾ ಬ್ಯಾಂಡೇಜು ಆಗಿರುವುದು ಶಾಲಿನ ಸಂದಿಯಲ್ಲಿ ಕಾಣಿಸಿತು.

''ಇದೇನು ಜೋಯಿಸರೆ, ಎಲ್ಲಾದ್ರು ಆ್ಯಕ್ಸಿಡೆಂಟ್ ಆಯಿತೇ?'' ಎಂದು ಗಾಬರಿಯಿಂದ ಕೇಳಿದೆ.

''ಹ್ಞೂ ಕಣಯ್ಯ, ನಾನು ಬದುಕಿ, ಪಾರಾಗಿ ಬಂದಿದ್ದೆ ಹೆಚ್ಚಾಯ್ತು.''

''ಅಯ್ಯೋ ರಾಮನೆ, ಅಂಥದ್ದೇನಾಯ್ತು?''

''ಒಂದ್ವಾರದ ಹಿಂದೆ, ಸಂಜೆ ವೇಳೆ ಎಂ.ಜಿ. ರಸ್ತೇಲಿ ನನ್ನ ಪಾಡಿಗೆ ನಾನು ಬಾಯಲ್ಲಿ ಮಂತ್ರ ಪಠಿಸಿಕೊಂಡು ದೇವಸ್ಥಾನದ ಕಡೆಗೆ ಹೋಗ್ತಾ ಇದ್ದೆ. ದೂರದಲ್ಲಿ ಎರಡು ಗುಂಪಿನ

ನಡುವೆ ಮಾರಾಮಾರಿ ನಡೆಯುತ್ತಿದ್ದ ಹಾಗಿತ್ತು. ಮಬ್ಬುಗತ್ತಲು, ಸಾಲದ್ದಕ್ಕೆ ಲೋಡ್‌ಷೆಡ್ಡಿಂಗ್ ಬೇರೆ. ಆ ಗುಂಪಿನ ಬಳಿ ನಾನು ಹೋಗುವುದಕ್ಕೂ ನನ್ನ ಕೊರಳಿನಿಂದ ಕಾಯೇನವಾಚಾ.. ಎಂಬ ಶ್ಲೋಕ ಹೊರಬರುವುದಕ್ಕೂ ತಾಳೆಯಾಯ್ತು ಕಣಯ್ಯ. ಲೇ ಈ ಮಗನೂ ವಾಚಾ ಅಂಥಾವ್ನೆ ಇಕ್ಲಾ ಎರಡು.. ಎಂದು ಕೇಳಿಸಿಕೊಂಡಿದ್ದೇ ನೆನಪು, ಎಚ್ಚರವಾದಾಗ ಆಸ್ಪತ್ರೆಯಲ್ಲಿದ್ದೆ. ನೀನೂ ಯಾವುದಕ್ಕೂ ಹುಷಾರು. ಪರಿಸ್ಥಿತಿ ತಣ್ಣಗಾಗುವವರೆಗೂ ಈ ಹಾಳು ವಾಚು ಕಟ್ಕೋಬೇಡ. ಮುಂದಿನ ಭಾನುವಾರ ನಿಮ್ಮಪ್ಪ ಸುಬ್ರಾಯನ ತಿಥಿ, ಜ್ಞಾಪಿಸೋದಕ್ಕೆ ಬಂದೆ'' ಎಂದು ಪ್ರಯಾಸದಿಂದ ಎದ್ದರು ಜೋಯಿಸರು. ನಾನು ಮತ್ತು ಪದ್ದಿ ಜೋಯಿಸರನ್ನು ಅವರ ಮನೆಯವರೆಗೂ ಬಿಟ್ಟು ವಾಪಸ್ಸು ಬರುವಾಗ, ನನ್ನ ಮ್ಲಾನವದನವನ್ನು ಕಂಡ ಪದ್ದಿ ''ರ್‍ರೀ.. ಯಾಕ್ರೀ? ಒಂಥರಾ ಮಂಕಾಗಿದ್ದೀರಾ?'' ಎಂದು ಆತಂಕದಿಂದ ಕೇಳಿದಳು.

''ಈ ಛಾಲೆಂಜಿನಲ್ಲಿ ನಾನು ಸೋತು ಹೋದೆ ಕಣೆ. ನಾಳೆಯಿಂದ ಸೌಟು ನನ್ನ ಕೈಗೆ ಕೊಡು'' ಎಂದೆ.

''ಛೇ, ಬಿಡ್ತು ಅನ್ರಿ. ನಾನವತ್ತು ಹೇಳಿದ್ದನ್ನು ಸೀರಿಯೆಸ್ಸಾಗಿ ತಗೊ ಬ್ಯಾಡ್ರಿ. ಹ್ಞಾಂ..! ಒಂದ್ಕೆಲ್ಸ ಮಾಡಿದ್ರೆ ಹ್ಯಾಗೆ?''

''ಏನು?''

''ಇಷ್ಟು ದಿನ ನೀವು ಪಾಡು ಪಟ್ಟ ಬವಣೆಯನ್ನೇ ಕಥಾವಸ್ತುವನ್ನಾಗಿ ಬಳಸಿಕೊಂಡು, ಒಂದು ಲೇಖನ ಬರೆದು ಕಳುಹಿಸಿದ್ರೆ?''

''ಗುಡ್ ಐಡಿಯ ಪದ್ದಿ. ಆದರೆ ಈ ಬರೆಯುವ ಕೆಲಸವನ್ನು ನೀನೇ ಮಾಡು. ಆದರೆ ನನ್ನ ಹೆಸರಿನಲ್ಲಿ ಕಳುಹಿಸು.''

''ಇದು ಮೋಸ ಆಗುಲ್ವೇನ್ರಿ?''

''ಖಂಡಿತಾ ಇಲ್ಲ ಪದ್ದಿ. ನೀನು ಇತಿಹಾಸದ ಪುಟಗಳನ್ನು ತಿರುವಿ ಹಾಕು. ವಾಗ್ಗೇಯಕಾರರಾದ ಕೆಲವು ಪ್ರಸಿದ್ಧ ರಾಜರುಗಳ ಶ್ರೇಷ್ಠ ರಚನೆಗಳ ಹಿಂದೆ, ಇಂದಿನ ಹಲವು ಪ್ರಸಿದ್ಧ ಕವಿಗಳ, ಕಥೆ, ಕಾದಂಬರಿಕಾರರ ಶ್ರೇಷ್ಠ ಕೃತಿಗಳ ಹಿಂದೆ ಘೋಸ್ಟ್ ರೈಟರುಗಳ ಕೈವಾಡ ಖಂಡಿತಾ ಇದೆ. ನೀನೂ ಆ ರೀತಿ ಘೋಸ್ಟ್ ರೈಟರ್ ಆಗುವುದು ನನಗಂತೂ ತುಂಬಾ ಹೆಮ್ಮೆಯ ವಿಷಯ.''

''ರ್‍ರೀ.. ನೀವು ಹೇಳ್ತಾ ಇರೋದು ಕೇಳ್ತಾ ಇದ್ರೆ ನನಗೆ ರಾಹುಲ್ ಗಾಂಧಿಯವರ ಇತ್ತೀಚಿನ ಪಾರ್ಲಿಮೆಂಟು ಭಾಷಣಗಳು ನೆನಪಾಗುತ್ವೆ'' ಎಂದಳು ಪದ್ದಿ.

ಹೌದಲ್ಲವೇ? ಎಂದೆನಿಸಿತು ನನಗೆ. ಅಷ್ಟುಹೊತ್ತಿಗಾಗಲೆ ನಾವಿಬ್ಬರೂ ಜೆ.ಎಲ್.ಬಿ. ರಸ್ತೆಯ ವಾಸುದೇವಾಚಾರ್ಯರ ಭವನದವರೆಗೂ ಬಂದು ಬಿಟ್ಟಿದ್ದೆವು.

''ರ್‍ರೀ.. ಇವತ್ತು ಭಗವದ್ಗೀತೆಯ ಮೇಲೆ ರಾಮಾಚಾರ್ಯ್ಯರ ಪ್ರವಚನವಿದೆ. ಇನ್ನೇನು ಷುರು ಆಗಬಹುದು. ಒಂದರ್ಧ ಘಂಟೆ ಕೇಳ್ಕೊಂಡು ಹೋಗೋಣ'' ಎಂದು

ಒತ್ತಾಯಿಸಿದಳು ಪದ್ದಿ. ನಾವಿಬ್ಬರೂ ಒಳಹೊಕ್ಕು ಆಸೀನರಾದೆವು. ಜರಿ ಮಕುಟ, ಕಲಾಪತ್ತಿನ ಶಲ್ಯ, ಹಣೆಯ ಮೇಲೆ ತ್ರಿನಾಮಧಾರಿಗಳಾಗಿದ್ದ ವಿದ್ವಾನ್ ರಾಮಾಚಾರ್ಯರು, ಸಭಿಕರತ್ತ ಕೈ ಮುಗಿದು, ''ಭಗವಾನ್ ಉವಾಚ'' ಎಂದು ಪ್ರಾರಂಭಿಸುತ್ತಿದ್ದಂತೆ ಯಾರೋ ಒಬ್ಬ ಸಭಿಕರು ಎದ್ದು ನಿಂತು ''ಯಾವ ಭಗವಾನ್ ಮಹಾಸ್ವಾಮಿ?'' ಎಂದು ಸಂಶಯದಿಂದ ಕೇಳಿದರು.

ವಿದ್ವಾನ್ ರಾಮಾಚಾರ್ಯರು ಯಾಕೊ ಒಂದು ಕ್ಷಣ ನಿರುತ್ತರಾದರು.

ನನ್ನ ಪಕ್ಕೆಯನ್ನು ತಿವಿದ ಪದ್ದಿ, ''ರ್ರೀ.. ನನ್ಗೊಂದು ಡೌಟು ಬರುತ್ತಿದೆ. ಈ ರೈಟರುಗಳ ಹಿಂದೆ ಘೋಸ್ಟ್ ರೈಟರ್ರುಗಳು ಇರುವುದು ಎಷ್ಟೋ ಕ್ಷೇಮ. ಆದರೆ, ಈ ರೈಟರ್ರುಗಳ ಒಳಗೇ ಘೋಸ್ಟ್‌ಗಳು ಸೇರಿಕೊಂಡರೆ? ಎಂಥಹ ಡೇಂಜರ್ರೀ ಸಮಾಜಕ್ಕೆ'' ಎಂದಳು.

ರಾಮಾಚಾರ್ಯರಿಗೆ ಆದ ಹಾಗೆ, ನನ್ನ ತಲೆಯೂ ಯಾಕೋ ಒಂದು ಕ್ಷಣ ಗೊಂದಲದ ಗೂಡಾಯ್ತು.



# ಸರಸ ದಾಂಪತ್ಯ

● ಮೂಲ : ಪ್ರೊ. ಅ.ರಾ.ಮಿತ್ರ

● ರಂಗರೂಪಾಂತರ : ಬೇಲೂರು ರಾಮಮೂರ್ತಿ

ರಂಗಣ್ಣ ಪೇಪರ್ ಓದುತ್ತಾ ಕೂತಿದ್ದಾನೆ. ಒಳಗಿಂದ ಸರಸ ಬಂದು ಅವನ ಹಿಂದೆ ನಿಲ್ಲುತ್ತಾಳೆ

ಸರಸ : ಇಲ್ನೋಡೀಂದ್ರೆ.

(ರಂಗಣ್ಣ ಗಾಬರಿಯಿಂದ ಸುತ್ತಮುತ್ತ ನೋಡಿ ಏನೋ ಗೊಂದಲ ಗೊಂಡವನಂತೆ ಮತ್ತೆ ಪೇಪರ್ ಓದೋದನ್ನ ಮುಂದುವರಿಸುತ್ತಾನೆ)

ಸರಸ : (ತುಸು ಜೋರಾಗಿ) ಇಲ್ನೋಡೀಂದ್ರೆ.

ರಂಗಣ್ಣ : ಲೇ ನನ್ನ ಹಿಂದೆ ನಿಂತ್ಕೊಂಡು ಇಲ್ನೋಡೀಂದ್ರೆ ಅಂದ್ರೆ ಹೇಗೇ? ಎದುರಿಗೆ ಬಂದು ನಿಂತ್ಕೊಬಾರ್ದೇನೇ.

ಸರಸ : (ಎದುರಿಗೆ ಬಂದು ನಿಂತು) ಹಾಗಲ್ಲಾಂದ್ರೆ.

ರಂಗಣ್ಣ ಇನ್ನು ಹೇಗೇಂದ್ರೆ.

ಸರಸ : ಥೂ ಹೋಗೀಪ್ಪ.

ರಂಗಣ್ಣ : ಹೋಗಲ್ಲ ಕಣೆ, ಈಗ ತಾನೇ ಆಫೀಸಿನಲ್ಲಿ ಕೆಲಸ ಮಾಡಿ ಸುಸ್ತಾಗಿ ಬಂದಿದೀನಿ ಈಗ ಮತ್ತೆಲ್ಲೂ ಹೋಗಲ್ಲ.

ಸರಸ : ಥೂ ಹೋಗೀಪ್ಪ ನೀವೊಬ್ರು.

ರಂಗಣ್ಣ : ನಾನು ಒಬ್ನೆ ಕಣೆ, ನೀನೂ ಒಬ್ಳೆ ತಾನೇ. (ಎದ್ದು ಅವಳ ಹತ್ರ ಹೋಗಿ ಸೂಕ್ಷ್ಮವಾಗಿ ಅವಳನ್ನು ಗಮನಿಸಿ) ಅಥವಾ ನಿನ್ನ ಕಡೆಯಿಂದ ಏನಾದ್ರೂ ವಿಶೇಷ ಉಂಟೋ.

ಸರಸ: : ಥೂ ನಿಮ್ಮ. ನಿಮಗಂತೂ ಒಂಚೂರೂ ನಾಚಿಕೇನೇ ಇಲ್ಲ. ನಾನು ಏನೋ ಹೇಳೋಕೆ ಬಂದ್ರೆ ನೀವ್ ಯಾಕೋ ಹುಚ್ಚುಚ್ಚಾಗಿ ಆಡ್ತಿದೀರ.

ರಂಗಣ್ಣ : ನಿನ್ನ ಕೈ ಹಿಡಿದ ಮೇಲೇ ಅಲ್ವೇನೇ ನಾನು ಹುಚ್ಚುಚ್ಚಾಗಿ ಆಡ್ತಾ ಇರೋದು.

> ಭಾಷಣಕಾರರು ನಿಮ್ಮ ಗದ್ದಲದಲ್ಲಿ ನನ್ನ ಮಾತು ನನಗೇ ಕೇಳಿಸೊಲ್ಲ
> ಒಂದು ಧ್ವನಿ – ನಿಮ್ಮ ಪುಣ್ಯ.

ಸರಸ : ಸಾಕು ನಿಲ್ಲಿಸ್ರೀ ನಿಮ್ ಹುಚ್ ಮಾತ್ನ, ನಾನು ಹೇಳಬೇಕಾಗಿರೋ ಮಾತ್ನೇ ಮರೆಸಿಬಿಡ್ತೀರ.

ರಂಗಣ್ಣ : ನಾನು ನಿನ್ನ ಮಾತು ಮರೆಸೋದುಂಟೇನೇ? ಮರೆಸೋಕೆ ನೀನು ಬಿಡಬೇಕಲ್ಲ. ಏನಾದರೂ ಮಾತಾಡಬೇಕಾದ್ರೆ ಬರ್ಜಿ ರೆಡಿ ಮಾಡ್ಕೊಂಡು ಬಂದು ನಿನ್ನ ಮಾತು ಕೇಳಿಸ್ಕೊಳೋತನಕ ಚುಚ್ತನೇ ಇರ್ತೀಯ.

ಸರಸ : ಹೌದು ಚುಚ್ತೀನಿ. ನೀವೇ ಯಾವಾಗ್ಲೂ ಚುಚ್ಕೊಂಥ ಮಾತಾಡೋದು. ಈಗೇನು ನನ್ನ ಮಾತು ಕೇಳ್ತೀರೋ ಇಲ್ವೋ?

ರಂಗಣ್ಣ : ನಾನು ಯಾವತ್ತು ನಿನ್ನ ಮಾತು ಕೇಳಿಲ್ಲ ಹೇಳು. ಇಷ್ಟರ ಮೇಲೆ ಈ ಮನೇಲಿ ನಡೆಯೋದೂ ನಿನ್ನ ಮಾತೇ ತಾನೆ.

ಸರಸ : ಮಾತೆ ಮಾತೆ ಅಂತ ನನ್ನನ್ನೋದು. ಮಾತಾಡೋದು ಮಾತ್ರ ನೀವೇ. ಈಗ ಇಲ್ಕೇಳಿ ಬಹಳ ಮುಖ್ಯವಾದ ವಿಚಾರ ಒಂದು ನಿಮಿಷದಲ್ಲಿ ಹೇಳಿ ಮುಗಿಸ್ತೀನಿ ಕೇಳಿ.

ರಂಗಣ್ಣ : ಇದೇನ್ ಪರಮಾಶ್ಚರ್ಯವೇ? ಒಂದು ನಿಮಿಷದಲ್ಲಿ ಮಾತು ಮುಗಿಸ್ತೀಯಾ? ಹದಿನೈದು ನಿಮಿಷ ಮಾತಾಡಿದ್ರೂ ವಿಷಯದ ಹತ್ರ ಕೂಡಾ ಸುಳಿಯದಿರೋದೇ ಹೆಂಗಸರ ಜಾಯಮಾನ. ಅಂಥಾದ್ರಲ್ಲಿ ನೀನು ವಿಶ್ವದಾಖಲೆ ಮಾಡೋಕೆ ಹೊರಟಿದೀಯೋ ಹೇಗೆ?

ಸರಸ : ದಾಖಲೆ ಅಂತ ದಾಖಲೆ. ನಿಮ್ಮನ್ನ ನನ್ ಮಾತು ಕೇಳೋ ಹಾಗೆ ಮಾತಿದ್ರೆ ಅದೇ ಒಂದು ದಾಖಲೆ. ನಿಮ್ ಹುಚ್ಚಾಟ ಬಿಟ್ಟು ಈಗ ನಾನು ಮಾತಷ್ಟು ಕೇಳ್ತೀರಾ.

ರಂಗಣ್ಣ : ಹೇಳ್ತೀನಿ ಹೇಳ್ತೀನಿ ಅಂತ ಅವಾಗಿಂದ ಹೇಳ್ತಿದೀಯೇ ಹೊರತು ಅದೇನು ಹೇಳ್ತೀಯ, ಅದ್ಯಾಕೆ ಹೇಳ್ತೀಯ, ಯಾರ ವಿಚಾರ ಹೇಳ್ತಿಯ ಅಂತ ನಾನೂ ಕಾಯ್ತನೇ ಇದೀನಿ. ಅದೇನು ಅಂತ ಈಗಲಾದ್ರೂ ಹೇಳು.

ಸರಸ : ಹೇಳೋಕೆ ನೀವು ಬಿಟ್ರೆ ತಾನೇ. ಈಗ ಹೇಳೇಬಿಡ್ತೀನಿ ಇಲ್ಕೇಳಿ ನನ್ನ ಸ್ನೇಹಿತೆ ಪ್ರಮೀಳ ಇದಾಳೆ ನೋಡಿ.

ರಂಗಣ್ಣ : ಬೇಡ ಕಣೆ ನೀನೇ ಇರುವಾಗ ಇನ್ನು ಅವಳನ್ನು ಬೇರೆ ಯಾಕೆ ನೋಡ್ಲಿ. ಅವತ್ತು ಮಾರ್ಕೆಟ್ ಹತ್ರ ಅದ್ಯಾವ್ದೋ ಹುಡುಗೀನ ನೋಡ್ತಿದ್ದೆ ಅಂತ ನೀನು ಸುಮ್ ಸುಮ್ನೆ ನನ್ನ ಬೈದಿದ್ದೆ ಮತ್ತೆ ಇವತ್ತು ಪ್ರಮೀಳ ಇದಾಳೆ ನೋಡಿ ಅಂತಿದೀಯ.

ಸರಸ : (ತಲೆ ಚಚ್ಚಿಕೊಂಡು) ಯಾಕಿಷ್ಟು ಪಟಿಂಗತನ ನಿಮಗೇಂತೀನಿ.

ರಂಗಣ್ಣ : ಎಲ್ಲ ನಿನ್ನ ಟ್ರೈನಿಂಗೇ. ಇರ್ಲಿ ನಿನಗೆ ಅಶ್ವತ್ಥಕಟ್ಟೆಗೆ ಪ್ರದಕ್ಷಿಣೆ ಹಾಕೋಷ್ಟು ಜನ ಫ್ರೆಂಡ್ಸಿದಾರೆ. ಅವರಲ್ಲಿ ಪ್ರಮೀಳ ಯಾರು ಅಂತ ಹೇಗೆ ನೆನೆಪು ಮಾಡ್ಕೊಳ್ಲಿ.

ಹಾ. ಒಬ್ಬಳು ಸುಟ್ಟಮೂತಿಯವಳು ಆಗಾಗ ಬಂದು ಸಕ್ಕರೆ ಕಾಫಿಪುಡಿ ಸಾಲ ತಗೊಂಡು ಹೋಗಿ ವಾಪಸ್ಸೇ ಕೊಡಲ್ವಲ್ಲ ಅವಳೋ ಇಲ್ಲ ಮದುವೆ ರಿಸೆಪ್ಷನ್‌ಗೆ ಹೋಗಬೇಕು ಅಂದ್ರೆ ನಿನ್ನ ರೇಷ್ಮೆ ಸೀರೇನ ತಗೊಂಡು ಹೋಗಿ ಅದರ ಮೇಲೆ ಸಾರು ಪಾಯಸ ಚೆಲ್ಲಿ ತಂದ್ಕೊಡ್ತಾಳಲ್ಲ ಅವಳೋ.

ಸರಸ : ಯಾಕ್ರೀ ನನ್ನ ಫ್ರೆಂಡ್ಸ್‌ನೆಲ್ಲ ಆಡ್ಕೊಳ್ಳೋದು? ನಿಮ್ಮ ಫ್ರೆಂಡ್ಸೇನು ಭಾಳ ಡೀಸೆಂಟಾ? ನೀವು ಅವತ್ತು ನಿಮ್ಮ ಪರಮಾಪ್ತ ಸ್ನೇಹಿತ ಅಂತ ಕರ್ಕೊಂಡು ಬಂದಿದ್ರಲ್ಲ ಇಜ್ಜಲು ಮುಖದ ಮಹಾಕಾಳಯ್ಯನ್ನ.

ರಂಗಣ್ಣ : ನನ್ನ ಫ್ರೆಂಡ್ಸ್‌ನ ಆಡ್ಕೊಂಡ್ರೆ ನಾನೂ ಸುಮ್ನಿರಲ್ಲ? ನಿನ್ನ ಡಬ್ಬಲ್ ಜಡೆ ಸಣಕಲಿ ಇನ್ನೇನು ಹೊಳೆದು ಹೋಗ್ತಿರೋದು.

ಸರಸ : ನಿಮಗ್ಯಾಕ್ರೀ ದಾಕ್ಷಾಯಿಣಿ ಮೇಲೆ ಅಂಥಾ ಕೋಪ. ನಿಮ್ಮ ಫ್ರೆಂಡಿದಾರಲ್ಲ ಅದೆಂಥದೋ ಸುಡುಗಾಡು ಹೆಸರು, ಊರಗಲಕ್ಕೆ ಯಾವಾಗ್ಲೂ ಹಲ್ಕಿರಿತಾ ಇರ್ತಾರಲ್ಲ.

ರಂಗಣ್ಣ : ಯಾರು ಗೋಪಾಲಿನೇ? ನಿನ್ನ ಫ್ರೆಂಡು ನಳಿನಿ ಇನ್ನೇನು. ಅವಳು ಬಾಯಿ ಬಿಟ್ಟರೆ ಕೆಳಗಡೆ ಮೂರಂತಸ್ತಿನ ಹಲ್ಲುಗಳ ಸಾಲೇ ಕಾಣುತ್ತೆ. ಅದೂ ದರಿದ್ರ ಹಳದೀ ಹಲ್ಲು. ಬಾಯಿ ವಾಸ್ನೆ ಬೇರೆ.

ಸರಸ : ಅವಳ ಹಲ್ಲು ಇರೋದೇ ಹಾಗೆ. ನೀವ್ಯಾಕ್ರೀ ಅವಳ ಬಾಯಿ ಹತ್ರ ಹೋಗಿದ್ರಿ.

ರಂಗಣ್ಣ : ಹೋಗಿದ್ದೆ ಬಾಯಿ ಹತ್ರ ಚನ್ನಾಗಿದ್ರೆ ಒಂದು ಮುತ್ತು ಕೊಡೋಣ ಅಂತ. ಬಡ್ಕೊಂಡ್ರು. ಅಲ್ವೇ ನನ್ನ ಫ್ರೆಂಡ್ಸ್ ವಿಷಯಕ್ಕೆ ಯಾಕೇ ಬರ್ತೀಯಾ.

ಸರಸ : ನೀವೂ ಯಾಕ್ರೀ ನನ್ನ ಫ್ರೆಂಡ್ಸ್ ವಿಷಯಕ್ಕೆ ಬರೋದು.

ರಂಗಣ್ಣ : ಹಾಳಾಗ್ಲಿ ಅದೇನೋ ಪ್ರಮೀಳ ಅಂದ್ಯಲ್ಲ ಅವಳ ವಿಷಯ ಹೇಳು.

ಸರಸ : ಅದನ್ನೇ ಹೇಳೋಕೆ ಬಂದಿದ್ದು. ನಿಮ್ಮ ದರಿದ್ರ ಮಾತಲ್ಲಿ ಮರೆತೇ ಹೋಯ್ತು.

ರಂಗಣ್ಣ : ಮರೀದೇ ಇನ್ನೇನ್ ಮಾಡ್ತೀಯ. ಮರೆಯೋದು ಹೆಂಗಸರ ನಿಮ್ಮ ಜನ್ಮಸಿದ್ಧ ಹಕ್ಕು ತಾನೇ.

ಸರಸ : ನೀವಿನ್ನೇನು ಕಮ್ಮಿ, ಮೊನ್ನೆ ಅದ್ಯಾರ ಮನೆಗೋ ಊಟಕ್ಕೆ ಅಂತ ಕರ್ಕೊಂಡು ಹೋದೋರು ಬಸ್ ಇಳಿದ ತಕ್ಷಣ ನನ್ನನ್ನೂ ಮರೆತು ಬೇಗ ಬೇಗ ನಡೀತಾ ಇರ್ಲಿಲ್ವೆ. ನಾನು ನಿಮ್ಮ ಹಿಂದೆ ಓಡೋಡಿ ಬರ್ತಿದ್ದೆ. ನೋಡೋರಿಗೆಲ್ಲ ಅದೊಂಥರಾ ತಮಾಷೆಯಾಗಿ ಕಾಣ್ತಿತ್ತಲ್ಲ.

ರಂಗಣ್ಣ : ನೀನಿನ್ನೇನು. ಮೊನ್ನೆ ನನ್ನನ್ನ ಊಟಕ್ಕೆ ಕೂರಿಸಿಬಿಟ್ಟು ಮಜ್ಜಿಗೆ ಇಸ್ಕೊಂಡು ಬರ್ತಿನಿ ಅಂತ ಪಕ್ಕದ ಮನೆಗೆ ಹೋದೋಳು ಅಲ್ಲೇ ಹರಟೆ ಹೊಡೀತಾ ನಿಂತಿರ್ಲಿಲ್ವಾ.

ಸರಸ : ಅಬ್ಬ ಒಂದಿನ ಮರೆತಿದ್ದಕ್ಕೆ ಅದೆಷ್ಟು ನೆನಪು ಮಾಡ್ಕೊಂಡು ಆಡ್ಕೊತೀರೀ.

ರಂಗಣ್ಣ : ಹೋಗ್ಲಿ ಅದೇನೋ ಪ್ರಮೀಳಾ ವಿಚಾರ ಅಂದ್ಯಲ್ಲ ಅದನ್ನ ಹೇಳಿ ಜಾಗ ಖಾಲಿ ಮಾಡು.

ಸರಸ : ಯಾಕೆ ನಾನಿಲ್ಲಿ ನಿಂತಿದ್ರೆ ನಿಮಗೆ ಮೈ ಉರಿಯುತ್ತಾ. ಬೇಕಾದಾಗ ಮಾತ್ರ (ಅಣಕಿಸುವ ದನಿಯಿಂದ) ಬಾ ಸರಸು ಬಾ ಸರಸು ನನ್ನ ಪಕ್ಕ ಕೂತ್ಕೊ ಅಂತೀರಾ.

ರಂಗಣ್ಣ : ತಪ್ಪಾಯ್ತು ಮಹರಾಯಿತಿ ಇನ್ಮೇಲೆ ಅಂಥಾ ತಪ್ಪು ಮಾಡೋಲ್ಲ ಆಯ್ತಾ ಈಗ್ಲಾದ್ರೂ ನಿನ್ನ ಪ್ರಮೀಳ ವಿಷಯ ಏನೂಂತ ಹೇಳ್ತೀಯಾ.

ಸರಸ : ಅದನ್ನೇ ಹೇಳೋಕೆ ಬಂದಿದ್ದು ಅಂದ್ರೆ, ಆ ಪ್ರಮೀಳಾ ಇದಾಳಲ್ಲ.

ರಂಗಣ್ಣ : ಮತ್ತದೇ ಮಾತು. ಪ್ರಮೀಳಾ ಇದಾಳೆ ಕಣೆ, ಅವಳಿಗೆ ಏನೂ ಆಗಿಲ್ಲ. ಅವಳನ್ನ ಯಾರೂ ಹೊತ್ಕೊಂಡು ಹೋಗಿಲ್ಲ.

ಸರಸ : ಥೂ ಬಿಡ್ತು ಅನ್ನೀಂದ್ರೆ. ಅದ್ಯಾಕೆ ಅಂಥಾ ಮಾತಾಡ್ತೀರ. ಪ್ರಮೀಳನ್ನ ಯಾರಾದ್ರು ಹೊತ್ಕೊಂಡು ಹೋದ್ರೆ ಪಾಪ ಅವಳ ಗಂಡ ಏನು ಮಾಡಬೇಕು

ರಂಗಣ್ಣ : ಇನ್ನೇನು ಮಾಡಬೇಕು. ಇನ್ನೊಂದು ಚೆನ್ನಾಗಿರೋ ಹೆಣ್ಣು ನೋಡಿ ಮದುವೆ ಮಾಡ್ಕೊಬೇಕು.

ಸರಸ : ಏನು ದರಿದ್ರದ ಮಾತೂಂತೀನಿ. ಈಗ ನನ್ನನ್ನು ಯಾರಾದ್ರೂ ಹೊತ್ಕೊಂಡು ಹೋದ್ರೆ ನೀವೇನು ಮಾಡ್ತೀರ.

ರಂಗಣ್ಣ : ನೀನು ಹಾಗೆಲ್ಲ ನನಗೆ ಆಸೆ ಹುಟ್ಟಿಸ್ಬೇಡ. ಅಂಥಾ ಪುಣ್ಯ ನಾನು ಮಾಡಿಲ್ಲ.

ಸರಸ : ಅಂದ್ರೆ ನನ್ನನ್ನ ಯಾರಾದ್ರು ಹೊತ್ಕೊಂಡು ಹೋಗ್ಲಿ ಅಂತ ಕಾಯ್ತಾ ಇದೀರಾ.

ರಂಗಣ್ಣ : ನಾನ್ಯಾಕೆ ಕಾಯ್ಲಿ. ಯಾರಾದ್ರೂ ನಿನ್ನನ್ನ ಹೊತ್ಕೊಂಡು ಹೋಗಬೇಕು ಅಂತ ಬಂದ್ರೂ ನಿನ್ನ ಮುಖನಾ, ನಿನ್ನ ಆಕಾರನಾ ನೋಡಿ ಹಾಗೇ ಓಡಿ ಹೋಗ್ತಾರೆ.

ಸರಸ : ನಾನು ಅಷ್ಟು ಕೆಟ್ಟದಾಗಿದೀನಿ ಅಂತನಾ ನಿಮ್ಮರ್ಥ. ಏನಾದ್ರೂ ತಗೊಂಡು ಬಂದು ನಿಮ್ ತಲೆ ಕುಟ್ಟಿಬಿಡ್ತೀನಿ ಅಷ್ಟೆ.

ರಂಗಣ್ಣ : ನನ್ನ ತಲೆಗೆ ಹೇಗೆ ಕುಟ್ತೀಯಾ ನೀನೇ ಬೈತಿರ್ತೀಯ ನಿಮಗೆ ತಲೆನೇ ಇಲ್ಲ ಅಂತ.

ಸರಸ : ಹೌದು ನಿಮಗೆ ತಲೆ ಇಲ್ಲ. ಆದ್ರೆ ಕುತ್ತಿಗೆ ಮೇಲೆ ಅದೆಂಥದೋ ಇದ್ಯಲ್ಲ ಅದರ ಮೇಲೆ ಕುಟ್ತಿನಿ. ಈಗೇನು ಪ್ರಮೀಳಾ ವಿಚಾರ ಕೇಳಿಸ್ಕೋತೀರೋ ಇಲ್ವೋ.

ರಂಗಣ್ಣ : ಇಷ್ಟು ವರ್ಷ ಸಂಸಾರ ಮಾಡಿದ್ರೂ ನಿನ್ನ ಮಾತನ್ನ ಕೇಳಿಸ್ಕೊಳಲ್ಲ ಅನ್ನುವಷ್ಟು ಧೈರ್ಯ ನನಗಿನ್ನೂ ಬಂದಿಲ್ಲ ಕಣೆ ಹೇಳು ಏನಾಯಿತು ಪ್ರಮೀಳಾಗೆ.

ಸರಸ : ಏನೂ ಆಗಿಲ್ಲಾಂದ್ರೆ, ಮೊನ್ನೆ ಪ್ರಮೀಳಾ ಕಸಿನ್ನು ಮುಂಬೈನಿಂದ ಬಂದ್ಲಲ್ಲ ಅವಳತ್ರ ಪ್ರಮೀಳಾ ಆನಂದ ಕಲರ್ ಸೀರೆ ತಗೊಂಡಿದಾಳೆ. ಬರೀ ಮೂರು ಸಾವಿರ ರೂಪಾಯಿಯಂತೆ. ಅದಕ್ಕೆ ಬೆಂಗಳೂರಲ್ಲಿ ಏನಿಲ್ಲಾಂದ್ರೂ ಐದು ಸಾವಿರ ರೂಪಾಯಾಗುತ್ತಂತೆ.

ರಂಗಣ್ಣ : ಅವಳು ಆನಂದ ಕಲರ್ ಸೀರೆ ತಗೊಂಡ್ಳು ಅಂತ ನೀನ್ಯಾಕೆ ದು:ಖದ ಕಲರ್ ದುಪ್ಪಟಿ ಹೊದ್ಕೊಂಡೋಳ ಹಾಗೆ ಆಡ್ತಾ ಇದೀಯ. ತಗೊಳ್ಳಿ ಬಿಡು.


ಸರಸ : ಹಾಗಲ್ಲಾಂದ್ರೆ. ಪ್ರಮೀಳ ಸೀರೆ ತೋರಿಸೋಕೆ ನನ್ನನ್ನ ಕರೆದಿದ್ಲು. ನನಗೂ ಆ ಕಲರ್ ಸೀರೆ ತುಂಬಾ ಇಷ್ಟ ಆಯ್ತು. ಅದಿಕ್ಕೆ ಪ್ರಮೀಳ ಬೇಕಾದ್ರೆ ಈ ಸೀರೆನ ನೀನೇ ಇಟ್ಕೊ. ನಿನಗೋಸ್ಕರ ಬರೀ ಎರಡೂವರೆ ಸಾವಿರ ರೂಪಾಯಿಗೆ ಕೊಡ್ತಿನಿ ಅಂದ್ಲು. ದುಡ್ನ ಕಂತಲ್ಲಿ ಕೊಟ್ರೂ ಆಗುತ್ತಂತೆ. ಆ ಸೀರೆ ನಾನು ತಗೊಂಡು ಬರ್ಲಾ ಅಂದ್ರೆ.

ರಂಗಣ್ಣ : (ರಂಗಣ್ಣ ಗಾಬರಿಯಾದರೂ ತೋರಿಸಿಕೊಳ್ಳದೇ ಜೋಬಿನಿಂದ ಮೊಬೈಲ್ ತೆಗೆದು ಕಾಲ್ ರಿಸೀವ್ ಮಾಡೋನಂತೆ) ಹಲೋ ಹಲೋ ಯಾರು ರಾಜಾರಾಯನಾ ಏನಯ್ಯಾ.. ಕೇಳಿಸ್ತನೇ ಇಲ್ಲ ಇರು ಆಚೆಗೆ ಬರ್ತೀನಿ (ಅಂದು ಹೊರಗೆ ಹೊರಟೇ ಹೋಗ್ತಾನೆ).

ಸರಸ : ರೀ.. ರೀ.. ರೀ..

ಅಲ್ಲಾ ನಾನು ಸೀರೆ ವಿಚಾರ ತೆಗೆದ ತಕ್ಷಣ ಮೊಬೈಲ್ ರಿಂಗಾಗ್ದೇ ಇದ್ರೂ ಮಾತಾಡ್ಕೊಂಡು ಹೊರಟೇ ಹೋದ್ರಲ್ಲ. ಈ ಗಂಡಸರಿಗೆ ಸೀರೆ ಉಟ್ಟಿರೋರು ಬೇಕು ಆದ್ರೆ ಸೀರೆ ಬೇಡ. ಇದ್ಯಾವ ನ್ಯಾಯ. ಅವರೇನಾದ್ರೂ ಮಾಡ್ಕೊಳ್ಳಿ ಅವರು ಒಳಕ್ಕೆ ಬರೋ ಹೊತ್ತಿಗೆ ಪ್ರಮೀಳ ಹತ್ರ ತಂದಿರೋ ಸೀರೆ ಉಟ್ಕೊಂಡೆ ಬಿಡ್ತೀನಿ, ಅದೇನ್ ಮಾಡ್ತಾರೋ ನೋಡೇಬಿಡ್ತಿನಿ.

(ಹೊರಡುತ್ತಾಳೆ)



# ಬರೀ ಗೆರೆಯಲ್ಲೋ ಅಣ್ಣಾ

• ಪ್ರೊ. ಬಾಲಕೃಷ್ಣ ಹೊಸಂಗಡಿ

ಇದು ಲೈನ್ ಆಫ್ ಕಂಟ್ರೋಲ್ ಮತ್ತು ಕಂಟ್ರೋಲ್ ಆಫ್ ಲೈನ್!

ಇದು ನಿಯಂತ್ರಣರೇಖೆ ಮತ್ತು ರೇಖಾನಿಯಂತ್ರಣ. ಮೊದಲಿಗೆ ಲಕ್ಷ್ಮಣ ರೇಖೆ ಎಳೆದ. ಆಮೇಲೆ ಬಂದ ರಾವಣ ಲೈನ್ ಹೊಡೆದ ಎನ್ನುವ ಚುಟುಕಿನ ಹಾವಭಾವ. ಲಕ್ಷ್ಮಣನ ನಿಯಂತ್ರಣರೇಖೆ ಎಳೆಯುವ ಮತ್ತು ರಾವಣನ ಲೈನ್ ಹೊಡೆಯುವ ಕ್ರಿಯೆ ಒಟ್ಟಿಗೇ ನಡೆಯಬೇಕು ಇಲ್ಲಿ. ಹಾಗಾಗಿ ಇದು ಬರೀ ಗೆರೆಯಲ್ಲೋ ಅಣ್ಣಾ!!

> ‘ಇಷ್ಟೊಂದು ಚಿಕ್ಕ ಸಾಮಾನು ಎಂಥಾ ಕಿರಿಕ್ ಮಾಡುತ್ತೆ ನೋಡು’

ಪೆನ್ ಈಸ್...

ಪ್ಯಾರಿಸ್‌ನಲ್ಲಿ ಚಾರ್ಲಿಹೆಬ್ಡೋ ಮೇಲೆ ದಾಳಿ ನಡೆಸಿದ ನಂತರ ಪತ್ರಿಕೆಯೊಂದರಲ್ಲಿ ಬಂದ ಸತೀಶ್ ಆಚಾರ್ಯರ ಕಾರ್ಟೂನ್ ಗಮನಿಸಿ. ಆ ಕಾರ್ಟೂನ್‌ನಲ್ಲಿ ಪತ್ರಿಕಾಕಚೇರಿ ಜಾಲಾಡಿ ಸಿಕ್ಕ ವ್ಯಂಗ್ಯಚಿತ್ರಕಾರನ ಚಿಕ್ಕಪೆನ್ ಎತ್ತಿಕೊಂಡ ಗನ್‌ಧಾರಿ ಉಗ್ರರು ಹೇಳುವ ಮಾತು – ‘ಇಷ್ಟೊಂದು ಚಿಕ್ಕ ಸಾಮಾನು ಎಂಥಾ ಕಿರಿಕ್ ಮಾಡಿತ್ತು ನೋಡು.’ ಇದು ಕಿರಿದರೊಳ್ ಪಿರಿದರ್ಥಮಂ ತುಂಬುವ ಪರಿ. ಕೆಲವೊಮ್ಮೆ ಕಿರಿದರೊಳ್ ಕಿರಿಕಿರಿ ಅರ್ಥಮಂ ತುಂಬುವ ಝರಿ.

ಸತೀಶರ ಇನ್ನೊಂದು ವ್ಯಂಗ್ಯಚಿತ್ರ ಭಾರತದಲ್ಲಿ ಶೌಚಾಲಯಕ್ಕಿಂತ ಮೊಬೈಲ್ ಸಂಖ್ಯೆ ಜಾಸ್ತಿ ಅನ್ನೋದನ್ನು ವಿಡಂಬಿಸುತ್ತದೆ. ಅದರ ಶೀರ್ಷಿಕೆ ‘ಮೊಬೈಲ್ ಟಾಯ್ಲೆಟ್.’ ವ್ಯಕ್ತಿಯೊಬ್ಬ ರೈಲ್ವೇ ಹಳಿಯ ಮೇಲೆ ಕುಕ್ಕರುಗಾಲಲ್ಲಿ ಕೂತು ಪ್ರಾತಃಕರ್ಮನಿರತನಾಗಿದ್ದಾನೆ. ಬಯಲೇ ಆಲಯ ಆಗಿರುವ ಆತನ ಮುಂದೆ ನೀರಿನ ಬಕೆಟ್ ಇದೆ. ಎಡದ ಕೈಯಲ್ಲಿ ಕಿವಿ ಕಚ್ಚಿಕೊಂಡಿರುವ ಮೊಬೈಲ್ ಇದೆ! ಕಂಠದ ಅಪ್‌ಲೋಡ್ ಮತ್ತು ಸೊಂಟದ ಡೌನ್‌ಲೋಡ್ ಸಮಾನ ಹಳಿಯಲ್ಲಿ ಸಾಗುತ್ತಿದೆ. ಹರೇ ಕ್ಯಾ ಬಾತ್ ಹೈ!

2014 ಮಾಯಾಕಾಮತ್ ಸ್ಮಾರಕ ಕಾರ್ಟೂನ್ ಸ್ಪರ್ಧೆಯಲ್ಲಿ ಬಹುಮಾನ ಗೆದ್ದ ವ್ಯಂಗ್ಯಚಿತ್ರ ಬಾಬಾ ರಾಮ್‌ದೇವ್‌ಗೆ ಝಡ್‌ಕೆಟಗರಿ ಕುರಿತಂತೆ ಇದೆ. ರಾಮ್‌ದೇವ್ ತನ್ನ

> ಮೇಲಕ್ಕೆ ಹಾರಿದ್ದೆಲ್ಲ ಕೆಳಕ್ಕೆ ಬೀಳಲೇ ಬೇಕು ಕೆಳಕ್ಕೆ ಬಿದ್ದರೆ ಪರವಾಗಿಲ್ಲ.
> ಮೂಲೇಲಿ ಕೂರಿಸಿ ಬಿಟ್ಟರೆ ತಾನೆ ಕಷ್ಟ.

ಒಂದು ಕೈಯನ್ನು ನೆಲಕ್ಕೂರಿ ಕಾಲನ್ನು ಆಕಾಶಕ್ಕೆತ್ತಿ ಆಸನ ಮಾಡುತ್ತಿದ್ದರೆ ಅವರ ಎಡಬಲದ ಕಮಾಂಡೋಗಳೂ ಒಂದು ಕೈಯನ್ನು ನೆಲಕ್ಕೂರಿ ಕಾಲನ್ನು ಆಕಾಶಕ್ಕೆ ಎತ್ತಿದ್ದಾರೆ. ಇನ್ನೊಂದು ಕೈಯಲ್ಲಿ ಬಂದೂಕು ಹಿಡಿದಿದ್ದಾರೆ. ಸತೀಶ್ ಆಚಾರ್ಯ ಎಂಬ ಬೈಲೈನ್ ಕೂಡಾ ಉಲ್ಟಾ.

ಲೈನ್ ಆಫ್ ಲಕ್ಷ್ಮಣ್

ಸಲ್ಮಾನ್ ಖಾನ್‌ನ ಹಿಟ್ ಅಂಡ್ ರನ್ ಬಗ್ಗೆ ಆರ್.ಕೆ. ಲಕ್ಷ್ಮಣ್ ರೇಖೆ ನೋಡಿ. ಬಡವ ರಸ್ತೆ ಮಧ್ಯೆ ಮಲಗಿದ್ದಾನೆ. ಡ್ಯೂಟಿ ಪೊಲೀಸ್ ಮಲಗಿದವನತ್ತ ನೋಡಿ ಹೇಳುತ್ತಾನೆ – 'ಈಗ ರಸ್ತೆ ಬದಿಯಲ್ಲಿ ಮಲಗುವುದಕ್ಕಿಂತ ರಸ್ತೆ ಮಧ್ಯದಲ್ಲಿ ಮಲಗುವುದೇ ಸೇಫ್.'

ಕಾಮನ್‌ಮ್ಯಾನ್ ಮೂಲಕ ಎಂಥೆಂಥಾ ರಾಮ–ರಾವಣ್‌ರನ್ನೂ ಜಾಡಿಸಿದವರು ಲಕ್ಷ್ಮಣ್. ನೆಹರೂರನ್ನೂ ಬಿಟ್ಟವರಲ್ಲ. 62ರ ಚೀನಾ ಯುದ್ಧದ ಹೊತ್ತು. ಯುದ್ಧದ ತೀವ್ರತೆಯಲ್ಲೂ ಇರುವ ನೆಹರೂ ಮುಗ್ಧತೆಗೆ ಇಲ್ಲಿ ವ್ಯಂಗ್ಯದ ಮೊನಚು ತಾಗುತ್ತದೆ. ಇಡೀ ಕಾರ್ಟೂನ್ ಚೌಕಟ್ಟನ್ನು ತುಂಬಿಕೊಂಡಿರುವ ನೆಹರೂ ಬಂಡೆಯ ಮೇಲೆ ಕೂತಿದ್ದಾರೆ. ಪಕ್ಕದ ಕಲ್ಲಿನಲ್ಲಿ ಡಿಸ್ಕವರಿ ಆಫ್ ಇಂಡಿಯಾ ಹೊತ್ತಗೆ. ಎದುರಿನಲ್ಲಿ ಅರಳಲೋ ನರಳಲೋ ಎಂಬಂತಿರುವ ಗುಲಾಬಿ ಹೊತ್ತ ಗಿಡ. ಗುಲಾಬಿಯನ್ನು ನಗೆನೋವಿನಿಂದ ನೋಡುತ್ತಿರುವ ನೆಹರೂ. ಕೆಂಗುಲಾಬಿ ಪ್ರಿಯ ನೆಹರೂ ಹಿನ್ನೆಲೆಯಲ್ಲಿ ಲೈನ್ ಆಫ್ ಕಂಟ್ರೋಲ್ ದಾಟಿ ಬಂದ ಚೀನಿ ಕೆಂಪುಪಡೆ ಚಿತ್ರದ ಊಹೆಯನ್ನು ನೋಡುಗನಿಗೆ ಬಿಟ್ಟುಬಿಡುವ ಲಕ್ಷ್ಮಣ್ ತಂತ್ರ. ನೆಹರೂ ಶಾಂತಿಮಂತ್ರ ಮತ್ತು ಚೀನಾದ ಕುತಂತ್ರ.

ಅರವತ್ತರ ದಶಕದಲ್ಲಿ ತಮಿಳುನಾಡು ಹಿಂದೀ ವಿರೋಧಿ ಪ್ರತಿಭಟನೆಯ ಕಾಲ. ಪೊಲೀಸ್ ಗುಂಡಿನದಾಳಿ, ಸಾವು–ನೋವು. ಎಲ್ಲೆಡೆ ಮುಗಿಲುಮುಟ್ಟುವ ಹಿಂದಿ ವಿರೋಧಿ ಘೋಷಣೆ. ಲಕ್ಷ್ಮಣ್ ವ್ಯಂಗ್ಯಚಿತ್ರದಲ್ಲಿ ತಮಿಳ್‌ತಲೈವರೆಲ್ಲ ಭರವಸೆಯ ಫಲಕವನ್ನು ಹಿಡಿದು ನಿಂತಿದ್ದಾರೆ. ಪ್ರತಿಭಟನೆ ನಿರತ ವಿದ್ಯಾರ್ಥಿ ಫಲಕದ ಮೇಲೂ ಕಲ್ಲುತೂರುತ್ತಿದ್ದಾನೆ. ಫಲಕದ ಒಕ್ಕಣೆ: ಭರವಸೆ – ಇಂಗ್ಲಿಷ್ ಮುಂದುವರೆಯಲಿದೆ. ಹಿಂದಿ ಕಲಿಕೆಗೆ ಒತ್ತಾಯವಿಲ್ಲ. ಹಿಂದಿ ಇಲ್ಲ. ಸದಾ ಇಂಗ್ಲಿಷ್. ಆದರೆ ಆ ಕುಪಿತ ವಿದ್ಯಾರ್ಥಿಯ ಕಲ್ಲು ನಿಲ್ಲೋದಿಲ್ಲ. ಫಲಕದ ಹಿಂದೆ ನಿಂತ ತಲೈವನ್ ಹೇಳುತ್ತಿದ್ದಾನೆ – 'ಹುಡುಗನಿಗೆ ಇಂಗ್ಲಿಷ್ ಕೂಡಾ ಓದಲು ಬರುವುದಿಲ್ಲವೋ!'


ಕಳೆದ ಶತಮಾನದ ತೊಂಬತ್ತರ ದಶಕದಲ್ಲಿ ಮಂದಿರ ನಿರ್ಮಾಣ – ಮಸೀದಿ ನಿರ್ನಾಮದ ಗಲಾಟೆ. ಒಂದೇ ವೇದಿಕೆಯಲ್ಲಿ ಎಲ್ಲ ರಾಜಕಾರಣಿಗಳು ಅಬ್ಬರಿಸಿ ಬೊಬ್ಬಿರಿಯುತ್ತಿದ್ದಾರೆ. ಇದನ್ನು ನೋಡಿದ ಆರ್.ಕೆ.ಯವರ ಸಾಮಾನ್ಯ – 'ಇಷ್ಟೊಂದು ನೇತಾಗಳು ಹೀಗೆ ಒಟ್ಟಿಗೆ ಬಂದದ್ದು ಯಾವಾಗ?' ಚುನಾವಣೆ ಪೂರ್ವೋತ್ತರವನ್ನು ಲಕ್ಷ್ಮಣ್ ವಿಡಂಬಿಸಿದ ರೀತಿ ಅನ್ಯಾದೃಶ. ಚುನಾವಣೆ ಪೂರ್ವದಲ್ಲಿ ಮತದಾರ ಮಹಾಪ್ರಭು. ಅವನದು ಭೀಮಾಕೃತಿ. ನೇತಾಗಳದ್ದೆಲ್ಲ ಕಿರಿಯಾಕೃತಿ. ಕೈಜೋಡಿಸಿ –

ಬೆನ್ನುಬಾಗಿಸಿ ಮತ ಯಾಚಿಸುವ ದೃಶ್ಯ. ಉತ್ತರದಲ್ಲಿ ಪುಢಾರಿಗಳದ್ದು ದೈತ್ಯಾಕಾರ. ಅವರೆಲ್ಲ ಅಡ್ಡಡ್ಡ ಉದ್ದೋ ಉದ್ದ ಬೆಳೆದು ಮತದಾರ ಗಿಡ್ಡವಾಗಿ ಕಾಣಿಸುತ್ತಾನೆ. ಈಗ ಕೈಜೋಡಿಸುವ – ಬೆನ್ನುಬಾಗಿಸುವ ಸರದಿ ಶ್ರೀಸಾಮಾನ್ಯ ಮತದಾರನದ್ದೇ. ಇದು ಪ್ರಜಾಪ್ರಭುತ್ವದಿಂದ ಪ್ರಜಾಪ್ರಭುತ್ವದ ಕಡೆಗಿನ ನಡಿಗೆ.

ಎಮೆರ್ಜನ್ಸಿಯ ಇಂದಿರಾ ಕೈಯಲ್ಲಿ ಪತ್ರಿಕೆ ಹಿಡಿದು ಬೆನ್ನ ಹಿಂದಿನ ತನ್ನ ಫೋಟೋ ನೋಡುತ್ತಿದ್ದಾರೆ. ಭಾವಚಿತ್ರ ಭಯಂಕರವಾಗಿದೆ. ಸುತ್ತಣ ಫ್ರೇಮ್‌ನಲ್ಲಿ ಅತ್ಯಾಚಾರ, ದೌರ್ಜನ್ಯ, ಬಂಧನ, ತುರ್ತುಪರಿಸ್ಥಿತಿ ಎಂಬ ಪದಗಳು ಅಚ್ಚಾಗಿವೆ. ಕೈಯಲ್ಲಿರುವ ಪತ್ರಿಕೆಯ ಮುಖಪುಟದಲ್ಲಿ ಇಂದಿರಾಗೆ ಭಾರೀ ಅಂತರದ ಜಯ ಎಂಬ ಸುದ್ದಿ ಇದೆ. ಇಂದಿರಾ ಹೇಳುತ್ತಾರೆ – 'ನಾನು ಮೊದಲೇ ಹೇಳಿದೆ ನೋಡು. ನನ್ನ ದಾರಿಯಲ್ಲಿ ನೀನು ನಿಲ್ಲಲಾರೆ' ಅಂತ.

ಮೊನ್ನೆ ಮೊನ್ನೆ ಬದುಕಿನ ಪಯಣಕ್ಕೆ ವಿದಾಯ ಹೇಳಿದ ಎಸ್.ವಿ. ಪದ್ಮನಾಭರ ಕಾರ್ಟೂನ್ ನೆನಪಾಗುತ್ತಿದೆ. ಅದು ಕ್ರಿಕೆಟ್ ತಂಡಕ್ಕೆ ದುಡ್ಡು ಕೊಟ್ಟು ಆಟಗಾರರು ಸೇರಿದ್ದರ ಕುರಿತೇ ಗದ್ದಲದ ಕಾಲ. ಹೀಗೆ ಸೇರಿಕೊಂಡಿರಬಹುದಾದ ಆಟಗಾರನೊಬ್ಬ ಕ್ರೀಡಾಂಗಣದಲ್ಲಿ ಆಡುತ್ತಿದ್ದಾನೆ; ಸ್ಟಂಪ್‌ನ ಮಧ್ಯೆ ನಿಂತು ಪತರಗುಟ್ಟವವನಂತೆ ಕಾಣಿಸುತ್ತಾನೆ ಅಷ್ಟೇ. ಪ್ರೇಕ್ಷಕರ ಉದ್ಗಾರ. ಬಹುಶಃ ಈತ 'ಪೇಮೆಂಟ್ ಸೀಟ್ ಇರಬೇಕನ್ನಿಸುತ್ತದೆ.'


ಗೆಳೆಯನೊಬ್ಬ ಗಿನ್ನೆಸ್ ರೆಕಾರ್ಡ್‌ನ ಗಾನಾಲಾಪನೆ ಕುರಿತು ಕಾರ್ಟೂನ್ ಬರೆದು ಕೋರ್ಟ್ ಕಟಕಟೆ ಏರಿದ್ದು, ಇನ್ನೊಬ್ಬ ಗೆಳೆಯ ಬರೆದ ಕ್ಯಾರಿಕೇಚರ್ ಅನ್ನು ನೋಡಿ ತನ್ನ ಮುಖವನ್ನೇಕೆ ಇಷ್ಟೊಂದು ಕೆಟ್ಟದಾಗಿಸಿದ್ದಾನೆ ಎಂದು ಮನೆವಾನರ್ ಕೆಕ್ಕರಿಸಿ ನೋಡಿದ್ದು, ಕಾರ್ಟೂನ್ ತನ್ನದೇ ಎಂದು ಮತ್ತೊಬ್ಬ ಗೆಳೆಯನನ್ನು ಕಥಾಪಾತ್ರ ದಬಾಯಿಸಿದ್ದು.... ಒಂದೇ ಎರಡೇ. ಲೆಕ್ಕವಿಲ್ಲದ ಲೈನ್‌ಗೋಳೋ...



[illegible]




ಸ್ವ- ಭಾವಚಿತ್ರ





ಯಂಗ್ ಟರ್ಕ್



"ಬಾನ್‌ಫೈರ್ ಆ್ಯಪ್ !  ಎಷ್ಟು ಚೆನ್ನಾಗಿದೆ !"





" ಬನ್ನಿ, ಬನ್ನಿ, ಚಿಂಟೂ ತಾಯಿ ಅಲ್ವೇ ನೀವು?
ಅವನು ಬರೆದಿರೋ ಚಿತ್ರದ ಥರಾನೇ ಇದ್ದೀರಾ!"





" ಸೋಲಾರ್ ಪ್ಯಾನೆಲ್ ನ ಪ್ರತ್ಯೇಕವಾಗಿ ಖರೀದಿಸ್ಬೇಕು " ಅಂತ ಬರೆದಿದ್ಯಲ್ರೀ ಇಲ್ಲಿ "






" ಐಸ್‌ಕ್ರೀಮು ಊಟ ಆದ್ಮೇಲ್ "


# ನಿಷ್ಪ್ರಯೋಜಕ ಪುಸ್ತಕಗಳು




ಆಹಹ, ನಿನ್ನ್ಯಾರು ಶಾಂತಿಯ ಪಕ್ಷಿ ಅಂತ ಆಯ್ಕೆ ಮಾಡಿದ್ರೋ!


ಹ್ಯಾಮ್ಲೆಟ್‌ನ ಫ್ಲಾಟುಗಳು








" ಏಪ್ರಿಲ್ ಹತ್ತನೇ ತಾರೀಖಿನ ಒಳಗೆ ಉಪಯೋಗಿಸೋದನ್ನ ಮರೀಬೇಡಿ!"







"ಹುಂ, ಭಾನುವಾರ ಬೆಳಗ್ಗೆ ಬದಲ್ಕೆ , ನಿದ್ದೆ ಮಾಡ್ತಿರೋವಾಗ, ಕನ್ಸಮ್ಗೆ !"








"ನನ್ಹೆಂಡ್ತಿ ವಿಲ್ ನಲ್ಲಿ ಬರೆದಿದ್ದು !"







"ಪುನಃ ಎಲ್.ಬಿ.ಡಬ್ಲ್ಯು"


ಕೋನಲ್ ಬ್ಯಾಂಕ್


1960
ನಾಚಿಕೆ ಆಗಲ್ವೇ?
2010
ನಾಚಿಕೆ ಆಗಲ್ವೇ?



ಬಳಸಿ ಮುಂದೆ ಸಾಗಿ






ನನ್ನ ಯಾಕೆ ಎಲ್ರೂ
ಮುದ್ದಿಸ್ತಾರೆ ಅನ್ನೋದು
ಈಗ ತಿಳೀತು !













" ಅರೆ, 'ಹ್ಯಾಗಿತ್ತು ನಿಮ್ಮ ದಿನ ?' ಅಂತ
ಕೇಳ್ತೀಯಲ್ಲಾ, ನನ್ನ ಬ್ಲಾಗ್ ಓದಿಲ್ವೇ ?"



" ನಾನೇನು ಬ್ಲಡಿ ಮೈಗ್ರೆಂಟ್ ಅಲ್ಲ.
ನಾನು ಇಲ್ಲೇ ಹುಟ್ಟಿದ್ದೀನು!"











" ನೀವು ವ್ಯಂಗ್ಯ ಚಿತ್ರಕಾರರೋ?
ಜೀವನ ಸಾಗುತ್ತೇನು ಅದರಿಂದ ?"



"ಶ್ರೀಮಂತರ ನ್ಯಾಯ ಸಂಹಿತೆಗಳ ಸ್ವಲ್ಪ ತಗೊಂಡಿಯಾ!"




" ನಾನು ಬೇಸಿಗೆ ರಜದಲ್ಲಿ ಏನು ಮಾಡಿದೆ ಅಂತ ನನ್ನ
ಟ್ವಿಟರ್ ಫಾಲೋ ಮಾಡೋರ್ಗೆಲ್ಲಾ ಗೊತ್ತಿರತ್ತೆ !"




" ಕಿವೀಲಿ ಗಂಟೆ ಶಬ್ದ ಕೇಳಿಸುತ್ತೆ ಅಂದ್ರಲ್ಲಾ- ಅದಕ್ಕೆ ಪರಿಹರಿಸ ಬಲ್ಲೆ !"



" ಆ ಮೇಲೆ ನನಗೆ ಹೊಳೀತು. ಕೇವಲ ಒಂದು ಗಂಟೆ ಶಬ್ದ ಕೇಳಿ ನಾನು ಬಾಯಲ್ಲಿ ನೀರು ಸುರಿಸ್ತಾ ಇದ್ದೆ ಅಂತ!"



ಬ್ಯಾಂಕ್ ರಾಬರಿ ಅಲ್ಲಾ, ಟಿಪ್ಪು ಕತ್ತೀನ
ಅಡವಿಡೋದಕ್ಕೆ ಬಂದಿದೀನಿ !



ಸಚಿನ್, ಕ್ರಿಕೆಟ್ ಗೆ ವಿದಾಯ.....
ಸಚಿನ್


ಆಯ್ತು,
ಒಪ್ಪೆ




" ಸಾರ್ ನನಗೆ ಊಟಕ್ಕೆ ಲೇಟಾಗ್ತಾ ಇದೆ !"





"ಸಹಾಯ ಕರ್ಕೊಂಡು ಬರೋವರ್ಗೂ ಹಾಗೇ ಅದನ್ನ ಎಂಗೇಜ್ ಮಾಡ್ಕೊಂಡಿರು !"



" ಒಂದು ಒಳ್ಳೇ ಸುದ್ದಿ ಕೇಳ್ರಿ ! ಪುನರ್ಜನ್ಮ ಇಲ್ವಂತೆ ಕಣೇ !"





" ತರ್ಕಾರಿ ತಿನ್ಬೇಕು ಮರಿ!"
" ತರ್ಕಾರೀನಾ ಇದು!ಜಿಬ್ಬಲು ಸೊಪ್ಪು ಕಿತ್ ಬಿಸಾಕು!"







"ಹೌದು ಮಗು, ನಮ್ಮ
ಪೂರ್ವಜರಿಗೆ ಬಾಲ ಇತ್ತು"


ಐ.ಟಿ


ಅಷ್ಟೊಂದು ಫಾಲೋ ಥ್ರೂ ಬೇಡಾ
ಫೋಟೋಗ್ರಾಫರ್ಸ್ ಎಲ್ಲಾ ಸ್ಟೈಲ್



" ನನ್ನ ಮಾತು ಕೇಳು. ನಿನ್ನ ಔಟ್ ಆಫ್ ದ ಬಾಕ್ಸ್ ಐಡಿಯಾಗಳನ್ನೆಲ್ಲಾ ನಿನ್ನಲ್ಲೇ ಇಟ್ಕೋ"




" ಅಯ್ಯೋ ಹುಚ್ಚು ಮಗು, ಸೂರ್ಯ ಪೂರ್ತಿ ಸುಟ್ಟು ಹೋಗೋದಕ್ಕೆ ಇನ್ನೂ ಐದು ಬಿಲಿಯನ್ ವರ್ಷ ಇದೇ ಕಣೋ, ಅಷ್ಟು ಹೊತ್ತಿಗೆ ಯಾವ್ದಾದ್ರೂ ಅಸ್ಟರಾಯಿಡ್ ಬಂದು ಭೂಮೀನ ಅಪ್ಪಳಿಸಿ ಪುಡಿ ಪುಡಿ ಮಾಡಿರುತ್ತೆ "



" ನಾವು ವಾಕ್ ಸ್ವಾತಂತ್ರ್ಯಕ್ಕಾಗಿ ಪ್ರತಿಭಟನೆ ಮಾಡ್ತಾ ಇದ್ದೀವಿ. ಆದ್ರೆ ಈ ದಿನಗಳಲ್ಲಿ ನಮ್ಮ ಹುದ್ದಾರಲ್ಲಿ ನಾನಿರಬೇಕು ನೋಡಿ!"



" ಅಬ್ಬಾ, ಸರಿಯಾಗಿ ವಿಕೆಟ್ ಮುಂದೇನೇ ನಿಂತಿದ್ದೆ. ಸುಮ್ಮಗೆ
ಬೀಟ್ ಆದ್ರೆ ಎಲ್ ಬಿ ಅಂತ ಔಟಾಗೋದೇ ಬಾಕಿ !"



"ನಿಮ್ಮ ನಾಯಿಯು ಅದು ಹೇಗೆ ಅಷ್ಟು ಸ್ಲಿಮ್ಮಾಗಿದೆ?"
"ಗೊತ್ತಿಲ್ಲಾ ರೀ, ನಾನು ಊಟ ಮಾಡೋವಾಗ್ಲೇ ಅದಕ್ಕೂ ಊಟ ಹಾಕ್ತೀನಿ ಅಷ್ಟೇ !"
" ನಾನೂ ಹಾಗೇ ಮಾಡ್ತೀನಲ್ಲಾ!"



" ನಾನೇನು ನೋಡ್ತಾ ಇಲ್ಲ
ಅನ್ಕೋಬೇಡ.
ಬಾಲ್ ತರೋದು ನಿನ್ನ ಸರದಿ !"



" ಇನ್ನೊಂದು ವಿಷಯ, ನಿಂಗೇನಾದ್ರೂ ಬೇಕಾದ್ರೆ
ನಾನು 24/6 ನಿನಗೆ ಸಿಗ್ತೀನಿ!"




" ನಾವು ಅಮೃತ ಮಹಲ್. ಲಲಿತ್ ಮಹಲ್
ಅನ್ನೋದು ಒಂದು ಅರಮನೆ!"



" ಪ್ರಾರ್ಥನೆಲಿ ಇರೋ ಶಕ್ತಿ ಬಗ್ಗೆ ನೀನು ಹೇಳಿದ್ದು
ನೂರಕ್ಕೆ ನೂರು ಪಾಲು ಸತ್ಯ!"



" ಇಂಟರ್ನೆಟ್‌ನಲ್ಲಿ ನಾಯಿ ಅಂತ ಯಾರಿಗೂ ತಿಳಿಯಲ್ಲ!"



" ನಮ್ಮಿಬ್ಬರಿಗೂ ಒಳ್ಳೇ ಅಡಿಗೆ ಮಾಡಿದ್ದು ನಾನು.
ಈಗ ಪಾತ್ರೆ ಎಲ್ಲಾ ತೊಳೆಯೋದು ನಿನ್ನ ಕೆಲಸ !"



" ಅಮ್ಮಾ, ನಂದೇನೂ ತಪ್ಪಿಲ್ಲಾಮ್ಮಾ, ಇದಕ್ಕೆಲ್ಲಾ ಎಂಟ್ರೋಪೀನೇ ಕಾರಣ!"



" ನಾನೊಬ್ಬ ಆಶಾವಾದಿ. ಗ್ಲೋಬಲ್ ವಾರ್ಮಿಂಗ್ ನ ಪರಿಣಾಮ ಎಲ್ಲ ನ್ಯೂಕ್ಲಿಯರ್ ವಿಂಟರ್ ಗಿಂದ ಪರಿಹಾರ ಆಗುತ್ತೆ ಅಂತ ಖಚಿತ ನನಗೆ !"

*With Best Compliments From*

SRI
BHAGYALAKSHMI
SINCE
1972

# SRI BHAGYALAKSHMI
TRADING CORPORATION

***Manufacturers of :***

Friedgram • Gramflour
• Cleaned Rice • Bansi Sooji • Idli Sooji
• Maize Flakes • Avalakki & Wheat Products
• TRISHUL BRAND : Bakers Maida

#28 2nd Main Road, New Tharagupet, Bangalore
Ph : 41223436, 26702536, 26702559
Website: www.sblfoods.com |email : bysaniravi@sblfoods.com

# ಹೀಗೂ ಒಂದು ಆಯಾಮ!

● ಚಿತ್ರಾ ರಾಮಚಂದ್ರನ್

ದಢ ದಢ ಲಗ್ಗೇಜನ್ನು ಅಟ್ಟಕ್ಕೆ ತುರುಕಿ ದೀಪಾಕ್ ಪ್ಲಾಟ್ಫಾರಂ ಮೇಲೆ ಧುಮುಕಿದ. ಅದೇ ಕ್ಷಣ ಶಂಖನಾದ ಮಾಡುತ್ತಾ ಹೊರಟೇಬಿಟ್ಟಿತು ಎಕ್ಸ್ಪ್ರೆಸ್. ಕಿಟಕಿಯಲ್ಲಿ ಕೆನ್ನೆ ಆನಿಸಿ ಆತಂಕದಿಂದ 'ಯಾಕೋ ಹೀಗೆ ಮಾಡಿದೆ' ಎಂಬ ರೀತಿಯಲ್ಲಿ ಮೆಲ್ಲನೆ ಹಣೆಯ ಮೇಲೆ ತಟ್ಟಿಕೊಂಡ ಇವರನ್ನು ಕುರಿತು ಕಿರುನಗೆ ಬೀರಿ ಕೈಯಾಡಿಸುತ್ತಿದ್ದ ದೀಪಕ್, ಶತಾಬ್ದಿಯ ಅತ್ಯಂತ ವೇಗದಿಂದ ಕ್ಷಣಾರ್ಧದಲ್ಲಿ ಕಣ್ಮರೆಯಾದ.

ಯಲಹಂಕದಿಂದ ಈ ಟ್ರಾಫಿಕ್ಕಲ್ಲಿ ಸಿಟಿ ಸ್ಟೇಷನ್ಗೆ ಸಮಯಕ್ಕೆ ಸರಿಯಾಗಿ ತಲುಪೋದು ಬ್ರಹ್ಮ ವಿದ್ಯೆಗೆ ಸಮಾನವಲ್ಲವೇ? 'ಓಲಾ..'' ಎಂದು ಮಾತೆತ್ತುವ ಮೊದಲೇ ತಾನೇ ನಮ್ಮನ್ನು ತನ್ನ ಕಾರಿನಲ್ಲಿ ಕೂರಿಸಿಕೊಂಡು ಹೇಗೋ ಕರೆತಂದು ಟ್ರೈನಿಗೂ ತುರುಕಿಹೋಗಿದ್ದ ದೀಪಕ್.

''ಪಾಪ ದೀಪಕ್! ಯಾತಕ್ಕೆ ಇಷ್ಟೊಂದು ತೊಂದ್ರೆ ತಗೋಬೇಕಿತ್ತೋ!''

''ನನ್ನ ಮೆಚ್ಚಿನ ಸೋದರಮಗನಲ್ವೇ ಅವನು! ಸಾಲದ್ದಕ್ಕೆ ನೀವು ಅವನ ''ಪೆಟ್ ಮಾಮಿ'' ಬೇರೆ! ಎನ್ನುತ್ತ ನನ್ನನ್ನು ಚುಡಾಯಿಸಿದರು ಪ್ರಖ್ಯಾತ ಲೇಖಕರಾದ ಪ್ರಕಾಶರಾಯರು, ಉರೂಫ್ ನನ್ನ ಪತಿದೇವರು! ''ಒಳ್ಳೆಯ ಹುಡುಗ! ಪಾಪ! ಪೂಜೆಯ ಏರ್ಪಾಡುಗಳಾಗ್ಲಿ ಊಟದ ವ್ಯವಸ್ಥೆಯಾಗ್ಲಿ, ಅದೆಷ್ಟು ಸಾಂಗವಾಗಿ ಮಾಡಿದ್ದ!'' ಕಾರು ಪ್ರಯಾಣದಲ್ಲಿ ಜೀವನ ಕೈಯಲ್ಲಿ ಹಿಡಿದುಕೊಂಡು ಬಂದಿದ್ದ ನಾನು, ಚೇರ್ಕಾರ್ ಆಸನದಲ್ಲಿ ಒರಗಿ ಕುಳಿತು ನೆಮ್ಮದಿಯ ಉಸಿರೆಳೆಯುತ್ತ ನುಡಿದೆ.

''ಹುಮ್! ಅವನ ಹೆಂಡತಿ ಅವನಿಗೆ ಹೇಳಿ ಮಾಡಿಸಿದಂತ ಜೋಡಿ! ಲವಲವಿಕೆಯಿಂದ ಓಡಾಡ್ಕೊಂಡು ಸಂಭ್ರಮದಿಂದ ಎಲ್ಲ ಹೇಗೆ ನಡೆಸ್ಕೊಂಡು ಹೋದ್ಳು ನೋಡು! ಅಕ್ಕನಿಗೆ ಸೊಸೆಯ ಬಗ್ಗೆ ಬಹಳ ಬಗ್ಗೆ ಹೆಮ್ಮೆ ಇರಬೇಕು!''

''ಆಹಾ! ನೀವೇ ಮೆಚ್ಕೋಬೇಕು! ಅಕ್ಕನಿಗೆ ಹೆಮ್ಮೆಯೂ ಇಲ್ಲ, ಎಮ್ಮೆಯೂ ಇಲ್ಲ! ಸದ್ಯ ಅವರನ್ನ ಸುಮ್ನೆ ಬಿಟ್ರೆ ಸಾಕಾಗಿದೆ!'' ಎಂದು ನಾನು ಉಸುರಿದೆ.

''ಯಾಕೆ ಗೊಣಗ್ತೀಯ? 'ಮಾವ ಮಾವ' ಅಂತ ಅದೆಷ್ಟು ಪ್ರೀತಿಯಿಂದ ಮಾತಾಡಿಸಿದ್ಳು! ಅದೆಷ್ಟು ಆದರದಿಂದ ವಿಚಾರಿಸ್ಕೊಂಡ್ಳು! ಅಕ್ಕನಿಗಾದರೂ ಅವಳ ಬಗ್ಗೆ ಗೊಣಗೋಂತ್ತಾದ್ದು ಏನಿದೆ?''

ಗಂಡ ಹೆಂಡಿರ ಜಗಳದಲ್ಲಿ ಮಕ್ಕಳೆಲ್ಲಾ ಪುಂಡರಾದರು.

''ಅವ್ಳು ಮಾವ ಮಾವಾಂತ ಹಲ್ಲು ಕಿರಿದು ಐಸ್ ಫ್ಯಾಕ್ಟರಿಯನ್ನೇ ಎತ್ತಿ ನಿಮ್ ತಲೆ ಮೇಲೆ ಕೂರಿಸ್ತಾಳೆ! ಅದ್ರಲ್ಲಿ ತಣ್ಣಗಾಗ್ಬಿಟ್ರೆ ಸುತ್ತ ಮುತ್ತ ನಡೆಯೋದೆಲ್ಲ ನಿಮ್ ಕಣ್ಣಿಗೆ ಹೇಗೆ ಬೀಳ್ಬೇಕು?'' ನಾನು ಸಿಡಿಮಿಡಿಗೊಂಡು ಉತ್ತರಿಸಿದೆ.

''ಅಯ್ಯೋ! ನಿಮ್ಮ ಹೆಂಗಸರ ತಲೆಬರಹವೇ ಅಷ್ಟು! ಪ್ರತ್ಯೇಕವಾಗಿ ಎಷ್ಟೇ ಒಳ್ಳೆತನವಿದ್ರೂ ಇಬ್ಬರು ಹೆಂಗಸರ ಮಧ್ಯೆ ಯಾವಾಗ಼್ೂ ಟಾಮ್ ಅಂಡ್ ಜೆರ್ರಿ ಸಂಬಂಧವೇ ಇರ್ಬೇಕು ಅನ್ನೋದು ವಿಧಿ. ಏನ್ಮಾಡೋದು ಬಿಡು!'' ಒಬ್ಬರನ್ನೊಬ್ಬರು ಕಾಲೆಳೆಯುತ್ತ, ಸದಾ ಜಗಳಕ್ಕೆ ಕಾಲು ಕೆರಕೊಂಡಿರೋ ಹೆಂಗಸರ ಬಗ್ಗೆ ಪತಿಯವರ ವ್ಯಾಖ್ಯಾನ ಇದು ಎಂದು ಅರಿತೇ ಇದ್ದೆ.

''ನಿಮಗೆ ಎಲ್ಲ ತಮಾಷೆ ಬಿಡಿ. ಸೊಸೆ ಟಾಮ್ ಆಗಿದ್ದು ಅತ್ತೆ ಮಾತ್ರ ಜೆರಿ ಆಗದೆ, ಮೌನವಾಗಿ ಬರೀ ಅನ್ನಿಸಿಕೊಂಡಿದ್ರೆ, ಇದಕ್ಕೆ ಏನು ಸಂಬಂಧ ಅನ್ಬೇಕು?'' ನನ್ನ ಮಾತು ಸ್ವಲ್ಪ ಗಂಭೀರವಾಗಿತ್ತೋ ಏನೋ? ಇವರು ನೆಟ್ಟಗೆ ಕುಳಿತು ''ಅಕ್ಕ ಏನಾದ್ರೂ ಅಂದ್ಬೇನು?'' ಎಂದು ಪ್ರಶ್ನಿಸಿದರು.

''ಅಕ್ಕ ಮೊದಲೇ ಸಾಧು ಪ್ರಾಣಿ! ಅದರಲ್ಲೂ ಮೂಕ ಸಾಧು ಪ್ರಾಣಿ? ಅವರೆಲ್ಲಿ ಬಾಯಿ ಬಿಡ್ತಾರೆ?'' ಹೇಳುತ್ತಿದ್ದ ಹಾಗೆಯೇ ನನ್ನ ಮನಸ್ಸಿಗೆ ಕಸಿವಿಸಿಯಾಯಿತು. ಅಕ್ಕ ಇವರಿಗಿಂತ ಒಂದು ಹತ್ತು ವರ್ಷಗಳು ಹಿರಿಯವರು. ತಮ್ಮನ ಮೇಲೆ ಬಲು ಪ್ರೀತಿ, ವಾತ್ಸಲ್ಯ. ಇವರಿಗಂತೂ ಅಕ್ಕ ಎಂದರೆ ತಾಯಿ ಸಮಾನ. ತಮ್ಮನ ಹೆಂಡತಿಯಾದ ನನ್ನಲ್ಲೂ ಅಕ್ಕನಿಗೆ ಅಷ್ಟೇ ಪ್ರೀತಿ. ಇನ್ನೂ ಹೇಳುವುದಾದರೆ ಪ್ರೀತಿ ಎಂಬ ಒಂದೇ ಭಾವನೆಯಿಂದ ಅವರ ಮನಸ್ಸು ಹೌಸ್‌ಫುಲ್ಲಾಗಿದೆ ಅನ್ನಬಹುದು. ಅಂತಹವರ ಮನಸ್ಸಿಗೆ ನೋವಾಗಬಹುದೇ? ''ಪಾಪ ಅಕ್ಕ! ಅವರತ್ತೆ ಇದ್ದವರೆಗೂ ಅವರ ಕೈಗೊಂಬೆಯೇ ಆಗಿದ್ರು. ಗಂಡನ ಬಳಿ ತನ್ನ ಅಳಲನ್ನು ತೋಡಿಕೊಂಡ್ರೆ ತಾಯಿ ಮಗನ ನಡುವೆ ತಂದಿಟ್ಟ ಹಾಗಾಗುತ್ತದಲ್ಲಾ ಅಂತ ಎಲ್ಲವನ್ನೂ ಸಹಿಸಿದ್ರು. ಈಗ ತಾನೇ ಅತ್ತೆಯಾದ ಮೇಲೂ ಅದೇ ಪಾಡು. ಮಗನಿಗೆ ಏನಾದ್ರೂ ಹೇಳಿ ಮಗ ಸೊಸೆಯರ ನಡುವೆ ತಂದಿಡಬಾರದಂತೆ! ಅದೇನ್ ಸಹನೆಯೋ ಏನೋ! ಗಾಣದ ಎತ್ತಿನಂತೆ ದುಡಿತ, ಚೂರೂ ಅಹಂ ಇಲ್ದೆ, ಅದೇನು ಬದುಕೋ? ನನಗಂತೂ ರೇಗಿಹೋಯಿತು!''

''ಅಂತದ್ದೇನು ನಡೆದುಹೋಯಿತೇ?'' ಇವರಿಗೆ ಕುತೂಹಲ ತಡೆಯಲಾಗಲಿಲ್ಲ.

''ಏನು ನಡೆದಿಲ್ಲ? ನೀವಂತೂ ಸರಿ! ರುಚಿಯಾದ ಊಟ ಬಡಿಸಿ, 'ಮಾವ ಮಾವ' ಅಂದ್ಬಿಟ್ರೆ ಜನ್ಮ ಸಾಫಲ್ಯ ಆದಂತೆ! ಕಥೆ ಕಾದಂಬರಿಗಳ್ಲಲ್ಲಿ ಮುಳುಗಿಬಿಟ್ರಂತೂ ಜಗವನ್ನೇ ಮರೆತ್ಬಿಡ್ತೀರಿ! ಇನ್ನೂ ನಿಮ್ ಭಾವ! ಅಂದಿಗೂ ಸರಿ ಇಂದಿಗೂ ಸರಿ! ಪೇಪರ್ ಹಿಡಿದು ಕೂತ್ಬಿಟ್ರೇ ಆ ಮಹರಾಯರಿಗೆ ಕಣ್ಣ ಮುಂದೆ ಊರು ಕೊಳ್ಳೆ ಹೋಗ್ತಿದ್ರೂ ಏನೂ ಕಾಣ್ಸಲ್ಲ!''

''ಅಯ್ಯೋ! ಅದೇನ್ ಆಯಿತು ಹೇಳೇ ಮಾರಾಯ್ತಿ! ನಿನ್ನ ಪೀಠಿಕೆ ಕೇಳಿದ್ರೆ ವಿಷ್ಯ ತುಂಬಾ ಗಂಭೀರವೇ ಆಗಿರಬೇಕು ಅನ್ಸುತ್ತೆ! ಅಂತಾದ್ದೇನು ಮಾಡಿದ್ಲು ದೀಪಕ್ ಹೆಂಡ್ತಿ?''

''ಅಯ್ಯೋ ಅಯ್ಯೋ! ಯಾಕೇ ಕೇಳ್ತೀರಿ! ಅವ್ಳು ಆಡಿದ್ದೇ ಆಟ! ಮೆರ್ದಿದ್ದೇ ಮೆರ್ತ! ಅವಳಮ್ಮ ಬಂದ್ಬಿಟ್ರಂತೂ ಹೆಗಲ ಮೇಲೆ ತಲೆಯೇ ನಿಲ್ಲೋದಿಲ್ಲ! ಅಕ್ಕ ಏನೇ ಹೇಳಿದ್ರೂ, ಅವರ ಮುಖಕ್ಕೆ ಹೊಡೆದ ಹಾಗೆ ತನಗೆ ತನ್ನದೇ ದಾರಿ ಅನ್ನೋ ಹಾಗೆ ನಡ್ಕೊತಾಳೆ! ತಾನು ಮಾಡಿದ್ದೇ ಸರಿ ಅನ್ನೋ ಹಠ! 'ನಮ್ಮ ಮನೇಲಿ ಹೀಗೆ! ನಮ್ಮ ಅಮ್ಮ ಹೇಳಿದ್ದು ಹೀಗೆ!' ಅಂತ ಮಾತು ಮಾತಿಗೂ ತವರು ಮನೆ ಪ್ರತಾಪ! ಅಲ್ಲ ಕಣ್ರೇ! ಮದುವೆಯಾಗಿ ಇಷ್ಟು ವರ್ಷಗಳಾಗಿವೆ, ಇನ್ನೂ ತನ್ನ ಗಂಡನ ಮನೆಯೇ ತನ್ನದು ಅನ್ನೋ ಭಾವ್ನೆ ಬಂದೇ ಇಲ್ಲ ಈ ಹುಡ್ಗಿಗೆ!'' ಏದುಸಿರು ಬಿಡುತ್ತ ಒಂದೇ ಸಮನೆ ಮಾತನಾಡಿದೆ.

''ನಿಧಾನ! ನಿಧಾನ! ಸುಸ್ತು ಮಾಡ್ಕೋಬೇಡ! ಬಿ.ಪಿ. ಜಾಸ್ತಿಯಾದೀತು!'' ಎನ್ನುತ್ತಾ ಇವರು ನೀರು ಬಾಟಲಿ ತೆರೆದು ಕೈಗೆ ಕೊಟ್ಟರು. ನೀರು ಕುಡಿದು ಮತ್ತೆ ಶುರು ಮಾಡಲು ಅಣಿಯಾದೆ. ನನ್ನ ಹೊಟ್ಟೆ ಸಂಕಟ ಇನ್ನೂ ಯಾರ ಬಳಿ ಹೇಳಿಕೊಳ್ಳಬಲ್ಲೆ? ಅಷ್ಟರಲ್ಲಿ ಇವರು ಸಮಾಧಾನ ಹೇಳಲು ಹತ್ತಿದರು.

''ಸ್ವಯಂ ಪ್ರತಾಪ ಹೇಳ್ಕೊಳ್ಳೋರನ್ನ ಯಾರೂ ಇಷ್ಟ ಪಡೋದಿಲ್ಲ. ಇದು ವಾಸ್ತವದ ಸಂಗತಿ. ಅದ್ರಲ್ಲೂ ಮನೆಗೆ ಬಂದ ಸೊಸೆಯ ತವರು ಮನೆ ಪ್ರತಾಪಗಳು ಅತ್ತೆ ಮನೆಯವರಿಗೆ 'ಚುರುಕ್' ಅಂತ ಚುಚ್ಚೋದು ಸಹಜವೇ ಅಲ್ವೇ!'' ಇವರ ಸಮಾಧಾನ ನನಗೆ ಬೇಕಿರಲಿಲ್ಲ.

''ಇವತ್ತು ಪೂಜೆ ಸಿದ್ಧತೆಗಳನ್ನ ಮಾಡೋವಾಗ, ನೀವು ನೋಡಿದ್ರೋ ಇಲ್ವೋ ಅವಳು ದೀಪವನ್ನ ಇಟ್ಟಿದ್ದ ಲಕ್ಷಣ! ಒಳ್ಳೆ ಮಂಗಳಕರವಾದ ಲಕ್ಷ್ಮಿ ದೀಪ! ದೀಪ ಲಕ್ಷ್ಮಿಯನ್ನ ತಿರುಗು ಮುರುಗಾಗಿ ಕೂರಿಸಿದ್ಳು! ಮಹಾಲಕ್ಷ್ಮಿಯ ಮುಖ ದರ್ಶನವಾಗೋ ಹಾಗಿಲ್ಲ! ಹಚ್ಚಿದ್ದ ಜ್ಯೋತಿ ಕಾಣ್ಸೋ ಹಾಗಿಲ್ಲ! ಅಕ್ಕ ತುಟಿ ಪಿಟಕ್ಕನ್ನಲಿಲ್ಲ! ನನಗೋ ಬೇಸರ. ''ದೀಪಲಕ್ಷ್ಮಿ ಕಾಣಿಸೋ ಹಾಗೆ ನಮ್ಕಡೆ ತಿರುಗಿಸಿ ಇಡಮ್ಮ' ಅಂದ್ಬಿಟ್ಟೆ. ಕೆಲಸದಲ್ಲಿ ನಯ ನಾಜೂಕು ಇಲ್ದಿದ್ರೂ, ಮಾತಲ್ಲಾದ್ರೂ ನಯ ವಿನಯ ಬೇಡವೆ? 'ಇಲ್ಲ ಮಾಮಿ! ದೇವರಿಗಿಡೋ ದೀಪ ದೇವರ ಕಡೆಯೇ ತಿರುಗಿರಬೇಕಂತೆ. ಅಮ್ಮ ಹೇಳಿದ್ಲು!' ಅಂದ್ಲು! ಅವಳಮ್ಮ ಬಂದ್ಬಿಟ್ರೆ ಅವರದ್ದೇ ಪದ್ಧತಿಗಳು! ಆ ಕೋಡಂಗಿ ಪದ್ಧತಿಗಳೇ ಇವ್ಳಿಗೂ ವೇದವಾಕ್ಯ! ಇಷ್ಟಕ್ಕೂ ಮಹಾಲಕ್ಷ್ಮಿಯ ಪೃಷ್ಠಕ್ಕೆ ಮಂಗಳಾರತಿ ಮಾಡಿದ್ರೆ ಅದೇನ್ಬರತ್ತೋ ಭಾಗ್ಯ?'' ಕಿರಿಕಿರಿ ತಾಳಲಾರದೆ ನಾನು ಒದರಿಬಿಟ್ಟೆ.

ಸಿಡಿದೆದ್ದ ನಗು ತಡೆಯಲಾರದೆ ಇವರು ಉಕ್ಕಿ ಉಕ್ಕಿ ನಗಲಾರಂಭಿಸಿದರು.

''ಮಹಾಲಕ್ಷ್ಮಿ ಆ ಪುಟ್ಟ ದೀಪದಲ್ಲಿ ಮಾತ್ರ ವಾಸವಾಗಿದ್ದಾಳೇನು? ಅಖಿಲಾಂಡಕೋಟಿ ಬ್ರಹ್ಮಾಂಡವಾಸಿನಿಯಾದವಳಿಗೆ ಯಾವ ಕಡೆಯಿಂದ ಮಂಗಳಾರತಿ ಮಾಡಿದ್ರೂ ಅದು ಅವಳಿಗೆ ಪ್ರೀತಿ ಅಲ್ವೇನೆ ಬೆಪ್ಪೆ!'' ಇವರು ಮಾತನಾಡುತ್ತಿದ್ದರೂ ಇನ್ನೂ ನಗು ಉಮ್ಮಳಿಸುತ್ತಲೇ ಇತ್ತು.

''ನಿಮ್ಮಕ್ಕನೂ ಇದನ್ನೇ ಹೇಳಿದ್ರು! ಅಷ್ಟೆಲ್ಲ ಪಕ್ವ ನನಗಿಲ್ಲಪ್ಪ! ಆದ್ರೆ ಸೊಸೆಯಿಂದ ಅಕ್ಕನಿಗೇನೂ ಸುಖವಿಲ್ಲ ಅಷ್ಟು ಹೇಳಬಲ್ಲೆ.''

ರೈಲ್ ಮೀಲ್ಸ್ ವಿತರಣೆಯಾಗತೊಡಗಿತ್ತು. ಅಕ್ಕನ ಉಪಚಾರದಲ್ಲಿ ಹೊಟ್ಟೆ ತುಂಬ ತಿಂಡಿ ತಿಂದೇ ಹೊರಟ್ಟಿದ್ದೆವು. ಮೀಲ್ಸ್ ಬೇಡವೋ ಅನ್ನಿಸಿತು.

''ಪರವಾಗಿಲ್ಲ ತಿನ್ನು! ಹೊಟ್ಟೆಗೆ ಇಷ್ಟು ಹಾಕಿದ್ರೆ ಮನಸ್ಸಿನ ತಳಮಳ ಸ್ವಲ್ಪ ಕಡಿಮೆಯಾಗುತ್ತೆ!''

ಇವರ ಬಲವಂತಕ್ಕಾಗಿ ನಾನೂ ಊಟದ ಪ್ಯಾಕ್ ತೆರೆದೆ. ಮೌನವಾಗಿ ಊಟ ಮುಗಿಸಿದಾಗ ಇವರು ಇದ್ದಕ್ಕಿದ್ದ ಹಾಗೇ ಗಂಭೀರವಾಗಿ ಹೋದಂತೆ ಅನ್ನಿಸಿತು.

''ಯಾಕ್ರೀ? ನನ್ನ ಮಾತ್ನಿಂದ ಬೇಜಾರಾಯಿತೇ?'' ಕಾತರದಿಂದ ಪ್ರಶ್ನಿಸಿದೆ.

''ಹಾಗೇನಿಲ್ಲ. ನೀನು ಹೇಳಿದ ವಿಷಯವೆಲ್ಲ ನನ್ನ ಗಮನಕ್ಕೆ ಬಂದಿಲ್ಲಾ ಅಂದ್ಕೊಂಡ್ಯಾ? ಅಕ್ಕ ಹೊತ್ತು ಮೀರಿತಲ್ಲಾಂತ ಅಕ್ಕರೆಯಿಂದ ಮೊಮ್ಮಗೂಗೆ ಊಟ ತಿನ್ನಿಸ್ತಿದ್ಳು. ಆವಾಗ ಬಿರಬಿರನೆ ಬಂದು 'ಅಯ್ಯೋ! ಇದ್ಯಾಕೆ ತಟ್ಟೇಲಿ ತಿನ್ನಿಸ್ತಿದ್ದೀರಿ? ಅವನಿಗೆ ಬೌಲಲ್ಲೇ ನಾನು ತಿನ್ಸೋದು!' ಅಂದವಳೇ ತಟ್ಟೆ ಕಿತ್ತು ದೂರ ಇಟ್ಟು ಮಗು ಎತ್ಕೊಂಡು ಹೊರಟೇ ಹೋದ್ಳು! ನಾನೂ ನೋಡ್ಕೊಂಡೇ ಇದ್ದೆ! ಆವಾಗ ಅಕ್ಕನ ಮುಖದಲ್ಲಿ ಒಂದು ಕ್ಷಣ ಮೂಡಿ ಮರೆಯಾದ ಶೋಕದ ಛಾಯೆಯನ್ನೂ ಗಮನಿಸ್ದೇ.''

''ನೋಡಿ ಮತ್ತೆ! ನೀವೂ ಎಲ್ಲ ಗಮನಿಸಿಯೇ ಇದ್ದೀರಿ! ಸುಮ್ಮುಸ್ಮನೆ ಕೆಣಕಿ ನನ್ನ ಬಾಯಿ ಯಾಕೆ ಬಿಡಿಸ್ತೀರಿ?'' ಎಂದೆ ನಾನು ರೋಷದಿಂದ.

''ಲೇಖಕನಲ್ವೇ! ಗಮನಿಸ್ದೇ ಇರ್ತೀನೇ? ನಿನ್ನ ಮಾತು ಬಲು ಮನರಂಜಕ! ಅದನ್ನ ಕೇಳೋದಕ್ಕಾಗಿಯೇ ಕೆಣಕಿದೆ!'' ಎನ್ನುತ್ತಾ ಇವರು ಮತ್ತೆ ನಗಲಾರಂಭಿಸಿದರು.

''ತಮಾಷೆ ಹಾಗಿರ್ಲಿ! ಆ ಹುಡುಗಿಗೆ ಹೇಗಾದ್ರೂ ಮಾಡಿ ಸ್ವಲ್ಪ ಬುದ್ಧಿ ಹೇಳಬೇಕಲ್ಲ! ನಿಮ್ಮ ಮುದ್ದು ಸೋದರ ಸೊಸೆ ಅಲ್ವೇ? ನೀವೇಯಾಕೆ ಬುದ್ಧಿವಾದ ಹೇಳಬಾರ್ದು?''

''ಈಗಿನ ಕಾಲದ ಓದಿದ ಹುಡುಗಿ! ತವರಿನ ಮನೆ ಗಂಡನ ಮನೆ ಅನ್ನೋ ವ್ಯತ್ಯಾಸವಿಲ್ದೆ ಮಾತನಾಡಿ ವರ್ತಿಸ್ತಾಳೆ ಅಷ್ಟೇ. ಎಷ್ಟೋ ಹುಡುಗಿಯ ಹಾಗೆ ಅತ್ತೆಮಾವಂದಿರನ್ನು ಹಳೆ ಫರ್ನಿಚರ್ ಅಂತ್ಲೋ, ರಾಹುಕೇತು ಅಂತ್ಲೋ ದೂರ ಮಾಡ್ದೆ, ಒಟ್ಗೆ ಇದ್ದು ಸಂಸಾರ ಮಾಡ್ತಾಳಲ್ಲ! ಅಷ್ಟರಮಟ್ಟಿಗೆ ಒಳ್ಳೆಯವಳೇ! ಸ್ವಲ್ಪ ನಾಜೂಕಾಗಿ, ನಯವಾಗಿ ಮನಸ್ಸು ನೋಯಿಸದ ಹಾಗೆ ಹೇಳಿದ್ರೆ ತಿಳ್ಕೊಳ್ತಾಳೆ.''

ಮೈಸೂರು ತಲುಪಿ ಮನೆ ಸೇರಿದ ನಂತರವೂ ಇವರು ಯೋಚಿಸುತ್ತಲೇ ಇದ್ದರು.

ಊರಿಗೆ ಹಿಂದಿರುಗಿ ಮೂರು ದಿವಸಗಳಾದ ನಂತರವೂ ತನ್ನ ಕಂಪ್ಯೂಟರಲ್ಲಿ ಅದೇನೋ ಕುಟ್ಟುತ್ತಲೇ ಇದ್ದರು. ನಾಲ್ಕನೆಯ ದಿವಸ ಬೆಳಿಗ್ಗೆ ತಿಂಡಿಗೆ ಕರೆದಾಗ ''ತಿಂಡಿ ನಾನು ತಗೋತೀನಿ! ನಾನು ಡಾಕ್ಯುಮೆಂಟಲ್ಲಿ ಸೇವ್ ಮಾಡಿರೋ ಕಥೆ ಓದಿ ನೋಡು!''

''ಏನ್ ಕಥೆ ರೀ?'' ನಾನು ತಿಂಡಿಗೆ ತಟ್ಟೆ ಇಡುತ್ತ ಪ್ರಶ್ನಿಸಿದೆ.

''ಒಂದು ಐತಿಹಾಸಿಕ ಕಥೆ ಬರೆದೆ!''

''ಅಯ್ಯೋ! ಬೆಳಿಗೆದ್ದು ಬೇಡಾ ರೀ! ನಾನು ಆಮೇಲೆ ಓದ್ತೀನಿ!'' ಎನ್ನುತ್ತಾ ಬಡಿಸತೊಡಗಿದೆ.

''ನಿನಗೆ ಐತಿಹಾಸಿಕ ಕಥೆ ಬೋರ್ ಅನ್ನೋದು ನನ್ಗೆ ಗೊತ್ತಿದೆ! ಹೈಲೈಟ್ ಮಾಡಿರೋ ಪ್ಯಾರಾಗಳನ್ನು ಮಾತ್ರ ಓದು!'' ಇವರು ಒತ್ತಾಯ ಮಾಡಿದರು.

''ತಿಂಡಿ ತಿಂತಾ ಸಾರಾಂಶ ಹೇಳಿ. ಆಮೇಲೆ ಇಬ್ರೂ ಒಟ್ಟಿಗೆ ಓದೋಣ!''

''ಇದು ಹದಿನಾರನೇ ಶತಮಾನದಲ್ಲಿ ನಡೆದ ಒಂದು ಕಥೆ. ಎರಡನೇ ಗಂಗರಾಜಾ ಎಂಬಾತ ಹೆಗ್ಗುರ ಎನ್ನಲಾದ ಶಿವಸಮುದ್ರದ ಸೀಮೆಯನ್ನು ಅತಿ ವೈಭವದಿಂದ ಆಳುತ್ತಿದ್ದ. ಅಕ್ಕಪಕ್ಕದ ಸೀಮೆಗಳನ್ನು ಗೆದ್ದು, ಸಮಸ್ತ ಐಶ್ವರ್ಯಗಳನ್ನು ಸಂಪಾದಿಸಿ, ತನ್ನ ರಾಜ್ಯವನ್ನು ವಿಸ್ತರಿಸಿ ಬಲು ಸಿರಿವಂತನಾಗಿದ್ದ. ಆತನಿಗೆ ಗಂಗಿ, ಸಂಗಿ ಎಂಬ ಇಬ್ಬರು ಹೆಣ್ಣು ಮಕ್ಕಳು ಇದ್ದರು. ಈ ಹೆಸರುಗಳು ನನ್ನ ಕಲ್ಪನೆ, ಸರಿಯೇ? ಒಬ್ಬಳು ಗಾನ ಸರಸ್ವತಿ ಆದರೆ ಮತ್ತೊಬ್ಬಳು ನಾಟ್ಯ ಸರಸ್ವತಿ!'' ಐತಿಹಾಸಿಕ ಭಾಷೆಯಲ್ಲೇ ಇವರು ಹೇಳತೊಡಗಿದರು.

''ಅಯ್ಯೋ ರಾಮ! ಪೀಠಿಕೆಯೇ ಇಷ್ಟುದ್ದವೇ?''

''ಹೌದು ಕಣೇ! ಮೊದಲನೇ ಎರಡು ಪುಟಗಳೂ ರಾಜನ ವೈಭವಗಳನ್ನೂ ಅವನ ಹೆಣ್ಣುಮಕ್ಕಳ ಸೌಂದರ್ಯವನ್ನೂ, ಶಿವಸಮುದ್ರದ ರಮ್ಯ ರಮಣೀಯ ದೃಶ್ಯಗಳನ್ನು ವಿವರಿಸಿದ್ದೀನಿ! ಐತಿಹಾಸಿಕ ಕಲ್ಪನೆ ಅಂದ ಮೇಲೆ ಇವೆಲ್ಲ ಅಗತ್ಯವಲ್ವೇ?'' ಹೆಮ್ಮೆಯಿಂದ ಇವರು ವಿವರಣೆ ನೀಡಿದರು.

''ಅಯ್ಯೋ ಸಾಕಪ್ಪ! ತಾವರೆ ವದನ, ನೈದಿಲೆ ನಯನ, ಸಂಪಿಗೆ ನಾಸಿಕ, ಮಲ್ಲಿಗೆಯ ದಂತ ಪಂಕ್ತಿ ಅಂತಹ ನಿಮ್ಮ ವರ್ಣನೆಗೆ ತಕ್ಕಂತೆ ಒಂದು ಹೆಣ್ಣು ನಿಜಕ್ಕೂ ಎದುರಾದ್ರೆ! ಅಬ್ಬಬ್ಬಾ! ವಿಕಾರ ಅನ್ಸಲ್ವೇ?''

''ನಿನಗಿರೋ ರಸಿಕತೆ ಅಷ್ಟೇ! ಅದಕ್ಕೆ ಮತ್ತೆ ಹೈಲೈಟ್ ಮಾಡಿರೋದನ್ನ ಮಾತ್ರ ಓದು ಅಂತಂದೆ!''

ತಿಂಡಿ ಮುಗಿಸಿ ಇಬ್ಬರೂ ಕಂಪ್ಯೂಟರ್ ಬಳಿ ಕುಳಿತೆವು.

''ನೋಡು ನಾಲ್ಕನೆಯ ಪುಟದ ವರೆಗೆ ಆ ಹುಡುಗಿಯರ ವಿವಾಹ ಸಂಭ್ರಮ! ಸತ್ಯಾಗಲದ ಪಾಳೇಗಾರ ನಾಯಕನಿಗೆ ಗಂಗಿಯನ್ನೂ, ಮದ್ದೂರ ಪಾಳೇಗಾರ ನಾಯಕನಿಗೆ ಸಂಗಿಯನ್ನೂ ಕೊಟ್ಟು ವಿಜೃಂಭಣೆಯಿಂದ ಮದುವೆ ನಡೆಯುತ್ತೆ! ಹಾಂ! ಇಲ್ನೋಡು ಈ ಪ್ಯಾರಾ ಹೈಲೈಟ್ ಮಾಡಿದ್ದೀನಿ!''

ಇವರು ಬೆರಳು ಮಾಡಿ ತೋರಿಸಿದ್ದನ್ನು ನಾನು ಓದಲು ಶುರು ಮಾಡಿದೆ.

(ಶಾಂತವಾಗಿ ಹರಿದು ಬಂದ ಕಾವೇರಿ ನದಿ ಶಿವಸಮುದ್ರದಲ್ಲಿ ಇದ್ದಕ್ಕಿದ್ದ ಹಾಗೆಯೇ ರೋಷಗೊಂಡು ಅಬ್ಬರಿಸಿ ಅತಿ ವೇಗದಿಂದ ಕಣಿವೆಯಲ್ಲಿದ್ದ ಬಂಡೆಗಳ ಮೇಲೆ ರಭಸದಿಂದ ಧುಮ್ಮಿಕ್ಕಿದಾಗ ಮೇಲೆದ್ದ ದಟ್ಟವಾದ ಮಂಜಿನ ಹೊಗೆಯನ್ನು, ಸತ್ಯಾಗಲದ ಅರಮನೆಯ ಉಪ್ಪರಿಗೆಯಲ್ಲಿ ನಿಂತು ದಿಟ್ಟಿಸುತ್ತಿದ್ದಳು ಗಂಗಿ.

ಇದನ್ನು ಕಂಡ ಲಕ್ಷ್ಮಿ ದೇವಿಯ ಮನಸ್ಸಲ್ಲಿ ಕಳಕಳಿಯುಂಟಾಯಿತು. 'ಪಾಪ! ನವ ವಧು! ತವರಿನ ಹಂಬಲ ಇರುವುದು ಸಹಜವೇ!' ಅಂದುಕೊಂಡು ಸೊಸೆಯ ಮನಸ್ಸಲ್ಲಿ ಗೆಲುವನ್ನು ಉಂಟುಮಾಡುವುದರ ಸಲುವಾಗಿ ಕನಿಕರದಿಂದ ''ಗಂಗಿ!'' ಎಂದು ಕರೆದು ಸನಿಹಕೆ ಬಂದಳು.

ಥಟ್ಟೆಂದು ತಿರುಗಿದ ಗಂಗಿ, ''ನೋಡಿ ಅತ್ತೆ ನಮ್ಮೂರ ಗಗನಚುಕ್ಕಿಯನ್ನ! ಇಷ್ಟು ದೂರದವರೆಗೂ ಅದರ ಮಂಜಿನ ಹೊಗೆ ಎಷ್ಟು ಅಂದವಾಗಿ ಕಾಣಿಸುತ್ತದೆ! ಸೂರ್ಯ

ಕಿರಣಗಳು ಅದರೊಳು ಹೊಕ್ಕು ಕಾಮನಬಿಲ್ಲಿನ ವರ್ಣಗಳನ್ನ ಚದುರಿಸಿ ಎಂತಹ ಇಂದ್ರಜಾಲವನ್ನು ಪ್ರದರ್ಶಿಸುತ್ತವೆ!'' ಎಂದು ಹರ್ಷಚಿತ್ತಳಾಗಿ ಉದ್ಗರಿಸಿದಳು.

''ಉಮ್! ಅದಿರಲಿ! ಇಂದು ನಿನ್ನನ್ನು ಕಾಣಲು ಆಗಮಿಸಲಿರುವ ನಮ್ಮ ಸಂಬಂಧಿಕರಿಗೆಲ್ಲ ಔತಣ! ಜ್ಞಾಪಕವಿದೆ ತಾನೇ? ಇದು ನಿನಗಾಗಿ ನೇಯಿಸಿದ ಮಂಜಿನ ಹೊಗೆಯಂತಹ ವರ್ಣಮಯವಾದ ರೇಷ್ಮೆ ಸೀರೆ! ಸೀರೆಯ ತುಂಬ ನೆಯ್ದಿರುವ ಚಿನ್ನದ ಜರತಾರಿ ಹೇಗೆ ಕಣ್ಣು ಕೋರೈಸುವಂತಿದೆ ನೋಡು! ಇದನ್ನೇ ಇಂದು ಉಡುವೆಯಂತೆ! ಅತಿಥಿಗಳ ಎದುರಿಗೆ ನನ್ನ ಸೊಸೆ ಸೌಭಾಗ್ಯಲಕ್ಷ್ಮಿಯಂತೆ ಕಾಣಬೇಕು!'' ಗಂಗಿಯನ್ನು ಉತ್ಸಾಹಗೊಳಿಸುವುದರ ಸಲುವಾಗಿ ಸಂತೋಷದಿಂದ ನುಡಿದಳು ಲಕ್ಷ್ಮಿದೇವಿ.

''ಓ! ಇಂತದ್ದೇ ಸೀರೆಯನ್ನು ನೇಯಿಸಿದ್ದರು ನಮ್ಮ ಅಮ್ಮ!'' ಎಂದು ಗಂಗಿ ಕಣ್ಣರಳಿಸಿದಳು.

''ಹೌದಾ? ಹಾಗಾದರೆ ಇರಲಿ ಬಿಡು ಇದೂ ಅದಕ್ಕೆ ಜೋಡಿಯಾಗಿ!''

''ಅಯ್ಯೋ ಅತ್ತೆ! ಅದನ್ನ ನನಗಾಗಿ ನೇಯಿಸಲಿಲ್ಲ! ತನ್ನ ದಾಸಿಯ ಮಗಳ ಮದುವೆಗೆಂದು ಅಮ್ಮ ಆ ಸೀರೆಯನ್ನ ನೇಯಿಸಿ ಕೊಟ್ಟರು!'' ತಟಕ್ಕನೆ ನುಡಿದಳು ಗಂಗಿ.

''ಅತ್ತೆ! ನವರತ್ನಗಳನ್ನು ಚಿನ್ನದ ಜರಿಯಲ್ಲಿ ಪೋಣಿಸಿ ಕಸೂತಿ ಮಾಡಿಸಿದ ವಿಶಿಷ್ಟ ರೇಷ್ಮೆ ಸೀರೆಯನ್ನು ನಮ್ಮ ತಾಯಿ ನನಗೂ ನನ್ನ ತಂಗಿಗೂ ಕೊಡಿಸಿರುವರು. ನನ್ನ ಗೌರವಕ್ಕೆ ತಕ್ಕ ಸೀರೆ ಅದು! ಅದನ್ನೇ ಇಂದು ಉಡುತ್ತೇನೆ!'' ಗಂಗಿಯ ಮಾತು ಕೇಳಿದ ಲಕ್ಷ್ಮಿ ದೇವಿಯ ಮುಖ ಕಳೆಗುಂದಿತು.)

''ಅಬ್ಬಬ್ಬ! ಹೀಗೂ ಉಂಟೇ?'' ನಾನು ಬಲವಾಗಿ ಉದ್ಗರಿಸಿಬಿಟ್ಟೆ.

''ಇದಕ್ಕೇ ಹೀಗಂದ್ರೆ? ಇಲ್ನೋಡು! ಸಂಗಿಯ ಪ್ರಸಂಗ ಓದು!''

ಇನ್ನೆರಡು ಪುಟಗಳನ್ನೂ ಸ್ಕ್ರಾಲ್ ಮಾಡಿದಾಗ ಮತ್ತೊಂದು ಹೈಲೈಟ್ ಮಾಡಿದ ಪ್ಯಾರಾ ಕಂಡಿತು.

(ಹಂಡೆಯ ತುಂಬ ಕಾಯಿಸಿದ್ದ ಬಿಸಿ ನೀರು. ತಾಜಾ ಮೂಲಿಕೆಗಳನ್ನು ಸೇರಿಸಿ ಹದವಾಗಿ ಕಾಯಿಸಿದ್ದ ಘಮಘಮಿಸುವ ಗಾಣದ ಅಚ್ಚೆಳ್ಳು ಎಣ್ಣೆ, ಕಸ್ತೂರಿ ಅರಿಶಿನದ ಪುಡಿಯೊಂದಿಗೆ ಕಡಲೆ ಹಿಟ್ಟು, ಶ್ರೀಗಂಧದ ಪುಡಿ ಮತ್ತು ಪಚ್ಚೆಕರ್ಪೂರ ಬೆರೆಸಿ ತಯಾರಿಸಿದ್ದ ಸ್ನಾನದ ಪುಡಿ. ಸಂಗಿಯ ಅಭ್ಯಂಜನ ಸ್ನಾನಕ್ಕಾದ ಸಿದ್ಧತೆಗಳನ್ನು ತರಾತುರಿಯಿಂದ ನಡೆಸುತ್ತಿದ್ದ ದಾಸಿಯರ ಮೇಲ್ವಿಚಾರಣೆಗಾಗಿ ಆಗಮಿಸಿದರು ಹೊನ್ನಾದೇವಿ.

''ಹಾಲು ಮಡ್ಡಿ ಸಾಂಬ್ರಾಣಿ ತಯಾರಾಗಿವೆಯೇ?'' ಎಂದು ದಾಸಿಯರನ್ನು ವಿಚಾರಿಸಿ, ''ಸಂಗಿ, ಇವೆಲ್ಲ ನಿನಗಾಗಿ ಮಾಡಿರುವ ವಿಶಿಷ್ಟ ಏರ್ಪಾಡುಗಳು! ನಿನಗೆ ಒಪ್ಪಿಗೆಯಾಯಿತೆ?'' ಎಂದು ಸಂಗಿಯನ್ನು ವಿಚಾರಿಸಿಕೊಂಡರು.

''ಅತ್ತೆಯವರೇ! ನಮ್ಮ ಅರಮನೆಯಲ್ಲಿ ನಾವು ಸ್ನಾನಕ್ಕೆ ತುಪ್ಪವನ್ನೇ ಉಪಯೋಗಿಸುವುದು! ರಕ್ತ ಚಂದನದ ಸೌದೆ ಉರಿಸಿ, ನಮ್ಮ ಪುಷ್ಟಿಯಾದ ಆಕಳುಗಳ ನೊರೆಹಾಲನ್ನು ಕಾಯಿಸಿ, ಬೆಳ್ಳಿ ಕೊಡಗಳಲ್ಲಿ ಹೆಪ್ಪು ಹಾಕುತ್ತೇವೆ. ನಂತರ ಶ್ರೀಗಂಧದ

ಮಂಥಿನಿಂದ ಕಡೆದು ತೆಗೆದ ಬೆಣ್ಣೆಯನ್ನು ಕಾಯಿಸಿ, ಕುಂಕುಮ ಕೇಸರಿಯನ್ನೂ ಕಸ್ತೂರಿಯನ್ನೂ ಬೆರೆಸಿ ಅಭ್ಯಂಜನ ಸ್ನಾನಕ್ಕೆ ಬಳಸುತ್ತೇವೆ.''

''ಅಬ್ಬ!'' ಎಂದು ಕಣ್ಣರಳಿಸಿದ ಬಾಯಿ ಬಿಟ್ಟ ಅತ್ತೆಯನ್ನು ಕಂಡು ನಕ್ಕಳು ಸಂಗಿ.

''ಕರು ಹಾಕಿದ ಐನೂರು ಆಕಳುಗಳಿಂದ ಕೂಡಿದ ನಾಲ್ಕು ಪಾಳ್ಯಗಳನ್ನು, ನಾಲ್ಕು ಹುಲ್ಲುಗಾವಲುಗಳನ್ನೂ ಸ್ತ್ರೀಧನವಾಗಿ ಅದಕ್ಕೆ ಅಲ್ಲವೆ ನಾನು ತಂದಿರುವುದು!'' ಸಂಗಿಯ ಈ ತವರು ಮನೆಯ ಪ್ರತಾಪ ಹೊನ್ನಾ ದೇವಿಯ ಮನದಲ್ಲಿ ವಿರಸದ ಬೀಜವನ್ನು ಬಿತ್ತಿತು.)

''ಛೆ ಛೆ! ಇದು ತೀರಾ ಅತಿಯಾಯ್ತು ರೀ!'' ಎಂದು ಬೆರಗಿನಿಂದ ನುಡಿದೆ ನಾನು.

''ಇದು ಐತಿಹಾಸಿಕ ಕಥೆ ಅನ್ನೋದು ಜ್ಞಾಪಕವಿರಲಿ! ಸರಿ! ಇನ್ನು ಮುಂದೆ ಇಬ್ಬರ ಮನೆತನಗಳಲ್ಲೂ ನಡೆವ ಸರಸ ವಿರಸ ಸಂಗತಿಗಳು ಎರಡು ಮೂರು ಪುಟಗಳಿವೆ! ಅವನ್ನ ಸ್ಕಿಪ್ ಮಾಡಿ, ಈ ಹುಡುಗಿಯರ ಅಹಂಕಾರದ ಪರಮಾವಧಿ ಅನ್ನೋ ಹಾಗೆ ನಡೆದ ಒಂದು ಘಟನೆಯನ್ನ ಇಲ್ಲಿ ಹೇಳಿದ್ದೀನಿ ನೋಡು!''

ಕಥೆಯಲ್ಲಿ ನನಗೂ ಈವಾಗ ಸ್ವಾರಸ್ಯ ಹುಟ್ಟಿತು.

(ಗಂಗಿಯ ಅರಮನೆಯಲ್ಲಿ ಬೆಳದಿಂಗಳೂಟಕ್ಕಾಗಿ ಮದ್ದೂರು ಪಾಳೆಗಾರರ ಮನೆತನದವರು ಆಹ್ವಾನಿತರಾಗಿದ್ದರು. ಸದ್ದಡಗುವ ವೇಳೆ! ಶಿವಸಮುದ್ರದ ಕೋಟೆಯ ಕಂಚಿನ ಬಾಗಿಲುಗಳನ್ನು ಮುಚ್ಚುತ್ತಿದ್ದ ಸದ್ದು ಘಂಟಾ ನಾದದಂತೆ ತಂಗಾಳಿಯಲ್ಲಿ ತೇಲಿ ಬಂದು ಲತಾ ಮಂಟಪದಲ್ಲಿ ಕುಳಿತು ಮಾತನಾಡುತ್ತಿದ್ದ ಸೋದರಿಯರ ಗಮನ ಸೆಳೆಯಿತು.

'ಗಂಗಿ! ಎಂತಹ ಬಲಿಷ್ಠ ಕೋಟೆ ನಮ್ಮ ಶಿವಸಮುದ್ರದ ಕೋಟೆ! ಅಂತಹ ಕೋಟೆಯನ್ನು ಪ್ರಪಂಚದಲ್ಲೆಲ್ಲ ಹುಡುಕಿದರೂ ಸಿಕ್ಕುತ್ತದೆಯೇ?''

''ಹೌದೆ ಸಂಗಿ! ತಂದೆಯವರು ಕಟ್ಟಿಸಿದ ಕೋಟೆಯಲ್ಲವೇ? ಅನುದಿನವೂ ಕೋಟೆಯ ಬಾಗಿಲನ್ನು ಮುಚ್ಚುವಾಗ, ಅವರ ಶ್ರೀಮಂತಿಕೆಯನ್ನೂ, ಪರಾಕ್ರಮವನ್ನೂ ಸಾರಿ ಹೇಳುವಂತೆ ಮೊಳಗುತ್ತವೆ ಆ ಕಂಚಿನ ಬಾಗಿಲುಗಳು! ಆ ನಾದವನ್ನು ಆಲಿಸುವುದೇ ಒಂದು ಆನಂದ!'' ಎಂದಳು ಗಂಗಿ.

''ಇಷ್ಟೇ ತಾನೇ? ಅಂತಹ ನಾದವನ್ನು ಕೇಳಲು ನೀನು ಬಯಸಿದರೆ, ನಮ್ಮ ಕೋಟೆಗೂ ಅಂತದ್ದೇ ಬಾಗಿಲನ್ನು ಜೋಡಿಸಿದರೆ ಆಯಿತು!'' ಎಂದು ಉಲ್ಲಾಸವಾಗಿ ನುಡಿದನು ಸತ್ಯಾಗಲದ ಪಾಳೆಗಾರ ನಾಯಕನಾದ ಗಂಗಿಯ ಗಂಡ.

''ನಮ್ಮ ಮದ್ದೂರು ಕೋಟೆಗೂ ಸಹ ಹಾಕಿಸಬಹುದು!'' ಎಂದನು ಮದ್ದೂರು ಪಾಳೆಗಾರ ನಾಯಕನಾದ ಸಂಗಿಯ ಗಂಡ.

''ನಮ್ಮ ಶಿವಸಮುದ್ರದ ಕೋಟೆ ಉಕ್ಕಿನ ಕೋಟೆ! ಕಂಚಿನ ಬಾಗಿಲೇ ಅದಕ್ಕೆ ಸೂಕ್ತ! ಇಲ್ಲಿಯ ಮಣ್ಣಿನ ಕೋಟೆಗೇಕೆ ಕಂಚಿನ ಬಾಗಿಲು?'' ಎಂದು ಗಂಗಿ ನಕ್ಕಾಗ ಸಂಗಿಯೂ ಅವಳೊಂದಿಗೆ ಸೇರಿ ಬಲವಾಗಿ ನಕ್ಕಳು.

ಅವಮಾನಕ್ಕೊಳಗಾದ ನಾಯಕರಿಬ್ಬರೂ ಸೋದರಿಯನ್ನು ಕುರಿತು ಕ್ರೋಧದ

ದೃಷ್ಟಿಯನ್ನು ಬೀರಿದರು. ಆ ಕ್ಷಣದವರೆಗೂ ಮನಸ್ಸಿನಲ್ಲಿ ಮಣ ಮಣ ಉರಿಯುತ್ತಿದ್ದ ದ್ವೇಷ ಬಲಿತು ಆಕ್ರೋಶ ಭುಗಿಲೆದ್ದಿತು.)

''ಏನ್ರೀ ಇದು? ಎಷ್ಟೇ ಅಹಂಕಾರವಿದ್ರೂ ಈ ಹುಡ್ಗೀರಿಗೆ ತಮ್ಮ ಗಂಡಂದಿರೆದುರು ಏನು ಮಾತಾಡ್ಬೇಕು ಅನ್ನೋ ಜ್ಞಾನವಾಗ್ಲೀ ಎಲ್ಲಿಂದ ಬರಬೇಕು? ಉಳಿದ ಕತೆ ಹೀಗಿದೆ ಕೇಳು! ತಮ್ಮ ಪರಾಕ್ರಮ ತೋರಿಸಿ ತಮ್ಮ ತಮ್ಮ ಪತ್ನಿಯರ ಅಹಂಭಾವವನ್ನು ಮುರೀಬೇಕೆನ್ನಿಸಿ ಅಳಿಯಂದಿರಿಬ್ಬರೂ ಮಾವನಾದ ಗಂಗರಾಜನ ಮೇಲೆ ಯುದ್ಧಕ್ಕೆ ಹೊರಟು ನಿಲ್ತಾರೆ. ಅಳಿಯರನ್ನ ವೀರಾವೇಶದಿಂದ ಎದುರಿಸಿದ ಗಂಗರಾಜನಿಗೆ ಯುದ್ಧರಂಗದಲ್ಲಿ ವೀರಸ್ವರ್ಗ ಪ್ರಾಪ್ತಿಯಾಗುತ್ತೆ. ಇದರಿಂದ ಬೆದರಿ ಹೋದ ಅಳಿಯಂದಿರು, ತಮ್ಮ ಹೆಂಡತಿಯರ ಅಹಂಕಾರದಿಂದ ಇಷ್ಟೆಲ್ಲಾ ವಿಪರೀತವಾಯಿತಲ್ಲ ಅಂತ ಪಶ್ಚಾತ್ತಾಪಪಡ್ತಾರೆ. ಕೊನೆಗೆ ಇಬ್ಬರು ಪಾಳೆಗಾರ ನಾಯಕರೂ ಗಂಗಿ ಸಂಗಿಯರೊಂದಿಗೆ ಗಗನಚುಕ್ಕಿಗೆ ಹಾರಿ ಪ್ರಾಣತ್ಯಾಗ ಮಾಡ್ತಾರೆ! ಅಷ್ಟೇ ಕಥೆ!''

ನಾನು ಒಂದು ಕ್ಷಣ ಗರ ಬಡಿದವಳಂತೆ ಬಾಯಿ ಬಿಟ್ಟು ನಿಂತೆ.

''ಅಯ್ಯೋ! ದುರಂತ ಕೇಳಿದ್ದೀನಿ! ಇದು ಕ್ರೂರಾಂತ ಆಗಿದೆಯಲ್ರೀ!''

''ಹಯವದನರಾವ್ ಅವರ ಸಂಪಾದನದಲ್ಲಿ ಮೈಸೂರು ಗೆಜೆಟೀರಲ್ಲಿ ಪ್ರಕಟವಾಗಿರೋ ಇತಿಹಾಸ ಇದು. ಅದನ್ನ ಆಧರಿಸಿ ಈ ಕಥೆ ಬರೆದೆ! ಇದನ್ನ ನಿನ್ನ ಸೋದರ ಸೊಸೆಗೆ ಮೇಲ್ ಮಾಡಿದ್ದೀನಿ!'' ಇವರ ಮುಖದಲ್ಲಿ ಅದೆಷ್ಟು ಹೆಮ್ಮೆ! ತೃಪ್ತಿ!

''ಅಯ್ಯೋ! ಇಂತಹ ಕ್ರೂರವಾದ ಕಥೇನ ಯಾಕ್ರೀ ಮೇಲ್ ಮಾಡಿದ್ರಿ? ಪಾಪ ಇದನ್ನ ಓದಿ ಆ ಹುಡ್ಗಿ ಏನನ್ಕೋಬಾರ್ದು?'' ನಾನು ನಿಜಕ್ಕೂ ಬೆದರಿ ಚಡಪಡಿಸಿದೆ.

''ಅವ್ಳು ಓದಿದ ಹುಡ್ಗಿ! ಅರ್ಥ ಮಾಡ್ಕೋತಾಳೆ! ನೋಡ್ತಿರು, ಬೇಗನೆ ತನ್ನನ್ನ ತಿದ್ಕೋತಾಳೆ! ದಾರಿ ತಪ್ಪಿದವರ್ನ ತಿದ್ದಕ್ಕೆ ಬರಹಕ್ಕಿಂತ ಬೇರೆ ಆಯುಧ ಬೇಕಿಲ್ಲ! ಗೊತ್ತೇನು?'' ಈಗ ಇವರ ಪ್ರತಾಪ ಶುರುವಾಯಿತು!

ಯಾಕಾದ್ರೂ ಇವರನ್ನ ಬುದ್ಧಿ ಹೇಳಿ ಅಂತ ಕೇಳ್ಕೊಂಡ್ನೋ! ಇದರಿಂದ ಏನೇನು ಅನಾಹುತಗಳಾಗತ್ವೋ ಎಂಬ ಸಂಕಟ ನನ್ನ ಮನಸ್ಸನ್ನು ಕಿವುಚಿತು.

ನಾನು ಬೇಕಾಬಿಟ್ಟಿ ಅಡುಗೆಗೆ ತೊಡಗಿದಾಗ ಇವರ ಮೊಬೈಲ್ ರಣಕಹಳೆ ಬಾರಿಸಿತು! ಐತಿಹಾಸಿಕ ಲೇಖಕರ ಮೊಬೈಲ್ ಅಲ್ಲವೇ? ರಿಂಗ್‌ಟೋನೂ ಐತಿಹಾಸಿಕ!

''ದೀಪಕ್ ಹೆಂಡ್ತಿ ಮೆಸೇಜ್ ಮಾಡಿದ್ದಾಳೆ ಕಣೆ!'' ಎಂದು ಇವರು ಫೋನ್ ಹಿಡಿದು ಓಡಿ ಬಂದರು.

ನಾನೂ ಕುತೂಹಲ ತಡೆಯಲಾರದೆ ಇಣುಕಿ ಓದಲು ಯತ್ನಿಸಿದೆ.

'ಸೂಪರ್ ಕಥೆ ಮಾವ! ಅಸೂಯೆಗೊಂಡ ಜನ್ಮಗಳಿಗೆ ಕುಲ ನಾಶವೇ ಗತಿ ಎಂಬುದನ್ನ ಎಷ್ಟು ಸ್ಪಷ್ಟವಾಗಿ ಹೇಳಿದ್ದೀರಿ!'

ಮೆಸೇಜ್ ಓದಿದ ಪ್ರಖ್ಯಾತ ಲೇಖಕರಾದ ಶ್ರೀಮಾನ್ ಪ್ರಕಾಶ ರಾಯರ, ಉರುಫ್ ನನ್ನ ಪತಿಯವರ ಪೆಚ್ಚು ಮುಖ ನೋಡಿ ಉಕ್ಕಿ ಉಕ್ಕಿ ನಗುವ ಸರದಿ ಈಗ ನನ್ನದಾಯಿತು!


OMKAR
Offset Printers
Specialists in :
Multi-colour Brochures
Magazines
Annual Reports
News Letters
Variable Data Printing
All Graphic Arts under one roof
No. 3/3, 1st Main Road
New Tharagupet
Bangalore - 560 002.
Telefax : 2670 9026, 2670 8186/7
E-mail : omkaroffset@gmail.com
Website : www.omkaroffset.com
CTP - Trendsetter 800 Quantum Platesetter
IBM RICOH 2190
Variable Data Printer
Komori Lithrone S40

# ಮೃಗಾಲಯದಲ್ಲಿ ಪ್ರಯೋಗ

**● ಇ.ಆರ್. ರಾಮಚಂದ್ರನ್**

**ಪ್ರಾ**ಣಿಗಳು ಎಲ್ಲಾ ಪರಿಸರದಲ್ಲಿ ಹೇಗೆ ಬೆಳೆಯುತ್ತೆ? ಅವುಗಳನ್ನು ನಿಯಂತ್ರಿತ ಪರಿಸರದಲ್ಲಿಟ್ಟರೆ ಅವುಗಳ ನಡವಳಿಕೆಯಲ್ಲಿ ಏನಾದರೂ ಹೆಚ್ಚು ಕಡಿಮೆ ಕಂಡು ಬರುತ್ತೆ? ಇದರಿಂದ ಮನುಷ್ಯ ಏನಾದರೂ ಕಲಿಯಬಹುದೇ? ಇಂತಹ ವಿಷಯಗಳನ್ನು ತಿಳಿದುಕೊಳ್ಳಲು ವಿಜ್ಞಾನಿಗಳು ಬಹಳಷ್ಟು ಕೆಲಸ ಮಾಡಿದ್ದಾರೆ, ಮಾಡುತ್ತಲೇ ಇರುತ್ತಾರೆ.

**ಬೆಕ್ಕಿಗಷ್ಟೇ ಅಲ್ಲ ಬೆಕ್ಕಿನ ಮರಿಗೂ ಬಲಶಾಲಿ ಪ್ರಾಣಿಗಳು ಸಲಾಂ ಹೊಡೆಯುವದೆಂದರೆ..?**

ನನ್ನ ಸ್ನೇಹಿತ ಬಾಪು ಸುಂದರೇಶ್ ಪ್ರಾಣಿಗಳ ವಿಷಯವನ್ನು ಚೆನ್ನಾಗಿ ತಿಳಿದುಕೊಂಡವರು. ಅವರು ಸಿವಿಲ್ ಎಂಜಿನಿಯರ್ ಆದರೂ ಪ್ರಾಣಿಗಳ ಬಗ್ಗೆ ಅವುಗಳ ನಡವಳಿಕೆ ಬಗ್ಗೆ ಆಸಕ್ತಿ ಇದ್ದು ಬೇರೆ ಬೇರೆ ದೇಶದ ಮೃಗಾಲಯಗಳನ್ನೂ ನೋಡಿದ್ದಾರೆ.

ಅವರ ಮೂಲಕ ನನಗೆ ಇತ್ತೀಚೆಗೆ ಒಂದು ಎಕ್ಸ್‌ಪೆರಿಮೆಂಟಲ್ ಮೃಗಾಲಯವನ್ನು ನೋಡಲು ಅವಕಾಶ ಸಿಕ್ಕಿತು.

ಮೃಗಾಲಯದ ಡೈರೆಕ್ಟರ್ ಶ್ರೀನಿವಾಸ ರಾವ್ ನಮ್ಮನ್ನು ಎದುರುಗೊಂಡು ಅವರು ಮಾಡುತ್ತಿರುವ ಪ್ರಯೋಗಗಳನ್ನು ತೋರಿಸಿ ಅದರ ಬಗ್ಗೆ ಮಾಹಿತಿ ಕೊಡುವುದಾಗಿ ಹೇಳಿದರು. ರಾವ್ ಫಾರೆಸ್ಟ್ ಡಿಪಾರ್ಟ್‌ಮೆಂಟಿನಲ್ಲಿ ಕೆಲಸ ಮಾಡಿ, ಬಂಡೀಪುರ, ನಾಗರಹೊಳೆ ಮುಂತಾದ ಕಾಡಿನಲ್ಲಿ ಕೆಲಸ ಮಾಡಿ ಪ್ರಾಣಿಗಳ ಬಗ್ಗೆ ಬಹಳಷ್ಟು ರಿಸರ್ಚ್ ಮಾಡಿದ್ದಾರೆ.

'ಈ ಜಾಗದಲ್ಲಿ ಮನುಷ್ಯನ ಜೊತೆ ಹೊಂದಿಕೊಂಡು ಸಂತೋಷವಾಗಿರುವ ಪ್ರಾಣಿಗಳು – ಕೃಷಿ, ಹೊಲ, ಗದ್ದೆಗಳಲ್ಲಿ ಕೆಲಸ ಮಾಡುವ ಪ್ರಾಣಿಗಳನ್ನು ಸೇರಿಸಿ ಇಟ್ಟಿದ್ದೀವಿ. ನಾಯಿ, ಬೆಕ್ಕು, ಕುದುರೆ, ಕತ್ತೆ, ಹಸು, ಎತ್ತು, ಕೋತಿ ಮತ್ತು ಹಲವಾರು ಪಕ್ಷಿಗಳೂ ಇವೆ.'

'ಬಹಳ ಸಂತೋಷ! ಇಲ್ಲಿಯ ವಿಶೇಷವೇನು ರಾವ್?'

'ಇದೊಂದು ಪ್ರಯೋಗ ಶಾಲೆ ಎಂದು ಕರೆಯಬಹುದು. ನಾವು ಈ ಪ್ರಾಣಿಗಳನ್ನಿಟ್ಟುಕೊಂಡು ಆಗಾಗ್ಗೆ ಪ್ರಯೋಗಗಳನ್ನು ಮಾಡ್ತೀವಿ. ಅದರ ಫಲಿತಾಂಶದಿಂದ

*ಆಗ ಇಬ್ಬರ ಜಗಳ ಮೂರನೆಯವನಿಗೆ ಲಾಭ ಈಗ ಇಬ್ಬರ ಜಗಳ ಮೂರನೆಯವನು ಹಲ್ಲು ಮುರಿಸಿಕೊಂಡ.*

ನಮ್ಮ ಮತ್ತು ಪ್ರಾಣಿಗಳ ನಡವಳಿಕೆಯಲ್ಲಿ ಏನಾದರೂ ಹೋಲಿಕೆ/ವ್ಯತ್ಯಾಸ ಕಂಡು ಬರುತ್ತಾಂತ ಹುಡುಕ್ತೀವಿ.'

'ನಾವು ಪ್ರಾಣಿಗಳಿಂದಲೇ ವಿಕಸಿತರಾದಿವೀಂತ ಆಗಲೇ ಖಚಿತವಾಗಿದೆಯಲ್ಲ' ಅಂದ್ರು ಬಾಪು.

'ನಿಜ. ಒಂದು ಕಾಲದಲ್ಲಿ ಅವುಗಳು ನಮ್ಮ ಪೂರ್ವಸ್ಥರು! ಇದನ್ನು ಡಾರ್ವಿನ್ ಕಂಡು ಹಿಡಿದರು. ಈ ಪ್ರಯೋಗದಿಂದ ಪ್ರಾಣಿಗಳ ನಡತೆಗೂ ನಮ್ಮ ನಡತೆಗೂ ಏನಾದರೂ ಸಂಬಂಧ ಇದೆಯಾಂತ ಹುಡುಕುವುದೇ ನಮ್ಮ ಉದ್ದೇಶ. ನಮ್ಮ ಪ್ರಯೋಗಗಳನ್ನು ನೋಡಿ ನಿಮ್ಮ ಅಭಿಪ್ರಾಯಾನ ನಮ್ಮ ಜೊತೆ ಹಂಚಿಕೊಳ್ಳಬಹುದು. ಇನ್‌ಫಾಕ್ಟ್ ನಮಗೆ ಅದೇ ಬೇಕಾಗಿರುವುದು.'

ಅಷ್ಟು ಹೊತ್ತಿಗೆ ನಾವು ಪ್ರಾಣಿಗಳಿರುವ ಶೆಡ್ಡಿಗೆ ಬಂದೆವು.

'ಇಲ್ಲಿರುವ ಪ್ರಾಣಿಗಳಿಗೆ ಮೊದಲಿನಿಂದ ಒಂದು ಪಾಠ ಕಲಿಸಿದ್ದೀವಿ. ಏನೆಂದರೆ, ಪ್ರತಿ ಪ್ರಾಣಿಯೂ ಅದರ ನಿಯಮಿತ ಕೆಲಸ ಮಾಡಿದರೇನೆ ಅದಕ್ಕೆ ಊಟ ಸಿಗೋದು. ಹಸು ಹೊರಗೆ ಹೋಗಿ ಮೇಯ್ದು ಬಂದ್ರೆ, ಕೈ ಕಾಲು ಒದರದೆ ಹಾಲು ಕರೆಯಲು ಬಿಟ್ಟರೆ ಅದಕ್ಕೆ ಕಲಗಚ್ಚು ಸಿಗುತ್ತೆ. ಅಪರಿಚಿತರು ಒಳಗೆ ಬರದಂತೆ ನಾಯಿ ನೋಡಿಕೊಳ್ಳಬೇಕು. ಆವಾಗ ಅದರ ಆಹಾರ ನಿಯಮಿತ ವೇಳೆಗೆ ಸಿಗುತ್ತೆ. ಹೀಗೆ ಎಲ್ಲಾ ಪ್ರಾಣಿಗಳಿಗೂ ಒಂದೊಂದು ಕೆಲಸ ಮಾಡುವುದಕ್ಕೆ ತರಬೇತಿ ಕೊಟ್ಟಿದೀವಿ.'

'ಹಾಗೆ ಮನುಷ್ಯರಿಗೂ ಒಂದು ನಿಯಮ ಇದ್ದರೆ ಎಷ್ಟು ಚೆನ್ನಾಗಿರುತ್ತೆ' ಅಂದ್ರು ಬಾಪು.

'ಈಗ ನೋಡಿ, ಎಲ್ಲವೂ ಊಟ ಮಾಡುತ್ತಿವೆ. ಬೆಳಿಗ್ಗೆಯಿಂದ ಕೆಲಸ ಮಾಡಿದ ಮೇಲೆ ಊಟ ಸಿಗುತ್ತೆ ಅಂತ ಗೊತ್ತು ಅವಕ್ಕೆ. ಊಟ ಮಾಡಿ ಕೆಲವು ವಿಶ್ರಾಂತಿ ತೊಗೊಳ್ಳುತ್ತೆ. ಮಿಕ್ಕವು ಆಟವಾಡ್ತಾ ಇರುತ್ತೆ.'

'ಆಶ್ಚರ್ಯ. ಮೃಗಾಲಯದಲ್ಲಿ ಎಂತಹ ಶಿಸ್ತು!' ಬಾಪು.

'ಈಗ ಪಕ್ಕದ ಶೆಡ್‌ಗೆ ಹೋಗೋಣ.'

ಅಲ್ಲಿ ನಮಗೆ ಆಶ್ಚರ್ಯ ಕಾದಿತ್ತು. ಎಲ್ಲಾ ಪ್ರಾಣಿಗಳೂ ಒಂದೇ ಸಮನೆ ಒಟ್ಟಿಗೆ ಕೂಗಿಕೊಳ್ತಿದ್ವು. ಎಲ್ಲವೂ ಒಂದಲ್ಲಾ ಒಂದು ಕೀಟಲೆ ಮಾಡ್ತಿತ್ತು. ಒಂದೆರೆಡು ಕೋತಿಗಳು ಮರದಿಂದ ಮರಕ್ಕೆ ಜಿಗಿಯುತ್ತಿದ್ದವು. ಇನ್ನೊಂದೆರೆಡು, ಹುಲ್ಲು ಕಿತ್ತು ಮಣ್ಣು ಸೇರಿಸಿ ಕೇಕೆ ಹಾಕುತ್ತಾ ಅಲ್ಲಿ ಕೂತಿದ್ದ ಹಸುವಿನ ತಲೆಯ ಮೇಲೆ ಹಾಕುತ್ತಿದ್ದವು. ಅಲ್ಲಿ ಬಿದ್ದಿದ್ದ ಬೂದಿಯನ್ನು ಹಾರಿಸುತ್ತಾ ಕತ್ತೆಗಳು ದೊಡ್ಡ ದ್ವನಿಯಲ್ಲಿ ಅರಚುತ್ತಿದ್ದವು.

'ಇಲ್ಲಿ ಯಾಕೆ ಹೀಗೆ ಇದೆ?'

'ಇವುಗಳಿಗೆ ಕೆಲಸ ಏನೂ ಕೊಟ್ಟಿಲ್ಲ. ಬೆಳಿಗ್ಗೆಯಿಂದ ಆಗಾಗ್ಗೆ ಏನಾದ್ರೂ ಊಟ / ತಿಂಡಿ ಕೊಡ್ತಾನೇ ಇರ್ತೀವಿ.'

‘ಆದ್ರೂ ಯಾತಕ್ಕೆ ಗಲಭೆ ಮಾಡ್ತಿವೆ, ಜಗಳವಾಡ್ತಿವೆ?’

‘ಅದನ್ನೇ ಪರೀಕ್ಷೆ ಮಾಡ್ತಿದೀವಿ. ಏನೂ ಕೆಲಸವಿಲ್ದೆ ಬರೀ ತಿಂತಾ ಕೂತಿದ್ರೆ ಇದೇ ಆಗೋದು ಅಂತ ಅನ್ನಿಸುತ್ತೆ! ತಿಂದಿದ್ದು ಅರಗಬೇಕಲ್ಲ? ಅದಕ್ಕೆ ಒಂದಕ್ಕೊಂದು ಜಗಳವಾಡಿ, ಹೊಡೆದಾಡತ್ವೆ ನೋಡಿ. ಮಧ್ಯೆ ಮಧ್ಯೆ ಹೋಗಿ ತಿಂದು ಬರುತ್ತೆ. ದಿನವಿಡೀ ಹೀಗೇ ನಡೀತಿರುತ್ತೆ... ಇದರಿಂದ ಒಂದು ಪಾಠ ನಾವು ಕಲಿಯಬಹುದಲ್ಲ?’

‘ಇದರಿಂದ ನೋ ವರ್ಕ್ ನೋ ಪೇ ಅನ್ನುವ ಪಾಠ ಕಲಿಯಬಹುದು. ಇಲ್ಲಿ ಅದನ್ನು ಜಾರಿಗೆ ತರಬೇಕು.’

‘ನಾನು ಅದು ಹೇಳಲಿಲ್ಲ. ನೀವು ಹೇಳಿದಿರಿ. ಮತ್ತೊಂದು ವಿಷಯ ಗಮನಿಸಿದಿರಾ?’

‘ಏನು?’

‘ಮುಂಚೆ ಇದ್ದ ಗ್ರೂಪಿಗೆ ಊಟ ಎಷ್ಟು ಬೇಕೋ ಅಷ್ಟು ಮಾತ್ರ ಕೊಡ್ತಿದ್ವಿ. ಅವುಗಳು ಕೂಡಾ ಎಷ್ಟು ಬೇಕೋ ಅಷ್ಟೆ ತಿನ್ನುತ್ತಿದ್ದವು. ಕೆಲಸ-ಊಟ-ಆರಾಮ ಮೂರನ್ನೂ ಚೆನ್ನಾಗಿ ಸಮತೋಲನೆ ಮಾಡಿಕೊಂಡಿವೆ. ಅದ್ರಿಂದ ಅವುಗಳ ಆರೋಗ್ಯ ಕೂಡ ಚೆನ್ನಾಗಿದೆ.’

‘ಇಲ್ಲಿ?’

‘ಇಲ್ಲಿ ಇವುಗಳಿಗೆ ಡಬಲ್ ಊಟ ಕೊಡ್ತೀವಿ. ಎಲ್ಲವೂ ಚೆನ್ನಾಗಿ ತಿಂದು ಆಯಾ ಜಾತಿಯ ಗಡವಾಗಳ ಹಾಗೆ ಬೆಳದಿದೆ.’

‘ಹೌದು. ದಷ್ಟಪುಷ್ಟವಾಗಿದೆ ಹಾಗೂ ಒಂದೊಂದೂ ಕೊಬ್ಬಿದೆ, ಕೀಟಲೇನೂ ಮಾಡ್ತಿವೆ.’

‘ಆದ್ರೆ ಬಹಳ ಪ್ರಾಣಿಗಳಿಗೆ ಆರೋಗ್ಯ ಸರಿಯಾಗಿಲ್ಲ. ತಿಂದಿದ್ದು ಅರಗುವ ಹಾಗೆ ಕೆಲಸ ಮಾಡಿಲ್ಲ. ಶ್ರಮ ಅಂದ್ರೆ ಏನೂಂತ ಗೊತ್ತಿಲ್ಲ ಇವಕ್ಕೆ. ಎಕ್ಸಸೈಸ್ ಕೂಡ ಏನೇನೂ ಇಲ್ಲ. ಕೆಲಸವಿಲ್ಲದೆ ಹೊತ್ತು ಹೋಗದೆ ಕೂತಲ್ಲೇ ಕೂತಿದ್ರೆ ಒಂದಕ್ಕೊಂದು ಜಗಳ, ಕಿರುಚಾಟ, ಬಡಿದಾಟ ಶುರು ಆಗೇ ಆಗುತ್ತೆ! ಅದಕ್ಕೆ ಈ ಪ್ರಾಣಿಗಳಿಗೆ ಆರೋಗ್ಯ ಒಂದಲ್ಲಾ ಒಂದು ರೀತಿ ಕೆಟ್ಟಿದೆ.’

‘ಬರೀ ತಿನ್ನೋದೇ ಕೆಲಸ ಅದರಲ್ಲೂ ಡಬಲ್ ಊಟ ಅಂತೀರಿ... ಈ ಗ್ರೂಪಿನ ಊಟ ಸಬ್ಸಿಡೈಸ್ಡಾ? ಹಾಗೇ ಕಾಣಿಸುತ್ತೆ.’

‘ಇಲ್ಲಿ ಎಲ್ಲಾದಕ್ಕೂ ಊಟ ಫ್ರೀನೇ! ಸಬ್ಸಿಡೈಸ್ ಅನ್ನೋ ಪದ ನೀವು ಉಪಯೋಗಿಸಿದಿರಿ! ಅದು ನನ್ನದಲ್ಲ’ ಅಂದ್ರು ರಾವ್.

‘ಕೆಲಸವಿಲ್ದೇ ಹೋದ್ರೆ ಪ್ರಾಣಿಗಳೂ ನಮ್ ತರಹ ಕಚ್ಚಾಡಿ, ಗುದ್ದಾಡುತ್ವೇಂತ ಆಯ್ತು’ ಅಂದ್ರು ಬಾಪು.

‘ಸರಿಯಾಗಿ ಸಮ್ ಅಪ್ ಮಾಡಿದ್ರಿ’ ಅಂದ್ರು ಶ್ರೀನಿವಾಸ್ ರಾವ್.

ಅಲ್ಲಿಂದ ರಾವ್ ಮೂರನೇ ಶೆಡ್‌ಗೆ ಕರೆದುಕೊಂಡು ಹೋದ್ರು.

‘ಇಲ್ಲಿ ನೋಡಿ. ಒಂದು ಪ್ರಾಣಿಯನ್ನು ರಾಜನ ಹಾಗೆ ನೇಮಕ ಮಾಡಿ ಅದನ್ನು ಪ್ರಾಣಿಗಳಿಗೂ ಅಭ್ಯಾಸ ಮಾಡ್ಸಿದೀವಿ. ರಾಜನ ಮುಂದೆ ಹೋಗದಿದ್ದರೆ ಯಾವ ಪ್ರಾಣಿಗೂ ಊಟ ಸಿಗೊಲ್ಲ ಅನ್ನುವ ಭಾವನೆ ಎಲ್ಲಾ ಪ್ರಾಣಿಗೂ ಅಭ್ಯಾಸವಾಗಿದೆ. ಒಂದು ಬಲಶಾಲಿ ಪ್ರಾಣಿಗೂ ರಾಜನ ಮುಂದೆ ಸಲಾಮು ಹೊಡೆಯದಿದ್ರೆ ಅದಕ್ಕೆ ಊಟ ಸಿಗೋದಿಲ್ಲ ಅನ್ನೊ ಭಾವನೆ ಅವುಗಳಲ್ಲಿ ತನಗೆ ತಾನೆ ಬಂದು ಬಿಡುತ್ತೆ. ಈಗ ನೋಡಿ ಊಟದ ಟೈಮ್. ಅಲ್ಲಿ ನೋಡಿ.’

ಅಲ್ಲಿ ಒಂದು ಬೆಕ್ಕು ಕಂಬಳಿಯ ಮೇಲೆ ಠೀವಿಯಾಗಿ ಕೂತಿತ್ತು. ಪ್ರತಿಯೊಂದು ಪ್ರಾಣಿಯೂ ಬೆಕ್ಕಿನ ಮುಂದೆ ಹೋಗಿ ಅದನ್ನು ದಾಟಿಕೊಂಡು ಹೋಗುತ್ತಿತ್ತು; ಹಾಗೆ ಹೋದರೇನೇ ಅದಕ್ಕೆ ಊಟ ಸಿಗುತ್ತಿತ್ತು. ಇದಕ್ಕೆ ಅಭ್ಯಾಸವಾದ ಪ್ರತಿಯೊಂದು ಪ್ರಾಣಿಯೂ, ಬೆಕ್ಕಿಗಿಂತ ಬಹಳ ಪಟ್ಟು ಬಲಶಾಲಿಗಳಾದ ಹಸು, ಎತ್ತು, ಎಮ್ಮೆ ಇತ್ಯಾದಿ ಕೂಡಾ ಬೆಕ್ಕಿನ ಮುಂದೆ ಹಾದು ಹೋದ ಬಳಿಕ ಅದರ ಊಟದ ಪಾತ್ರೆಯ ಹತ್ತಿರ ಹೋಗಿ ಊಟ ಮಾಡುತ್ತಿತ್ತು!

ಶ್ರೀನಿವಾಸ್ ಮುಂದುವರಿಸಿದರು. ‘ಊಟ ಸಮೀಪದಲ್ಲಿಟ್ಟರೂ, ಪ್ರತಿಯೊಂದು ಪ್ರಾಣಿಯೂ ಎಲ್ಲಿ ಬೆಕ್ಕು ಕಂಬಳಿಯಲ್ಲಿ ಕೂತಿರುವುದೋ ನೋಡಿ, ಅಲ್ಲಿಗೆ ಹೋಗಿ ಆಮೇಲೆ ತನ್ನ ಊಟದ ತಟ್ಟೆಯ ಹತ್ತಿರ ಬರುತ್ತೆ. ಇದನ್ನು ನಾಲ್ಕನೇ ಶೆಡ್ಡಿನಲ್ಲಿ ನೋಡಬಹುದು.’

ಅಲ್ಲಿ ಒಂದು ಬೆಕ್ಕು ದೂರದಲ್ಲಿ ರತ್ನ ಕಂಬಳಿಯ ಮೇಲೆ ಕೂತಿತ್ತು. ಊಟ ಪಕ್ಕದಲ್ಲೇ ಇದ್ದರೂ ಮಿಕ್ಕ ಪ್ರಾಣಿಗಳು ಬೆಕ್ಕಿನ ಹತ್ತಿರ ಪ್ರದಕ್ಷಿಣೆ ಹೊಡೆದು ವಾಪಸ್ಸು ಅವುಗಳ ಊಟದ ಹತ್ತಿರ ಬರುತ್ತಿತ್ತು!

‘ಬಹಳ ಆಶ್ಚರ್ಯ! ಇದರ ಅರ್ಥ ಬಹಳ ಗಹನವಾಗಿದೆ ಹಾಗೂ ಎಷ್ಟು ಅರ್ಥಗರ್ಭಿಥವಾಗಿದೆ ರಾವ್! ಬಲಿಷ್ಟ ಪ್ರಾಣಿಗಳು ಬೆಕ್ಕಿನ ಮುಂದೆ ನಮಸ್ಕಾರ ಹಾಕಿ, ತನ್ನ ಊಟಕ್ಕೆ ಹೋಗುತ್ತಲ್ಲಾ.. ಇವುಗಳು ಸ್ವಾಭಿಮಾನ ಕಳೆದು ಕೊಂಡಿದೆ. ಬೆಕ್ಕಿಗೂ ಗೊತ್ತು. ತನ್ನನ್ನು ನೋಡಿ ಹೋದರೇನೇ ಅವುಗಳಿಗೆ ಊಟ ಸಿಗುತ್ತೆ ಅಂತ. ಅದರ ಜಂಭ, ಡಂಭತನ ನೋಡಿದ್ರೆ ಅಸಹ್ಯವಾಗುತ್ತೆ. ಬಲಶಾಲಿಗಳು ಬಲಿಪಶುವಾದಂತಿದೆ’ ಎಂದ್ರು ಬಾಪು ಸ್ವಲ್ಪ ಆವೇಶದಿಂದ.

‘ಒಂದೊಂದು ಸಲ ಬೆಕ್ಕಿನ ಮರಿ ಮಾತ್ರ ಅಲ್ಲಿಟ್ಟಿದ್ದೆವು. ಆವಾಗಲೂ ಅವುಗಳು ಅದರ ಪ್ರದಕ್ಷಿಣೆ ಮಾಡುತ್ವೆ’ ರಾವ್.

‘ಅಯ್ಯೋ! ಇದೇನನ್ಯಾಯ. ಅವುಗಳು ಬಂದು ಬೆಕ್ಕಿನ ಮರಿಗೆ ಸಲಾಮು ಹೊಡೆಯಿತ್ವೆ?’

‘ಇದು ಪ್ರಾಣಿಗಳಲ್ಲೇಕೆ? ಎಷ್ಟೋ ಕಡೆ ಮನುಷ್ರಲ್ಲೂ ನಡೀತಿದೆ. ನಮ್ಮ ನಿತ್ಯ ಜೀವನದಲ್ಲೂ ನೋಡ್ತೀವಲ್ಲ’ ಅಂದೆ.

‘ಇದೆಲ್ಲಾ ನೀವು ಹೇಳಿದ್ದು, ನಾನಲ್ಲಾ! ನನ್ನ ಕೆಲಸ ಬರೀ ಎಕ್ಸ್‌ಪೆರಿಮೆಂಟು ಮಾಡೋದು. ಅದರ ಪರಿಣಾಮ, ಫಲಿತಾಂಶ ಹೇಳುವುದು ನಿಮ್ಮ ಕೆಲಸ’ ಎಂದರು ಶ್ರೀನಿವಾಸ ರಾವ್.

ನಾವು ಮುಂದೆ ಬರುವಷ್ಟರಲ್ಲಿ ಒಂದು ದಿಗ್ಭ್ರಮೆಯಾಗುವಂತಹ ಘಟನೆ ನಮ್ಮೆದುರಿಗೇ ನಡೆಯಿತು.

ಹಸು ತಿನ್ನುವ ಬಾಳೆ ಎಲೆಯನ್ನು ಬೆಕ್ಕಿನ ಮರಿ ಛಿಂದಿ ಛಿಂದಿಯಾಗಿ ಹರಿಯುತ್ತಿತ್ತು. ಅದರ ಪಕ್ಕದಲ್ಲೇ ನಿಂತು ನೋಡುತ್ತಿದ್ದ ಬಲಶಾಲಿ ಹಸುವಿಗೆ ಸ್ವಲ್ಪವೂ ಕೋಪವೂ ಬರಲಿಲ್ಲ, ಅದನ್ನು ನೋಡ್ಲೇ ಇಲ್ಲಾ ಅನ್ನುವ ಹಾಗೆ ಅಲ್ಲೇ ನಿಂತಿತ್ತು!

ನಮ್ಮೆದುರೇ ನಡೆದ ಅನ್-ಪ್ಲಾನ್ಡ್ ಪ್ರಯೋಗ ನಮ್ಮ ಜೊತೆ ಇದ್ದ ಮೃಗಾಲಯದ ಡೈರೆಕ್ಟರ್ ಶ್ರೀನಿವಾಸ್ ರಾವ್ ಅವರನ್ನೂ ಆಶ್ಚರ್ಯಚಕಿತರಾಗಿ ಮಾಡಿತ್ತು!

ಬುಲೆಟ್ ಜಾಸ್ತಿ ಸೌಂಡ್ ಮಾಡಿದ್ರೆ ಬೀಳುತ್ತೆ ಫೈನ್ –ಸುದ್ದಿ

‘ಸಾ...ಇಲ್ಲಿ ಬುಲೆಟ್ನ್ಯಾಗೆ ಏನೂ ಸೌಂಡ್ ಬರ್ತಿಲ್ಲಾ...
‘ಭಯಂಕರ ಸೌಂಡ್’ ಬರ್ತಿರೋದು ಆ ಕಡೆಯಿಂದ ಸಾ...’




GIRIJA
SILKS & SAREES
Exclusive
SILK
Sarees
Phone : 23340466
No. 8 & 9, Maruthi Complex, 8th Cross,
Malleshwaram, Bangalore - 560 003.

# ದೇವರು ಮತ್ತು......

**● ಎಚ್. ಗೋಪಾಲಕೃಷ್ಣ**

**ದೇ**ವರು ಮಾಡುವ ಕೆಲವು ವಿಚಿತ್ರಗಳನ್ನು ನಿಮ್ಮ ಸಂಗಡ ಹಂಚಿಕೊಂಡ ನೆನಪು ನನಗಿಲ್ಲ. ಈಗ ಆ ಸಂಗತಿಗೆ ಬರುತ್ತಿದ್ದೇನೆ. ವೈಷ್ಣೋದೇವಿ ಕೇಳಿದ್ದೀರಾ? ತಪ್ಪು ಮಾಡಿದ, ಜೈಲಿಗೆ ಹೋಗ್ತೀವೀ ಅನ್ನುವ ಪಾಪಭಯದಿಂದ ನರಳುವ ರಾಜಕಾರಣಿಗಳು ಮೊದಲು ಭೇಟಿಸುವ ದೇವತೆ ಅಂದರೆ ಈ ವೈಷ್ಣೋದೇವಿ. ನಾನು ಏನೂ ತಪ್ಪೇ ಮಾಡಿಲ್ಲದಿರುವ ಹುಲುಮಾನವ ಮತ್ತು ಇನ್ನು ನೂರುಜನ್ಮ ಎತ್ತಿದರೂ ಜೈಲಿಗೆ ಹೋಗುವ ಕೆಲಸವನ್ನು ಯೋಚಿಸಲೂ ಆಗದಿರುವ ಮನಸ್ಥಿತಿ ಹೊಂದಿರುವ ಜೀನ್ಸಿನಿಂದ ಮೊಳಕೆ ಬಂದಿರುವವನು. ಮತ್ತೂ ಹೇಳಬೇಕು ಅಂದರೆ ನಮ್ಮ ವಂಶದಲ್ಲಿ ಯಾರೂ ರಾಜಕಾರಣಿಗಳು ಇಲ್ಲ ಹಾಗೂ ರಾಜಕಾರಣ ಮಾಡಬೇಕು ಎನ್ನುವ ಮನೋಭಾವದಿಂದ ನಾವು ನೂರುತಲೆಮಾರಿನಿಂದ ದೂರ ಇದ್ದೇವೆ - ಇದು ನಾನು ಎದೆತುಂಬಿ ಹೇಳುವ ಮಾತು. ಇಂಥಹ ಉಜ್ವಲವಾದ ಹಿನ್ನೆಲೆ ಹೊಂದಿರುವ ನಾನು ವೈಷ್ಣೋದೇವಿಗೆ ಹೋಗಿದ್ದು ಮತ್ತು ಬಂದಿದ್ದು ನನ್ನ ಆತ್ಮಕಥೆಯ ಹಲವು ಪುಟಗಳಿಗೆ ಕಾರಣವಾಗುತ್ತದೆ ಎಂಬುವ ನಂಬಿಕೆ ಮೊದಲು ನನಗಿರಲಿಲ್ಲ. ಈಗ ಅದರ ಕಥೆ ನಿಮಗೆ ಮತ್ತು ನನ್ನ ಆತ್ಮಕಥೆಯ ಪುಟಗಳಿಗೆ........

ಕಾಶ್ಮೀರ ನೋಡಬೇಕು ಅಂತ ತುಂಬಾ ವರ್ಷಗಳ - ವರ್ಷಗಳೇನು - ಅದೆಷ್ಟೋ ಜನ್ಮಗಳ ಹಿಂದೆ ಒಂದು ಲೌಡ್‌ತಿಂಕಿಂಗ್ ಅನ್ನು ಮಾಡಿದ್ದೆ ಹೆಂಡತಿ ಜತೆ ಒಳ್ಳೆಯ ಮೂಡಿನಲ್ಲಿದ್ದಾಗ ಮತ್ತು ಈ ಲೌಡ್‌ತಿಂಕಿಂಗ್ ಅನ್ನು ಮರೆತೂ ಬಿಟ್ಟಿದ್ದೆ - ರಾಜಕಾರಣಿಗಳು ಇಲ್ಲಿಗೆ ಭೇಟಿಕೊಟ್ಟು ನಂತರ ಜೈಲಿಗೆ ಹೋದರಲ್ಲಾ ಆಗ! ಆದರೆ ನನ್ನ ಹೆಂಡತಿ ತಲೆಯಲ್ಲಿ ಇದು ಗಟ್ಟಿಯಾಗಿ ಕೂತುಬಿಟ್ಟಿತ್ತು. ನಲವತ್ತು ವರ್ಷ ದೇಶಸೇವೆ ಮಾಡಿ ಮೊನ್ನೆ ರಿಟೈರು ಆದೆನಲ್ಲಾ ಆಗ ಹೇಗಿದ್ರೂ, ಈಗ ಬಿಡುವಾಗಿದೀವಿ, ಕಾಶ್ಮೀರ ನೋಡಿಬಿಡೋಣವೇ ಅಂತ ಪಾರ್ಷಿಯಲ್ ಆರ್ಡರು ಆಯಿತು. ಪಾಪ ಇಷ್ಟು ವರ್ಷ ನಮ್ಮನ್ನ ಲಕ್ಷ್ಯದಿಂದ ನೋಡಿಕೊಂಡಿದಾಳೆ, ಒಂದಿನ ಅದು ಬೇಕು ಇದು ಬೇಕು ಅಂತ ಕೇಳಿದೋಳಲ್ಲ, ಆಸೆ ಪಡ್ತಿದೆ ಹೋಗಿಬಿಡೋಣಾ..... ಅಂತ ಅನಿಸಿತು. ವೀಕ್ ಮೊಮೆಂಟು.. ತಲೆ ಆಡಿಸಿದೆ ಅಂತ ಕಾಣುತ್ತೆ. ಆಗಲೇ ತಯಾರು ಮಾಡಿಸಿದ್ದ ಒಂದು ಟೂರ್‌ಇಟಿನರಿ ನನ್ನ ಮುಂದೆ ಹರಡಿಕೊಳ್ಳಬೇಕೇ? ಅದರಂತೆ ಕಾಶ್ಮೀರ ಮತ್ತು ಅದರ

*ಆಗ- ದಂಪತಿಗಳು ಬರುತ್ತಿದ್ದರು ಈಗ ದಂ ಎಲ್ಲಿ ಬಂತು ಪತಿಗಳಿಗೆ.*

ಸುತ್ತಮುತ್ತದ ಪ್ರದೇಶಗಳ ಮ್ಯಾಪು ಹಾಗೂ ಈ ವೈಷ್ಣೋದೇವಿ ವಿಸಿಟ್ಟು ಮತ್ತು ಟೂರ್ ಏಜಂಟರ ವಿವರ ಇರೋ ಪತ್ರಕಾಣಿಸಬೇಕೇ? ಸರಿ ಅಂತ ಹೊರಟೆ ಗುಂಪಿನ ಸಂಗಡ. ನಾನೂ ಸಹ ನಿಮ್ಮ ಹಾಗೇ - ಗುಂಪಿನಲ್ಲಿ ಗೋವಿಂದ ತತ್ವದಲ್ಲಿ ನಂಬಿಕೆ ಹೊಂದಿರುವವನು. ಕಾಶ್ಮೀರ ಪಾಸ್ಮೀರ ಸುತ್ಕೊಂಡು ವೈಷ್ಣೋದೇವಿಗೆ ಅಂತ ಬಂದ್ವಾ? ಅಲ್ಲೇ ನನ್ನ ಪ್ರಾಬ್ಲಮ್ಮು ಶುರುವಾಗಿದ್ದು.. ಅದು ಹೇಗೆ ಅಂದರೆ....

ಕಾಶ್ಮೀರ ಸುತ್ತಿ ವೈಷ್ಣೋದೇವಿ ನೋಡಬೇಕು ಅಂತ ಬಂದಿದ್ದೀವಿ. ಬೆಟ್ಟ ಅಲ್ಲ ಪರ್ವತ ಕಾಲಿನಲ್ಲಿ ಹತ್ತಬೇಕು ಇಲ್ಲ ಅಂದರೆ ಹೆಲಿಕಾಪ್ಟರ್ರೋ, ಕುದುರೇನೋ, ಡೋಲಿ ಅವರನ್ನೋ ಬಾಡಿಗೆಗೆ ಗೊತ್ತುಮಾಡಬೇಕು ಅಂತ ಅಲ್ಲಿನ ಹೋಟಲಿನವರು ಹೇಳಿದರು. ಹದಿನಾರು ಕಿಲೋಮೀಟರು ಇದೆ, ನೋಡಿದರೆ ನೀವೆಲ್ಲಾ ವಯಸ್ಸಾಗಿರೋರು ನಡಕೊಂಡು ಹೋಗೋ ಯೋಚನೇನ ಕನಸಿನಲ್ಲೂ ಮಾಡಬೇಡಿ... ಅಂತ ಎಚ್ಚರಿಕೆ ಸಹಾ ನೀಡಿಬಿಟ್ಟ ಆ ಪುಣ್ಯಾತ್ಮ! ಹೆಲಿಕಾಪ್ಟರು ಮೂರು ತಿಂಗಳ ಮುಂಚೇನೇ ಬುಕ್ ಆಗಿರುತ್ತೆ, ಹೋಗಿ ಕ್ಯೂನಲ್ಲಿ ನಿಲ್ಲಿ, ಸಿಕ್ಕಿದರೂ ಸಿಗಬಹುದು ಅಂತ ಆತನೇ ಐಡಿಯಾ ಕೂಡಾ ನೀಡಿದ. ಕ್ಯೂನಲ್ಲಿ ನಿಂತು ಸಿಗಲಿಲ್ಲ ಅಂದರೆ ಟೈಮು ವೇಸ್ಟು, ಕ್ಯೂ ನಿಲ್ಲೋದು ಬೇಡ ಅಂತ ನಮ್ಮ ಲೀಡರು ಡಿಸೈಡು ಮಾಡಿತು. ಸರಿ ಅಂತ ಬೆಳಿಗ್ಗೆ ಬೇಗಲೇ ಎದ್ದು ಪರ್ವತದ ಬುಡ ಸೇರಿದೆವು. ಕಾಗದ ಪತ್ರ ತಯಾರಿಸೋಕ್ಕೆ ಇಬ್ಬರು ಹೋದರು. ನಮ್ಮನ್ನ ನೋಡಿದ ಕೂಡಲೇ ಒಂದು ದೊಡ್ಡ ಗುಂಪು ಬಂದು ನಮ್ಮನ್ನ ಸುತ್ತಿಕೊಳ್ತು - ಮನುಷ್ಯರು ಹೊರೋ ಡೋಲಿ ಬೇಕೋ ಕುದುರೆ ಬೇಕೋ ನಿಮ್ಮನ್ನ ಹೊರೋಕ್ಕೆ ಅಂತ ಕೇಳಿ ಚೌಕಾಸಿ ಶುರು ಮಾಡಿದವು. ಮನುಷ್ಯರು ಹೊತ್ತು ಹೋಗೋದು ಬೇಡ ಅಂತ ಕುದುರೆ ಆಯ್ಕೆ ಆಯಿತು.

ಪ್ರಾಣಿ ಮೇಲೆ ಕೂತು ಬರೋದು ನನ್ನ ಪ್ರಿನ್ಸಿಪಲ್‌ಗೆ ವಿರುದ್ಧವಾದ್ದು, ನಾನು ನಡೆದು ಬರ್ತೀನಿ ಅಂದೆ. ಅಲ್ಲಿದ್ದ ಇಡೀ ಬೆಂಗಳೂರು ನನ್ನ ಮೇಲೆ ತಿರುಗಿ ಬಿತ್ತು, ಎಲ್ಲಾರೂ ಹೋಗ್ತಿಲ್ವಾ? ನಮಗೂ ನಿಮ್ಮ ಹಾಗೇ ಫೀಲಿಂಗ್ಸು ಇವೆ, ಆದರೂ ಅಡ್ಜಸ್ಟು ಮಾಡಿಕೋಬೇಕು, ನಿಮ್ಮ ಪ್ರತಿಷ್ಠೆ ಎಲ್ಲಾ ಅಲ್ಲಿರಲಿ ಅಂತ ದಬಾಯಿಸಿ, ನನಗೂ ಕುದುರೆ ಗೊತ್ತಿಸಿಬಿಟ್ಟವು. ನಮ್ಮಜತೆ ವ್ಯವಹಾರ ಮಾಡಿದ್ದವನು ದಢದಢ ಹೋಗಿ ಕುದುರೆ ಅಟ್ಟಿಕೊಂಡು ಬಂದ. ಎಲ್ಲರೂ ಅದು ಹೇಗೋ ಕುದುರೆ ಏರಿ ಹೊರಟೂ ಬಿಟ್ಟರು, ಆದರೆ ನನಗೆ ಬರಬೇಕಿದ್ದ ಕುದುರೆ ಎಲ್ಲಿ? ಸುತ್ತಲೂ ನೋಡಿದೆ, ವ್ಯವಹಾರ ಮಾಡಿದ್ದವನು ಕಾಣಿಸಲಿಲ್ಲ. ಅಷ್ಟರಲ್ಲಿ ಮತ್ತೊಬ್ಬ ಯಾರೋ ಕುದುರೆ ತಂದ. ಹತ್ತು ಅಂದ ಹಿಂದಿಯಲ್ಲಿ. ನಾನು ಮಾತಾಡಿದೋನು ಎಲ್ಲಿ? ಅಂತ ನನ್ನ ಹಿಂದೀಲಿ ಕೇಳಿದೆ. ತಾನೂ ಅವನ ಕಡೆಯವನೇ ಅಂದ. ಹದಿನೈದು ಇಪ್ಪತ್ತು ಸಲ ಕುದುರೆ ಮುಂದೆ ಹೋಗಿ, ನಾನು ಹಿಂದೆ ಉಳಿದು ಕೊನೇಗೆ ಅದು ಹೇಗೋ ನನ್ನನ್ನ ಕುದುರೆ ಮೇಲೆ ಪ್ರತಿಷ್ಠಾಪನೆ ಮಾಡುವಲ್ಲಿ ಈತ (ಇವನ ಹೆಸರು ಯಾಸಿ ಅಂತ ಈಗ ಗೊತ್ತಾಗಿತ್ತು) ಯಶಸ್ವಿಯಾದ. ಸಣಕಲ ಕಡ್ಡಿ ಹಾಗಿದ್ದ ಅವನು ನೂರಾ ಹದಿನೈದು ಕೇಜಿ ತೂಗುವ ನನ್ನನ್ನು ಅನಾಮತ್ತಾಗಿ ಎತ್ತಿ ಕುದುರೆ

ಮೇಲೆ ಬಿಸಾಕಿ ಬಿಟ್ಟಿದ್ದ - ಅದೂ ಹೇಗೆ? ನನ್ನ ಎರಡೂ ಕಾಲು ಆಕಡೆ ಒಂದು ಈಕಡೆ ಒಂದು ಹೋಗೋ ಹಾಗೆ. ಅವನು ಹಾಗೆ ಬಿಸಾಕಿದ್ದರೂ ನನಗೋ ನಾನು ಸರಿಯಾಗಿ ಕೂತಿಲ್ಲ ಅನ್ನುವ ಭಾವನೆ, ಜತೆಗೆ ಕುದುರೆ ಕೊರಳಿಗೆ ಒಂದು ಹಗ್ಗ ಕಟ್ಟಿ ಹಿಡಿಕೆ ಮೇಲೆ ಬರೋರೀತಿ ಮಾಡಿದ್ದನ್ನು ಹಿಡಿದು ಕೂರಬೇಕಿತ್ತು - ಲಗಾಮಿನ ವ್ಯವಸ್ಥೆ ಇರಲಿಲ್ಲ. ಯಾವಾಗ ಕೈ ಜಾರಿ ಬೀಳ್ತೀನೋ ಅಂಬೋ ಭಯ. ಅದನ್ನೂ ಮೀರಿದ್ದು ಅಂದರೆ ಕುದುರೆ ಅವಾಗವಾಗ ಕಣಿವೆ ಪಕ್ಕ ಹೋಗಿಬಿಡೋದು, ಅದು ಜಾರಿ ನಮ್ಮನ್ನ ಪ್ರಪಾತದಲ್ಲಿ ಎತ್ತಿ ಹಾಕಿಬಿಡುತ್ತೆ ಅನ್ನುವ ಜೀವಭಯ ಬೇರೆ.... ಕಳೆದ ವಾರತಾನೇ ಯಾರೋ ನಮ್ಮ ತರಹದ ಪ್ರವಾಸಿ ನಮ್ಮ ವಯಸ್ಸಿನವನೇ ಹೀಗೇ ಕುದುರೆ ಸವಾರಿ ಮಾಡ್ತಾ ಪ್ರಪಾತದಲ್ಲಿ ಬಿದ್ದು ಸತ್ತು ಹೋದನಂತೆ.. ಈ ಕಥೆಯನ್ನು ಹಿಂದಿನ ದಿವಸ ರಾತ್ರಿ ನಾವು ಇಳಿದುಕೊಂಡಿದ್ದ ಹೋಟಲಿನಲ್ಲಿ ಮಾಣಿ ಹೇಳಿದ್ದ. ಇದು ಕುದುರೆ ಪ್ರತಿ ಹೆಜ್ಜೆ ಇಟ್ಟಾಗಲೂ ನೆನಪಾಗುತ್ತಲೇ ಇರಬೇಕೇ?

ಯಾವ ಊರು ಅಂತ ಯಾಸಿ ಹಿಂದೀಲಿ ಮಾತು ಶುರುಮಾಡಿದ. ಅರೆಬರೆ ಹಿಂದೀಲಿ ಉತ್ತರಿಸಿದೆ. ಕುದುರೆ ಮೇವು ಸಿಗದೇ ಇರೋದು, ಇವರ ಸಂಪಾದನೆ ಒಂದು ಹೊತ್ತು ಊಟಕ್ಕೂ ಸಾಲದೇ ಇರೋದು ಹೇಳುತ್ತಾ ಹೋದ. ನಾನು ಅವನ ಭಾಷೆ ಅರ್ಥವಾಗಿಲ್ಲದವನಂತೆ ಪೆಚ್ಚು ಮುಖ ಹಾಕಿ ಕುದುರೆಯ ಕುತ್ತಿಗೆ ಹತ್ತಿರದ ಕಮಾನನ್ನ ಬಿಗಿಯಾಗಿ ಹಿಡಿದು ಜೀವ ರಕ್ಷಿಸಿಕೊಳ್ಳುವಲ್ಲಿ ನಿರತನಾಗಿದ್ದೆ. ಅವನ ಮಾತಿಗೆ ನಾನು ಗಮನ ಕೊಡದಿರುವುದು ಅವನಿಗೆ ಗೊತ್ತಾಯಿತು ಅಂತ ಕಾಣುತ್ತೆ. ಈಗ ವರಸೆ ಬದಲಾಯಿಸಿದ.

ನೀನು ತುಂಬಾ ದಪ್ಪ ಇದೀಯಾ. ಇಷ್ಟು ದಪ್ಪ ಇದ್ದರೆ ಹೇಗೆ? ಕುದುರೆಗಳು ನಿನ್ನಂಥವರನ್ನ ಹೊರೋದು ತುಂಬಾ ಕಷ್ಟ. ಕುದುರೆ ಪಾಪ ಪ್ರಾಣಿ ಅಲ್ಲವಾ? ನಾವು ಮನುಷ್ಯರು ಅದರ ಮೇಲೆ ಕೂತ್ಕೋ ಬೌದೇ? ಮುಂದಿನ ಸಲ ಇಲ್ಲಿಗೆ ಬಂದರೆ ಕುದುರೆ ಮೇಲೆ ಕೂತ್ಕೋಬೇಡ, ಪ್ಲೇನಿನಲ್ಲಿ ಹೋಗು.. ಇದು ಅವನು ನನ್ನ ಹತ್ತಿರ ಜಾಸ್ತಿ ಕಾಸು ಕೀಳೋದಕ್ಕೆ ಮಾಡ್ತಿರೋ ಹುನ್ನಾರ ಅಂತ ಗೊತ್ತಾದರೂ ಇಂಥಹ ತರಲೆ ಮಾತುಗಳನ್ನ ಕೇಳಿಸಿಕೊಂಡೂ ತನಗೆ ಅರ್ಥವಾಗದವನ ಹಾಗೆ ಸುಮ್ಮನಿರೋದು ಎಂತಹ ಸಂಯಮವಂತನಿಗೂ ಸಾಧ್ಯವಾಗದ್ದು ಅಂತ ಗೊತ್ತಿದ್ದರೂ ಹಲ್ಲುಕಚ್ಚಿಕೊಂಡು ತೆಪ್ಪಗಿದ್ದೆ. ಇದೇ ಸಮಯದಲ್ಲಿ ನನ್ನ ದೇಹದಲ್ಲಿ ಮತ್ತೊಂದು ಬಯಲಾಜಿಕಲ್ ಛೇಂಜು ಆಗುತ್ತಿರುವುದು ನಿಧಾನಕ್ಕೆ ಗಮನಕ್ಕೆ ಬಂತು. ಅದೇನಪ್ಪಾ ಅಂದರೆ ಸುಮಾರು ವರ್ಷದ ಹಿಂದೆ - ಅಂದರೆ ನನಗೆ ನೆನಪೇ ಇಲ್ಲದಿರುವಷ್ಟು ಹಿಂದೆ - ಟೈಫಾಯ್ಡು ಬಂದಿತ್ತು. ಆಗ ನಾನು ತುಂಬಾ ಸಣ್ಣಗಿದ್ದೆನಂತೆ - ಇದು ನನ್ನ ತಾಯಿ ನನಗೆ ಹೇಳಿದ್ದು - ಕೈ ತೋಳಿಗೆ ಇಂಜೆಕ್ಷನ್ ಕೊಡಲು ಅದು - ಅಂದರೆ ನನ್ನ ತೋಳು - ತುಂಬಾ ಸಣ್ಣಗಿತ್ತಂತೆ, ಸೂಜಿ ಈಕಡೆ ಚುಚ್ಚಿದರೆ ಆಕಡೆ ಭಾಗದಿಂದ ಆಚೆ ಬಂದುಬಿಡ್ತಾ ಇತ್ತಂತೆ. ಅದರಿಂದ ಅಂಡಿನ ಮೇಲೆ ಇಂಜೆಕ್ಷನ್ ಕೊಟ್ಟರಂತೆ. ಆಗಲೂ ಪೊಸಿಷನ್ ಸಿಗದೇ ಸೂಜಿ ಮುರೀತು. ಅದನ್ನ

ಹೇಗೋ ಆಚೆ ತೆಗೆದರು. ಆದರೂ ಆಗಲಿಂದ ಅಲ್ಲಿ ಒಂದು ಕಡಲೇ ಬೀಜದ ಗಾತ್ರದ ಒಂದು ಗಡ್ಡೆ ಹಾಗೇ ಉಳಿದುಕೊಂಡು ಬಂದಿದೆ. ನಾನು ದೊಡ್ಡವನಾದ ಮೇಲೆ ಅದೆಷ್ಟೋ ಸಲ ನನ್ನಾಕೆ ಇದನ್ನ ತೆಗೆಸ್ಕೋ ಬಾರದೇ ಅಂತ ಕೇಳಿದ್ದಾಳೆ. ಅದರ ಪಾಡಿಗೆ ಅದು ಇದೆ ಅದೇನು ತೊಂದರೆ ಕೊಡ್ತಾ ಇದ್ಯಾ? ಲೀವ್ ಅಂಡ್ ಲೆಟ್ ಲೀವ್ ಅಂತ ಅದನ್ನ ಪೋಷಿಸಿಕೊಂಡು ಬಂದಿದ್ದೆ.

ಈಗ ಅದು ಕುದುರೆ ಒಂದೊಂದು ಸಲ ಎತ್ತಿ ಹಾಕಿದಾಗಲೂ ನಾನು ಇಲ್ಲೇ ಇದೀನಿ, ನನಗೆ ನಿನ್ನ ಭಾರ ಹೇರಿ ಹಿಂಸೆ ಮಾಡ್ತಾ ಇದೀಯಾ – ನಿನ್ನ ಲೀವ್ ಅಂಡ್ ಲೆಟ್ ಲೀವ್ ಪ್ರಿನ್ಸಿಪಲ್ಲು ಎಲ್ಲಿ ಹೋಯ್ತು? ಅಂತ ಕೇಳೋದೂ ಅಲ್ಲದೇ ಒಂದೊಂದು ಸಲ ಕುಕ್ಕಿಸಿಕೊಂಡಾಗಲೂ ಸಣ್ಣದಾಗಿ ನೋವು ಕೊಡಲು ಶುರು ಹಚ್ಚಿತು.

ಇಂತಹದ್ದಕ್ಕೆಲ್ಲಾ ನಾನು ಕೇರ್ ಮಾಡುವವನಲ್ಲ. ಈಗ ನನ್ನ ಗುರಿ ಏನಿದ್ದರೂ ಪರ್ವತದ ತುದಿಗೆ ಹೋಗೋದು – ಅಲ್ಲಿ ವೈಷ್ಣೋದೇವಿ ದರ್ಶನ ಮಾಡೋದು ಮತ್ತು ಈ ಕುದುರೆ ಯಜಮಾನ ಹೆಚ್ಚು ಕಾಸು ಕೇಳಿದಾಗ ಯಾವರೀತಿ ಅದನ್ನ ಕಾಂಬಾಟ್ ಮಾಡಬೇಕು ಅಂತ ಪ್ಲಾನಿಸುತ್ತಿತ್ತು. ಹಾಗೂ ಹೀಗೂ ಆರೇಳು ಕಡೆ ನಿಂತು ಚಹಾ ಹೀರಿ ಯಾಸೀಗೂ ಕೊಡಿಸಿ ತುದೀಗೆ ಬಂದೆವು. ಕುದುರೆಯಿಂದ ಅದು ಹೇಗೋ ನನ್ನನ್ನು ಆತ ಕೆಳಗೆ ಇಳಿಸಿದ. ಜೇಬಿನಿಂದ ದುಡ್ಡು ತೆಗೆದೆ. ಪಾಪ ಕಷ್ಟ ಪಟ್ಟಿದ್ದಾನೆ, ಅವನು ಕೇಳದೇ ಹೋದರೂ ಒಂದು ಐನೂರು ಜಾಸ್ತಿ ಕೊಡೋಣಾ ಅಂತ ಮನಸಲ್ಲೇ ಲೆಕ್ಕ ಹಾಕಿಕೊಳ್ತಾ ಹಣ ಎಣಿಸಲು ಶುರು ಮಾಡಿದೆ. ದೋ ಹಜಾರ್ ದೇವ್..... ಅನ್ನೋದೇ ಅವನು!

ದೋ ಹಜಾರ್? ಕ್ಯೋಂ ದೋ ಹಜಾರ್? ಹಮೆ ಸೆವೆನ್ ಹಂಡ್ರೆಡ್ ಬೋಲಾತಾನಾ...? ಅಂದೆ. ನೀನು ದಪ್ಪ ಇದೀಯಾ ದೋ ಹಜಾರ್ ಕೊಡಲೇಬೇಕು...

ನಾನು ಮಾತಾಡಿದಾಗಲೇ ದಪ್ಪ ಇದ್ದೆ. ಈಗ ದಪ್ಪ ಆಗಿಲ್ಲ, ತಿಳೀತಾ?

ನಾನು ಮಾತಾಡಿದ್ದೇ ಏಳು ನೂರಕ್ಕೆ. ಅದು ಹೇಗೆ ದೋ ಹಜಾರ್ ಕೇಳ್ತೀಯಾ?

ಐನೂರು ಹೆಚ್ಚಿಗೆ ಕೊಡ್ತೀನಿ ತಗೋ ನಿನಗೆ ಒಳ್ಳೇದಾಗಲಿ ಅಂತ ಹೇಳಿ ಅವನಿಗೆ ಕಾಸು ಕೊಟ್ಟು ಬೆನ್ನು ತಟ್ಟಿ ಕಳಿಸಬಹುದಿತ್ತು – ಈ ಪ್ರಯೋಗ ಎಷ್ಟೋ ಕಡೆ ಮಾಡಿ ಜಯಶೀಲನಾಗಿರುವ ಅನುಭವಸ್ಥ ನಾನು.

ಆದರೆ ಯಾಕೋ ಅವನ ಮೇಲೆ ನನಗೆ ಹಠ ಹುಟ್ಟಿ ಬಿಡ್ತು. ಏಳು ನೂರರ ಮೇಲೆ ಏನೂ ಕೊಡೋಲ್ಲ ಅಂತ ಪಟ್ಟು ಹಿಡಿದೆ. ಅವನ ಗ್ಯಾಂಗಿನವರು ಸೇರಿದರು. ರಾಜಿ ಪಂಚಾಯಿತಿ ಮಾಡಿದರು. ಹೋಗಲಿ ಬಡವ ಅದೇನೋ ಕೊಟ್ಟುಬಿಡಿ.... ಅಂತ ಅವರು.

ಬಿಲ್‌ಕುಲ್ ಕೊಡೋಲ್ಲ ಅಂತ ನಾನು. ನನ್ನ ಜತೆಯವರೆಲ್ಲಾ ಆಗಲೇ ಮುಂದೆ ಹೊರಟು ಹೋಗಿದ್ದರಿಂದ ನನಗೆ ಒತ್ತಡ ಹೇರೋರೂ ಇಲ್ಲ. ಒಂದು ಗಂಟೆ ವಾದ ವಿವಾದ ನಡೀತು.

ಹೋಗಲಿ ನೀನೇನೂ ನನಗೆ ಕೊಡಲೇ ಬೇಡ ಧರ್ಮ ಮಾಡಿದ್ದೀನಿ ಅಂದ್ಕೋತೀನಿ, ಅಂದ.

ನೀನೇನೂ ನನಗೆ ಧರ್ಮ ಮಾಡೋದು ಬೇಡ, ನನಗೆ ಬೇಕಾದಷ್ಟು ಇದೆ... ಇದು ನಾನು.

ಬೇಕಾದಷ್ಟು ಇದೆ ತಾನೇ? ನಮಗೂ ಕೊಡು... ಇದು ಅವನು.

ಇದೆ ಅಂತ ನಿನಗೆ ಕೊಡ್ಡೋದೇ? ನಾನು ಒಂದು ಪೈಸೇನೂ ಜಾಸ್ತಿ ಕೊಡೋಲ್ಲಾ.. ಇದು ನಾನು.

ದೇವರು ನೋಡ್ಕೊಳ್ಳುತ್ತೆ ಹೋಗು.... ಅಂದ.

ದೇವರು ನನ್ನನ್ನ ನೋಡಿಕೊಳ್ಳೊಲ್ಲ. ಇದು ನಿನಗೆ ಕೊಡಬೇಕಾಗಿರೋ ದುಡ್ಡು ಅಲ್ಲಿ ದೇವರ ಹುಂಡೀಗೆ ಹಾಕ್ತೀನಿ, ನನಗೆ ಪುಣ್ಯ ಬರುತ್ತೆ ಗೊತ್ತಾ?

ಸುತ್ತಲೂ ನಿಂತಿದ್ದ ಗ್ಯಾಂಗಿಗೆ ನಾನು ಭಾರೀ ಜುಗ್ಗ ಅನ್ನುವ ಭಾವನೆ ಬಂತು ಅಂತ ಕಾಣುತ್ತೆ. ಅವನಿಗೆ ಬೈದು ಅದೇನು ಕೊಡ್ತೀರೋ ಕೊಡಿ ಅಂದರು. ಮಾತಾಡಿದ್ದ ಬಾಡಿಗೆ ಎಣಿಸಿ ಕೈಗಿಟ್ಟೆ.

ಸಾಬ್ ಬಡವ ಏನಾದರೂ ಕೊಡಿ ಅಂತ ಗುಂಪಿನಲ್ಲಿ ಒಬ್ಬ ಹೇಳಿದ. ಮತ್ತೆ ನೂರು ಕೊಟ್ಟು ದೇವರ ಗುಡೀಗೆ ನಡೆದೆ. ಒಂದೂವರೆ ವರ್ಷ ಪೂರ್ತಿ ಈ ಪ್ರಸಂಗ ನನಗೆ ನೆನಪಾಗಿ ಮನಸ್ಸಿಗೆ ಬೇಜಾರು ಆಗೋದು, ನಾನು ಯಾಕೆ ಅವತ್ತು ಹಾಗಾಡಿದೆ? ನನಗೇನು ಕಮ್ಮಿಯಾಗಿದೆ ಅಂತ ಪಾಪ ಅವನನ್ನ ಆಟ ಆಡಿಸಿದೆ ಅಂತ ಮನಸ್ಸು ಪೆಚ್ಚಾಗೋದು. ನಿಧಾನಕ್ಕೆ ಇದು ಮರೀತು. ಆದರೆ ದೇವರು ನೋಡ್ಕೊಳ್ಳುತ್ತೆ ಹೋಗು ಅಂತ ಅವನು ಹೇಳಿದ್ದನಲ್ಲಾ ಅದರ ಅನುಭವ ಈಚೆಗೆ ಆಯಿತು. ಅದು ಹೀಗೆ.....

ವೈಷ್ಣೋದೇವಿಗೆ ಹೋಗಿ ಬಂದು ಅದನ್ನು ಮರೆತಿದ್ದೀವಿ ಅಂತ ಅಂದುಕೊಂಡರೂ ಅದು ಮರೆಯೋಕ್ಕೆ ಬಿಡಲಿಲ್ಲ. ಅದು ಹೇಗೆ ಅಂದರೆ ಕೂತುಕೊಳ್ಳೋ ಜಾಗದಲ್ಲಿ ಒಂದು ಕಡಲೇ ಬೀಜದ ಗಾತ್ರದ ಗಡ್ಡೆ ನೋವು ಕೊಡೋದಿಕ್ಕೆ ಶುರು ಮಾಡಿತ್ತು ಕುದುರೆ ಸವಾರಿ ಮಾಡಬೇಕಾದರೆ ಅಂತ ಹೇಳಿದ್ದೆನಲ್ಲಾ, ಅದು ಯಾವಾಗಾವಗಲೋ ನೋವು ಕೊಡಲು ಸಜ್ಜಾಯಿತು. ನನಗೋ ಡಾಕ್ಟರು ಅಂದರೆ ಭಯ. ಭಯ ಯಾಕೆ ಅಂದರೆ ನಾನು ಇದು ನೋವು ಅಂತ ತೋರಿಸೋಕ್ಕೆ ಹೋದರೆ ಅವರು ಎದೆ ಕೊಯ್ದು ಕಳಿಸಿ ಬಿಡ್ತಾರೆ ಅನ್ನುವ ತಪ್ಪು ನಾಲೆಡ್ಜು! ಹೇಳದೇ ಈ ನೋವನ್ನ ತಡೆದುಕೊಂಡು ಬಂದೆ. ಕುರ್ಚಿ ಮೇಲೆ ಕೂತರೆ ಒತ್ತಿ ನೋಯುತ್ತೆ ಅಂತ ಕುರ್ಚಿ ಮೇಲೆ ಕೂಡೋದು ಬಿಟ್ಟೆ, ಅಂಗಾತ ಮಲಗಿ ಹಾಯಾಗಿ ಘೊರಕೆ ಹೊಡೀತಿದ್ದೋನು ಮಗ್ಗುಲಲ್ಲಿ ಮಲಗಲು ಆರಂಭಿಸಿದೆ. ಯಾವ ಯಾವುದೋ ಮುಲಾಮುಗಳನ್ನು ತಂದು ಅದರ ಮೇಲೆ ಸವರಿ ಅದು ಕರಗಲಿ ಅಂತ ಹಾರೈಸಿದೆ. ಯಾವುದೂ ಫಲ ಕೊಡಲಿಲ್ಲ. ನೆಂಟರ ಮನೇಗೆ, ಅದರಲ್ಲೂ ಹೆಂಡತಿ ತವರಿಗೆ ಅವಳ ಜತೇಲಿ ವಾರಕ್ಕೆ ಐದು ಸಲ ಹೋಗುತ್ತಿದ್ದವನು ಏಕ್‌ದಂ ನಿಲ್ಲಿಸಿಬಿಟ್ಟೆ.


ಯಾವುದಕ್ಕೂ ಕೇರ್ ಮಾಡದೇ ಇದ್ದವಳು ಈಗ ನನ್ನ ಬಗ್ಗೆ ಚಿಂತೆ ಹಚ್ಚಿಕೊಂಡಳು. ಒಂದಿನ ಭಾನುವಾರ, ಬಿಸಿಬೇಳೆ ಭಾತು, ಬಾಳಕ, ಸಂಡಿಗೆ, ಹಪ್ಪಳ ಮೊಸರನ್ನದ ಊಟದ ನಂತರ ಒಂದು ಕೇಳತೀನಿ, ನಿಜ ಹೇಳಬೇಕು ಅಂದಳು! ನನ್ನ ಮದುವೆಯಾದ ಹೊಸತರಲ್ಲಿ ನಾನು ಬರೆದು ಇಟ್ಟಿದ್ದ ಹದಿನೈದು ಡೈರಿ ಇವಳ ಕೈ ಸೇರಿ ಆಗ ಇವಳು ಕೇಳುತ್ತಿದ್ದ ಒಂದು ಕೇಳತೀನಿ, ನಿಜ ಹೇಳಬೇಕು ಮಾತು ನೆನಪಿಗೆ ಬಂತು. ಮದುವೆ ನಂತರ ಸಜ್ಜನ ಆಗಿರುವುದರಿಂದ ಏನೂ ತಪ್ಪು ಮಾಡಿಲ್ಲ ಎನ್ನುವ ಮೊರಾಲಿಟಿಯಿಂದ ಕೇಳು ಏನುಬೇಕೋ ಕೇಳು ಅಂದೆ.

ಯಾಕೆ ನನ್ನ ಜತೆ ನೀವು ನಮ್ಮಮ್ಮನ ಮನೇಗೆ ಬರ್ತಿಲ್ಲ ಅಂತ ಕಣ್ಣಲ್ಲಿ ನೀರುತುಂಬಿಕೊಂಡು ಕೇಳಿದಳು.

ಆಗ ನಿರ್ವಾಹ ಇಲ್ಲದೇ ಕೂತುಕೊಳ್ಳುವ ಜಾಗದಲ್ಲಿ ನನಗೆ ಆಗಿರುವ ತೊಂದರೆ ಹೇಳಿದೆ. ಇದು ನಾವು ವೈಷ್ಣೋದೇವಿಗೆ ಹೋದಾಗ ಆಗಿದ್ದು ಅಂತ ನೆನಪಿಸಿದೆ. ಆ ದೇವರಿಗೆ ಹರಕೆ ಹೊತ್ತರೆ ಹೇಗೆ? ಅಂದಳು. ಹರಕೆ? ಬೇಡಾ ಅಂದೆ. ಹರಕೆ ಹೊರೋದು ಮತ್ತೆ ಅಲ್ಲೀಗೆ ಹೋಗೋದು, ಮತ್ತೆ ಕುದುರೆ ಹತ್ತೋದು..... ಯಾರಿಗೆ ಬೇಕು ಇದೆಲ್ಲಾ? ಹಾಯಾಗಿ ನಮ್ಮೂರಲ್ಲಿ ಬಿಸಿಬೇಳೆ ಭಾತು ತಿಂದುಕೊಂಡು ಆರಾಮವಾಗಿ ಇರೋದಕ್ಕಿಂತಲೂ ಬೇರೆ ಸುಖ ಯಾವುದಾದರೂ ಇದೆಯೇ?

ಸರಿ ಅವತ್ತೇ ನಾನು ಆಸ್ಪತ್ರೇಗೆ ಸೇರೋದು, ಅದನ್ನ ತೆಗೆಸೋದೂ ಅಂತ ತೀರ್ಮಾನ ಆಯಿತು. ಅಲ್ಲಿ ವೈಷ್ಣೋದೇವಿಲಿ ನಾನು ಕುದುರೆ ಸವಾರಿ ಮಾಡಿಸಿದ ಯಾಸಿಗೆ ಕೊಡದೇ ಉಳಿಸಿದ್ದ ಕಾಸು ಈಗ ಬಡ್ಡಿ ಸಮೇತ ನಮ್ಮೂರಿನ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ಸೇರಿತು.

ದೇವರು ಮಾಡುವ ಕೆಲವು ವಿಚಿತ್ರಗಳಲ್ಲಿ ಈ ಕಥೆಯೂ ಒಂದಿರಬಹುದೇ ಎನ್ನುವ ಸಂದೇಹ ದೇವರನ್ನು ನಂಬದ ನನಗೆ ಕಾಡಲು ಆರಂಭವಾಗಿದೆ!





# ಹರಕೆಯ ಕುರಿ

● ನಂನಾಗ್ರಾಜ್

**ಸಂ**ದಿಗ್ಧ ಪರಿಸ್ಥಿತಿಗಳಿಗೊಳಗಾದಾಗ ಅಥವಾ ಯಾವುದಾದರೂ ಬಯಸಿದ ಕಾರ್ಯ ಸಿದ್ಧಿಯಾಗಬೇಕಾದಾಗ ದಿಢೀರ್ ಎಂದು ಮನಸ್ಸಿಗೆ ಬಂದದ್ದನ್ನು ಹರಕೆ ಹೊತ್ತುಕೊಳ್ಳುವುದು ನಮ್ಮಲ್ಲಿ ಅನೇಕಾನೇಕರ ಸಹಜ ಪ್ರವೃತ್ತಿ. ಈ ತರಹದ ಪರಿಸ್ಥಿತಿಗಳಲ್ಲಿ ನಮ್ಮ ಪರವಾಗಿ ನಮ್ಮ ಅಮ್ಮಂದಿರೂ ಹಾಗೂ ಸಹಧರ್ಮಿಣಿಗಳೂ ಸಹ ಹರಕೆಗಳನ್ನು ಹೊತ್ತುಕೊಳ್ಳುತ್ತಾರೆ. ಮುಕ್ಕಾಲು ಮೂರು ಪಾಲು ನಮಗೆ ಅವುಗಳ ಅರಿವೇ ಇರುವುದಿಲ್ಲ.

**ನಮಗೆ ಅರಿವೇ ಇಲ್ಲದೆ ನಮ್ಮ ಪರವಾಗಿ ಹರಕೆ ಹೊತ್ತುಕೊಂಡಾಗ**

ಈಗ ಕೆಲವು ಹರಕೆಗಳನ್ನು ಗಮನಿಸೋಣ.

## ಈಡುಗಾಯಿ

ಈ ಹರಕೆ ವಿದ್ಯಾರ್ಥಿ ದಿನಗಳಲ್ಲಿ ತಾಂಡವವಾಡುತ್ತೆ ನಮ್ಮ ಪರ್‌ಫಾರ್ಮೆನ್ಸ್ ಜೀವನಾಂಶದ (ಪಾಸ್ ಮಾರ್ಕ್ಸ್) ಅಂಚಿನಲ್ಲಿ ಬಂದು ನಿಲ್ಲುವುದೆಂಬ ಲೆಕ್ಕಾಚಾರ. ಫಲಿತಾಂಶದ ದಿನ ಹತ್ತಿರ ಬರುತ್ತಿದ್ದಂತೆಯೇ ಆತಂಕ / ದುಗುಡ ಆಗ ನೆನಪಿಗೆ ಬರುವುದು ಅಸಂಖ್ಯಾತ ದೇವರುಗಳು, ಅವರೆಲ್ಲರಿಗೂ ಈಡುಗಾಯಿಗಳ ಹರಕೆ! ತಲೆ ಒಡೆದರೂ ನಾಲ್ಕಕ್ಷರ ಸಿಗುವುದಿಲ್ಲವೆಂದು ಉಪಾಧ್ಯಾಯರಿಂದ ಪದೇ ಪದೇ ಬೈಯಿಸಿಕೊಳ್ಳುತ್ತಿದ್ದ ನಾವು ದೇವರಿಗೆ ಈಡುಗಾಯಿ ಆಮಿಷ ತೋರಿಸಿ ಬಚಾವಾಗುವ ಪ್ರಯತ್ನ ಮಾಡುತ್ತೇವೆ. ಆದರೆ 'ಪಾಸ್' ಆಗುತ್ತಿದ್ದಂತೆಯೇ ಹರಕೆಯನ್ನು ಸಲೀಸಾಗಿ ಮರೆಯುವುದು. ಪೂರೈಸದಿರುವ ಲೆಕ್ಕವಿಲ್ಲದಷ್ಟು ಈಡುಗಾಯಿಗಳ ಹರಕೆಯನ್ನು ಈಗ ಪೂರೈಸಬೇಕಾದಲ್ಲಿ ಬ್ಯಾಂಕ್ ಲೋನ್ ತೆಗೆದುಕೊಳ್ಳಬೇಕಾಗುತ್ತೆ!

## ತುಲಾಭಾರ

ಬೇಬಿಗಳಿಗೆ ಲಘು ಆರೋಗ್ಯ ತಪ್ಪುವುದು ಸರ್ವೇ ಸಾಮಾನ್ಯ ಆದರೆ ಅಮ್ಮಂದಿರ ಆತಂಕ ಮಿತಿ ಮೀರಿದ್ದು, ಒಡನೆ ಹರಕೆ ಹೊತ್ತುಕೊಂಡು ಬಿಡುವುದು ಚಿಕ್ಕಂದಿನಲ್ಲಿ ನನಗೆ ಒಮ್ಮೆ ಹುಷಾರಿಲ್ಲದಿದ್ದಾಗ ಅದರ ವಿಮುಕ್ತಿಗಾಗಿ ದೇವರಿಗೆ ಬೆಲ್ಲದ ತುಲಾಭಾರ ಮಾಡಿಸುವುದಾಗಿ ನಮ್ಮ ನಮ್ಮಮ್ಮನ ಹರಕೆ. ಕಾರಣಾಂತರಗಳಿಂದ ಅದನ್ನು ಮುಂದೂಡುತ್ತಾ ಒಂದು ನಾನು ಮಧ್ಯವಯಸ್ಸಿಗನಾಗಿದ್ದಾಗ ಪೂರೈಸಿದ್ದಾಯಿತು 10 ಕೆ.ಜಿ.

*ರೇಡಿಯೋಗಿಂತ ಪತ್ರಿಕೆಗಳೇ ಬಲು ಉಪಯೋಗ ಎಂದು ಅವ ಹೇಳಿದಾಗ,*
*ಪತ್ರಿಕೆಯ ಹಾಳೇಲಿ ಸಕ್ಕರೆ ಕಟ್ಟಿಸಿಕೊಂಡು ಹೋಗ್ತಿದ್ದ.*

ಬೆಲ್ಲದಲ್ಲಿ ಖುಷಿಯಿಂದ ತುಲಾಭಾರ ಮಾಡಿಸಿಕೊಳ್ಳುವ ಸನ್ನಿವೇಶ ತಪ್ಪಿ 70 ಕೆ.ಜಿ. ಬೆಲ್ಲ ಹರಸಾಹಸದಿಂದ ಹೇರಿದ ನಂತರ ಮುಜುಗರದಿಂದ ಹರಕೆ ಮುಗಿಸುವ ದುರ್ಭಾಗ್ಯ ನನ್ನದಾಗಿತ್ತು.

## ಹೆಜ್ಜೆ ನಮಸ್ಕಾರ

ಹರಕೆ ವಿಷಯದಲ್ಲಿ ನನ್ನವಳು ಅವಳ ಅತ್ತೆಗಿಂತ ಕಮ್ಮಿಯೇನೂ ಇಲ್ಲ! ನನ್ನೊಂದು ಕಷ್ಟದ ಪರಿಸ್ಥಿತಿಯಲ್ಲಿ ನನಗೆ ಗೊತ್ತಿಲ್ಲದ ಹಾಗೆ ನನ್ನ ಕೈಲಿ (?!) 'ಹೆಜ್ಜೆ ನಮಸ್ಕಾರ' ಮಾಡಿಸುತ್ತೇನೆಂದು ಹರಕೆ ಹೊತ್ತುಕೊಂಡಿದ್ದಾಯ್ತು. ಹೆಜ್ಜೆ ಹೆಜ್ಜೆಗೂ ಒಂದೊಂದು ಪ್ರದಕ್ಷಿಣೆ ನಮಸ್ಕಾರ. ಹೀಗೆ ನೂರಾರು ಹೆಜ್ಜೆಗಳು, ಪ್ರದಕ್ಷಿಣೆಗಳು ಅದೂ ದೊಡ್ಡ ದೇವಸ್ಥಾನದ ಪ್ರಾಕಾರದ ಸುತ್ತ ಈ ಬ್ರೇಕಿಂಗ್ ನ್ಯೂಸ್ ಕೇಳಿದಾಗ ನನ್ನ ತಲೆ ಪ್ರದಕ್ಷಿಣೆ ಹೊಡೆಯಲು ಶುರು ಮಾಡಿತ್ತು!

'ಏನೋ ರೀ, ತಕ್ಷಣಕ್ಕೆ ಬೇರೇನೋ ತೋಚಲಿಲ್ಲ ನಿಮ್ಮ ಒಳ್ಳೆಯದಕ್ಕೆ ನಿಮ್ಮನ್ನು ಕೇಳದೆಯೇ ಹರಸಿಕೊಂಡು ಬಿಟ್ಟೆ ಸಾರಿ ರೀ' ಎಂದು ಮುಖ 1 ಗಜ ಉದ್ದ ಮಾಡಿಕೊಂಡು ಬಿನ್ನವಿಸಿಕೊಂಡಳು. ಸಹಕರಿಸದಿದ್ದರೆ ಒಂದೆರಡು ತಿಂಗಳು ಅವಳ ಮೂತಿ ನಾದಸ್ವರದ ಶ್ರುತಿಯವರ ಮೂತಿ ತರಹ ಊದಿರುತ್ತೆ ಎಂಬುದು ನನಗೆ ಗೊತ್ತು. ಊದಿದ ಮೂತಿ ಒಲ್ಲೆ ಎಂದು ಮನಸ್ಸು ಅಂಗಲಾಚಿತು. ಹರಕೆ ಪೂರೈಸಿದೆ.

## ಉರುಳು ಸೇವೆ

ಉರುಳು ಸೇವೆಯಂತೆ, ಉರುಳು ಸೇವೆ, ಮಲಗಿದ್ದಾಗ ಮಗ್ಗಲು ಬದಲಾಯಿಸುವುದಕ್ಕೇ ಮುಲುಗುವ ಇಸಂ ನಾನು. ನನಗೆ ಪರಿಚಯವಿರುವುದು ಕರೆಂಟ್ ಇರದಿದ್ದಾಗ ಮಸಾಲೆ ರುಬ್ಬುವುದಕ್ಕೆ ಹಾಗೂ ಚಕ್ಕುಲಿ, ಕೋಡುಬಳೆ, ಒತ್ತು ಶಾವಿಗೆ ಮಾಡುವ ಸುಸಂದರ್ಭಗಳಲ್ಲಿ ಮಾಡುವ ಒರಳು ಸೇವೆ. ಒದ್ದೆ ಉಟ್ಟುಕೊಂಡು ಅನಿವಾರ್ಯವಾಗಿ ಉರಿಬಿಸಿಲಲ್ಲಿ ಕಾದ ಮರಳಿನ ಮೇಲೆ ಅದೂ ಮುಗುಳ್ನಗುತ್ತಿದ್ದ ಹತ್ತಾರು ಜನರ ಸಮಕ್ಷಮದಲ್ಲಿ ಆಗಿತ್ತು ನನ್ನ ಈ ಸೇವೆ. ಅಸಾಧ್ಯ ದೈಹಿಕ ಹಿಂಸೆಯ ಜೊತೆಗೆ ಮುಜುಗರ ಈ ಸಂದರ್ಭದಲ್ಲಿ ನಡೆದ ಸಂಭಾಷಣೆ:

ನನ್ನವಳು : ಏನ್ರೀ ನೀವು ಲೊಚಗುಟ್ತಾನೇ ಇದೀರಾ. ಎಷ್ಟೊಂದು ಹೆಂಗಸರು ತಮ್ಮ ಗಂಡಂದಿರಿಂದ 'ಮುಡಿ' ಕೊಡಿಸುತ್ತೇವೆಂದು ಹರಿಸಿಕೊಳ್ಳುತ್ತಾರೆ. ನಾನು ಹಾಗೆ ಮಾಡಲಿಲ್ಲ.

ನಾನು : ಏನೂ? ನಾನು ಮುಡಿಕೊಡುವುದಾ?

ಅವಳು : ಮತ್ಯಾರೂ? ನಾನು ಕೊಡುಕ್ಕಾಗುತ್ತಾ? ನೀವು ನನ್ನ ಕಣ್ಮುಂದೆ ಹೀಗೆ ಓಡಾಡಿಕೊಂಡಿರುವಾಗ, ಬಿಡ್ತೂನ್ನಿ ಎಂದು ಬಾಯಿ ಮುಚ್ಚಿಸಿದಳು!


## ದರ್ಶನ / ಅರ್ಚನೆ


'ಮಗೂನ ಈ ತೊಂದರೆಯಿಂದ ಪಾರು ಮಾಡು ದೇವರೇ ಅವನನ್ನು ಕರೆದುಕೊಂಡು ಬಂದು ನಿನ್ನ ದರ್ಶನ ಮಾಡಿಸಿ ಸಹಸ್ರಾರ್ಚನೆ ಮಾಡಿಸುತ್ತೇನೆ.' ಅಮ್ಮನ ಕಳಕಳಿಯ ಹರಕೆ ಹತ್ತಿರದ ದೇಗುಲವೇನೂ ಅಲ್ಲ. ನೂರಾರು ಮೈಲಿ ದೂರದ್ದು. ಕಾರಣಾಂತರಗಳಿಂದ ಮುಂದೂಡಿ ಮುಂದೂಡಿ ಆಫೀಸಿನ ಒತ್ತಡ ಹಾಗೂ ಬಿಡುವಿಲ್ಲದ ಸಮಯದಲ್ಲಿ ಹರಕೆ ಪೂರೈಸಲು ಒತ್ತಾಯ!

## ನಿಟ್ಟುಪವಾಸ

ತೊಂದರೆಗಳಿಗೆ ಕೊರತೆಯೇ? ಬರುತ್ತಲೇ ಇರುತ್ತವೆ. ಹರಕೆಗಳಿಂದ ಪರಿಹಾರ ಕಂಡುಕೊಳ್ಳುವ ಪ್ರಯತ್ನ. ನಿಟ್ಟುಪವಾಸ. ಫಾಸ್ಟ್ ಟಿಲ್ ನೈಟ್. ಅಂತಹದ ದಿನಗಳಲ್ಲಿ ತನ್ನ ದೇಹದ ಎನರ್ಜಿ ಸೇವ್ ಮಾಡಿಕೊಳ್ಳಬೇಕೆಂಬ ನೆಪಕೊಟ್ಟು ನನ್ನವಳು ಒಲೆಯೇ ಹಚ್ಚೊಲ್ಲ! ಹೀಗಾಗಿ ವಿಧಿಯಲ್ಲದೆ ನಾನೂ ಉಪವಾಸ ಮಾಡಬೇಕಾಗುತ್ತದೆ. ಅವಳಿಗೆ ನಿಟ್ಟುಪವಾಸ, ನನಗೆ ನಿಟ್ಟುಸಿರ ಉಪವಾಸ! ಗಂಜಿ, ಹಣ್ಣು ಹಂಪಲುಗಳೂ ನಿಷಿದ್ಧ. ಸಣ್ಣದೊಂದು ರಿಯಾಯಿತಿ ಅಂದರೆ ರಾತ್ರಿ ಆರಿದ ತಂಬಿಟ್ಟು ದೀಪಗಳನ್ನು ಆಹಾರವಾಗಿ ಸೇವಿಸಬಹುದು!

ನೀವೂ ನನ್ನ ತರಹ ಹರಕೆ ಕುರಿ ಆಗಿದ್ದೀರಾ ಎಂದಾದರೂ?




Ravi Graphics
OFFSET PRINTERS
BRINGING colours ALIVE
colours
53/8, 2nd Main Road, Industrial Town, Rajajinagar, Bangalore - 560 010
Tel: 4088 9999/77, Fax : 4088 9944 | website : www.ravigraphics.com

# ನೆಕ್ಲೆಸ್ ರಾಣಿ ಎಂಬ ನಟೀಮಣಿ

● ಎಂ.ಕೆ. ಭಾಸ್ಕರ ರಾವ್

ರಾಣಿ ಜೇನಿನ ಕಥೆ ಯಾರಿಗೆ ಗೊತ್ತಿಲ್ಲ. ಅದು ಕೆಲಸ ಮಾಡೋಲ್ಲ ಆದರೆ ಅದರ ಸುತ್ತ ಜೀವಕ್ಕೆ ಜೀವ ಕೊಡುವ ಜೇನು ಹುಳುಗಳ ದಂಡೇ ಇರುತ್ತದೆ. ಹೋದಲ್ಲಿ ಬಂದಲ್ಲಿ ರಾಣಿ ಜೇನಿಗೆ ಇರುವ ಫಾಲೋಯರ್ಸ್ ನೋಡಿ ನಮ್ಮ ರಾಜಕಾರಣಿಗಳು ಮತ್ಸರದಿಂದ ಕುದಿಯುತ್ತಾರೆ. ನಾವು ಹಣ ಕೊಡದಿದ್ದರೆ ನಮಗೆ ಫಾಲೋಯರ್ಸ್ ಇಲ್ಲ, ಈ ರಾಣಿ ಆ ಜೇನುಗಳಿಗೆ ಏನು ಕೊಟ್ಟೀತು ಮಹಾ ಎಂದು ಕರುಬುತ್ತಿರುತ್ತಾರೆ.

ಪ್ರಶ್ನೆ ಮಿಲಿಯನ್ ಡಾಲರ್ ಮೊತ್ತದ್ದೇ ಹೌದಾದರೂ ಅದಕ್ಕೆ ಹತ್ತು ರೂಪಾಯಿಯದೇ ಆದರೂ ಒಂದು ಉತ್ತರ ಇರಬೇಕಲ್ಲವೇ...?

ಇಲ್ಲಿ ಹೇಳ ಹೊರಟಿರುವುದು ಅಂಥದೇ ಒಂದು ರಾಣಿಯ ಕಥನ. ಅದು ಕನ್ನಡ ಸಿನಿಮಾ ಎಂದ ಮೇಲೆ ನಾಯಕಿ ಪರಭಾಷಾ ನಟಿಯೇ ಎನ್ನುವುದು ನೂರು ಪರ್ಸೆಂಟ್ ಪಕ್ಕಾ. ಇದು ಅಂಥದೇ ಚಿತ್ರ. ನಿರ್ದೇಶಕರೂ ಆಗಿರುವ ಕೆಲವು ನಿರ್ಮಾಪಕರನ್ನು ಕೇಳಿದರೆ ''ನಮ್ಮ ಕನ್ನಡದ ಹುಡುಗಿಯರು ಬೋಲ್ಡ್ ಆಗಿರೋಲ್ಲ'' ಎಂಬ ಕಾರಣ ಕೊಡುತ್ತಾರೆ. ಪರಭಾಷಾ ನಟಿಯರು ತಮ್ಮ ಭಾಷೆ ಚಿತ್ರಗಳಲ್ಲೇ ಬೋಲ್ಡ್ ಆಗಿರಬಹುದಾದರೆ ಬೇರೆ ಭಾಷೆಯಲ್ಲಿ ಮುಖ್ಯವಾಗಿ ಕನ್ನಡದಲ್ಲಿ ಅವರಿಗೆ ತೊಂದರೆ ಇರೋದೇ ಇಲ್ಲ. ಅಂಥ ಚಮಕ್ ಚಮಕ್ ಬೋಲ್ಡ್ ನಟಿಯ ಹಂಗಾಮಾ ಇದು.

ನಟಿಯ ಮೂಲ ಕೇರಳವೋ, ಆಂಧ್ರವೋ, ತಮಿಳುನಾಡೋ ಸ್ಪಷ್ಟವಾಗಿ ಗೊತ್ತಿಲ್ಲ. ಆದರೆ ಈ ಮೂರೂ ಭಾಷಾ ಚಿತ್ರಗಳಲ್ಲಿ ಆಕೆ ನಟಿಸಿ ಕನ್ನಡಕ್ಕೆ ತನ್ನ ದಿವ್ಯ ಪಾದಾರವಿಂದ ಊರುವ ಹೊತ್ತಿಗೆ ತ್ರಿಭಾಷಾ ತಾರೆ ಎಂದು ''ಖ್ಯಾತ''ರಾಗಿದ್ದರು. ಅಂದರೆ ಆಕೆಯ ಸಿನಿಮಾ ಕಾಲ್‌ಶೀಟ್ ದರವನ್ನು ನಿಗದಿ ಮಾಡುವ ಅಧಿಕಾರ ಆಕೆಯ (ಅರ್ಥಾತ್ ಆಕೆಯ

''ಅಂಗಾಲು ಹುಣ್ಣಿಗೆ ಕನ್ನಡಿ ಬೇಕೇ ಬೇಕು''

ಅಮ್ಮನ) ಮರ್ಜಿಯಲ್ಲಿತ್ತೇ ವಿನಾ ನಿರ್ಮಾಪಕರ ಕೈಯಲ್ಲಿರಲಿಲ್ಲ. ಎಷ್ಟೆಂದರೂ ತ್ರಿಭಾಷಾ ತಾರೆ! ಕನ್ನಡದ ಆ ಚಿತ್ರದ ಮುಹೂರ್ತಕ್ಕೆ ಆಕೆ ಬೆಂಗಳೂರಿಗೆ ಬಂದಿಳಿದಾಗ ಅದೇ ದೊಡ್ಡ ಸುದ್ದಿಯಾಯಿತು. ನಾಯಕ ನಟ ಕಸಿವಿಸಿ ಮಾಡಿಕೊಂಡಿದ್ದು ಯಾರ ನಜರಿಗೂ ಬರಲಿಲ್ಲ. ಸ್ವತಃ ನಿರ್ಮಾಪಕ ತನ್ನ ಭವ್ಯ ಕಾರನ್ನೇ ಆಕೆಯ ಓಡಾಟಕ್ಕೆ ನೀಡಿದ್ದರಿಂದ ಸಹಜವಾಗೇ ನಟಿಯ ಮಹತ್ವದ ಗ್ರಾಫ್ ಏರುಮುಖದಲ್ಲಿ ಇರುವಂತಾಯಿತು.

ತಿಂಗಳಲ್ಲಿ ಹತ್ತು ದಿವಸ ಈ ಸಿನಿಮಾಕ್ಕೆ ಆಕೆಯ ಕಾಲ್‌ಶೀಟ್. ಅದರಂತೆ ಹೀರೋ ಒಳಗೊಂಡು ಉಳಿದವರ ಡೇಟ್ಸ್‌ಗಳನ್ನು ಹೊಂದಿಸಿ ಚಿತ್ರೀಕರಣ ನಿಭಾಯಿಸಬೇಕಾಗಿತ್ತು. ನಮ್ಮ ಕನ್ನಡ ಚಿತ್ರ ನಿರ್ದೇಶಕರಿಗೆ ಆಮದು ತಾರೆಯರನ್ನು ಹ್ಯಾಂಡಲ್ ಮಾಡುವ ಕಲೆ ಕರಗತವಾಗಿರುವುದರಿಂದ ಶೂಟಿಂಗ್‌ನಲ್ಲಿ ಯಾವುದೇ ಏರುಪೇರೂ ಆಗಲಿಲ್ಲ. ಸರಾಗ ಎಂಬಂತೆ ಇಪ್ಪತ್ತು ದಿನದ ಚಿತ್ರೀಕರಣ ಸಾಂಗವಾಯಿತು.

ಮೂರನೇ ಹಂತದ ಚಿತ್ರೀಕರಣಕ್ಕೆ ನಾಯಕಿ ಬಂದಿಳಿದರು. ಅವರಿಗೆಂದೇ ಕಾಯ್ದಿರಿಸಿದ್ದ ಪಂಚತಾರಾ ಹೋಟೆಲಿನಲ್ಲಿ ವಿರಮಿಸಿದರು. ಮರು ದಿವಸ ಬೆಳಗ್ಗೆ ಒಂಭತ್ತಕ್ಕೆ ಶೂಟಿಂಗ್. ಅದಕ್ಕೂ ಹಾಜರಾದರು, ಆದರೆ ಮೇಕಪ್ ಮಾಡಿಕೊಳ್ಳದೆ ಕುಳಿತರು. ಏಕೆ ಎಂದು ಕೇಳಿದರೆ ನಿರ್ಮಾಪಕರು ಬರಲಿ ನಂತರ ಚಿತ್ರೀಕರಣಕ್ಕೆ ಹಾಜರಾಗುತ್ತೇನೆಂದು ಖುಲ್ಲಂಖುಲ್ಲ ಕಡ್ಡಿ ಮುರಿದಂತೆ ಹೇಳಿ ಅಮ್ಮನೊಂದಿಗೆ ಮಾತಾಡುತ್ತಾ ಕೂತರು. ಹೀರೋ ಹೇಳಿದರೆ ಕೇಳಬಹುದೆಂಬ ಲೆಕ್ಕಾಚಾರದಲ್ಲಿ ನಿರ್ದೇಶಕರು ಆ ಯತ್ನವನ್ನೂ ಮಾಡಿದರು. ಹೀರೋ ಆಕೆಯತ್ತ ನೋಡಿದರು. ''ಈ ಉಸಾಬರಿ ನಿಮಗೆ ಬೇಡ'' ಎಂಬ ಆಕೆಯ ಕಣ್ಸನ್ನೆ ಹೀರೋಗೆ ಮನವರಿಕೆಯಾಗಿ ದೂರವೇ ಉಳಿದರು.

ಅಂದಿನ ದುರಾದೃಷ್ಟವನ್ನು ಯಾರಿಗೆ ಆರೋಪಿಸುವುದು? ಹೀರೋ-ಹೀರೋಯಿನ್ ಕಾಂಬಿನೇಷನ್ ಸನ್ನಿವೇಶದ ಚಿತ್ರೀಕರಣ ನಿಗದಿಯಾಗಿದ್ದ ಕಾರಣ ಉಳಿದ ಪೋಷಕ ನಟನಟಿಯರು ಬಂದಿರಲಿಲ್ಲ, ನಿಗದಿಯಾದಂತೆ ಹೀರೋ ಹೀರೋಯಿನ್ ನಡುವಣ ಚಿತ್ರೀಕರಣ ನಡೆಯಬೇಕು ಇಲ್ಲವೇ ಪ್ಯಾಕ್‌ಅಪ್ ಮಾಡಬೇಕು. ಈ ಎರಡರ ಹೊರತಾಗಿ ಮೂರನೇ ಪರ್ಯಾಯವೇ ನಿರ್ದೇಶಕರ ಮುಂದೆ ಇರಲಿಲ್ಲ. ನಿರ್ಮಾಪಕ ಊರಲ್ಲಿರೋಲ್ಲ ಎನ್ನುವುದು ಗೊತ್ತಿತ್ತು, ಆದರೆ ಎಲ್ಲಿಗೆ ಹೋಗಿದ್ದಾರೆನ್ನುವುದರ ವಿವರ ಇರಲಿಲ್ಲ. ಆಗಿನ್ನೂ ಮೊಬೈಲ್ ಯುಗ ಬಂದಿರಲಿಲ್ಲ. ನಿರ್ದೇಶಕ ಹಣೆ ಮೇಲೆ ಕೈಹೊತ್ತು ಕುಳಿತರು.

ಹೀಗೇ ಮಧ್ಯಾಹ್ನ ಊಟದ ಸಮಯ ಬಂತು. ನಿಯಮದಂತೆ ಲಂಚ್ ಬ್ರೇಕ್ ಎಂದು ನಿರ್ದೇಶಕ ಕೂಗಿದ. ಅದಕ್ಕೇ ಕಾಯುತ್ತ ಕುಳಿತಿದ್ದವರಂತೆ ಸಿಬ್ಬಂದಿ ಅತ್ತಿತ್ತ ಹೋದರು. ಎಲ್ಲವನ್ನೂ ಅರ್ಥ ಮಾಡಿಕೊಂಡವರಂತೆ ನಾಯಕ ತನ್ನ ಕಾರಿನಲ್ಲಿ ಕುಳಿತು ಮಾಯವಾದರು. ನಾಯಕಿಯೂ ನಿರ್ಮಾಪಕರ ಕಾರಿನಲ್ಲಿ ಅಮ್ಮನೊಂದಿಗೆ ಕುಳಿತು ಹೋಟೆಲಿಗೆ ಹೊರಟರು. ''ನಿರ್ಮಾಪಕರು ಬಂದು ನನ್ನನ್ನು ನೋಡಿದ ನಂತರವೇ ಚಿತ್ರೀಕರಣಕ್ಕೆ ಬರೋದು, ಅಲ್ಲೀವರೆಗೆ ನನ್ನನ್ನು ಕರೆಯಬೇಡಿ'' ಎಂದು ನಿರ್ದೇಶಕರಿಗೆ

ತಾಕೀತು ಮಾಡಿ, ಹೀರೋಗೆ ಬೈಬೈ ಎಂದು ಫ್ಲೈಯಿಂಗ್ ಕಿಸ್ ಹಾರಿಸಿ ಮಾಯವಾದರು. ಅಂದಿನ ಚಿತ್ರೀಕರಣ...? ಇನ್ನೇನು ಮಣ್ಣು ಚಿತ್ರೀಕರಣ, ಬರಖಾಸ್ತ್ ಆಯಿತು.

ಸಂಜೆ ಆರು ಘಂಟೆ ಸುಮಾರಿಗೆ ನಿರ್ಮಾಪಕರು ಬಂದರು. ಇವತ್ತಿನ ಶೂಟಿಂಗ್ ರಷಸ್ ನೋಡುವ ಉಮೇದಿನಲ್ಲೇ ಅವರು ಬಂದಿದ್ದರು. ಆದರೆ ಇಲ್ಲಿಯ ಕಥೆ ಬೇರೆಯದೇ ಆಗಿತ್ತು. ಅವಾಂತರದ ಸಾದ್ಯಂತ ತಿಳಿದು ಕೆಂಡಾಮಂಡಲರಾದರು.

''.... ಕನ್ನಡದಲ್ಲಿ ಆಕೇನ್ನ ಕೇಳೋರು ಇರಲಿಲ್ಲ, ನಾನು ಅವಳಿಗೆ ಒಂದು ಅವಕಾಶ ಕೊಟ್ಟೆ, ನನಗೇ ಆಕೆ ಕೈಕೊಟ್ಟಳಾ... ಅವಳನ್ನು ಸುಮ್ಮನೇ ಬಿಡೋಲ್ಲ...'' ಎಂದೆಲ್ಲ ಧಮಕಿ ಹಾಕಿ ಸ್ಟುಡಿಯೋದ ಫೋನಿನಿಂದಲೇ ಹೋಟೆಲಿಗೆ ಫೋನ್ ಮಾಡಿ ಆಕೆಯ ಸಂಪರ್ಕಕ್ಕೆ ಕೇಳಿದರು.

ಮಲಯಾಳವೋ, ತೆಲುಗೋ, ತಮಿಳೋ.. ಒಟ್ಟಾರೆ ಕನ್ನಡವಲ್ಲದ ಭಾಷೆಯಲ್ಲಿ ನವಿರಾಗಿಯೇ ಹಲೋ ಎಂದ ಆಕೆ, ಗಲಾಟೆ ಮಾಡಿಕೊಳ್ಳಲಿಲ್ಲ. ನಿರ್ಮಾಪಕನ ಸಿಟ್ಟು ಕೊತಕೊತ ಕುದಿಯುತ್ತಿದ್ದುದು ಆಕೆಯ ಗಮನಕ್ಕೆ ಬಂದಿತ್ತು. ಇಷ್ಟಕ್ಕೂ ಈ ಸಿಟ್ಟನ್ನು ಆಕೆ ಊಹಿಸಿಯೇ ಇದ್ದರು. ತ್ರಿಭಾಷಾ ತಾರೆ ಎಂದಾದ ಮೇಲೆ ಎಷ್ಟು ಜನ ನಿರ್ಮಾಪಕರನ್ನು ಆಕೆ ನೋಡಿಲ್ಲ, ಆಟ ಆಡಿಸಿಲ್ಲ.


ನಿರ್ದೇಶಕ, ಸಹ ನಿರ್ದೇಶಕ, ಕ್ಯಾಮೆರಾಮನ್, ಪ್ರೊಡಕ್ಷನ್ ಮ್ಯಾನೇಜರುಗಳನ್ನು ಪಕ್ಕದಲ್ಲೇ ನಿಲ್ಲಿಸಿಕೊಂಡು ಆಕೆಯೊಂದಿಗೆ ಫೋನಿನಲ್ಲಿ ಏರಿದ ಧ್ವನಿಯಲ್ಲಿ ಕಿರುಚಾಡುತ್ತಿದ್ದ ನಿರ್ಮಾಪಕರ ಸಿಟ್ಟು, ಆವೇಶ ಕ್ರಮೇಣ ಕಡಿಮೆಯಾಯಿತು. ನದಿಯಲ್ಲಿ ಬಂದ ನೆರೆ ಇಳಿದಂತೆ. ''ಹಾಗಲ್ಲ ಡಾರ್ಲಿಂಗ್, ಸ್ವಲ್ಪ ಅರ್ಥ ಮಾಡಿಕೋ, ಶೂಟಿಂಗ್ ಆ ಕಾರಣಕ್ಕಾಗಿ ನಿಲ್ಲೋದು ಬೇಡ, ನಾಳೆ ಸಂಜೆ ಹೊತ್ತಿಗೆ ಎಲ್ಲ ಏರ್ಪಾಡಾಗಿರುತ್ತದೆ, ಆಯ್ತಾ ಚಿನ್ನಾ'' ಎಂದು ಲಲ್ಲೆಗರೆಯುವ ಧಾಟಿಯಲ್ಲಿ ಮಾತು ಮುಗಿಸಿ ಫೋನ್ ಇಟ್ಟ ನಿರ್ಮಾಪಕರನ್ನು ನೋಡಿದವರಿಗೆ ಅದು ಅಕ್ಷರಶಃ ಮಿಲಿಯನ್ ಡಾಲರ್ ಪ್ರಶ್ನೆಯಾಗಿ ಕಂಡಿತು.

ಮರು ದಿವಸ ನಾಯಕಿಯ ರೂಮಿಗೇ ನಿರ್ಮಾಪಕರು ಹೋದರು. ಅಲ್ಲೇ ಆಕೆಯೊಂದಿಗೆ ಬ್ರೇಕ್‌ಫಾಸ್ಟ್ ಮುಗಿಸಿದರು. ಸ್ಟುಡಿಯೋಕ್ಕೆ ಒಂಭತ್ತಕ್ಕೆ ಠಾಕುಠೀಕಾಗಿ ಬಂದಿಳಿದರು. ನಿರ್ವಿಘ್ನಂ ಕುರುಮೇ ದೇವ ಎಂಬಂತೆ ಶೂಟಿಂಗ್ ನಡೆದು ಚಿತ್ರೀಕರಣ ಮುಕ್ತಾಯವಾಯಿತು. ಪ್ರಶ್ನೆ ಮಿಲಿಯನ್ ಡಾಲರ್ ಮೊತ್ತದ್ದೇ ಹೌದಾದರೂ ಅದಕ್ಕೆ ಹತ್ತು ರೂಪಾಯಿಯದೇ ಆದರೂ ಒಂದು ಉತ್ತರ ಇರಬೇಕಲ್ಲವೇ...?

ಆ ಉತ್ತರವೇ ಒಂದು ಸಿನಿಮಾಕ್ಕೆ ಆಗಬಹುದಾದ ವಸ್ತುವಿನಂತಿದೆ. ತಾನು ನಟಿಸುವ ಪ್ರತಿ ಚಿತ್ರದ ನಿರ್ಮಾಪಕನಿಂದಲೂ ಒಂದು ವಜ್ರ ಖಚಿತ ಬಂಗಾರದ ನೆಕ್ಲೇಸನ್ನು ಉಡುಗೊರೆ ರೂಪದಲ್ಲಿ ಪಡೆಯುವುದು ಆ ನಟಿಯ ಹಲವು ಹವ್ಯಾಸಗಳಲ್ಲಿ ಒಂದು. ಈ ನಿರ್ಮಾಪಕ ಆ ಉಡುಗೊರೆ ನೀಡಲು ಅದ್ಯಾವುದೋ ಒಂದು ದುರ್ಬಲ ಘಳಿಗೆಯಲ್ಲಿ ಒಪ್ಪಿಕೊಂಡಿದ್ದರು ಆದರೆ ದಶರಥನಂತೆ ಮಾತನ್ನು ಮರೆತಿದ್ದರು. ಗಿಫ್ಟ್ ಪಡೆಯದೆ

ಶೂಟಿಂಗ್‌ಗೆ ಹಾಜರಾಗೋಲ್ಲ ಎಂದು ಹಟ ಹಿಡಿದ ಆಕೆಯ ಮನವೊಲಿಸುವ ಯತ್ನ ವಿಫಲವಾದ ನಂತರದಲ್ಲಿ ಬೆಳ್ಳಂಬೆಳಗ್ಗೆ ಹೆಂಡತಿಗೆ ಚಿತ್ರದ ಮುಹೂರ್ತದ ದಿವಸ ಕೊಡಿಸಿದ್ದ ಇನ್ನೂ ಥಳಥಳ ಹೊಳೆಯುತ್ತಿದ್ದ ಒಮ್ಮೆಯೂ ಬಳಸದ ನೆಕ್ಲೇಸನ್ನೇ ಒಯ್ದು ಆಕೆಯ ಕೊರಳಿಗೆ ಹಾಕಿ ಖುಷಿ ಪಡಿಸಿ ಶೂಟಿಂಗ್‌ಗೆ ನಿರಾತಂಕ ವಾತಾವರಣ ಸೃಷ್ಟಿಸಿದ್ದರು. (ಈ ವಿಚಾರವಾಗಿ ನಿರ್ಮಾಪಕರ ಮನೆಯಲ್ಲಿ ಆದ ರಾದ್ಧಾಂತದ್ದು ಬೇರೆ ಕಥೆ!)

ಈಗ ಆಕೆ ಕನ್ನಡದಲ್ಲಿ ನಟಿಸಲು ಬಂದ ಸುದ್ದಿ ಇಲ್ಲ. ಆದರೆ ಆಕೆಯ ಈ ಪ್ರವರ ಗೊತ್ತಾಗುವ ವೇಳೆಗೆಲ್ಲ ಆಕೆ ಕನ್ನಡದಲ್ಲಿ ಹತ್ತೋ ಹನ್ನೊಂದೋ ಚಿತ್ರಗಳಲ್ಲಿ ನಟಿಸಿದ್ದರು. ಅಂದರೆ ಆಕೆ ಕರ್ನಾಟಕದ ನೆಲದಿಂದ ಸಂಪಾದಿಸಿದ್ದು ಹಣವಲ್ಲದೆ ಹತ್ತೋ ಹನ್ನೊಂದೋ ವಜ್ರ ಖಚಿತ ಚಿನ್ನದ ನೆಕ್ಲೇಸುಗಳನ್ನು! ಚತುರ್ಭಾಷಾ ತಾರಾಪಟ್ಟ ಆಕೆಗೆ ಬಂದುದೂ ಕನ್ನಡದ ಕಾರಣವಾಗಿ. ಆಕೆಯನ್ನು ಹೀರೋಯಿನ್ ಆಗಿಟ್ಟುಕೊಂಡ ನಿರ್ಮಾಪಕರಲ್ಲಿ ಕೆಲವರು ಮನೆ ಮಠ ಕಳೆದುಕೊಂಡಿದ್ದಾರೆಂದು ಸುದ್ದಿ. ಅದಕ್ಕೆ ಆ ತಾರೆ ಖಂಡಿತವಾಗಿಯೂ ಹೊಣೆಯಲ್ಲ. ಅಂದಹಾಗೆ ಈಗ ರಾಣಿ ಜೇನಿಗೆ ವಯಸ್ಸು ಆಗಿರಬೇಕು. ಜೇನು ಹುಳುಗಳ ದಂಡಿನ ಕಥೆ...?



Mailing Date
5th of every month
Mailed at: RMS Bhavan Building

Registered-CPMG/KA/BGW-544/2015-2017

**RNI-KAR-KAN / 2005 / 15457**